ಆಡಳಿತದ ಘಟಕಗಳಿಗೆ ನಾವು ಯಾವ ಶಾಸನವನ್ನು ಹಿಂದೆ ಜಾರಿಗೆ ತಂದೆವು ಅಲ್ಲಿರತಕ್ಕಂಥ ದೋಷಗಳನ್ನು ತಿದ್ದುವುದಕ್ಕೆ ಇದೊಂದು ವೇದಿಕೆಯಾಗಿದೆ. ಈಗ ಆಡಳಿತಾತ್ಮಕ ಎಲ್ಲಾ ಸಂಪೂರ್ಣವಾದಂತಹ ಹಿಡಿತ ಸರ್ಕಾರದಲ್ಲಿ ಇರುವುದರಿಂದ ಬಹುಶಃ ಈ ಸಲಹಾ ಸಮಿತಿಯ ಅವಶ್ಯಕತೆ ಇಲ್ಲ ಅಂತ ಹೇಳಿ ಭಾವಿಸಬಹುದೆಂದು ನಾನು ಅಂದುಕೊಳ್ಳುತ್ತೇನೆ. ನಾನು ಅದರ ಬಗ್ಗೆ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ರಾಜ್ಯಾಂಗದ 73ನೇ ತಿದ್ದುಪಡಿ ವಿಧೇಯಕದ ಅಬ್ಜೆಕ್ಟ್ ಅಂಡ್ ರೀಸನ್ಸ್ ಬಗ್ಗೆ ಸೆಳೆದಿದ್ದೆ.

ಶ್ರೀ ಎಂ. ವೈ. ಘೋರ್ಪಡೆ : ಸ್ಟೇಟ್ ಲೆವಲ್ ಕಮಿಟಿ ಏನಿದೆ, ಅದು ಇರಬಾರದು ಎಂಬ ಉದ್ದೇಶ ಯಾರಿಗೂ ಇಲ್ಲ. ನನಗೆ ತಿಳಿದಮಟ್ಟಿಗೆ ಎಗ್ಸಿಸ್ಟಿಂಗ್ ಆ್ಯಕ್ಟ್‌ನಲ್ಲಿಯೂ ಕೂಡ ಅದರ ಬಗ್ಗೆ ಪ್ರಸ್ತಾಪ ಇರಲಿಕ್ಕಿಲ್ಲ. ಇದ್ದರೆ ಸ್ವಲ್ಪ ತೋರಿಸಿ. ಸ್ಟೇಟ್ ಲೆವಲ್‌ನಲ್ಲಿ ವರ್ಷಕ್ಕೆ ಒಂದು ಸಲ ಅಥವಾ ಎರಡು ಸಲ ಎಲ್ಲಾ ಅಧ್ಯಕ್ಷರೆಲ್ಲಾ ಸೇರುತ್ತಾರೆ. ಅದರ ಬಗ್ಗೆ ಆಕ್ಟ್‌ನಲ್ಲಿ ಪ್ರಸ್ತಾಪ ಮಾಡಬಹುದು.

ಶ್ರೀ ಡಿ. ಬಿ. ಚಂದ್ರೇಗೌಡ : ಪ್ರತಿ ಮೂರು ತಿಂಗಳಿಗೆ ಸಭೆ ಸೇರತಕ್ಕದ್ದು ಎಂದು ಇದೆ. ಮಾನ್ಯ ಮುಖ್ಯಮಂತ್ರಿಗಳೇ ಅದರ ಅಧ್ಯಕ್ಷರು. ಪಂಚಾಯತ್ ರಾಜ್ ಕಾರ್ಯದರ್ಶಿಗಳೇ ಅದರ ಕಾರ್ಯದರ್ಶಿಗಳು . ಸಭೆ ಸೇರುತ್ತಾ ಇತ್ತು. ಜಿಲ್ಲಾ ಪರಿಷತ್ತಿನ ಎಲ್ಲಾ ಅಧ್ಯಕ್ಷರೂ ಅದರ ಸದಸ್ಯರು.

ಶ್ರೀ ಎಂ. ವೈ. ಘೋರ್ಪಡೆ : ಅದನ್ನು ಮಾಡೋಣ.

ಶ್ರೀ ಡಿ. ಬಿ. ಚಂದ್ರೇಗೌಡ : ಅದನ್ನು ಮಾಡೋಣ, ಬಿಡೋಣ ಎಂದರೆ ಶಾಸನದಲ್ಲಿಲ್ಲವಲ್ಲಾ? ಶಾಸನದಲ್ಲಿಸಲಹಾ ಸಮಿತಿಯ ಪ್ರಸ್ತಾಪವಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಹೊಸದಾಗಿ ಅದನ್ನು ಸೇರಿಸುವ ಅವಶ್ಯಕತೆ ನಮಗೆ ಕಂಡು ಬರಲಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಅಮೆಂಡ್‌ಮೆಂಟ್ ಆಕ್ಟ್ ತಂದಿದ್ದೀರಲ್ಲಾ ಅದರಲ್ಲಿ ಇದು ಬೇಕಾಗುತ್ತದೆ.

ಶ್ರೀ ಎಂ. ವೈ. ಘೋರ್ಪಡೆ : ನನಗೆ ತಿಳಿದ ಮಟ್ಟಿಗೆ ಅದನ್ನು ನಾವು ವಜಾ ಮಾಡಲಿಲ್ಲ. ಈಗ ಇರತಕ್ಕಂಥ ಆಕ್ಟ್‌ನಲ್ಲಿ ಇದ್ದಿದ್ದರೆ ಅದು ಇರುತ್ತಿತ್ತು. ಹೊಸದಾಗಿ ಅದನ್ನು ಸೇರಿಸುವ ಅವಶ್ಯಕತೆ ಕಂಡುಬರಲಿಲ್ಲ. There is no such committee in the existiing Act.

Sri. D.B. Chandre Gowda : I do not know, by convention ಮಾಡಿದ್ದರೂ, ಪ್ರತಿ ಮೂರು ತಿಂಗಳಿಗೆ ಒಂದು ಸಾರಿ ಈ ಸಲಹಾ ಸಮಿತಿ ಬಗ್ಗೆ ಸಭೆ ಸೇರುತ್ತಿತ್ತು. ದಯಮಾಡಿ ತಾವು ಮಾಹಿತಿಯನ್ನು ತರಿಸಿ ನೋಡಿ. ತಮಗೆ ಜನವರಿ 20ನೇ ತಾರೀಖು ಎಂದು ಹೇಳಿದ್ದೇನೆ. ಮಾನ್ಯ ವೀರೇಂದ್ರಪಾಟೀಲ್‌ರವರು ಮುಖ್ಯಮಂತ್ರಿಗಳಾಗಿದ್ದಾಗ ಕೊನೇ ಸಭೆ ಸೇರಿತ್ತು. ಇದಾದರೂ ನಡೆದಿದೆಯೇ ಇಲ್ಲವೇ ಎಂಬುದನ್ನು ತಾವು ಮಾಹಿತಿ ತರಿಸಿ ಕೊಟ್ಟರೆ ಒಳ್ಳೆಯದು. ನಾನು ನಿನ್ನೆ ಮಾನ್ಯ ಮಂತ್ರಿಗಳ ಗಮನವನ್ನು ರಾಜ್ಯಾಂಗ ತಿದ್ದುಪಡಿ ವಿಧೇಯಕದಲ್ಲಿರುವ ಸ್ಟೇಟ್‌ಮೆಂಟ್ ಅಂಡ್ ಆಬ್ಜೆಕ್ಟ್‌ಗೂ,

ತಾವು ಮಾಡಿರುವ ಸ್ಟೇಟ್‌ಮೆಂಟ್ ಅಂಡ್ ಆಬ್ಜೆಕ್ಟ್ಸ್‌ಗೂ ಅರ್ಥಾತ್ ಸಂಬಂಧವಿಲ್ಲ. ಅಲ್ಲಿ ಏನು ಹೇಳುತ್ತಾರೆಂದರೆ ,

"Inadequate devolution of power and lack of finacial resources ; " ಇದು ಅವರು ಬಳಸತಕ್ಕ ಪದ.

"Article 40 of the constitution, which enshrines one of the directive principles of the State policy lays down that the State shall take steps to organise village panchayats and endow them with such powers and authority, as may be necessary to enable them to function as units of self-government "

ಸ್ವಯಂ ಆಡಳಿತ ಸಂಸ್ಥೆಗಳು ಕೆಲಸ ಮಾಡುವುದಕ್ಕೆ ಬೇಕಾದಂತಹ ಎಲ್ಲಾ ನಿರ್ದೇಶನಗಳನ್ನು ಆದೇಶಗಳನ್ನು, ಶಾಸನದ ಮೂಲಕ ಅಳವಡಿಸುವಂತಹ ಒಂದು ಉದ್ದೇಶವನ್ನು ಇದರಲ್ಲಿ ಹಾಕಿದ್ದಾರೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಉಪಾಧ್ಯಕ್ಷರೇ, ನೀವು ನಿನ್ನೆಯಿಂದ ಈ ಮಾತನ್ನು ಪದೇಪದೇ ಹೇಳುತ್ತಿದ್ದೀರಿ. ನನಗೆ ತಿಳಿದಮಟ್ಟಿಗೆ ಕೇಂದ್ರ ಸರ್ಕಾರ ಇದೆ, ರಾಜ್ಯ ಸರ್ಕಾರ ಇದೆ, ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್, ಗ್ರಾಮ ಪಂಚಾಯತ್ all these are units of self-government, exercising such powers as are appropriate at that level. So, self-government ಅಂದರೆ ಐಸೋಲೇಟೆಡ್ ಗೌರ್ನಮೆಂಟ್ ಎಂದು ಅಲ್ಲ. ಬೇರೆ ಯಾವ ಗೌರ್ನಮೆಂಟ್‌ಗೆ ಯಾವ ಮಟ್ಟಕ್ಕೂ ಸಂಬಂಧ ಇಲ್ಲದೇ ಇರತಕ್ಕಂತಹ ಒಂದು ವ್ಯವಸ್ಥೆ ಎಂದು ಅಲ್ಲ. ಡೈರೆಕ್ಟೀವ್ ಪ್ರಿನ್ಸಿಪಲ್‌ನಲ್ಲಿ ಕೂಡ ಆ ಅರ್ಥದಲ್ಲಿ ಸೆಲ್ಫ್ ಗೌರ್ನಮೆಂಟ್ ಪದ ಉಪಯೋಗಿಸಿರಲಿಕ್ಕಿಲ್ಲ ಎಂಬುದು ಬಹಳ ಸ್ಪಷ್ಟವಾಗಿ ಇದೆ. self-government means, as-much initiative or Government as they can exercise at the appropriate level. Central Government, State Government, Zilla, Taluk, are all units of self-government exercising such powers as can be or as is appropriate at that level. ಯಾವುದು ಅಪ್ರೊಪ್ರಿಯೇಟ್ ಇದೆ ಆ ಮಟ್ಟದಲ್ಲಿ ಎಂದು ನೀವು ಚರ್ಚೆ ಮಾಡುವುದಾದರೆ, I am open for it, but to say that the present arrangement has no priciples. self- government at these three levels would not be correct.

Sri. D.B.Chandre Gowda : I Will try to correct myself and try to convince the whole House if I have committed some mistake. The language used is, it is just not the powers and authority. I am questioning the authority that the State Government wields now in contravention of the Act and the directives given under the Constitution linking the self-government to that.

ಈಗ ನಾನು ನಿನ್ನೆಯಿಂದ ಮಾತನಾಡಿದ್ದುದೂ ಕೂಡ ಅದೇ. ನಾನು ಅದಕ್ಕಾಗಿ ತಮ್ಮ ಆಬ್ಜೆಕ್ಟ್ ಅಂಡ್ ರೀಸನ್ಸ್ ಅನ್ನು ಓದಿದೆ. ತಾವು ಬಳಸಿರತಕ್ಕಂಥ ಭಾಷೆ ಅದಕ್ಕೆ ಪೂರಕವಾಗಿದೆಯೇ ಎನ್ನುವುದನ್ನು ದಯಮಾಡಿ ನೀವೇ ಪರಿಶೀಲನೆ ಮಾಡಿ. ನಾನು ತಮ್ಮ ಕನ್ನಡದ ಅನುವಾದವನ್ನು ಓದುತ್ತೇನೆ :- 1991ರ ಏಪ್ರಿಲ್ ಸಂವಿಧಾನದ ತಿದ್ದುಪಡಿ ವಿಧೇಯಕದಲ್ಲಿ ಪ್ರಸ್ತಾಪಿಸಿರುವ ಬದಲಾವಣೆಗಳ ಪರಿಣಾಮವಾಗಿ 1983ರ ಕರ್ನಾಟಕ ಜಿಲ್ಲಾ ಪರಿಷತ್ತು, ತಾಲ್ಲೂಕು ಪಂಚಾಯಿತಿ, ಮಂಡಲ ಪಂಚಾಯಿತಿ, ನ್ಯಾಯ ಪಂಚಾಯಿತಿಗಳ ಅಧಿನಿಯಮದ ಬದಲಾಗಿ ಕರ್ನಾಟಕ ಪಂಚಾಯತ್ ರಾಜ್ ವಿಧೇಯಕವನ್ನು ತಂದಿದ್ದೇವೆ. ರಾಜ್ಯದಲ್ಲಿ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ಜನರು ಹೆಚ್ಚಾಗಿ ಪಾಲುಗೊಳ್ಳುವಂತೆ ಮಾಡುವ ಮತ್ತು ಕಾರ್ಯಕ್ರಮಗಳನ್ನು ಇನ್ನಷ್ಟು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವ ಸಲುವಾಗಿ ಗ್ರಾಮ ತಾಲ್ಲೂಕು ಮಟ್ಟದಲ್ಲಿ ಚುನಾಯಿತ ಸಂಸ್ಥೆಗಳು ಇರುವ ಮೂರು ಹಂತದ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಸ್ಥಾಪಿಸಲು ವಿಧೇಯಕ. ಇಲ್ಲಿ ಸ್ವಯಂ ಆಡಳಿತ ಘಟಕಗಳ ಪ್ರಸ್ತಾಪವೇ ಇಲ್ಲ. ಇದು ನನ್ನ ಬೇಸಿಕ್ ಡಿಫರೆನ್ಸ್. ನೀವು ಇಲ್ಲೂ ಕೂಡ ಸ್ವಯಂ ಆಡಳಿತ ಘಟಕಗಳನ್ನು ರಚನೆ ಮಾಡುತ್ತೇವೆ ಎಂದು ಹೇಳಬೇಕಾಗಿತ್ತು. ಅರ್ಥಾತ್ ನೀವು ಏಕೆ ಹೇಳಲಿಲ್ಲ ಎಂದರೆ ಸ್ವಯಂ ಆಡಳಿತ ಘಟಕಗಳನ್ನು ಮಾಡಿಲ್ಲ. ಸರ್ವ ಅಧಿಕಾರವನ್ನು ರಾಜ್ಯದಲ್ಲಿ ಕೇಂದ್ರಿಕೃತಗೊಳಿಸಿ ಸ್ವಯಂ ಆಡಳಿತದ ಹೆಸರು ಕೊಟ್ಟಿದ್ದೀರಿ. ನಾನು ಅದಕ್ಕೆ ಹೇಳಿದ್ದೇನೆ, ನನಗೆ ಇನ್ನೂ ಭ್ರಮನಿರಸನ ಆಗಿಲ್ಲ. ನೀವು ಈಗಲೂ ಕೂಡ ಆಲೋಚನೆ ಮಾಡುವುದಕ್ಕೆ ಅವಕಾಶ ಇದೆ. ಇದು ಒಂದು. ಇನ್ನು ಎರಡನೆಯದಾಗಿ ಈ ವಿಚಾರದಲ್ಲಿ ಶ್ರೀಮಾನ್ ಬೊಮ್ಮಾಯಿಯವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿತು. ಅದೂ ಕೂಡ ಕೆಲವು ರೆಕಮಂಡೇಷನ್‌ನ್ನು ಮಾಡಿತು. 64ನೇ ಅಮೆಂಡ್‌ಮೆಂಟ್ ಬಿಲ್‌ನ ದೋಷ ಏನು ಇತ್ತು ಎಂಧು ಚರ್ಚೆ ನಡೆಯಿತು. ಆ ದೋಷಗಳ ಚರ್ಚೆ ಸಲುವಾಗಿ ಶ್ರೀಮಾನ್ ಎಸ್. ಆರ್. ಬೊಮ್ಮಾಯಿ ಅವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ರಚನೆ ಮಾಡಿತು. ಆ ಸಮಿತಿ ಸುಮಾರು 13 ಶಿಫಾರಸ್ಸುಗಳನ್ನು ಮಾಡಿದ್ದಾರೆ. 9ನೇ ಶಿಫಾರಸ್ಸಿನಲ್ಲಿ ಏನು ಹೇಳುತ್ತಾರೆ ಅಂದರೆ :-

> "Two important aspects are missing from the scheme of panchayat Government envisaged in the Constitutional 64th Amendment Bill, 1989.
> (i) The Pivotal role of Gramasabha comprising all eligible voters in the village finds no mention, secondly ; there is no mention of Nyaya panchayats for dispensing speedy Justice to the people at the village level.
> The State should be well advised to give due place to these basic institutions in their legislations."

ಇಲ್ಲೂ ಕೂಡ ನೀವು ಪುನಃ ನ್ಯಾಯ ಪಂಚಾಯತ್‌ನ್ನು ಕೈಬಿಟ್ಟಿದ್ದೀರಿ.

3.50 ಪಿ. ಎಂ.

It is contrary to the recommendations of the committee. At recommendation No.4, "thirdly, the bill proceeds on the entirely unwarranted assumption that it will be possible for the State to pass down to Panchayats a viable, administrative

and financial devolution package without the Centre doing anything about the Centre - State relations. Meaningful decentralisation (I am giving a stress to this, for the kind attention of the Hon'ble Minister) below the state level can take place only in conjuction with an equally meaningful decentralisation from the Centre to the state. " I don't go into the details of finance, Gadgil formula etc., My quarrel is that you have the total administrative control. ಸ್ವಾಯತ್ತ ಸಂಸ್ಥೆಗೆ ಬೇಕಾದಂಥ ಅಥಾರಿಟಿ ಕೊಟ್ಟಿಲ್ಲ. That is my argument. Kindly look into it, if you are satisfied.

Sri. M.Y. Ghorpade : I say, I hate to interfere with you at each stage. But I am forced to do it, because a wrong impression should not go to the public outside. You have mentioned Nyaya panchayt. Nyaya panchayat was in your Act. But it was totally in a sleeping condition. Nothing was done about it. Therefore, we have not made a mention of it in this Act. If you are wanting Nyaya panchayats, you can have a separate debate and separate legislation can be brought. I am only remainding you, when you criticise us, for leaving Nyaya panchayat out, you should also mention that it was there already in your Act, but you did not make any rules.

ಶ್ರೀ ಡಿ. ಬಿ. ಚಂದ್ರೇಗೌಡ : ಮಾನ್ಯ ಮಂತ್ರಿಗಳ ಗಮನಕ್ಕೆ ತರುತ್ತೇನೆ. ನ್ಯಾಯಪಂಚಾಯಿತಿ ಕೂಡ ಹಿಂದಿನ ಮಸೂದೆಯಲ್ಲಿ ಇದೆ, ಕಾನೂನಿನಲ್ಲಿ ಇದೆ, ಅಳವಡಿಸಿದ್ದಾರೆ. ಆದರೆ ವಿತ್‌ಡ್ರಾ ಮಾಡಲಿಲ್ಲ. ಚರ್ಚೆ ಏನಾಯಿತು, ಪ್ರಾಯೋಗಿಕ ವಾದುದ್ದರಿಂದ ಐದು ವರ್ಷಗಳ ಅವಧಿಯವರೆಗೆ ಈ ನ್ಯಾಯ ಪಂಚಾಯಿತಿಯ ಶಾಸನವನ್ನು ಜಾರಿಗೊಳಿಸತಕ್ಕಂಥದ್ದು ಸೂಕ್ತವಲ್ಲ. ಆದ್ದರಿಂದ ಐದು ವರ್ಷಗಳ ಅನುಭವದ ಮೇಲೆ ಇದನ್ನು ಜಾರಿಗೆ ಕೊಡಬೇಕು ಎಂದು ; ಶಾಸನಸಭೆಯಲ್ಲಿ ಹುಡುಕಿದರೆ ತಮಗೆ ಸಿಗುತ್ತದೆ, ಜಂಟಿ ಸಲಹಾ ಸಮಿತಿ ಏನು ಮಾಡಿದೆವು ಅದೂ ಕೂಡ ಇದರ ಬಗ್ಗೆ ವರದಿಯನ್ನು ಕೊಟ್ಟಿದೆ. ನಾನು ಅದಕ್ಕೆ ವಿಸ್ತಾರವಾಗಿ ಹೋಗುವುದಿಲ್ಲ. ಇದು ಈಗ ಪುನಃ ಸುದೀರ್ಘವಾದ ಚರ್ಚೆ ಮಾಡುತ್ತಿದ್ದೇವೆ. ನಿನ್ನೆ ಹಿರಿಯ ಪತ್ರಕರ್ತರೊಬ್ಬರು ಚರ್ಚೆಯ ಅಭಿಪ್ರಾಯವನ್ನು ರೂಪಿಸುತ್ತಾ ಒಂದು ಎಚ್ಚರಿಕೆಯ ಮಾತನ್ನು ಹೇಳಿದ್ದಾರೆ. ಆ ಎಚ್ಚರಿಕೆಯ ಮಾತು ಏನಿತ್ತು ಎಂದರೆ ಸಮಗ್ರವಾಗಿ ಮಸೂದೆಯನ್ನು ಓದಿದ್ದಾರೆ, ಚಂದ್ರೇಗೌಡರ ದೃಷ್ಟಿಯಲ್ಲಿ ಎಲ್ಲೋ ಪಕ್ಷದ ದೋಷ ತೂರಿದ ಹಾಗೆ ಕಾಣುತ್ತದೆ ಎನ್ನತಕ್ಕಂಥ ಮಾತನ್ನು ಹೇಳಿದ್ದಾರೆ. ನಾನು ಅದಕ್ಕಾಗಿ ಈ ವಿಚಾರಗಳಲ್ಲಿ ನಾನು ಮುಕ್ತ ಮನಸ್ಸಿನಿಂದ ಇದ್ದೇನೆ ಎನ್ನುವಂಥಾದ್ದು ಸದನ ಮತ್ತು ಸಮೀಕ್ಷೆ ಮಾಡತಕ್ಕಂಥವರ ಗಮನಕ್ಕೆ ಇರಲಿ ಎನ್ನುವ ಸದಿಚ್ಛೆಯಿಂದ ಒಂದು ಮಾತನ್ನು ಹೇಳುತ್ತೇನೆ. ಈ ಅಭಿಪ್ರಾಯಗಳನ್ನು ಮಂಥನ ಮಾಡುವಾಗ ಈ ಚರ್ಚೆ ಎಷ್ಟೇ ನನ್ನ ಪಕ್ಷದ ವಾಸನೆ ನನಗೆ ಇದ್ದರೂ ಅದಕ್ಕಿಂತ ಮುಂದೆ ಈ ಒಂದು ಮಂಡಲ ಪಂಚಾಯಿತಿ, ಜಿಲ್ಲಾ ಪರಿಷತ್ತು ಮಸೂದೆ

ಏನು ಶಾಸನವಾಗಿ ಒಂದು ವರ್ಷಗಳ ಅನುಭವದ ನಂತರ ಇದರ ಪರೀಕ್ಷೆ ಮಾಡತಕ್ಕಂಥ ಒಂದು ಸಮಿತಿ ರಚನೆಯಾಯಿತು. ಅದನ್ನು ಜಿಲ್ಲಾ ಪರಿಷತ್, ಮಂಡಲ ಪಂಚಾಯಿತಿ ಎವಲ್ಯೂಷನ್ ಕಮಿಟಿ ಎಂದು ಕರೆದರು. ಇದನ್ನೇ ಕೃಷ್ಣಸ್ವಾಮಿ ಕಮಿಟಿ ಎಂದು In the short formನಲ್ಲಿ ಕರೆಯುತ್ತೇವೆ. ಅವರ ಅಬ್ಸರ್‌ವೇಷನ್ಸ್ ಏನು ಇತ್ತು ಎಂದು ನೋಡೋಣ. "While thanking the observations made by the Senior Journalist, I would like to add to it,.... ನಮ್ಮ ಅನುಭವ ಬರೀ ಪಕ್ಷಕ್ಕೆ ಸೀಮಿತವಾಗಿಲ್ಲ. ಜನತಾ ದಳಕ್ಕೆ, ಜನತಾ ಪಕ್ಷಕ್ಕೆ ಸೀಮೀತವಾಗಿರಲಿಲ್ಲ. ಈ ಅನುಭವವನ್ನು ಆಡಳಿತದಲ್ಲಿ ನುರಿತ ಅರಿತ ತಜ್ಞರ ಸಮಿತಿ ಏನು ಹೇಳುತ್ತದೆ ಇದರ ಬಗ್ಗೆ ಎನ್ನತಕ್ಕಂಥದ್ದು ಬಹಳ ಮುಖ್ಯವಾಗುತ್ತದೆ. ಆ ಮುಖ್ಯ ಅಂಶವನ್ನು ಅಂದರೆ ಜಸ್ಟ್‌ನ್ನು ಅವರದ್ದೇ ಭಾಷೆಯಲ್ಲಿ ನಾನು ಒಂದುಮಾತಿನಲ್ಲಿ ಹೇಳುತ್ತೇನೆ.

I quote from page 4, Para-1, sub-clause (vii), the last few sentences :
" We would like to make it amply clear that the allotment of space in this report is not the indication of the wieght we attach to the system's positive achievements. We would like to state unequivocally that we consider the steps taken by the Karnataka Government imaginating and courageous and the progress achieved by the Mandal Panchayats and Zilla Parishats on the whole, very impressive. We also believe that the modifications suggested in this report, further progress towards the effective democratic decentralisation will be more rapid." contrary to the recommendations of this Committee, ಕಳೆದ 14 ತಿಂಗಳಿಂದ ಈ ಸಂಸ್ಥೆಯ ಕತ್ತು ಹಿಸುಕಿದಿರಿ. ಇದು ನನ್ನದಷ್ಟೇ ಅಭಿಪ್ರಾಯ ಅಲ್ಲ. ತಜ್ಞರು ಕೂಡ ಹಿಂದೆ ಇದ್ದಂತಹ ವ್ಯವಸ್ಥೆ ಎಫೆಕ್ಟೀವ್ ಆಗಿ ಇತ್ತು, ಸಕ್ಸಸ್‌ಫುಲ್ ಆಗಿ ಇತ್ತು, ಅದನ್ನು ಬದಲಾವಣೆ ಮಾಡುವುದಕ್ಕೆ ನಿಮಗೆ ಏನು ಕಾರಣ? ನಮಗೆ ಮೆಚ್ಚತಕ್ಕ ಕಾರಣಗಳನ್ನು ಕೊಟ್ಟಿಲ್ಲ ಎನ್ನುವ ಮಾತನ್ನು ಹೇಳುತ್ತೇನೆ. ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಹೇಳಿದಿರಿ. ಅನೇಕ ಮುಖಂಡರುಗಳನ್ನು ಅದೂ ವಿಶೇಷವಾಗಿ ಡಾ|| ಡಿ. ಎಂ. ನಂಜುಂಡಪ್ಪನವರ ಹಾಗೂ ಮಾನ್ಯ ಸತೀಶ್ ಚಂದ್ರನ್ ಅವರ ಸಲಹೆ ಪಡೆದಿದ್ದೆವು ಎಂದು. ಆ ಸಮಿತಿಯವರು ಕೂಡ ಅವರ ಸಲಹೆ ಪಡೆದಿದ್ದರು. ಆ ಸಮಿತಿಗೆ ಸಲಹೆ ಕೊಟ್ಟಂತಹ ಇದೇ ಹಿರಿಯರು ತಮಗೆ ಸಲಹೆ ಕೊಟ್ಟಿರಬೇಕು ಎಂದು ಅಂದುಕೊಳ್ಳುತ್ತೇನೆ. ಇರತಕ್ಕ ಶಾಸನ ಯೋಗ್ಯವಾಗಿದೆ, ಮುಂದುವರೆಸಿಕೊಂಡು ಹೋಗಿ ಎಂದು ಕೊಟ್ಟಿರಬಹುದು ಎಂದು ನನ್ನ ಅನಿಸಿಕೆ. ಅವರು ಹೇಳುತ್ತಾರೆ. " We also had detailed discussions with Sri. T.R. Satischandran, Director, ISTC and Former Chief Secretary, Government of Karnataka and Dr. D.M. Nanjundappa, Vice-Chancellor, Bangalore University and former Planning Commission, Government of Karnataka, who are very closely associated with the establishment of Panchayat Raj Institutions in Karnataka.

ಆದ್ದರಿಂದ ತಮ್ಮ ಪ್ರಾಸ್ತಾವಿಕದಲ್ಲಿ ಏನು ಪ್ರಸ್ತಾಪ ಮಾಡಿದ್ದೀರಿ, ಆ ತಜ್ಞರನ್ನು ಎಲ್ಲಾ ಹಂತದಲ್ಲಿ ಕೇಳಿದ್ದೀರಿ. ಆ ತಜ್ಞರ ಅಭಿಪ್ರಾಯಗಳು ಒಟ್ಟಿಗೆ ಒಂದು ರಿಪೋರ್ಟಿನ ಮೂಲಕ ಹೊರಗೆ ಬಂದಿದೆ. ಆದ್ದರಿಂದ ನನ್ನ ವಾದ ಇಷ್ಟೇ. ಹಳೆಯ ಮಸೂದೆಯಲ್ಲಿ ಇದ್ದಂತಹ ದೋಷ ಏನು ಇದೆ, ಇದನ್ನು ಯಾವಾಗ ರಿಪೇರಿ ಮಾಡಬೇಕು? ಏಕೆಂದರೆ ರಿಪೇರಿ ಮಾಡುವ ಸೆಕ್ಷನ್ ಇದರಲ್ಲಿವೆ ; ಹೊಸ ಮಸೂದೆ ಬರುವಾಗ .. Except the Second tire system which is introduced in between Mandal Panchayat and Zilla Parishats, no other new envisages. ಆದ್ದರಿಂದ ಈ ಸಮಿತಿ ವರದಿಯನ್ನು ಕೂಡ ತಾವು ಕನ್ಸಿಡರ್ ಮಾಡಬೇಕು ಮತ್ತು ಅಲ್ಲಿ ಸೂಚಿಸಿರತಕ್ಕಂಥ ಸಲಹೆಗಳನ್ನು ಗಮನದಲ್ಲಿಟ್ಟುಕೊಳ್ಳಬೇಕು ಎನ್ನುವ ಕಾರಣಕ್ಕಾಗಿ ಹೇಳಿದೆ. ರೆಕಮಂಡೇಷನ್ ಬಗ್ಗೆ ಚರ್ಚೆ ಮಾಡುತ್ತಾ 53ನೇ ಪುಟದಲ್ಲಿ ಒಂದು ಮಾತು ಬರೆಯುತ್ತಾರೆ :- While discussing the recommendations, at page 53, it is stated, “At the Mandal level, there is a provision only for one whole time Secretary to the panchayat, to be appointed by the Zilla parishats in consultation with the Mandal Panchayat. However, it is open for the Mandal Panchayat to engage other staff on their own salaries and allowances paid from the Mandal Panchayats fund.” ಇವತ್ತು ನೀವು ಅಧಿಕಾರ ಕಿತ್ತುಕೊಂಡಿದ್ದೀರಿ. What happens to the recommendations? ಈಗ ಪೂರ್ತಿ ಇದನ್ನು ಓದುವುದಕ್ಕೆ ಹೋಗುವುದಿಲ್ಲ. ಕೆಲವು ಚಿಕ್ಕ ರೆಕಮಂಡೇಷನ್ಸ್ ಇದೆ ಓದುತ್ತೇನೆ. “As the States can share with the District Governments only the powers they have, all attempts by the Central Government to abridge the powers of the State should be resisted. We should like to emphasis, the obvious but the vital issue of the need on the part of the Central Government to change its practices and policies in support of the genuine decentralisation. There is a plenty of evidence that the Legislators, Ministers and officers of the State Government still have a mental reservation about the scheme of decentralisation” So, should I draw the same inference from you?” Still the State Government have a mental reservations about the scheme of decentralisation” Even in those days, they say.

Sri. M.Y. Ghorpade : I must make it very clear that this Government has absolutely no mental reservations about decentralisation. We are anxious to maximise decentralisation. If now or at any stage if any Member on this side or that side is able to say that we can decentralise something more than what we have done, I will welcome it ; In other words, our commitment to decentralisation, maximum decentralisation is full and complete.

Sri. D.B. Chandre Gowda : I am thankful to you, Sir. But at the same time, ನಿಮಗೆ ಮತ್ತು ನನಗೆ ಇರತಕ್ಕಂಥ ವಿಕೇಂದ್ರಿಕೃತ ವ್ಯವಸ್ಥೆಯ ವ್ಯತ್ಯಾಸವೇನೆಂದರೆ, ಈ ವಿಕೇಂದ್ರಿಕೃತ ವ್ಯವಸ್ಥೆಯಲ್ಲಿ ಆಡಳಿತದ ಸಂಪೂರ್ಣ ಜವಾಬ್ದಾರಿಯನ್ನು ನೀವು ಇಟ್ಟುಕೊಂಡಿದ್ದೀರೆನ್ನುವ ಆಪಾದನೆಗಾಗಿ ನಾನು ಇಷ್ಟು ಶ್ರಮಪಡುತ್ತಿದ್ದೇನೆ. ಈಗ ಹಿಂದಿನ ಶಾಸನದಲ್ಲಿದ್ದಂಥ ಮಂಡಲ ಪಂಚಾಯಿತಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ನೇಮಕಾತಿ ಮಾಡಿಕೊಳ್ಳತಕ್ಕಂಥ ಅಧಿಕಾರಗಳಿದ್ದವು, ಹೊಸ ಶಾಸನದಲ್ಲಿ ಅದನ್ನು ಕಿತ್ತುಹಾಕಿದ್ದೀರಿ. ಈ ಹಿಂದೆ ಅಧಿಕಾರಿಗಳ ಮೇಲಿದ್ದಂಥ ಹತೋಟಿಯನ್ನು ತಪ್ಪಿಸಿದ್ದೀರಿ, ಮುಂದೆ ಅವರದೇ ಆದಂಥ ಒಂದು ಸ್ವಾಯತ್ತ ಆಡಳಿತ ವ್ಯವಸ್ಥೆ ಮಾಡಿಕೊಳ್ಳಬೇಕೆಂಬ ಒಟ್ಟಾರೆ ಆಲೋಚನೆಗೆ, ಚಿಂತನೆಗೆ ತಾವು ತಣ್ಣೀರೆರೆಚಿದ್ದೀರಿ. ಇದೇ ನನ್ನ ಆಪಾದನೆ.

Sri. M.Y. Ghorpade : Sir, I have to immediately deny this. On the other hand, whatever power we have decentralised is to the elected body at that level and that elected body will excercise overall supervision and control over the entire administration below them and the Officers are clearly subordinate to the elected body. Even in the matter of contracts, neither an indvidual nor an official can decide about the contracts. It will have to be done according to the rules and after bringing to the notice of the elected body. So, there is no question of decreasing the power of the elected body. The only thing is, we have not given power to the individual, either official or non-official. We have given to the elected body which is the fundamental principle of any Parliamentary System of Government which we are following. We are not in the American Presidential System. This is the Parliamentary System we have inherited and worth for all the decades and whatever we have done is fully in consistent with that. Therefore, I have to intervene when you make a statement like that because it should not go un-contradicted.

ಒಬ್ಬ ಮಾನ್ಯ ಸದಸ್ಯರು : ಸೆಕ್ಷನ್ 13ನ್ನು ಓದಿದರೆ, ಮಂಡಲ ಪಂಚಾಯಿತಿಗೆ ಸಿಬ್ಬಂದಿ ನೇಮಕ ಮಾಡಿಕೊಳ್ಳುವ ಸಂಪೂರ್ಣ ಅಧಿಕಾರ ಕೊಟ್ಟಿದ್ದಾರೆ.

Sri. D.B. Chandre Gowda : I would like to draw the attention of the Minister to the same para for the purpose of information to the House and through the House to the general public. ಅಲ್ಲಿ ಈಗ ತಾವು ಹೇಳಿದ್ದನ್ನು ಇವರು ರೀಇಟರೇಟ್ ಮಾಡಿದರು. ಅದನ್ನೇ ಕೇಳುತ್ತೇನೆ.

I quote from page 92. "The State Government should reiterate its total and unequivocal commitment to the progressive devolution of the authority to the panchayat Raj institutions. We earnestly hope that the State Ministers and Legislators will create a favourable environment for the Zilla parishats and Mandal panchayats to function efficiently. The State Departmental heads have retained substantial administrative control over their staff in the Districts. It is necessary to review this arrangements so as to enable the Zilla Parishat Chief Secretary to have effective administrative control over all district level officers and their staff." Just I am trying to bring it to the notice of the Minister. " We recommend the appointment of a Committee headed by an outside expert in the Government including official representation of both the state and Zilla Parishats as well as some of the non-official members to review all Government orders and instructions with a view to modifying them in such a way as to prevent any abridgement of the rights conferred by statute on Panchayat Raj Institutions." All these recommendations are to be kept in mind. ನಾನು ನಿನ್ನೆ ಹೇಳುತ್ತಿದ್ದೆ, ಬರೀ ಶಾಸನಗಳನ್ನು ಮಾಡಿ ಜಿಲ್ಲಾಪರಿಷತ್ತುಗಳಿಗೆ, ಮಂಡಲ ಪಂಚಾಯಿತಿಗಳಿಗೆ ಅಧಿಕಾರವನ್ನು ಕೊಟ್ಟು ಸರ್ಕಾರ ಕಣ್ಣುಮುಚ್ಚಿಕೊಂಡು ಕೂಡಲಿಲ್ಲ, ಇದರ ಪ್ರಗತಿಯನ್ನು, ಇದು ಯಾವ ರೀತಿಯಲ್ಲಿ ನಡೆಯುತ್ತದೆ, ಇದರ ರೀತಿನೀತಿಗಳನ್ನು evolution ಮಾಡುವುದಕ್ಕೆ ಕೃಷ್ಣಸ್ವಾಮಿ ಸಮಿತಿಯನ್ನು ಮಾಡಿತು. ಒಂದು ಆರ್ಥಿಕ ತಜ್ಞರ ಸಮಿತಿಯನ್ನು ಮಾಡಬೇಕೆಂದು ಹೇಳಿ ಫೈನ್ಯಾನ್ಸ್ ಕಮಿಷನ್ ಕೂಡ ಆಗ ಮಾಡಿದರು. ಆ ಫೈನಾನ್ಸ್ ಕಮಿಷನ್‌ರವರು financial aspects ಅನ್ನು ತುಂಬಾ ಅರ್ಥಗರ್ಭಿತವಾಗಿ ಚರ್ಚೆ ಮಾಡಿದ್ದಾರೆ ಮತ್ತು ಹೇಳಿದ್ದಾರೆ. ಇದನ್ನು ಡಾ॥ ಹೊನ್ನಾವರ ಕಮಿಟಿ ಎಂದು ಶಾರ್ಟ್ ಫಾರಂನಲ್ಲಿ ಕರೆಯುತ್ತೇವೆ. By and large ನಾನು ಅರ್ಥ ಮಾಡಿಕೊಂಡಿರುವ ಹಾಗೆ, if I am wrong, subject to corrections hither to we are following the the Gadgil formula which the Centre and the State are following even today. As Ex-Finance Minister, you could be right authority to enlighten me.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅಧ್ಯಕ್ಷರೇ, ಮಾನ್ಯ ಚಂದ್ರೇಗೌಡರು ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳ ಸೂಪರ್‌ವಿಷನ್‌ನಲ್ಲಿ ಅವರ ಒಂದು ಆಡಳಿತದಲ್ಲಿ ಹಿಡಿತ ಇರಬೇಕೆಂದು ಹೇಳಿದರು. ಆದರೆ ಮಾನ್ಯ ಸಚಿವರು ಇದರ ಬಗ್ಗೆ ಏನನ್ನೂ ಹೇಳಲಿಲ್ಲ. ಮಂಡಲ ಪಂಚಾಯತಿಯಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳಾಗಲಿ, ಕಾರ್ಯದರ್ಶಿಯಾಗಲಿ, ಅಥವಾ ಅಲ್ಲಿ ಉಳಿದಿರತಕ್ಕ ಸಿಬ್ಬಂದಿ ವರ್ಗಕ್ಕಾಗಲಿ ಅವರ ಬಗ್ಗೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳತಕ್ಕಂಥ ಅವರನ್ನು ಸಸ್ಪೆಂಡ್ ಮೂಡತಕ್ಕ ಅಧಿಕಾರವನ್ನು ಮಂಡಲ ಪಂಚಾಯಿತಿಗೆ ಕೊಡುವುದರ ಬಗ್ಗೆ ಏನು ಮಾಡುತ್ತೀರಿ ಎಂಬ ಬಗ್ಗೆ ಸಚಿವರು ಹೇಳಬೇಕು. ಅಥವಾ ಹಿಂದೆ ಇದ್ದ ತಾಲ್ಲೂಕು

ಪಂಚಾಯಿತಿ ಸಮಿತಿ(ಟಿ.ಡಿ.ಬಿ.)ಗೆ ಹೇಗೆ ಅಧಿಕಾರ ಇತ್ತೋ ಆ ರೀತಿಯಲ್ಲಿ ಅಲ್ಲಿ ಇರತಕ್ಕ ಸಿಬ್ಬಂದಿಯ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುವುದಕ್ಕೆ ಏನು ಮಾಡುತ್ತೀರಿ ಎಂಬ ಬಗ್ಗೆ ನೀವು ಹೇಳುತ್ತಿಲ್ಲ. ಆದ್ದರಿಂದ ಮಾನ್ಯ ಸಚಿವರು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡತಕ್ಕಂಥ ಅಧಿಕಾರಿಗಳ ಸಿಬ್ಬಂದಿವರ್ಗದ ಬಗ್ಗೆ ನೋಡಬೇಕು. ಇವತ್ತು ಒಬ್ಬ ಸಾಮಾನ್ಯ ಕೆಲಸಗಾರರನ್ನು ಕೇಳಿದರೆ ಅವನು ನಮಗೆ ಹಣವನ್ನು ಕೊಡುವ ಸಾಹುಕಾರರು ಏನು ಕೇಳುವುದಿಲ್ಲ. ಆದರೆ, ನೀವು ಏನು ಕೇಳುತ್ತೀರಿ ಎಂದು ಹೇಳುತ್ತಾನೆ. ಆದ್ದರಿಂದ ಸಿಬ್ಬಂದಿ ವರ್ಗದವರು ಹತೋಟಿಯಲ್ಲಿ ಇರಬೇಕಾದರೆ, ಪರಿಣಾಮಕಾರಿಯಾದ ಆಡಳಿತವನ್ನು ನಡೆಸಬೇಕಾದರೆ, ಮಂಡಲ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ, ಮತ್ತು ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರ ಕೊಡಬೇಕು. ಇದರ ಬಗ್ಗೆ ತಮ್ಮ ಅಭಿಪ್ರಾಯವನ್ನು ಹೇಳಬೇಕು.

ಶ್ರೀ ಎಂ. ವೈ. ಘೋರ್ಪಡೆ : ಅದರ ಬಗ್ಗೆ ನಾವು ಹಿಂದೆ ಕೂಡ ಹೇಳಿದ್ದೇವೆ. ಅವರಿಗೆ ತಿಳಿದಿರುವಂತೆ ಈಗ ಸಂಬಳವನ್ನೂ ನಾವೇ ಕೊಡಬೇಕಾಗುತ್ತದೆ. ನೇಮಕ ಮಾಡಿಕೊಳ್ಳಲು ಅವರಿಗೆ ಸಂಪೂರ್ಣವಾಗಿ ಬಿಡಲು ಸಾಧ್ಯವಾಗುವುದಿಲ್ಲ. ಆ ರೀತಿ ಬಿಟ್ಟು ಏನು ಆಯಿತು ಎಂಬುದು ತಮ್ಮ ಅನುಭವಕ್ಕೆ ಬಂದಿದೆ. ಏಕೆಂದರೆ, ನಿಮ್ಮ ಅನುಭವದಿಂದ ನಾವು ಫಾಯಿದೆಯನ್ನು ಪಡೆಯಬೇಕಾಗಿದೆ. ಐದು ವರ್ಷಗಳ ಅನುಭವದಲ್ಲಿ ಏನೇನೂ ದೋಷವಿದೆ. ಅದನ್ನು ತಿದ್ದಬೇಕಾಗಿದೆ. ಇವತ್ತು ಇವರಿಗೆ ಯಾವಾಗ ಸ್ವಂತವಾಗಿ ಆದಾಯವಿಲ್ಲ, ಬೇರೆ ಜಿಲ್ಲಾ ಪರಿಷತ್ತಿನ ಕೇಡರ್ ಇಲ್ಲ. ಅವರದೇ ಆದಂಥ ಸಿಬ್ಬಂಧಿಯನ್ನು ನೇಮಕ ಮಾಡಿಕೊಳ್ಳಲು ಹಣಕಾಸಿನ ಶಕ್ತಿ ಇಲ್ಲ ಅಥವಾ ಅಧಿಕಾರವಿಲ್ಲವೆಂದ ಮೇಲೆ ನಾವೇ ಇರಲಿ ಅಥವಾ ನೀವೇ ಇರಲಿ, ಸರ್ಕಾರವೇ ಅವರಿಗೆ ಸಂಬಳವನ್ನು ಕೊಡಬೇಕಾಗುತ್ತದೆ ಮತ್ತು ನೀತಿ ನಿಯಮಗಳ ಪ್ರಕಾರ ಅವರನ್ನು ನೇಮಕ ಮಾಡಿಕೊಳ್ಳಬೇಕಾಗುತ್ತದೆ ಮತ್ತು ಅದರ ಬಗ್ಗೆ ಸ್ವಲ್ಪ ಹಿಡಿತವನ್ನು ಇಟ್ಟುಕೊಳ್ಳಬೇಕಾಗುತ್ತದೆ. ನೀವೂ ಸಹ ಅದನ್ನು ಇಟ್ಟುಕೊಳ್ಳಲು ಪ್ರಯತ್ನ ಮಾಡಿದ್ದೀರಿ. ನಾವೂ ಕೂಡ ಅದಕ್ಕೂ ಧಕ್ಷತೆಯಿಂದ ಹತೋಟಿಯನ್ನು ಇಟ್ಟುಕೊಳ್ಳಲು ಪ್ರಯತ್ನ ಮಾಡಬೇಕಾಗಿದೆ. ನಾನು ಈ ಸಂದರ್ಭದಲ್ಲಿ ಎಷ್ಟೆಷ್ಟು ಜನರನ್ನು ಅಕ್ರಮವಾಗಿ ನೇಮಕ ಮಾಡಿಕೊಂಡಿದ್ದರು ಎಂದು ಹೇಳಿ ನಿಮಗೆ ಕೋಪ ತರಿಸತಕ್ಕ ಪ್ರಯತ್ನವನ್ನು ಮಾಡಲು ಹೋಗುವುದಿಲ್ಲ. ಏಕೆಂದರೆ ಅದು ನಿಮಗೂ ಗೊತ್ತಿದೆ. ಆ ಅಕ್ರಮಗಳನ್ನು ತಪ್ಪಿಸಬೇಕಾಗುತ್ತದೆ, ಯಾರೇ ನೇಮಕವನ್ನು ಮಾಡಿದ್ದರೂ ಕೂಡ ಸರ್ಕಾರದ ಒಂದು ಹತೋಟಿ ಇರಬೇಕಾಗುತ್ತದೆ, ಹಣಕಾಸಿನ ಅಧಿಕಾರ, ಶಕ್ತಿ ಇಲ್ಲದೆ ನಾವು ನೇಮಕ ಮಾಡುವುದಕ್ಕೆ ಆ ಸಂಸ್ಥೆಗಳಿಗೆ ಬಿಟ್ಟರೆ ಆಗ ಅವರಿಗೆ ಅನಾಹುತವಾಗುತ್ತದೆ. ಆದ್ದರಿಂದ ಅವರಿಗೆ ಬೇಕಾಗಿರತಕ್ಕಂಥ ಸಿಬ್ಬಂದಿಯವರಿಗೆ ನಾವೇ ಸಂಬಳವನ್ನು ಕೊಡುತ್ತಿದ್ದೇವೆ. ಜಿಲ್ಲಾ ಫಂಡ್ ಎಂದು ಏನು ಇದೆ ಅದು ಅವರದ್ದೇ ಸ್ವತಂತ್ರ್ಯವಾದಂಥ ಫಂಡ್ ಅಲ್ಲ, ನಾವು ಕೊಟ್ಟಿರತಕ್ಕ ಹಣವನ್ನೇ ಜಿಲ್ಲಾ ಫಂಡ್‌ನಿಂದ ಕೊಡುತ್ತಾರೆ. ಆ ಕಾರಣ ನಾವೇನೂ ಬಹಳಷ್ಟು ವ್ಯತ್ಯಾಸವನ್ನು ಮಾಡಲಿಲ್ಲ, ಸ್ವಲ್ಪ ಹತೋಟಿಯನ್ನು ಇಟ್ಟುಕೊಳ್ಳುವ ಪ್ರಯತ್ನವನ್ನು ಮಾಡಿದ್ದೇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ನಿನ್ನೆ ಮಾನ್ಯ ಶಿಮೂರ್ತಿಯವರು ಬಹಳವಾಗಿ ಇದರ ಬಗ್ಗೆ ಒತ್ತಾಯ ಮಾಡುತ್ತಿದ್ದರು. ಆದರೆ ಅವರು ಇವತ್ತು ಕಾಣುತ್ತಿಲ್ಲ. Financial resources ಈಗ ಇದ್ದಂಥ ಪರಿಸ್ಥಿತಿ ಏನು? ಮುಂದೆ ಏನು ಮಾಡಬೇಕು? ಈಗ ಜಿಲ್ಲಾ ಪರಿಷತ್‌ಗಳಿಗೆ ರಾಜ್ಯ ಸರ್ಕಾರ ಕೊಡುತ್ತಿರುವಂಥ ಮುಖ್ಯವಾದ ಆದಾಯ, ರಾಜ್ಯ ಸರ್ಕಾರ ಕೊಡುತ್ತಿದ್ದಂಥ ತಲಾನುದಾನದಲ್ಲಿ ಹತ್ತು ರೂಪಾಯಿಗಳು ಎರಡೂವರೆ ರೂಪಾಯಿ ಜಿಲ್ಲಾಪರಿಷತ್ತಿಗೆ ಏಳೂವರೆ ರೂಪಾಯಿ ಮಂಡಲ ಪಂಚಾಯಿತಿಗೆ ಹೋಗುತ್ತಿತ್ತು. ನಾನು ಶಿವಮೊಗ್ಗ ಜಿಲ್ಲೆಯ ಬಗ್ಗೆ ನನಗೆ ಸಿಕ್ಕಿರುವ ಪ್ರಕಾರ ತಂದಿದ್ದೇನೆ, ದಯಮಾಡಿ,

ಅಂಕಿಅಂಶಗಳಲ್ಲಿ ಏನಾದರೂ ಸ್ವಲ್ಪ ಹೆಚ್ಚು ಕಡಿಮೆ ಇದ್ದರೆ ತಾವು ಸರಿಪಡಿಸಕೊಳ್ಳಬೇಕೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಪರ್ ಕ್ಯಾಪಿಟಾ ತಲಾನುದಾನದಿಂದ ಶಿವಮೊಗ್ಗ ಜಿಲ್ಲೆಗೆ 1.32 ಕೋಟಿ ರೂಪಾಯಿ ಒಂದು ವರ್ಷಕ್ಕೆ ಬರುತ್ತದೆ. ಇದರಲ್ಲಿ ಜಿಲ್ಲಾ ಪರಿಷತ್ತಿಗೆ 2.50 ರೂ. ನಂತೆ 33 ಲಕ್ಷ ರೂ. ಮತ್ತು ಮಂಡಲ ಪಂಚಾಯಿತಿಗಳಿಗೆ 99 ಲಕ್ಷ. ಈಗ ತಲಾನುದಾನದ ಪದ್ಧತಿಯನ್ನು ತೆಗೆದಿದ್ದೀರಿ. ಜಿಲ್ಲಾ ಪರಿಷತ್ತಿಗೆ ಈಗ ಬರುತ್ತಿದ್ದ 2.50 ರೂ. ಆದಾಯ ಅರ್ಥಾತ್ 33 ಲಕ್ಷ ರೂ. ಆದಾಯ ಶಿವಮೊಗ್ಗ ಜಿಲ್ಲೆಗೆ ಏನು ಬರುತ್ತಿತ್ತು ಈ ಆದಾಯವನ್ನು ತಾವು ಯಾವರೀತಿ ತುಂಬಿಕೊಡುತ್ತೀರಿ? ಇದು ಒಂದು ರೀತಿಯ ವ್ಯಾಕ್ಯುಂ. ಎರಡನೆಯದಾಗಿ, ಸುಮಾರಾಗಿ ಐ.ಆರ್.ಡಿ.ಪಿ. ಯಿಂದ ಕಳೆದ ಸಾರಿ 117 ಲಕ್ಷ ರೂ. ನಮ್ಮ ಶಿವಮೊಗ್ಗ ಜಿಲ್ಲೆಗೆ ಬಂದಿತು, ಶೇಕಡ 10 ರಷ್ಟು ಈ ಹಣದಲ್ಲಿ ಆಡಳಿತಾತ್ಮಕ ವೆಚ್ಚ ಮಾಡುತ್ತಿತ್ತು. ಉಳಿದ ಶೇಕಡ 10 ಭಾಗವನ್ನು ಜಿಲ್ಲಾ ಬೇರೆ ಅಭಿವೃದ್ಧಿ ಕಾರ್ಯಕ್ರಮಗಳನ್ನು ಮಾಡುವುದಕ್ಕೆ, ಮತ್ತು ಉಳಿದ ಶೇಕಡ 80 ರಷ್ಟನ್ನು ಫಲಾನುಭವಿಗಳಿಗೆ ಗುರ್ತಿಸಿ ಕೊಡುತ್ತಿತ್ತು. ಇದು ಕೇಂದ್ರ ಸರ್ಕಾರ ಕೊಡುವಂಥ ಹಣ. ಕೇಂದ್ರ ಸರ್ಕಾರ ಕೊಟ್ಟಿರತಕ್ಕ ಪ್ಯಾಟರ್ನ್. ಇದನ್ನು ನೀವು ಬದಲಾವಣೆ ಮಾಡುವುದಕ್ಕಾಗುವುದಿಲ್ಲ. ನೀವು ಬದಲಾವಣೆ ಮಾಡುವುದಿಲ್ಲ ವೆಂದು ನಾನು ಅಂದುಕೊಂಡಿದ್ದೇನೆ. ಇದರಲ್ಲಿ ಬರುತ್ತಿದ್ದ ಆಡಳಿತಾತ್ಮಕ ವೆಚ್ಚ ಮೇಲೆ ನಾವು ಹೇಳಿದಂಥ ಆಡಳಿತಾತ್ಮಕ ವೆಚ್ಚಕ್ಕೆ ಪರ್ ಕ್ಯಾಪಿಟಾದಲ್ಲಿ ಬರುತ್ತಿದ್ದ ಹಣ ಬಳಕೆಯಾಗುತ್ತಿತ್ತು. ಈಗ ಜೆ. ಆರ್. ವೈ.ನಲ್ಲಿ 7.8 ಕೋಟಿ ರೂ.ಗಳು ನಮ್ಮ ಶಿವಮೊಗ್ಗ ಜಿಲ್ಲೆಗೆ ಬಂತು. ಈ ಹಣದಲ್ಲಿ ಸುಮಾರು 5.60 ಕೋಟಿ ರೂ.ಗಳನ್ನು ಮಂಡಲ ಪಂಚಾಯಿತಿಗಳಿಗೆ ಹಂಚಿದ್ದಾರೆ. ಉಳಿದ 20 ಭಾಗದಲ್ಲಿ 10 ಪರ್ಸೆಂಟನ್ನು ಜಿಲ್ಲಾ ಆಡಳಿತ ವ್ಯವಸ್ಥೆಗೆ ಬಳಸಿಕೊಂಡಿದ್ದಾರೆ. ಸುಮಾರು 150 ಲಕ್ಷ ರೂ. ಬಳಸಿಕೊಂಡಿದ್ದಾರೆ. ಉಳಿದ 10 ಪರ್ಸೆಂಟ್ ಅಂದರೆ 1.36 ಕೋಟಿ ರೂ. ಗಳನ್ನು ಆಡಳಿತಾತ್ಮಕ ವೆಚ್ಚಕ್ಕೆ ಬಳಸಿದ್ದಾರೆ. ಜೆ. ಆರ್. ವೈ. ಬಾಬ್ತು ಹಣ ಏನು ಬರುತ್ತದೆ ಅದು ಕೇಂದ್ರ ಸರ್ಕಾರ ತಲಾನುದಾನವಾಗಿ ಒಟ್ಟು ಸಂಖ್ಯೆಯನ್ನು ಆಧರಿಸಿ ವಿಶೇಷವಾಗಿ ಹರಿಜನ ಗಿರಿಜನರು ಇರತಕ್ಕ ಭಾಗಗಳಿಗೆ ಹೆಚ್ಚು ಹಣ ಕೊಡುತ್ತಾರೆ. ಈಗ ನೀವು ಮಂಡಲಗಳನ್ನು ಚಿಕ್ಕದು ಮಾಡಿದ್ದೀರಿ. ನನ್ನ ತಾಲ್ಲೂಕಿಗೆ ಸಂಬಂಧಪಟ್ಟಂತೆ ಮೊದಲು ತಲಾ ಮಂಡಲಗಳಿಗೆ ಎಷ್ಟು ಬರುತ್ತಿತ್ತು ಎನ್ನುವ ಲೆಕ್ಕ ಕೊಡುತ್ತೇನೆ. ನಿಮ್ಮ ಪುಸ್ತಕದಲ್ಲಿ ಹೇಳಿರತಕ್ಕ 5 ಲಕ್ಷ ಮತ್ತು 7 ಲಕ್ಷ ನಮ್ಮ ಮಲೆನಾಡು ತಾಲ್ಲೂಕಿಗೆ ಬಂದಿಲ್ಲ. ನಿಮ್ಮ ಪುಸ್ತಕವನ್ನು ನಾನು ಎರಡೆರಡು ಸಾರಿ ಓದಿದ್ದೇನೆ. ತಾವು ವಿಸ್ತಾರವಾಗಿ ಅದನ್ನು ಪ್ರಸ್ತಾಪ ಮಾಡಿದ್ದೀರಿ ಫೈನ್ಯಾನ್ಷಿಯಲ್ ಫಂಡ್ಸ್ ಬಗ್ಗೆ ಇದರಲ್ಲಿ at page 170 ಏನು ಹೇಳುತ್ತಿದ್ದೀರಿ ಎಂದರೆ,

> "The total Funds to be transferred by the State Government to the Zilla Parishat under the Mandal No.2, accounts for onward transmission to the Mandals via the Taluk panchayat Samithi as detailed above could be about Rs. 175 Crores during 1990-91, which works out at an average of Rs. One crore per taluk and Rs. 7 lakhs per Mandal in addition to about Rs. 140 crores under JRY and per capita funds which works out at an average of Rs. 5 lakhs per Mandal making a total of about Rs. 12 lakhs per Mandal."

ನಮಗೆ ಏನು ಬಂದಿದೆ ಎನ್ನುವುದನ್ನು ತಮಗೆ ಹೇಳುತ್ತೇನೆ. ಆ ಪುಸ್ತಕದಲ್ಲಿ, ನಮಗೆ ಬಂದಿರತಕ್ಕಂಥದ್ದು ನೀವು ಅಪಾಯಿಂಟ್‌ಮೆಂಟ್ಸ್ ಬಗ್ಗೆ ಹೇಳುತ್ತಿದ್ದಿರಿ. ಸರಾಸರಿ ಒಂದು ಮಂಡಲದಲ್ಲಿ ಒಬ್ಬ ಕಾರ್ಯದರ್ಶಿ.

ಶ್ರೀ ಎಂ. ವೈ. ಘೋರ್ಪಡೆ : ಫೈನಾನ್ಸಸ್ ಬಗ್ಗೆ ಒಂದು ಮಾತು ಹೇಳಲೇಬೇಕು. ಈಗ ಎರಡು ತಂಡದ ಫೈನಾನ್‌ಸಸ್ ಇದೆ. ಒಂದು ಡಿವಲ್ಯೂಷನ್ ಮಾಡಿಲತಕ್ಕಂಥದ್ದು, ಅಂದರೆ ಸ್ಕೀಮ್ಸ್ ನಾವೇನು ಕೊಟ್ಟಿರುತ್ತೇವೆಯೋ ಅದರ ಮೊತ್ತ ಎಷ್ಟಾಗುತ್ತದೆ ಅದನ್ನು ಟೋಟಲ್ ಮಾಡಿ ಹೇಳಿರತಕ್ಕಂಥದ್ದು. ಅಷ್ಟೊಂದು ಹಣ ಅಲ್ಲಿ ಖರ್ಚಾಗುತ್ತಾ ಇದೆ. ಅದು ಅನ್‌ಟೈಡ್ ಗ್ರಾಂಟ್ ಅಲ್ಲ. ಟೈಡ್‌ಗ್ರಾಂಟ್ ; ಟೈಡ್ ಟು ವೇರಿಯಸ್ ಸ್ಕೀಮ್ಸ್. ಇದು ನಾನು ಪುಸ್ತಕದಿಂದ ಓದಿದ್ದು. ಈಗ ಅನ್‌ಟೈಡ್ ಗ್ರಾಂಟ್ ಬೇಕಾಗುತ್ತದೆ. ಅವರ ಇಚ್ಛೆ ಪ್ರಕಾರ ಅವರ ಪ್ರೇಯಾರಿಟೀಸ್ ಪ್ರಕಾರ ಖರ್ಚುಮಾಡಲಿಕ್ಕೆ ನಾವು ಏನು ಹಣವನ್ನು ಕೊಡುತ್ತೇವೆ, ಅದಕ್ಕೆ ಅನ್‌ಟೈಡ್ ಗ್ರಾಂಟ್ ಎಂದು ಕರೆಯುತ್ತೇವೆ. ಈಗ ಒಂದು ಲಕ್ಷ ರೂ.ಗಳನ್ನು ಕೊಡುತ್ತಿದ್ದೇವೆ. ಒಂದೊಂದು ಪಂಚಾಯತಿಗೆ, ಮೊದಲು ನೀವು ಎಷ್ಟು ಕೊಡುತ್ತಿದ್ದೀರಿ, 7-50 ಪೈಸೆ ಪರ್ ಕ್ಯಾಪಿಟಾ ಎಂದು. ಅಂದರೆ ಏನು ತಲಾ ಪ್ರಮಾಣ 20-21 ರೂಪಾಯಿ ಆಗುತ್ತಿತ್ತು. ಏತಕ್ಕೆಂದರೆ ಗ್ರಾಮಾಂತರ ಪ್ರದೇಶದಲ್ಲಿ ಮೂರು ಕೋಟಿ ಜನಸಂಖ್ಯೆ ಇರುವುದರಿಂದ 7 ರೂಪಾಯಿನ ಪ್ರಕಾರ 21 ಕೋಟಿಯಾಗುತ್ತದೆ. ಈಗ ನಾವು 50 ಕೋಟಿ ಮುಖ್ಯವಲ್ಲ., ನಾವು ಒಂದು ಲಕ್ಷ ಪ್ರತಿಯೊಂದು ಪಂಚಾಯತಿಗೆ ಕೊಡುತ್ತಿದ್ದೆವು ; ಅದರ ಜನಸಂಖ್ಯೆ 5 ಸಾವಿರ ಇರುವಾಗ ತಲಾ ಪ್ರಮಾಣ ಎಷ್ಟಾಗುತ್ತದೆ. 20 ರೂಪಾಯಿ ಆಗುತ್ತದೆ. ಅಂದರೆ ಮೂರರಷ್ಟು ಜಾಸ್ತಿಯಾಗುತ್ತದೆ. ನಾವು ಪರ್‌ಕ್ಯಾಪಿಟಾ ಎಂದು ಹೆಸರಿನಲ್ಲಿ ಕೊಡದಿದ್ದರೂ ಸಹಿತ in effect it means trebling the per capita grant from Rs.7/- to Rs.20/-. ಜನಸಂಖ್ಯೆ ಕಡಿಮೆ ಇದ್ದರೂ ಕೂಡ ಜವಾಬ್ದಾರಿ ಆ ಮಟ್ಟದಲ್ಲಿ ಕಡಿಮೆಯಾಗುವುದಿಲ್ಲ. ಏತಕ್ಕೆಂದರೆ ಅದು ಏರಿಯಾ ಮೇಲೆ ಅವಲಂಬಿಸುತ್ತದೆ. ಅದಕ್ಕೋಸ್ಕರ ಪರ್‌ಕ್ಯಾಪಿಟಾ 7-00 ರೂಪಾಯಿಗೆ ಬದಲು ನಾವೇನು ಒಂದು ಲಕ್ಷ ಕೊಡುತ್ತಿದ್ದೇವೆ. it really works out to Rs. 21/- per capita is a welcome step. ಇದು ಅಲ್ಲದೆ ಜವಾಹರ್ ರೋಜಗಾರ್ ಯೋಜನೆ ಅದೇ ಉದ್ದೇಶದಿಂದ ಆ ಕಾಲಕ್ಕೆ ರಾಜೀವ್‌ಗಾಂಧಿಯವರು ನೇರವಾಗಿ ಪಂಚಾಯತಿ ಮಟ್ಟಕ್ಕೆ ಕೊಡಬೇಕು, ಅಂಥ ನಿರ್ಧಾರ ಮಾಡಿದ್ದರು. ಅದು ಎಷ್ಟಾಗುತ್ತದೆ. ಈಗ ಈ ವರ್ಷ 140 ಕೋಟಿ ಎಂದು ಇಟ್ಟುಕೊಳ್ಳಿ. ಇನ್ನು ಬರುವ ವರ್ಷದಲ್ಲಿ 160 ಕೋಟಿ, ಲೆಕ್ಕಕ್ಕೆ 150 ಕೋಟಿ ಎಂದು ಇಟ್ಟುಕೊಂಡರೂ ಎಷ್ಟಾಯಿತು ಅದು ; 150 ಕೋಟಿ ಎಂದರೆ 50 ರೂಪಾಯಿ ಪರ್‌ಕ್ಯಾಪಿಟಾ ಆಯಿತು. ನಾವು ಕೊಡುವುದು 20 ಅಥವಾ 25 ರೂಪಾಯಿ ಎಂದು ಇಟ್ಟುಕೊಂಡರೆ ಅಲ್ಲಿ ಜವಾಹರ್‌ರೋಜ್‌ಗಾರ್ ಯೋಜನೆ 50 ಕೋಟಿ ಪರ್ ಕ್ಯಾಪಿಟಾ. ಇದು ಯಾವ ಸ್ಕೀಮ್‌ಗೋಸ್ಕರ ಕೊಟ್ಟಿರತಕ್ಕಂಥದ್ದಲ್ಲ. ಅವರೇ ಸ್ಕೀಮ್ ಮಾಡಬಹುದೆಂದು ಹೇಳಿದ್ದಾರೆ. ಆದಕಾರಣ ನಾವು ಕೊಡುವ ಗ್ರಾಂಟ್‌ಗೆ ಮತ್ತು ಜವಾಹರ್‌ರೋಜಗಾರ್ ಯೋಜನಾ ಗ್ರಾಂಟ್‌ಗೆ ಹೆಚ್ಚಿನ ಒಂದು ಮಹತ್ವವಿದೆ ಎನ್ನುವ ಮಾತನ್ನು ತಾವು ಮರೆಯಬಾರದು.

4.20 ಪಿ.ಎಂ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ನಿನ್ನೆಯೂ ಹೇಳಿದೆ, ಒಂದು ಲಕ್ಷ ರೂಪಾಯಿ ಕೊಡತಕ್ಕ ನಿಮ್ಮ ವ್ಯವಸ್ಥೆ....

ಶ್ರೀ ಎಂ. ವೈ. ಘೋರ್ಪಡೆ : ತಾಲ್ಲೂಕಿಗೆ ಒಂದು ಕೋಟಿ. ಮಂಡಲಕ್ಕೆ ಎರಡು ಅಕೌಂಟ್. ಎಷ್ಟೋ ಸಾರಿ ಇದು ಹೋಗಿ ಮುಟ್ಟುತ್ತಿರಲಿಲ್ಲ. ಈಗ ತಾಲ್ಲೂಕು ಮಟ್ಟಕ್ಕೆ

ಕೊಡತಕ್ಕ ಹಣ ಈ ರೀತಿ ನಾವು ಏತಕ್ಕೆ ಕೊಡಬೇಕು? ನೇರವಾಗಿ ನಾವು ತಾಲ್ಲೂಕು ಮಟ್ಟಕ್ಕೆ ಕೊಡಬಹುದಲ್ಲಾ. ಆ ಪ್ರಯತ್ನ ಈಗ ಮಾಡೋಣ ; ಪ್ರಯತ್ನ ಅಲ್ಲ, ಸಾಧನೆ ಮಾಡಿ ತೋರಿಸುತ್ತೇನೆ.

ಶ್ರೀ ಡಿ. ಬಿ. ಚಂದ್ರೇಗೌಡ : ನಾನು ಜಿಲ್ಲೆಗೆ ಬರತಕ್ಕ ಹಣದ ವಿಚಾರ ಪ್ರಸ್ತಾಪ ಮಾಡಿದ್ದರ ಉದ್ದೇಶ ಮತ್ತು ತಮ್ಮ ಗಮನಕ್ಕೆ ತರತಕ್ಕದ್ದು ಈಗ ಹೋಗುತ್ತಿದ್ದ ಎರಡೂವರೆ ರೂಪಾಯಿ ತಲಾನುದಾನ ಜಿಲ್ಲೆಗಳಿಗೆ ಹೋಗುವುದಿಲ್ಲ, ಜಿಲ್ಲಾ ಪಂಚಾಯಿತಿಗಳಿಗೆ ಹೋಗುವುದಿಲ್ಲ. You can clarify it later.

ಶ್ರೀ ಎಂ. ವೈ. ಘೋರ್ಪಡೆ : ಎರಡೂವರೆ ರೂಪಾಯಿ ಏನಿಗೆ ಇದಕ್ಕೆ ಹತ್ತು ರೂಪಾಯಿನಲ್ಲಿ 7.50 ರೂಪಾಯಿಗಳನ್ನು ಇಲ್ಲಿ ಕೊಡಬೇಕು. 2-50 ಏನಿದೆ ಅದರ ಬದಲು ನಾವು ಎಸ್ಟಾಬ್ಲಿಷ್‌ಮೆಂಟಿಗೋಸ್ಕರ ಅದಕ್ಕಿಂತ ಹೆಚ್ಚಿನ ಹಣ ಕೊಡುತ್ತೇವೆ. We are taking care of the Zilla Parishad establishments. ಅವರದ್ದೇ ಆದ ಎಸ್ಟಾಬ್ಲಿಷ್‌ಮೆಂಟ್‌ಗೋಸ್ಕರ ಅದಕ್ಕೂ ಹೆಚ್ಚಿನ ಹಣ ಖರ್ಚು ಮಾಡುತ್ತೇವೆ. ಅದನ್ನು ನಮ್ಮ ಫೈನಾನ್‌ಷಿಯಲ್ ಮೆಮೋರ್‍ಯಾಂಡಂನಲ್ಲಿ ಸೇರಿಸುತ್ತೇವೆ.

ಶ್ರೀ ಡಿ. ಬಿ. ಚಂದ್ರೇಗೌಡ : ನನ್ನ ಪ್ರಶ್ನೆ ಅದಲ್ಲ, ಜಿಲ್ಲಾ ಪರಿಷತ್ತಿಗೆ ಅಷ್ಟರ ಮಟ್ಟಿಗೆ ಅವರ ವ್ಯಾಪ್ತಿಯಲ್ಲಿ ಬರುತ್ತಿತ್ತು. ಆ ಹಣ ಕಡಿಮೆ ಆಯಿತು. ಅವರೇ ಖರ್ಚು ಮಾಡುವುದಕ್ಕೆ ಇದ್ದ ಸಾಂತ್ಯ್ರ ಕಡಿಮೆ ಆಯಿತು. ನೀವು ಬೇರೆ ರೂಪದಲ್ಲಿ ಕೊಡುವುದರ ಬಗ್ಗೆ ಅಲ್ಲ. 2.50 ರೂಪಾಯಿ ತಲಾನುದಾನದಲ್ಲಿ ಅವರಿಗೆ ಸಿಗುತ್ತಿದ್ದುದು ಒಂದು ಕೋಟಿ 32 ಲಕ್ಷ ರೂಪಾಯಿ, ಶಿವಮೊಗ್ಗ ಜಿಲ್ಲೆ ಒಂದಕ್ಕೇ ಕಡಿಮೆ ಆಯಿತು. ಆದುದರಿಂದ ಜಿಲ್ಲಾ ಪರಿಷತ್ತಿನಲ್ಲಿ ಏನೋ ಮಾಡಿದ್ದಾರೆಂದು ಹೇಳುವುದಕ್ಕಿಂತ, ಸುಮಾರಾಗಿ ವಿದ್ಯಾ ಇಲಾಖೆಗೆ ಸ್ಯಾಲರಿಯಾಗಿ ಶಿವಮೊಗ್ಗ ಜಿಲ್ಲೆ ಒಂದರಲ್ಲೇ 30 ಕೋಟಿ ರೂಪಾಯಿ ಡಿಸ್‌ಬರ್ಸ್ ಮಾಡುತ್ತಿದ್ದರು. 2202 ; 1 ಅಕೌಂಟ್‌ನಲ್ಲಿ. ಆರೋಗ್ಯ ಇಲಾಖೆಗೆ ಹತ್ತು ಕೋಟಿ. ಒಟ್ಟು 80 ಕೋಟಿ ರೂಪಾಯಿ ಬಡ್ಜೆಟ್‌ನಲ್ಲಿ 55 ಕೋಟಿ ರೂಪಾಯಿ ಈ ಸಂಬಳ ಸಾರಿಗೆಗೆ ಖರ್ಚಾಗುತ್ತಿತ್ತು. ಉಳಿದ 35 ಕೋಟಿ ರೂಪಾಯಿ ಮಾತ್ರ ಡೆವಲಪ್‌ಮೆಂಟ್‌ಗೆ ಸಿಗುತ್ತಿತ್ತು. ಇದನ್ನು ನಾನು ಮಂತ್ರಿಗಳ ಗಮನಕ್ಕೆ ತರುವ ದೃಷ್ಟಿಯಿಂದ ಹೇಳುತ್ತಿದ್ದೇನಷ್ಟೆ. ಬಹಳ ಮುಖ್ಯವಾಗಿ ತಾವು ಕೊಟ್ಟಿರತಕ್ಕ ಹಣದ ಬಗ್ಗೆ ಚರ್ಚೆ ಮಾಡುತ್ತಿದ್ದೇವೆ. ಈಗಿರತಕ್ಕ ಸಿಬ್ಬಂದಿ ಎಷ್ಟು? ನಮ್ಮ 123 ನೇ ಹಳೇ ಶಾಸನದ ಅಡಿ ಮಂಡಲ ಪಂಚಾಯಿತಿಯಲ್ಲಿ 5 ಜನ ಸಿಬ್ಬಂದಿ ಇರುತ್ತಾರೆ, ಈ 5 ಜನ ಸಿಬ್ಬಂದಿ ಸಂಬಳವನ್ನು ಮಂಡಲ ಪಂಚಾಯಿತಿ ಕೊಡುತ್ತದೆ. ಒಬ್ಬ ಕರ ವಸೂಲಿಗಾರ ಇರುತ್ತಾನೆ, ನೀರುಗಂಟಿ ಇರುತ್ತಾನೆ. ಜವಾನ ಇರುತ್ತಾನೆ, ಜಾಡಮಾಲಿ ಇರುತ್ತಾನೆ, ಒಬ್ಬ ಗುಮಾಸ್ತ ಇರುತ್ತಾನೆ. ಒಬ್ಬ ಕರ ವಸೂಲಿಗಾರನ ಸಂಬಳ 600 ರೂಪಾಯಿ. ಳಳಿದವರದ್ದು 300 ರೂಪಾಯಿಗಳಂತೆ ತಲಾ ಕೊಡುತ್ತೇವೆ. ಒಬ್ಬ ಗುಮಾಸ್ತನ ಸಂಬಳ 960 ರಿಂದ 1900 ರೂಪಾಯಿ. ಅವನ ಉಳಿದ ಭತ್ಯಗಳನ್ನು ಸೇರಿಸಿದರೆ ಹತ್ತಿರ ಹತ್ತಿರ 2500 ರೂಪಾಯಿ ಸಂಬಳ ಬರುತ್ತದೆ. ಹೀಗೆ 4 ಸಾವಿರ ರೂಪಾಯಿ ಒಂದು ತಿಂಗಳಿಗೆ ಸಂಬಳ ಕೊಡುವುದಾದರೆ ವರ್ಷಕ್ಕೆ 48-50 ಸಾವಿರ ರೂಪಾಯಿ ಒಂದು ಮಂಡಲಕ್ಕೆ ಸಂಬಳಕ್ಕಾಗಿ ಖರ್ಚಾಗುತ್ತಿದೆ. ಈಗ ಮಂಡಲಗಳು ಎರಡಾಗುವುದರಿಂದ ಒಂದು ಲಕ್ಷ ರೂಪಾಯಿಗಳನ್ನು ಈಗಿರತಕ್ಕ ಎರಡು ಮಂಡಲಗಳು ಖರ್ಚು ಮಾಡಬೇಕಾಗುತ್ತದೆ. ಆದುದರಿಂದ 50 ಸಾವಿರ ರೂಪಾಯಿ ಅಡಿಷನಲ್ ಖರ್ಚು ಯಾರಿಗಾಗಿ ಮಾಡುತ್ತೀರಿ ನೀವು ಏತಕ್ಕಾಗಿ ಮಾಡುತ್ತೀರಿ? ಇದು ನನ್ನ ಪ್ರಶ್ನೆ. ನನ್ನ ತಾಲ್ಲೂಕನ್ನು ಗಮನದಲ್ಲಿಟ್ಟುಕೊಂಡು ಹೇಳುತ್ತೇನೆ ; ಇದು ಸರ್ವಕಾಲಿಕವಾಗಿ ಎಲ್ಲರಿಗೂ ಹೊಂದುತ್ತದೆಂದು ಹೇಳುವುದಿಲ್ಲ. ಒಂದು ಮಂಡಲಕ್ಕೆ ಕನಿಷ್ಟ ಮತ್ತು ಗರಿಷ್ಟ ಎಷ್ಟು

ಬರುತ್ತಿತ್ತು? ತಲಾನುದಾನ ಕನಿಷ್ಟ 35 ಸಾವಿರ ರೂಪಾಯಿ ಬರುತ್ತದೆ? ಮಲೆನಾಡಿನ ಮಂಡಲಗಳಿಗೆ ; ಗರಿಷ್ಟ 70 ಸಾವಿರ ರೂಪಾಯಿ ಬರುತ್ತದೆ. ವರ್ಗ ಒಂದರಿಂದ. ತಲಾನುದಾನ 40 ಸಾವಿರದಿಂದ 70 ಸಾವಿರದವರೆಗೆ ಬರುತ್ತಿತ್ತು. ಸ್ಟ್ಯಾಂಪ್ ಶುಲ್ಕ, ಈ ಹಿಂದೆ ತಾಲ್ಲೂಕಿನಲ್ಲಿ ಬರತಕ್ಕ ಸ್ಟ್ಯಾಂಪ್ ಶುಲ್ಕ, ಆಯಾಯಾ ತಾಲ್ಲೂಕಿಗೆ ಹಂಚಿಕೆಯಾಗುತ್ತಿತ್ತು. ಅದು ಶೇಕಡ 3ರಷ್ಟು. ತಾವು ಈಗ ಏನು ಬದಲಾವಣೆ ಮಾಡಿದ್ದೀರಿ ಶಾಸನದಲ್ಲಿ? ಈಗ ಒಟ್ಟಾರೆ ಬರತಕ್ಕ ಸ್ಟಾಂಪ್ ಶುಲ್ಕವನ್ನು ಇಡೀ ರಾಜ್ಯದಲ್ಲಿ ಕ್ರೋಢೀಕರಿಸಿ ಆಮೇಲೆ ತಾಲ್ಲೂಕುಗಳಿಗೆ ಹಂಚತಕ್ಕ ವ್ಯವಸ್ಥೆ ಇದೆ. ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಮ್ಮಲ್ಲಿ ಒಂದು ಮಂಡಲಕ್ಕೆ ಒಂದೇ ವರ್ಷದಲ್ಲಿ 50 ಸಾವಿರ ರೂಪಾಯಿ ವರಮಾನ ಬಂದಿತ್ತು ಸ್ಟ್ಯಾಂಪ್ ಶುಲ್ಕದಿಂದ. ಈಗ ಐದು ರೂಪಾಯಿ ಬೇಕಾದರೂ ಆಗಬಹುದು. ಇನ್ನೊಂದು ತಾಲ್ಲೂಕಿನಲ್ಲಿ ಬಾರದೇ ಇದ್ದ ಕಾರಣಕ್ಕೆ. ಆದುದರಿಂದ ಈ ಸ್ವಾಯತ್ತತೆ ಏನಿತ್ತು ತಾಲ್ಲೂಕಿಗೆ, ಈ ಸ್ವಾಯತ್ತತೆಯನ್ನು ಕಿತ್ತು ರಾಜ್ಯ ಮಟ್ಟಕ್ಕೆ ವಿಸ್ತರಿಸಿ ಹಂಚತಕ್ಕ ವ್ಯವಸ್ಥೆ ಏನಿದೆ ಅದು ಸರಿಯಾದ ಕ್ರಮವಲ್ಲ. ಆಯಾಯ ಮಂಡಲದಿಂದ ಬರತಕ್ಕ ವರಮಾನವನ್ನು ಕ್ರೋಢೀಕರಿಸಿ ಖರ್ಚು ಮಾಡತಕ್ಕ ಅಧಿಕಾರ ಮತ್ತು ಜವಾಬ್ದಾರಿ ಅವರಿಗೆ ಹೇಗಿದೆಯೇ ಹಾಗೆ ತಾಲ್ಲೂಕಿನಲ್ಲಿ ಇದ್ದಂಥ ಮೂಲಗಳನ್ನು ಕಿತ್ತುಹಾಕಿಕೊಳ್ಳತಕ್ಕ ಪ್ರಯತ್ನ ಮಾಡಬಾರದೆಂದು ಹೇಳುತ್ತೇನೆ. ಕಾಮಗಾರಿಗಳಿಗೆ ಮಿತಿ 10 ಸಾವಿರ ರೂಪಾಯಿ. ಈ 10 ಸಾವಿರ ಮಿತಿಯಲ್ಲಿ ಮಂಡಲಗಳು ವರ್ಕ್‌ನ್ನು ಸ್ಯಾಂಕ್ಷನ್ ಮಾಡಬಹುದು. ಆದರೆ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಜಿಲ್ಲಾಪರಿಷತ್ತಿನ ಎಂಜಿನಿಯರ್‌ಗೆ ಹೋಗಬೇಕು. ದುಡ್ಡನ್ನು ಅವರ ಹೆಸರಿನಲ್ಲಿ ಜಮಾ ಮಾಡಬೇಕು. ಆಮೇಲೆ ಆ ಕೆಲಸ ತೆಗೆದುಕೊಳ್ಳಬೇಕು. ಇದು ಜವಾಹರ್ ರೋಜಿಗಾರ್ ಯೋಜನೆಯಲ್ಲಿ 1 ಲಕ್ಷದವರೆಗೆ ಖರ್ಚು ಮಾಡುವುದಕ್ಕೆ ಮಂಡಲಪಂಚಾಯಿತಿಗಳಿಗೆ ಇದೆ. ಆದುದರಿಂದ ದಯಮಾಡಿ ವರ್ಗ 1 ಮತ್ತು ವರ್ಗ 2 ರಲ್ಲಿ ಆಡಳಿತಾತ್ಮಕವಾಗಿ ಇರತಕ್ಕ ಅಧಿಕಾರವನ್ನು ಸಮ ಮಾಡಿ. ಅದಕ್ಕೂ ಇದಕ್ಕೂ ವ್ಯತ್ಯಾಸ ಮಾಡಬೇಡಿ ಎಂದು ನನ್ನ ಅನಿಸಿಕೆ. ಮಾನ್ಯ ಅಧ್ಯಕ್ಷರೇ, ಬಹಳ ದೀರ್ಘ ಕಾಲ ಚರ್ಚೆ ಮಾಡಿದ್ದೇನೆ. ನನಗೆ ಇಂದೂ ಕೂಡ ಸ್ವಯಂ ಆಡಳಿತ ಘಟಕಗಳಾಗಿ ಮಂಡಲಗಳು ಜಿಲ್ಲಾ, ತಾಲ್ಲೂಕು ಗ್ರಾಮ ಪಂಚಾಯಿತಿಗಳು ನಮ್ಮ ಕಲ್ಪನೆಯ ರಾಜ್ಯಾಂಗ 40ನೇ ವಿಧಿಯ ಆದೇಶ ಮತ್ತು 73ನೇ ತಿದ್ದುಪಡಿಯ ವ್ಯಾಪ್ತಿಯೊಳಗೆ ಬಂದಿಲ್ಲ ಎನ್ನುವುದು ನನಗನ್ನಿಸಿದೆ. ಈಗಲೂ ಕೂಡ ಕುದುರೆಯನ್ನು ಓಡಿಸುವ ಜವಾಬ್ದಾರಿಯನ್ನು ಈ ವ್ಯವಸ್ಥೆಗೆ ಕೊಟ್ಟು ಆಡಳಿತಾತ್ಮಕ ಕಡಿವಾಣವನ್ನು ನೀವು ಇಟ್ಟುಕೊಂಡಿದ್ದೀರಿ ಎನ್ನುವುದು ನನ್ನ ಅನಿಸಿಕೆಯಾದ್ದರಿಂದ ದಯಮಾಡಿ ತಾವು ಈ ವಿಚಾರದಲ್ಲಿ ಪುನಃ ಮರುಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಂಡು ಫೈನ್ಯಾನ್ಸ್ ಕಮಿಷನ್ ಏನು ರೆಕಮಂಡ್ ಮಾಡಿತ್ತು ಅದರಲ್ಲಿ ಒಂದು ಮುಖ್ಯವಾದ ಅಂಶವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಜಿಲ್ಲಾಪರಿಷತ್ತುಗಳಿಗೆ ತೆರಿಗೆ ಹಾಕತಕ್ಕ, ತೆರಿಗೆ ವಸೂಲು ಮಾಡತಕ್ಕ ಅಧಿಕಾರ ಇರಬೇಕು. ಆಗ ಮತ್ತೊಂದು ಪ್ರಶ್ನೆ ಬಂತು. ಆಡಳಿತಾತ್ಮಕವಾದ ವೆಚ್ಚ ಜಾಸ್ತಿಯಾಗುತ್ತದೆ. ಆದುದರಿಂದ ಈಗ ತೆರಿಗೆಯನ್ನು ಹಾಕತಕ್ಕ ಅಧಿಕಾರ ಏನು ರಾಜ್ಯ ಸರ್ಕಾರಕ್ಕೆ ಇದೆ. ಅದು ಇರಲಿ. ಆದರೆ ಸೇಲ್ಸ್ ಟ್ಯಾಕ್ಸ್‌ನಲ್ಲಿ ಒಟ್ಟಾರೆ ರಾಜ್ಯಮಟ್ಟದಲ್ಲಿ ಆಗತಕ್ಕ ಮಾರಾಟತೆರಿಗೆಯ ಶೇಕಡಾ 20ರಷ್ಟು ಭಾಗವನ್ನು ಜಿಲ್ಲಾಪರಿಷತ್ತುಗಳಿಗೆ ಕೊಡಬೇಕೆನ್ನುವ ಒಂದು ಮುಖ್ಯವಾದ ರೆಕಮಂಡೇಷನ್ಸ್‌ನ್ನು ಫೈನಾನ್ಸ್ ಕಮಿಷನಲ್ಲಿ ಮಾಡಿದ್ದಾರೆ. ಹಾಗೆಯೇ ಜಿಲ್ಲಾಪರಿಷತ್ತಿನ ಮತ್ತು ಮಂಡಲಪಂಚಾಯಿತಿಯ ಅಥಾರಿಟಿಯನ್ನು ಹೆಚ್ಚು ಮಾಡುವುದಕ್ಕೆ, ಅಧಿಕಾರವನ್ನು ಹೆಚ್ಚು ಮಾಡುವುದಕ್ಕೆ ಹಣ ಹೆಚ್ಚು ಕೊಡುವುದಕ್ಕೆ ಈ ಕಮಿಷನ್‌ನಲ್ಲಿಮಾಡಿರತಕ್ಕ ಮತ್ತು ನಿಮ್ಮ ಅನುಭವದಲ್ಲಿ ಇರತಕ್ಕ particularly as the Finance Minister who has piloted nearly about 7 budgets, if I am correct, or 3, I don't know - I have calculated it as 7, if I am wrong, please correct me -

please present a consolidated permanent budget to these decentralised units and take the credit not only for your life-time, but for generations to come. Thank you very much.

* ಶ್ರೀ ನಾರಾಯಣರಾವ್ ಮನಹಳ್ಳಿ(ಬೀದರ್): ಮಾನ್ಯ ಉಪಾಧ್ಯಕ್ಷರೇ, ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಜಿಲ್ಲಾಪಂಚಾಯತ್ ಈ ಮಸೂದೆಯ ಬಗ್ಗೆ ಇವತ್ತು ನಾನು ಚರ್ಚೆಯಲ್ಲಿ ಭಾಗವಹಿಸುತ್ತಾ ಇದ್ದೇನೆ. ಇದಕ್ಕೆ ಮೊದಲು ಕರ್ನಾಟಕದಲ್ಲಿ ಇಂತಹ ವ್ಯವಸ್ಥೆ ಇತ್ತು. ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್ ಈ ಕಾನೂನು ಇದ್ದರೂ ಕೂಡ ಮತ್ತೆ ಈ ಸರ್ಕಾರದವರು ಅದಕ್ಕೆ ಹೆಸರು ಬದಲಾಯಿಸಿ ಗ್ರಾಮ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಎಂದು ಹೇಳಿ ನಾಮಕರಣ ಮಾಡಿ ನಾವೊಂದು ಹೊಸ ಮಸೂದೆ ತಂದಿದ್ದೇವೆಂದು ಹೇಳಿಕೊಳ್ಳುತ್ತಾ ಒಂದು ಕೆಲಸ ಮಾಡಿದ್ದಾರೆ. ಇದ್ದಂತಹ ಪಂಚಾಯತ್ ಮಸೂದೆ ಆ ಕಾನೂನು ಏನಿತ್ತು ಅದರಲ್ಲಿ ಅಲ್ಪಸ್ವಲ್ಪ ಮಾರ್ಪಾಡು ಮಾಡಿ ಎಲ್ಲೆಲ್ಲಿ ನಿಮಗೆ ಅನುಕೂಲವೆನಿಸುತ್ತದೆ ಅಂತಹ ಕೆಲವು ಕಾನೂನನ್ನು ತಿದ್ದುಪಡಿ ಮಾಡಿ ಇದ್ದಂತಹ ಮಸೂದೆಯನ್ನು ನಾವು ಜಾರಿಗೆ ಮಾಡಿದರೆ ಬಹುಶಃ ಇಷ್ಟೊಂದು ಸರ್ಕಸ್ ಮಾಡಲಿಕ್ಕೆ ಹೋಗಬೇಕಾದ ಅವಶ್ಯಕತೆ ಇದ್ದಿಲ್ಲವೆಂದು ನನ್ನ ಭಾವನೆ.

ಶ್ರೀ ಎಂ. ವೈ. ಘೋರ್ಪಡೆ : ಹಿಂದಿನ ಕಾನೂನಿನಲ್ಲಿ ಸರ್ಕಸ್ ಜಾಸ್ತಿಯಾಗುತ್ತಾ ಇತ್ತು. ಅದಕ್ಕೆ ಅದನ್ನು ಜಾರಿ ಮಾಡಲಿಲ್ಲ.

ಶ್ರೀ ನಾರಾಯಣರಾವ್ ಮನಹಳ್ಳಿ : ಈ ವ್ಯವಸ್ಥೆ ದೇಶದಲ್ಲಿ ಹೊಸದಾಗಿ ಏನೂ ಇರಲಿಲ್ಲ. ಅನಾದಿ ಕಾಲದಿಂದ ಹಿಡಿದು, ಗ್ರಾಮಪಂಚಾಯತ್ ವ್ಯವಸ್ಥೆ ಇದ್ದೇ ಇದೆ. ಇದು ನಿಜವಾಗಿಯೂ ಪ್ರಜಾತಂತ್ರದ ಬುನಾದಿ. ಒಳ್ಳೆಯ ಪ್ರಜಾತಂತ್ರವನ್ನು ದೇಶಕ್ಕೆ ಜನರಿಗೆ ಕೊಡಬೇಕಾದರೆ ಗ್ರಾಮ ಪಂಚಾಯಿತಿಗಳು ಸರಿಯಾಗಿರಬೇಕು. ಆಗ ಬಂದಂತಹ ಸರ್ಕಾರದಲ್ಲಿ ಅವರ ಮನಸ್ಸಿನಲ್ಲಿ ಇದು ಇದ್ದಿಲ್ಲವೆಂದು ಕಾಣುತ್ತದೆ. ಅದು ನನಗನಿಸುತ್ತಾ ಇದೆ. ಪ್ರಥಮ ಭಾರೀ ತಮ್ಮ ಸರ್ಕಾರಕ್ಕೆ ಈ ಪಂಚಾಯಿತಿಯ ವ್ಯವಸ್ಥೆಯನ್ನು ತರಬೇಕು ವಿಕೇಂದ್ರಿಕರಣ ವ್ಯವಸ್ಥೆ ತರಬೇಕೆಂದು ಮನಸ್ಸು ಆಗಿರಬೇಕೆಂದು ನನ್ನ ಭಾವನೆ. ಈ ವ್ಯವಸ್ಥೆಯನ್ನು ತರಬೇಕೆಂದು ಮೊದಲೇ ನಿಮ್ಮಲ್ಲಿ ಭಾವನೆಯಿರಬೇಕಾದರೆ, ನೀವೇನು 45 ವರ್ಷದಿಂದ ಈ ದೇಶವನ್ನು ಆಳುತ್ತಾ ಇದ್ದಿರಿ. ಇಂತಹ ಮಸೂದೆಯನ್ನು ಆಗಲೇ ತರಬಹುದಿತ್ತು. ಆದರೆ ನೀವು ಈಗ ತರುತ್ತಾ ಇದ್ದೀರಿ. ಅಂದಮೇಲೆ ವೀಕೇಂದ್ರಿಕರಣ ವ್ಯವಸ್ಥೆ ನಿಮ್ಮ ಮನಸ್ಸಿಗೂ ಹಿಡಿಸಿದೆ. ನಿಜವಾಗಿಯೂ, ಈ ದೇಶದ ಆರ್ಥಿಕ ಪರಿಸ್ಥಿತಿ ಸುಧಾರಿಸಬೇಕು, ದೇಶದಲ್ಲಿ ಸಾಮಾನ್ಯ ಜನರಿಗೆ ಎಲ್ಲಾ ಲಾಭಗಳು ಸಿಗಬೇಕು. ಈ ದೇಶದ ಯೋಜನೆಗಳು ಫಲಪ್ರದವಾಗಬೇಕು ಅಂದರೆ ಪ್ರತಿಯೊಬ್ಬ ಜನರ ಕೈವಾಡ ಆ ಯೋಜನೆಯಲ್ಲಿಡಬೇಕು. ಅವರೂ ಸಹ ಅದರಲ್ಲಿ ಮನಸ್ಸು ಕೊಡಬೇಕು. ಆಗ ಆ ಯೋಜನೆ ಸಂಪೂರ್ಣವಾಗಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ನಮ್ಮ ಪ್ಲಾನಿಂಗ್ ಏಕೆ ವಿಫಲವಾಗುತ್ತಿದೆ. ನಮ್ಮ ದೇಶ ಅಂದರೆ ಗ್ರಾಮಗಳ ದೇಶ. ಗ್ರಾಮಗಳಲ್ಲಿ ಇದ್ದಂತಹ ಜನರಿಗೆ ಯೋಜನೆಗಳು ಯಾರ ಸಲುವಾಗಿ ಆಗುತ್ತವೆ, ಏಕೆ ಆಗುತ್ತವೆ, ಎಲ್ಲಿ ಆಗುತ್ತವೆಂಬುದು ಅವರಿಗೆ ಗುರುತು ಇಲ್ಲ. ಅವರ ಸಲುವಾಗಿ ಆ ಯೋಜನೆಯಲ್ಲಿ ಅವರು ಮನಸ್ಸು ಕೊಡಬೇಕು; ಅದು ಕೊಡದ ಕಾರಣ ಇವತ್ತು ನಮ್ಮ ದೇಶದಲ್ಲಿ ಯಾವುದೇ ಯೋಜನೆ ಸಫಲವಾಗುತ್ತಿಲ್ಲ. ಇವತ್ತು ಏನಾಗುತ್ತಿದೆ? ದಿಲ್ಲಿ ಅಥವಾ ಬೆಂಗಳೂರಿನಲ್ಲಿ ನಮ್ಮ ಯೋಜನೆಗಳು ತಯಾರಾಗುತ್ತವೆ. ನಮ್ಮ ಗ್ರಾಮದ ಅಭಿವೃದ್ಧಿಯಾಗಬೇಕು, ನಮ್ಮ ಗ್ರಾಮದ ಅಭಿವೃದ್ಧಿಯಾಗಬೇಕಾದರೆ ಆ ಯೋಜನೆ ಎಲ್ಲಿ ಆಗುತ್ತದೆಯೆಂದರೆ ದಿಲ್ಲಿಯಲ್ಲಿ ಅಥವಾ ಬೆಂಗಳೂರಿನಲ್ಲಿ. ಆದರೆ ಬೆಂಗಳೂರಿನಲ್ಲಿ ದಿಲ್ಲಿಯಲ್ಲಿ ಕೂತವರಿಗೆ ಗ್ರಾಮದಲ್ಲಿದ್ದ ಪರಿಸ್ಥಿತಿ

ಅವರಿಗೇನು ಬೇಕು, ಅವರ ಅನುಕೂಲತೆಗಳೇನು ಅವರ ಏಳಿಗೆಗಾಗಿ ನಾವು ಯಾವ ತರಹ ಯೋಜನೆಗಳನ್ನು ಹಾಕಿಕೊಳ್ಳಬೇಕು ಎನ್ನುವ ಸಮಂಜಸವಾದ ವಿಚಾರಧಾರೆಗಳು ಅವರ ಹತ್ತಿರ ಇರುವ ಹಾಗೆ ಇಲ್ಲ. ಅದರ ಸಲುವಾಗಿ ಇವತ್ತು ಗ್ರಾಮದಲ್ಲಿ ಗ್ರಾಮಮಟ್ಟದಲ್ಲಿ ನಮ್ಮ ಯೋಜನೆಗಳು ಆದವು ಅಂದರೆ, ಅವು ಸೂಕ್ತವಾದ ಯೋಜನೆಗಳು ಆಗುತ್ತವೆ. ಆ ಗ್ರಾಮ ಸುಧಾರಿಸಲಿಕ್ಕೆ ಸಾಧ್ಯವಾಗುತ್ತದೆ. ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಜಿಲ್ಲಾ ಪಂಚಾಯತ್ ಮಸೂದೆಯನ್ನು ಏನು ತಂದಿದ್ದೀರಿ ಅದನ್ನು ನಾನಂತೂ ತುಂಬು ಹೃದಯದಿಂದ ಸ್ವಾಗತ ಮಾಡುತ್ತಿದ್ದೇನೆ. ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ಅವರ ಮನಸ್ಸಿನಲ್ಲಿ ಏನಿತ್ತು? ಮಹಾತ್ಮ ಗಾಂಧೀಜಿಯವರು ಹೇಳಿದ್ದುದು ಏನೆಂದರೆ-

> 'My idea of the village Swaraj is that it is a complete Repubic independent of its neighbours, with all its wants and yet interdependent and on many others in which independance is a necessary.'

ಒಟ್ಟು ಒಂದು ಊರು ಎಂದರೆ ಅದು ಒಂದು ರಿಪಬ್ಲಿಕ್ ಇದ್ದಹಾಗೆ. ಸ್ವತಂತ್ರ ಸ್ವಾಯತ್ತತೆ ನಿರ್ಮಾಣವಾಗತಕ್ಕಂಥ ಗ್ರಾಮದ ಒಂದು ಕಲ್ಪನೆ ಅವರದ್ದು ಇತ್ತು. ಪ್ರತಿಯೊಂದು ಕೈಗಾರಿಕೆಯಾಗಲೀ, ಕೃಷಿ ಉತ್ಪಾದನೆಯಾಗಲೀ ಅಥವಾ ಅಲ್ಲಿಯ ಜನರ ಅವಶ್ಯಕತೆಗಳು ಏನಿವೆ, ಅದೆಲ್ಲಾ, ಅದೇ ಒಂದು ಗ್ರಾಮದಲ್ಲಿ ಪೂರೈಸಬೇಕು ಎನ್ನುವಂಥ ಒಂದು ಉದಾತ್ತವಾದ ಐಡಿಯಾವನ್ನು ಅವರು ಇಟ್ಟುಕೊಂಡಿದ್ದರು. ಈ ದೃಷ್ಟಿಯಿಂದ ಗ್ರಾಮಪಂಚಾಯತ್, ತಾಲ್ಲೂಕು ಪಂಚಾಯತ್, ಮತ್ತು ಜಿಲ್ಲಾ ಪಂಚಾಯತ್ ಕೆಲಸ ಮಾಡಬೇಕೆಂದು ಹೇಳಿ ಈಗ ನೀವು ತಂದಿರುವ ಮಸೂದೆ ಏನಿದೆ, ಅದರಿಂದ ಬಹಳ ಸಹಾಯವಾಗುತ್ತದೆ ಎಂದು ನನ್ನ ಭಾವನೆ. ಈ ಮಸೂದೆಯಲ್ಲಿರುವ ಗ್ರಾಮಸಭಾ, ಬಹುಶಃ ಹಿಂದಿನ ಇವರು ತಂದಂಥ ಮಸೂದೆಯಲ್ಲಿಯೂ ಸಹ ಇತ್ತು. ಆದರೆ ಪ್ರಾಕ್ಟಿಕಲ್ ಆಗಿ ನೋಡಿದಾಗ, ಅಲ್ಲಿ ಚುನಾಯಿತ ಸದಸ್ಯರು ಮಂಡಲ ಪ್ರಧಾನರಾಗಲೀ, ಜಿಲ್ಲಾ ಪರಿಷತ್ತಿನ ಸದಸ್ಯರಾಗಲೀ ಅವರಿಗೆ ಗ್ರಾಮಸಭೆಯನ್ನು ಎದುರಿಸುವಂಥ ಧೈರ್ಯ ಇರಲಿಲ್ಲ. ಏಕೆಂದರೆ ಗ್ರಾಮಸಭೆಗಳಿಗೆ ಹೋಗಿ ಜನರು ಏನು ಕೇಳುತ್ತಾರೋ, ಅದಕ್ಕೆ ಉತ್ತರ ಕೊಡುವಂಥಾದ್ದು, ನಾವು ಊರ ಸಲುವಾಗಿ ಅಥವಾ ಈ ಭಾಗದ ಸಲುವಾಗಿ ಏನು ಕೆಲಸ ಮಾಡಿದ್ದೇವೆ ಎಂದು ಧೈರ್ಯವಾಗಿ ಹೇಳುವಂಥ ಶಕ್ತಿ ಅವರಲ್ಲಿ ಇರಲಿಲ್ಲ. ಅವರ ಪರಿಸ್ಥಿತಿ ಮತ್ತು ಅವರ ಅವ್ಯವಹಾರಗಳು ಬಹುಶಃ ಇದಕ್ಕೆ ಕಾರಣ. ಈಗಲೂ ಬಹುಶಃ ಅದೇ ಆಗಬಹುದು. ನೀವು ಏನು ಗ್ರಾಮಸಭಾ ಇಟ್ಟುಕೊಂಡಿದ್ದೀರಿ, ಅದು ಪರಿಣಾಮಕಾರಿಯಾಗಬೇಕು. ನಿಜವಾದ ಗ್ರಾಮಸಭೆ ಎಂದರೆ ಈ ಪಂಚಾಯತಿಗಳನ್ನು ಹತೋಟಿಯಲ್ಲಿ ಇಟ್ಟುಕೊಳ್ಳುವಂಥ ಒಂದು ಏಜೆನ್ಸಿ. ಈ ಗ್ರಾಮಸಭೆ ನಿಜವಾಗಿ ಪರಿಣಾಮಕಾರಿಯಾಗಬೇಕು, ವರ್ಷಕ್ಕೊಮ್ಮೆ ಇದರ ಸಭೆ ಆಗಬೇಕು. ಆಮೇಲೆ ಅಕೌಂಟೆಬಿಲಿಟಿ ಇದೆಯೆಂದು, ಈ ಪಂಚಾಯತಿಗಳದ್ದು ಆಗಬೇಕೆಂದು ಏನು ಮಾಡಿದ್ದೀರಿ ಇದು ಒಳ್ಳೆಯದಿದೆ. ಆದರೆ ಇದು ಪ್ರಾಕ್ಟಿಕಲ್ ಆಗಬೇಕು. ಮೊದಲನೇ ಕಾನೂನಿನಲ್ಲಿ ಗ್ರಾಮಸಭೆ ಆಗಬೇಕೆಂದು ಇದೆ. ಆದರೆ ಅದನ್ನು ಮಾಡದೇ ಮತ್ತೆ ಅದನ್ನೇ ಅಳವಡಿಸಿದ್ದೀರಿ. ಅದೇನು ಎಂದರೆ ಚುನಾಯಿತ ಸದಸ್ಯರು ಗ್ರಾಮಸಬೆಯನ್ನು ಕರೆದಿಲ್ಲವೆಂದರೆ ಅಧಿಕಾರಿಗಳು ಕರೆಯಬೇಕೆಂದು ಇದೆ. ಮತ್ತೆ ಅಧಿಕಾರಿಗಳನ್ನು ಏಕೆ ಕರೆಯುತ್ತೀರಿ? ಚುನಾಯಿತ ಪ್ರತಿನಿಧಿಗಳು ಏನಿದ್ದಾರೆ, ಅವರೇ ಗ್ರಾಮಸಭೆಯನ್ನು ಕರೆಯಬೇಕು. ಇಲ್ಲದಿದ್ದರೆ ಅವರನ್ನು ಡಿಸ್‌ಕ್ವಾಲಿಫೈ ಮಾಡಬೇಕು. ಗ್ರಾಮಸಭೆಗಳನ್ನು ಕರೆಯುವುದಕ್ಕೆ ಆಗಿಲ್ಲವಾದರೆ ಅಂತಹ ಸದಸ್ಯರನ್ನು, ಅಂತಹ ಛೇರ್ಮನ್‌ರನ್ನು ಡಿಸ್‌ಕ್ವಾಲಿಫೈ ಮಾಡಬೇಕು. ಗ್ರಾಮಸಭೆಯನ್ನು ಕಡ್ಡಾಯವಾಗಿ ಕರೆಯಬೇಕು ಮತ್ತು ಒಂದು ವರ್ಷದ ಅಕೌಂಟ್ಸನ್ನು ಗ್ರಾಮಸಭೆಯಲ್ಲಿ

ಅವರು ಹೇಳಬೇಕು. ಈ ರೀತಿ ಮಾಡಬೇಕೆಂದು ನನ್ನ ಒಂದು ಸಲಹೆ. ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಆಮೇಲೆ ಈಗ ಸರಪಂಚ್ - ಇದು ಎಲ್ಲರಿಗೂ ಒಂದೇ ಹೆಸರು ಕೊಟ್ಟಹಾಗೆ ಕಾಣುತ್ತದೆ. ಅಧ್ಯಕ್ಷರು ಎಂದು ಹೇಳಿ ಹೆಸರು ಕೊಟ್ಟರಿ. ಗ್ರಾಮಪಂಚಾಯತ್ ಮಾಡಿದ ಮೇಲೆ ಅಲ್ಲಿ ಸರಪಂಚ್ ಅಂತ ಇಡಿ. ಆಮೇಲೆ ತಾಲ್ಲೂಕು ಸಮಿತಿ ಮಟ್ಟದಲ್ಲಿ ತಾಲ್ಲೂಕು ಸಭಾಪತಿ ಅಂತ ಹೇಳಿ. ಜಿಲ್ಲಾಮಟ್ಟದಲ್ಲಿ ಅಧ್ಯಕ್ಷರು ಎಂದು ಹೇಳಿ. ಇದು ನಮ್ಮ ಸಲಹೆ. ಆಮೇಲೆ ಸರಪಂಚ ; ಇವರ ಚುನಾವಣೆ ಡೈರೆಕ್ಟ್ ಆಗಬೇಕು. ಡೈರೆಕ್ಟ್ ಆಗಬೇಕೆಂದರೆ, ಅದರೊಳಗೆ ಒಂದು ಕಾರಣ ಇದೆ. ಒಂದು ಪಕ್ಷದವರು ಅಥವಾ ಪಕ್ಷದಿಂದ ಅವ ಚುನಾಯಿತನಾದರೆ, ಅಥವಾ ಸದಸ್ಯರಿಂದ ಚುನಾಯಿತನಾದರೆ, ಏನಾಗುತ್ತದೆ, ಅಲ್ಲಿ ಗುಂಪುಗಾರಿಕೆಯಾಗುತ್ತದೆ. ಈಗ ನಾನ್ ಪಾರ್ಟಿ ಬೇಸಿಸ್ ಮೇಲೆ ಚುನಾವಣೆ ಮಾಡಬೇಕೆಂದು ನಿಮ್ಮ ಉದ್ದೇಶ ಇದೆ. ಒಟ್ಟು ಊರು ಅಭಿವೃದ್ಧಿಯಾಗಬೇಕು.

ಶ್ರೀ ಎಂ. ವೈ. ಘೋರ್ಪಡೆ : ತಮಗೆ ಒಂದು ಪ್ರಶ್ನೆ ಕೇಳಬೇಕು. ಡೈರೆಕ್ಟ್ ಮಾಡಿದರೆ, ಅವರನ್ನು ತೆಗೆಯುವುದು ಹೇಗೆ, ತಾವು ಹೇಳಬೇಕು. ಮತ್ತೆ ಮೆಂಬರ್ಸ್ ಆರಿಸಿ ಬಂದಿರುತ್ತಾರಲ್ಲ ಆ ಮೆಜಾರಿಟಿ ಸಪೋರ್ಟ್ ಆ ಅಧ್ಯಕ್ಷನಿಗೆ ಸಿಕ್ಕದೇ ಹೋದರೆ, ಕೆಲಸ ಸ್ಥಗಿತವಾಗುತ್ತದೆ. ಇದಕ್ಕೆ ಏನು ಮಾಡಬೇಕು?

ಶ್ರೀ ನಾರಾಯಣರಾವ್ ಮನಹಳ್ಳಿ : ಅದಕ್ಕೆ ಡೈರೆಕ್ಟ್ ಆದರೆ, ಲಾಭ ಇಷ್ಟೇ ಇದೆ. ಇಡೀ ಊರು ಜನರ ಅಭಿವೃದ್ಧಿ ಸಲುವಾಗಿ ಅವ ಕೆಲಸ ಮಾಡಬೇಕಾಗುತ್ತದೆ. ಏಕೆಂದರೆ, ಎಲ್ಲರೂ ಅವನಿಗೆ ಮತ ಕೊಟ್ಟಿರುತ್ತಾರೆ. ಆಮೇಲೆ ಅವನನ್ನು ತೆಗೆಯುವುದು. ಮೂರನೇ ಎರಡು ಮೆಜಾರಿಟಿ, ಕಾನೂನು ಮಾಡಿದ ಮೇಲೆ ಕೊಡಲಿಲ್ಲವೆಂದರೆ ಹೇಗೆ, ಒಂದು ಕಾನೂನು ಆದ ನಂತರ. ಆಮೇಲೆ ಬೇಕಾದರೆ, ಜಯಪ್ರಕಾಶ್ ನಾರಾಯಣ್‌ರವರು ಹೇಳಿದ ಹಾಗೆ, ರೈಟ್ ಆಫ್ ರಿಕಾಲ್ ಎಂದು ಹೇಳಿ ಮಾಡಿಕೊಳ್ಳಿ. ಆ ದೃಷ್ಟಿಯಿಂದ ಮಾಡಿದರೆ ಬಹುಶಃ ಅವನನ್ನು ತೆಗೆಯುವುದಕ್ಕಾಗುತ್ತದೆ. ಆಮೇಲೆ ಅವ ಕೆಲಸ ಸರಿಯಾಗಿ ಮಾಡಲಿಲ್ಲವೆಂದರೆ, ಇಡೀ ಜನರಿಗೆ, ಗ್ರಾಮಸಭೆಯಲ್ಲಿಯೇ ಉತ್ತರ ಕೊಡಬೇಕಾಗುತ್ತದೆ. ಗ್ರಾಮಸಭೆಯಲ್ಲಿ ಅವನ ಬಣ್ಣಬಯಲಿಗೆ ಬರುತ್ತದೆ. ಅದರ ಸಲುವಾಗಿ, ಯಾವುದೇ ಸರಪಂಚನಾಗಲೀ ಅವ ಡೈರೆಕ್ಟ್ ಚುನಾವಣೆಯಾಗಬೇಕು, ಎಂದು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಮತ್ತೊಂದು, ಈ ಚುನಾವಣಾ ಕ್ಷೇತ್ರಗಳು ಮಾಡುವಾಗ, ರಿಸರ್ವೇಶನ್ ಬಗ್ಗೆ ನಮ್ಮದೇನೂ ವಿರೋಧ ಇಲ್ಲ. ಹಾಲಿ ಇರತಕ್ಕ ರಿಸರ್ವೇಷನ್ ಇರಲಿ. ಆಮೇಲೆ ಈಗ ಚುನಾವಣಾ ಕ್ಷೇತ್ರ ಮಾಡುವಾಗ, ಇದರಲ್ಲಿ ಬಹಳ ರಾಜಕೀಯ ನಡೆಯುತ್ತದೆ. ಕಾನೂನು ಇರುತ್ತದೆ ಒಂದು, ಆದರೆ, ಎರಡು ಚುನಾವಣಾ ಕ್ಷೇತ್ರದಿಂದಲೂ ಒಬ್ಬ ಪ್ರಭಾವಿ ವ್ಯಕ್ತಿ ಆರಿಸಿ ಬರುವ ಸಾಧ್ಯತೆ ಇರುತ್ತದೆ. ಅವ ನಮ್ಮ ಪಕ್ಷದವನಾಗಿರುವುದಿಲ್ಲ, ಬೇರೆ ಪಕ್ಷದವನಿರುತ್ತಾನೆ. ಅಂತಹ ಚುನಾವಣಾ ಕ್ಷೇತ್ರಕ್ಕೆ ಏನು ಮಾಡುತ್ತಾರೆ, ರಿಸರ್ವ್ ಹಾಕಿಬಿಡುತ್ತಾರೆ, ಇಲ್ಲದೇ ಹೋದರೆ, ಮಹಿಳೆಯರ ಕ್ಷೇತ್ರ ಎಂದು ಮಾಡಿಬಿಡುತ್ತಾರೆ. ಇಂತಹ ಕೆಲಸಗಳೂ ಆಗಿದೆ. ಅದಕ್ಕೆ,ಈ ತರಹ ಆಗಬಾರದು. ನೀವು ಬೇಕಾದರೆ ರೊಟೇಷನ್ ಪದ್ಧತಿ ಮೇಲೆ ಮಾಡಿ. 5 ವರ್ಷ ಒಂದು ಕ್ಷೇತ್ರಕ್ಕೆ, ಮತ್ತೊಂದು 5 ವರ್ಷ ಬೇರೆ ಕ್ಷೇತ್ರಕ್ಕೆ ; ಹೀಗೆ ರೊಟೇಷನ್ ಪದ್ಧತಿ ಮೇಲೆ ಆಗಲಿ. ಆದರೆ, ಅಧಿಕಾರ ಮಾತ್ರ ಅವರಿಗೆ ಕೊಟ್ಟರೆ, ಅಲ್ಲಿ ರಾಜಕೀಯ ಬರುವಂಥ ಸಾಧ್ಯತೆ ಇದೆ.

ಶ್ರೀ ಎಂ. ವೈ. ಘೋರ್ಪಡೆ : ರೊಟೇಷನ್ ಮಾಡುತ್ತಾ ಇದ್ದೇವೆ.

ಶ್ರೀ ನಾರಾಯಣ ರಾವ್ ಮನಹಳ್ಳಿ : ಆಮೇಲೆ ಮತ್ತೊಂದು ಏನಿದೆ ಎಂದರೆ, ನಿಮ್ಮ ಗ್ರಾಮ ಪಂಚಾಯಿತಿಯಾಗಲೀ, ತಾಲ್ಲೂಕು ಪಂಚಾಯಿತಿಯಾಗಲೀ,

ಪಂಚಾಯಿತಿಯಾಗಲೀ, ಇದರಲ್ಲಿ ಸಹಕಾರಿ ಕ್ಷೇತ್ರದ್ದು ಏನೂ ಸಂಬಂಧ ಇಲ್ಲದ ಹಾಗೆ ತಾವು ಮಾಡಿದ್ದೀರಿ. ಈ ಕಾನೂನಿನಲ್ಲಿ ಆ ತರಹ ಮಾಡಿದ್ದೀರಿ. ಆದರೆ, ನಿಜವಾಗಿ ಇವರದೆಲ್ಲಾ ಅಭಿವೃದ್ಧಿಯಾಗಬೇಕಾದರೆ, ಗ್ರಾಮೀಣ ಅಭಿವೃದ್ಧಿಯಾಗಬೇಕಾದರೆ, ಸಹಕಾರಿ ಕ್ಷೇತ್ರದ್ದೂ ಅದರೊಳಗೆ ಪ್ರಾತಿನಿಧ್ಯ ಇರಬೇಕು. ಆದರೆ, ಅದರೊಳಗೆ ಇಲ್ಲ. ಅದರ ಸಲುವಾಗಿ, ಸಹಕಾರ ಕ್ಷೇತ್ರವೂ ಅದರೊಳಗೆ ಪ್ರಾತಿನಿಧ್ಯ ಬರಬೇಕು ಎಂಬ ಕಾಳಜಿಯನ್ನು ತಾವು ವಹಿಸಬೇಕೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಆಮೇಲೆ ಮತ್ತೊಂದು ನಾಮಿನೇಷನ್. ನಾಮಿನೇಷನ್ ಪದ್ಧತಿ, ಇದನ್ನು ಮೂಲವಾಗಿ ತಾವು ಕೈಬಿಡಬೇಕು. ಈಗೇನಾಗುತ್ತದೆ. ಈ ನಾಮಿನೇಷನ್ ಪದ್ಧತಿ, ಇವತ್ತು ಅವಧಿ ಮುಗಿಯಿತು ಎಂದು ತಿಳಿದುಕೊಳ್ಳಿ, ಆಗ ನೀವೇನು ಮಾಡುತ್ತೀರಿ, ಆಡಳಿತಾಧಿಕಾರಿಗಳನ್ನು ಹಾಕಿ, ಅವರನ್ನು ಖಾಯಂ ಮಾಡುತ್ತೀರಿ. ಈ ರೀತಿ ಆಡಳಿತಾಧಿಕಾರಿಗಳನ್ನು ಹಾಕುವುದಕ್ಕೆ ಹೋಗಬೇಡಿ. ಈಗಾಗಲೇ ಅವರು ಮಾಡಿ, ಎಲ್ಲಾ ಕಡೆಗಳಲ್ಲೂ ಕೆಲಸಗಳು ಸ್ಥಗಿತವಾಗಿದೆ. ಯಾವುದೇ ಮಂಡಲ್ ಕೆಲಸ, ಆಗುತ್ತಾ ಇಲ್ಲ, ಜಿಲ್ಲಾ ಪರಿಷತ್ ಕೆಲಸ ಆಗುತ್ತಾ ಇಲ್ಲ, ತಾಲ್ಲೂಕು ಪಂಚಾಯಿತಿ ಕೆಲಸ ಆಗುತ್ತಾ ಇಲ್ಲ. ಅದರ ಸಲುವಾಗಿ ಒಂದು ಕೆಲಸ ನೀವು ಮಾಡಿ. ಏನೆಂದರೆ, 5 ಜನರಿಗೆ ಅಥವಾ 6 ಜನರಿಗೆ ನಾಮಕರಣ ಮಾಡಿ, ಎಲ್ಲಾ ಪಕ್ಷದವರನ್ನು ಮಾಡಿ. ಒಂದು ಮಂಡಲಕ್ಕೆ ಎಲ್ಲಾ ಪಕ್ಷದವರು ಇರಲಿ. ಪ್ರತಿಯೊಂದು ಪಕ್ಷಕ್ಕೂ ಒಂದೊಂದು ಪ್ರತಿನಿಧಿ ಕೊಟ್ಟು ನೀವು ನಾಮಕರಣ ಮಾಡಬೇಕು. ಅಂದ್ರೆ ನೀವು ಅಡ್ಮಿನಿಸ್ಟ್ರೇಟರ್ ಅನ್ನು ಹಾಕುವಾಗ ಒಂದು ಯಾವುದೋ ರೆವೆನ್ಯೂ ಇಲಾಖೆ ಅಥವಾ ನಿಮ್ಮ ವೆಟರಿನರಿ ಇಲಾಖೆಯವನು ಇರುತ್ತಾನೆ. ಅವನನ್ನು ನೀವು ಒಂದು ಮಂಡಲಕ್ಕೆ ನಾಮಿನೇಟ್ ಮಾಡುತ್ತೀರಿ. ಅವನಿಗೆ ಅಡ್ಮಿನಿಸ್ಟ್ರೇಟರ್ ಅಂತ ಹಾಕಿದಿರಿ ; ಈಗ ಅಡ್ಮಿನಿಸ್ಟ್ರೇಟರ್ಸ್ ಎಂದು ಅವರು ಮಂಡಲಕ್ಕೆ ಬರುತ್ತಾ ಇಲ್ಲ. ಕೆಲಸ ಮಾಡುತ್ತಾ ಇಲ್ಲ. ಹೀಗಾಗಿ ಇಡೀ ಒಂದು ವರ್ಷದಿಂದ ಎಲ್ಲಾ ಕೆಲಸಕಾರ್ಯಗಳು ; ಅಭಿವೃದ್ಧಿ ಕಾರ್ಯಗಳು ಕುಂಠಿತವಾಗಿವೆ. ಆದ್ದರಿಂದ ಮುಂದಾದರೂ ಇಂತಹ ಅವಕಾಶ ಬಂದಾಗ ಅಂತಹ ಜನರಿಗೆ ನೀವು ಆಡಳಿತಾಧಿಕಾರಿ ಎಂದು ಹಾಕಬಾರದು. ಪಕ್ಷದವರೇ ಎಲ್ಲಾ ಪಕ್ಷದವರನ್ನು ಸೇರಿಸಿ ಒಬ್ಬೊಬ್ಬರಿಗೆ ನೀವು ಆಡಳಿತಾಧಿಕಾರಿ ಎಂದು ಅಂತ ಹೇಳಿ ; ನೀವು ಮಂಡಲಗಳಿಗೆ ತಾಲ್ಲೂಕು ಸಮಿತಿಗಳಿಗೆ ಹಾಕಿದರೆ ಒಳ್ಳೆಯದು ಆಗುತ್ತದೆ. ಆಮೇಲೆ ಈಗ ಯಾವುದೇ ಗ್ರಾಮದ ಅಭಿವೃದ್ಧಿ ಆಗಬೇಕಾದರೆ ಏನು ಮಾಡಬೇಕು ಎಂಬುದನ್ನು ಹೇಳುತ್ತೇನೆ. ಈಗ ನೀವು ಪಂಚಾಯತಿಗಳಿಗೆ ಕೊಡುವಂತಹ ಹಣ ಏನು ಇದೆ. ಅದು ಬಹಳ ಕಡಿಮೆ ಇದೆ. ನಿಜವಾಗಿಯೂ ಗ್ರಾಮಗಳಲ್ಲಿ ಅವರು ಅವರ ರಿಸೋರ್ಸಸ್ ಕ್ರಿಯೇಟ್ ಮಾಡಬೇಕೆಂದರೆ ಅವರಲ್ಲಿ ಯಾವ ತರಹ ರಿಸೋಸರ್ಸ್ ಇಲ್ಲ. ಕೆಲವೊಂದು ಕಡೆ ಇದ್ದಿರಬಹುದು. ಆದರೆ ನಮ್ಮ ಭಾಗಕ್ಕೆ ರಿಸೋಸರ್ಸ್ ಮೊಬಲೈಸೇಷನ್ ಮಾಡುವಂತಹ, ಆರ್ಥಿಕ ಉತ್ಪಾದನೆ ಮಾಡಿಕೊಳ್ಳುವಂತಹ ಸಾಧನೆಗಳು ಯಾವುದೂ ಇಲ್ಲ. ಅದರ ಸಲುವಾಗಿ ಆ ಗ್ರಾಮಗಳು ಅಭಿವೃದ್ಧಿಯಾಗಬೇಕಾದರೆ ನೀವು ಹಣ ಹೆಚ್ಚು ಕೊಡಬೇಕಾಗುತ್ತದೆ. ಈಗ ಒಂದು ಲಕ್ಷ ರೂಪಾಯಿ ಕೊಡಬೇಕೆಂದು ತಾವು ಏನು ನಿರ್ಧಾರ ಮಾಡಿದ್ದೀರಿ ಅದು ಸಾಕಾಗುವುದಿಲ್ಲ.

ಶ್ರೀ ಕೆ. ಶಿವಮೂರ್ತಿ : ರಿಸೋರ್ಸಸ್ ಜಾಸ್ತಿ ಮಾಡಬೇಕಾದರೆ ಜವಹರ್ ರೋಜ್‌ಗಾರ್ ಯೋಜನೆಯ ದುಡ್ಡು ಇದೆಯಲ್ಲಾ ಅದನ್ನು ತೆಗೆದುಕೊಂಡು ಹೋಗಿ ಶಾಪಿಂಗ್ ಕಾಂಪ್ಲೆಕ್ಸ್ ಅಥವಾ ಕಲ್ಯಾಣ ಮಂದಿರ ಕಟ್ಟಿದರೆ, ಅದರ ಮೂಲಕ ಬಾಡಿಗೆ ಬರುತ್ತದೆ. ಈಗಾಗಲೇ ಮಂಡಲ್ ಪಂಚಾಯಿತಿಯವರು ಕಟ್ಟಿದ್ದಾರೆ. ಈ ರೀತಿ ಬಾಡಿಗೆ ಬಂದರೆ ಜಾಸ್ತಿ ಆಗುತ್ತದೆ.

ಶ್ರೀ ನಾರಾಯಣ ಮನಹಳ್ಳಿ : 'ಆದರೆ ತಾವು ಹೇಳಿದ ಹಾಗೆ ಹಿಂದೆ ಜವಹರ್ ರೋಜ್‌ಗಾರ್ ಯೋಜನಾ ಇದರಲ್ಲಿ ಕೆಲವು ಶಾಪ್ಸ್ ಕಟ್ಟಿದ್ದಾರೆ. ಹಳ್ಳಿಯಲ್ಲಿ ಅದರ ರೆಂಟ್ ಎಷ್ಟುಬರುತ್ತದೆ ಸ್ವಾಮಿ? ಬಹಳ ಕಡಿಮೆ ರೆಂಟ್ ಬರುತ್ತದೆ.

ಶ್ರೀ ಕೆ. ಶಿವಮೂರ್ತಿ : ಜವಹರ್ ರೋಜ್‌ಗಾರ್ ದುಡ್ಡಿನಲ್ಲಿ ಶಾಪಿಂಗ್ ಕಾಂಪ್ಲೆಕ್ಸ್ ಕಟ್ಟುವುದಕ್ಕೆ ಬರುತ್ತದೆಯೇ?

ಶ್ರೀ ನಾರಾಯಣರಾವ್ ಮನಹಳ್ಳಿ : ಕೆಲವು ಜಾಗಗಳಲ್ಲಿ ಕಟ್ಟಿದ್ದಾರೆ. ಈ ದೃಷ್ಟಿಯಿಂದ ಪಂಚಾಯತಿಗಳ ಆದಾಯ ಕಡಿಮೆ ಇದ್ದ ಕಾರಣ ಪಂಚಾಯತ್ ಡೆವಲಪ್‌ಮೆಂಟ್ ಆಗಬೇಕಾದರೆ ತಾವು ಹಣಕಾಸಿನ ವ್ಯವಸ್ಥೆ ಮಾಡಬೇಕಾಗುತ್ತದೆ. ಇನ್ನೂ ಹೆಚ್ಚಿನ ಹಣಕಾಸಿನ ನೆರವು ಮಾಡಿ ಅವರ ಡೆವಲಪ್‌ಮೆಂಟ್ ಆಗುವಂತಹ ಒಂದು ಅವಕಾಶ ತಾವು ಕಲ್ಪಿಸಿಕೊಡುತ್ತೀರಿ ಎಂದು ಹೇಳಿ ಈ ಮಸೂದೆಯ ಬಗ್ಗೆ ನನ್ನ ಭಾವನೆ ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

4.50 ಪಿ. ಎಂ.

* ಶ್ರೀ ಎಂ. ವಿ. ವೆಂಕಟಪ್ಪ (ಮುಳಬಾಗಿಲು) :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಘೋರ್ಪಡೆಯವರು ಈ ಒಂದು ಪಂಚಾಯತ್‌ರಾಜ್ ಮಸೂದೆಯನ್ನು ಇಲ್ಲಿ ತಂದಿದ್ದಕ್ಕಾಗಿ ನಾವು ಅವರನ್ನು ಶ್ಲಾಘನೆ ಮಾಡಬೇಕಾಗಿದೆ. ಇಂಡಿಯನ್ ಕಾನ್‌ಸ್ಟಿಟ್ಯೂಷನ್ ಆರ್ಟಿಕಲ್ 40ರ ಪ್ರಕಾರ, ಪ್ರತಿಯೊಂದು ರಾಜ್ಯದಲ್ಲಿಯೂ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಏರ್ಪಾಡು ಮಾಡಬೇಕೆಂದು ಇದೆ. ಆ ಒಂದು ಆಧಾರದ ಮೇಲೆ 1983ನೇ ಇಸವಿಯಲ್ಲಿ ಶ್ರೀಮಾನ್ ರಾಮಕೃಷ್ಣ ಹೆಗಡೆಯವರ ಅಧಿಕಾರದಲ್ಲಿ ದಿವಂಗತ ನಜೀರ್‌ಸಾಬ್‌ರವರು ಇದನ್ನು ತಂದಿದ್ದು ಉಂಟು. ಬಹುಶಃ ಅದನ್ನು ತಂದಾಗ ಅವರಿಬ್ಬರೂ ಕೂಡ ಹೇಳಿದ್ದರು, ಇದು ಎಕ್ಸ್‌ಪರಿಮೆಂಟಲ್ ಬೇಸಿಸ್, ಇದರಲ್ಲಿ ಏನಾದರೂ ಏರುಪಾರುಗಳಾದರೆ, ಲೋಪದೋಷಗಳು ಕಂಡರೆ, ನಾವು ಅದನ್ನು ಸರಿಪಡಿಸಿಕೊಳ್ಳಬೇಕಾಗುತ್ತದೆ ಎಂದು ಹೇಳಿದ್ದರು. ಅದನ್ನೆಲ್ಲಾ ಸರಿಪಡಿಸಿ ಮಾನ್ಯ ಘೋರ್ಪಡೆಯವರು ಬಹಳ ಮುತುವರ್ಜಿಯಿಂದ, ಅವರ ಸೆಕ್ರೆಟರಿಯವರಿಗೆ ಮತ್ತು ಅವರ ಸಿಬ್ಬಂದಿಯವರು ರಾತ್ರಿ ಹಗಲು ಸುಮಾರು ಎರಡು ಮೂರು ತಿಂಗಳುಗಳ ಕಾಲ ಪರಿಶ್ರಮ ವಹಿಸಿ ಈ ಮಸೂದೆಯನ್ನು ಇವೊತ್ತು ನಮ್ಮ ಮುಂದಿಟ್ಟಿದ್ದಾರೆ. 1989ರಲ್ಲಿ ಶ್ರೀಮಾನ್ ರಾಜೀವ್ ಗಾಂಧೀಯವರು ರಾಜ್ಯಾಂಗಕ್ಕೆ 64ನೇ ತಿದ್ದುಪಡಿ ತಂದಾಗ ಲೋಕಸಭೆಯಲ್ಲಿ ಅದು ಮಂಜೂರಾಗಿ, ರಾಜ್ಯ ಸಭೆಯಲ್ಲಿ ಎರಡು ಮತಗಳಿಂದ ಅದು ಬಿದ್ದು ಹೋದಮೇಲೆ, ನಂತರ ಲೋಕಸಭೆಯ ಚುನಾವಣೆಯು ನಡೆಯಿತು, ಅದರ ಅವಲೋಕನ ಮಾಡುವ ಅವಶ್ಯಕತೆ ಇಲ್ಲ. ಅದರ ನಂತರ ನಮ್ಮ ಪ್ರಧಾನಿಯವರು ಡಿಸೆಂಬರ್ 22, 23ನೇ ತಾರೀಖು, ವಿರೋಧಪಕ್ಷದವರನ್ನೆಲ್ಲಾ ಒಂದುಗೂಡಿಸಿ, ಈ ಪಂಚಾಯತ್‌ರಾಜ್ ವ್ಯವಸ್ಥೆ ಇಲ್ಲದಿದ್ದರೆ, ನಮ್ಮ ಜನಸಂಖ್ಯೆಯ ಶೇಕಡ 80ರಷ್ಟು ಗ್ರಾಮೀಣ ಪ್ರದೇಶದವರು ಏನಿದ್ದಾರೆ, ಅವರಿಗೆ ನಾವು ನ್ಯಾಯ ದೊರಕಿಸಿಕೊಡಲು ಆಗುವುದಿಲ್ಲ, ಇದನ್ನು ಮಾಡಲೇಬೇಕೆಂದು ಹೇಳಿ ವೆಸ್ಟ್‌ಬೆಂಗಾಲ್ ಚೀಫ್‌ಮಿನಿಸ್ಟರ್ ಜ್ಯೋತಿಬಸು, ಎಲ್ಲಾ ಮುಖ್ಯ ಮಂತ್ರಿಯವರನ್ನೂ ಕರೆಯಿಸಿ, ಅವಿರೋಧವಾಗಿ ಈ ಮಸೂದೆಯನ್ನು ಪಾಸ್ ಮಾಡಿದ್ದಾರೆ. ಅದನ್ನು ನಾವು ಕೂಡ ರ್‍ಯಾಟಿಫೈ ಮಾಡಿ ಕಳುಹಿಸಿಕೊಟ್ಟಿದ್ದೇವೆ. 16 ರಾಜ್ಯಗಳು ಅದನ್ನು ರ್‍ಯಾಟಿಫೈ ಮಾಡಿದ್ದಾರೆ. ಬಹುಶಃ ಇನ್ನು 15 ದಿವಸಗಳಲ್ಲಿ ರಾಷ್ಟ್ರಪತಿಗಳ ಅಂಕಿತವಾದ ಮೇಲೆ, ಅದು ಕಾನೂನು ಆಗುತ್ತದೆ. ಕಾನೂನು ಆದಮೇಲೆ, ಇಂಡಿಯಾ ಗೆಜೆಟ್‌ನಲ್ಲಿ ಪಬ್ಲಿಷ್ ಆದಮೇಲೆ, ಅಲ್ಲಿಂದ ಒಂದು ವರ್ಷದೊಳಗೆ ಎಲ್ಲಾ ರಾಜ್ಯಗಳೂ ಸಹ ಇದರಲ್ಲಿ ಇನ್‌ಕನ್ಸಿಸ್ಟೆನ್ಸಿ ಏನಾದರೂ ಇದ್ದರೆ ಅಂದರೆ ಅವರ ಎಕ್ಸಿಸ್ಟಿಂಗ್ ಪಂಚಾಯತ್ ರಾಜ್ಯ ಆಕ್ಟ್ ಏನಿದೆ, ಅದಕ್ಕೆ ರಾಜ್ಯಾಂಗ ತಿದ್ದುಪಡಿಯನ್ನು ಏನು ತಂದಿದ್ದಾರೆ, 73ನೇ ರಾಜ್ಯಾಂಗ ತಿದ್ದುಪಡಿಗೆ ಯಾವುದಾದರೂ ಸೆಕ್ಷನ್‌ನಲ್ಲಿಯೋ, ಕ್ಲಾಸ್‌ಗಳಲ್ಲಿಯೋ ಇನ್‌ಕನ್ಸಿಸ್ಟೆನ್ಸಿ ಇದ್ದರೆ, ಒಂದು ವರ್ಷದೊಳಗೆ ಅದನ್ನು ಸರಿಪಡಿಸಿಕೊಳ್ಳಬೇಕೆಂದು ಆ ರಾಜ್ಯಾಂಗ ತಿದ್ದುಪಡಿಯಲ್ಲಿ ಮೆನ್‌ಷನ್ ಮಾಡಿದ್ದಾರೆ. ಅದೇ

ಪ್ರಕಾರ ಅನೇಕ ರಾಜ್ಯಗಳಲ್ಲಿ ತಂದಿದ್ದಾರೆ. ಆದರೆ ನಮ್ಮ ರಾಜ್ಯದಲ್ಲಿ ರಾಜ್ಯಾಂಗ ತಿದ್ದುಪಡಿಗನುಗುಣವಾಗಿ ಇದನ್ನೂ ತಂದಿದ್ದಾರೆ. ನಮ್ಮ ಮಾನ್ಯ ಚಂದ್ರೇಗೌಡರು ಹೇಳಿದ ಹಾಗೆ ಇಷ್ಟು ಅವಸರವಾಗಿ ಏಕೆ ತರಬೇಕಾಗಿತ್ತು ಎಂದು. ಈ ಹಿಂದೆ ರ್‍ಯಾಟಿಫಿಕೇಷನ್‌ಗೆ ಬಿಲ್ ಬಂದಿದ್ದಾಗ, ಇದೇ ಫ್ರಂಟ್‌ಲೈನ್‌ನಲ್ಲಿ ಕುಳಿತಂಥವರೆಲ್ಲರೂ ಹೇಳಿದ ಮಾತು ನನಗೆ ಜ್ಞಾಪಕವಿದೆ. ರಾಜ್ಯಾಂಗ ತಿದ್ದುಪಡಿಗೆ ಅನುಗುಣವಾಗಿ ನೀವು ತನ್ನಿ ಐದು ನಿಮಿಷಗಳಲ್ಲಿ ನಾವು ಪಾಸ್ ಮಾಡಿಕೊಡುತ್ತೇವೆ, ನೀವು ಯೋಚನೆ ಮಾಡಬೇಡಿ, ರ್‍ಯಾಟಿಫಿಕೇಷನ್ ಬೇಡಿ ಎಂದೆಲ್ಲಾ ಎಲ್ಲರೂ ಹಾಗೆ ಹೇಳಿದ್ದರು. ಆದರೆ ಈಗ ಇವರು ಮಾಡುತ್ತಾ ಇರುವ ಕೆಲಸವನ್ನು ನೋಡಿದರೆ ಇದರಲ್ಲಿ ಏನೋ ಒಂದು ಕುಯುಕ್ತಿ ಇದೆ ಎಂದು ನನಗನ್ನಿಸುತ್ತದೆ. ಮಾನ್ಯ ಚಂದ್ರೇಗೌಡರ ಪ್ರಕಾರ ಘೋರ್ಪಡೆಯವರು ಮಹಾರಾಜರಾದರೆ ನನ್ನ ಪ್ರಕಾರ ಅವರು ಮಹಾರಾಜರಲ್ಲ. 600 ಜನ ಮಹಾರಾಜರುಗಳು ಏನು ಇದ್ದರು, ಆ ಕಾಲ ಹೋಗಿ 40-50 ವರ್ಷ ಆಯಿತು. ಆಮೇಲೆ, ಹೈದರಾಬಾದ್ ನಿಜಾಂ, ತಿರುವಾಂಕೂರು ಮಹಾರಾಜರು, ಮೈಸೂರು ಮಹಾರಾಜರು ಮುಂತಾಗಿ ಎಲ್ಲರೂ ಹೋಗಿದ್ದಾರೆ. ಅವರೆಲ್ಲರೂ ಸಾಮಾನ್ಯ ಪ್ರಜೆಗಳಾಗಿದ್ದಾರೆ. ನಾವೆಲ್ಲರೂ ಪ್ರಜೆಗಳು ; ಆ ಮಹಾರಾಜರ ಹತ್ತಿರ ಏನು ಅಧಿಕಾರ ಇತ್ತು, ಅದನ್ನು ನಮಗೆ ಅಂದರೆ ಪ್ರಜೆಗಳಿಗೆ ಕೊಟ್ಟಿದ್ದಾರೆ. ಈ ಬಿಲ್‌ನಲ್ಲಿನ ಅಧಿಕಾರವು ಚುನಾಯಿತ ಸದಸ್ಯರುಗಳಿಗೆ ಪೂರ್ಣ ಅಧಿಕಾರವನ್ನು ಕೊಟ್ಟಿದ್ದಾರೆ. ಪಂಚಾಯತ್ ಸಮಿತಿಯಾಗಲಿ, ತಾಲ್ಲೂಕು ಸಮಿತಿಯಾಗಲೀ, ಅಥವಾ ಜಿಲ್ಲಾಪರಿಷತ್‌ಗೆ ಮಾತ್ರ ಅಷ್ಟು ಅಧಿಕಾರವನ್ನು ಕೊಟ್ಟಿಲ್ಲ. ಅಂದರೆ ಈ ಪಂಚಾಯತ್‌ನಲ್ಲಿ ಏನಿದೆ. ಅವನು ನೇರವಾಗಿ ಚುನಾವಣೆಯಾಗಲಿ, ಇಂಡೈರೆಕ್ಟ್ ಆಗಲೀ ಆಯ್ಕೆಯಾಗಲೀ, ಪೂರ್ಣ ಅಧಿಕಾರವು ಅಧ್ಯಕ್ಷರಿಗೆ ಇಲ್ಲ. ಪೂರ್ಣ ಅಧಿಕಾರ ಕಮಿಟಿಗೆ ಇದೆ. ಕಮಿಟಿಯವರು ಯಾವರೀತಿಯಲ್ಲಿ ರೆಸಲ್ಯೂಷನ್ ಮಾಡುತ್ತಾರೆ ಆ ರೀತಿ ನಡೆಯಬೇಕಾಗುತ್ತದೆ. ಅಂದರೆ ಅಧಿಕಾರವನ್ನು ಪಂಚಾಯಿತಿಗೆ, ನಮ್ಮ ಪ್ರಜೆಗಳಿಗೆ ಕೊಟ್ಟಿದ್ದಾರೆ. ಆದ್ದರಿಂದ ನಾವು ಅವರನ್ನು ಮಹಾರಾಜರು ಎಂದು ಕರೆಯುವುದಕ್ಕಾಗುವುದಿಲ್ಲ. ಅವರಿಗೆ ಈಗ ಏನೂ ಪವರ್ ಇಲ್ಲ. ಎಲ್ಲವನ್ನೂ ಪ್ರಜೆಗಳಿಗೆ ಬಿಟ್ಟುಕೊಟ್ಟಿದ್ದಾರೆ. ಇನ್ನು ಗ್ರಾಮಪಂಚಾಯಿತಿ ರಚನೆಯ ವಿಚಾರ. ಮೊದಲು 8 ರಿಂದ 12 ಸಾವಿರ ಇತ್ತು. ನಮ್ಮ ತಾಲ್ಲೂಕಿನ ಅನುಭವದ ಮೇರೆಗೆ ಹೇಳಬೇಕೆಂದರೆ, ಒಂದು ಅಲಂಗೂರ್ ಪಂಚಾಯತ್ ಎಂದು ಇದೆ. ಆ ಪಂಚಾಯತಿಯಿಂದ ತಾಲ್ಲೂಕು ಹೆಡ್‌ಕ್ವಾರ್ಟರ್ಸ್‌ಗೆ ಹೋಗಬೇಕಾದರೆ ಕೊನೇ ಹಳ್ಳಿಯಿಂದ, ಸುಮಾರು 25 ಮೈಲಿ ಹೋಗಬೇಕು. ಎರಡು ಬಸ್ ಬದಲಾವಣೆ ಮಾಡಬೇಕು. ಒಂದು ರಸ್ತೆನಲ್ಲಿ ಬರಬೇಕು. ಹೆಡ್‌ಕ್ವಾರ್ಟರ್ಸ್‌ಗೆ ಬರಬೇಕು, ಪುನಃ ಇನ್ನೊಂದು ಬಸ್‌ನಲ್ಲಿ ತಾಲ್ಲೂಕು ಹೆಡ್‌ಕ್ವಾರ್ಟಸ್ಸ್‌ಗೆ ಹೋಗಬೇಕು. ಹೀಗಾಗಿ ಸುಮಾರು 45 ಹಳ್ಳಿಗಳವರು ಪಡತಕ್ಕಂಥ ಕಷ್ಟ ಬಹಳವಾಗಿದೆ. ಅದಕ್ಕೆ ಮೊದಲು ನಮ್ಮಲ್ಲಿ 48 ಪಂಚಾಯತಿಗಳು ಇದ್ದವು. ಅದನ್ನು 12 ಪಂಚಾಯತಿಗಳಾಗಿ ಮಾಡಿದರು. ಅಂದರೆ ನಾಲ್ಕನೇ, ಒಂದು ಭಾಗಕ್ಕೆ ಇಳಿಸಿಬಿಟ್ಟರು. ಹೀಗೆ ಇಳಿಸಿದ್ದರಿಂದ ರೈತರಿಗೆ ಯಾವುದೇ ಒಂದು ಟಿ.ಟಿ.ಯಾಗಲೀ ಅಥವಾ ಒಂದು ರಿಕಾರ್ಡ್ ತೆಗೆದುಕೊಳ್ಳುವುದಕ್ಕಾಗಲೀ, ಮಂಡಲ್ ಸೆಕ್ರೆಟರಿಯವರ ಬಳಿಗೆ ಹೋಗಬೇಕಾದರೆ ಸುಮಾರು 25 ಮೈಲಿ ಎರಡು ಬಸ್ಸು ಚೇಂಜ್ ಮಾಡಿ ಹೋಗಬೇಕಾಗಿತ್ತು. ಆದರೆ ಈಗ ಮಾಡಿರುವುದರಲ್ಲಿ, 5 ಕಿ. ಮೀ. ಒಳಗೆ ಅಥವಾ 2-3 ಕಿ.ಮೀ. ಒಳಗೆ, ಸುಮಾರು 2534 ಮಂಡಲಗಳು ಏನಿತ್ತು ಅದು 5350 ಮಂಡಲಗಳು ಈಗ ಆಗಿರಬಹುದು. ಇದರಿಂದಾಗಿ ಬಹಳ ಅನುಕೂಲವಾಗಿದೆ. ಮಾನ್ಯ ರಾಜೀವ್ ಗಾಂಧೀಯವರ ಐಡಿಯಾ ಏನಿತ್ತು ಅಂದರೆ, ಸಾಧ್ಯವಾದಲ್ಲಿ 2000-3000 ಕ್ಕೊ ಒಂದು ಪಂಚಾಯ್ತಿ ಮಾಡಬೇಕೆಂದಿತ್ತು. ಈಗ ನಮ್ಮ ಪಕ್ಷದ ವತಿಯಿಂದ, ಸರಕಾರದ ವತಿಯಿಂದ ಇದನ್ನು ಮಾಡಿದ್ದಾರೆ. ಅದಕ್ಕೆ ಬೇರೆ ಆಪ್‌ಷನ್ ಇಲ್ಲ. ಇವೊತ್ತು ಏನು ಐದು ಸಾವಿರ ಮಾಡಿರುವುದು ಕೂಡ ಬಹಳ ಅನುಕೂಲಕರವಾಗಿದೆ. ಏಳು ಜಿಲ್ಲೆಗಳಲ್ಲಿ ಅಂದರೆ, ಮಲೆನಾಡು ಏರಿಯಾದಲ್ಲಿ ಸೌತ್‌ಕೆನರಾ , ನಾರ್ಥ್‌ಕೆನರಾ, ಬೆಳಗಾಂ, ಇಂಥ ಜಿಲ್ಲೆಗಳಲ್ಲಿ ಎರಡೂವರೆ ಸಾವಿರ ಜನಸಂಖ್ಯೆ ಎಂದು ನಿಗಧಿ ಮಾಡಿದ್ದಾರೆ,

ಅದು ಬಹಳ ಅನುಕೂಲವಾಗಿದೆ. ಅಲ್ಲಿ ಕೆಲವು ಕಡೆಗಳಲ್ಲಿ ಮೂರು ಮೂರು ತಾಲ್ಲೂಕು ಸೇರಿ ಒಂದು ಅಸೆಂಬ್ಲಿ ಕ್ಷೇತ್ರವಾಗಿದೆ. ಉದಾಹರಣೆಗೆ, ನರಸಿಂಹರಾಜಪುರ, ಕೊಪ್ಪ, ಶೃಂಗೇರಿ, ಹೀಗೆ ಮೂರು ತಾಲ್ಲೂಕುಗಳು ಸೇರಿ ಒಂದು ಶೃಂಗೇರಿ ವಿಧಾನಸಭಾ ಕ್ಷೇತ್ರವಾಗುತ್ತದೆ. ಅಲ್ಲಿ ಎರಡೂವರೆ ಸಾವಿರಕ್ಕೆ ಮಾಡಿರುವುದು ತುಂಬಾ ಅನುಕೂಲವಾಗಿದೆ ಎಂದು ಹೇಳಬಯಸುತ್ತೇನೆ. ಮಾನ್ಯ ಸಚಿವರು ಮಾಡಿದ ಡಿಲಿಮಿಟೇಷನ್ ಕೂಡ ಬಹಳ ಅನುಕೂಲವಾಗಿದೆ. ಹೆಡ್‌ಕ್ವಾರ್ಟರ್ಸ್ ಕೂಡ ಮಧ್ಯದಲ್ಲಿ ಇರಬೇಕೆಂದು ಮುಂದೆ ಗೈಡ್‌ಲೈನ್ಸ್ ಏನು ತರುತ್ತಾರೋ, ಆ ರೂಲ್ಸ್‌ನಲ್ಲಿ ಅವರು ಮೆನ್‌ಷನ್ ಮಾಡುತ್ತಾರೆ. ಸಾಧ್ಯವಾದಷ್ಟು ಹತ್ತಿರವಾಗಿರಬೇಕು, ಹೆಡ್‌ಕ್ವಾರ್ಟಸ್ಸ್‌ನಲ್ಲಿ ಸಂಚಾರ ಸೌಲಭ್ಯ ಇರಬೇಕು. ಅಲ್ಲಿ ಸ್ಕೂಲ್‌ಬಿಲ್ಡಿಂಗ್, ಕಛೇರಿ ಇರಬೇಕು, ಮುಂತಾಗಿ ಗೈಡ್‌ಲೈನ್ಸ್‌ನಲ್ಲಿ ಇದ್ದೇ ಇರುತ್ತದೆ. ಈ ಬಿಲ್‌ನ ಪುಸ್ತಕ ಇಷ್ಟು ದಪ್ಪ ಏಕೆ ಇದೆಯೆಂದರೆ, ಅನೇಕ ಅನಾವಶ್ಯಕವಾದ ಕ್ಲಾಸ್‌ಗಳನ್ನೆಲ್ಲಾ ಇದಕ್ಕೆ ಸೇರಿಸಿಬಿಟ್ಟಿದ್ದರೂ ಇದರಲ್ಲಿ ಅರ್ಧಭಾಗವನ್ನು ಬೇಕಾದರೆ ರೂಲ್ಸ್‌ನಲ್ಲಿ ನಾವು ಇಡಬಹುದಾಗಿತ್ತು. ಇಷ್ಟು ದೊಡ್ಡ ಪುಸ್ತಕವನ್ನು ಇಷ್ಟು ಚಿಕ್ಕ ಪುಸ್ತಕಕ್ಕೆ ಇಳಿಸಿದ್ದಾರೆ. ಇದು ಚಿಕ್ಕಪುಸ್ತಕವಾದರೂ ಕೂಡ ಸಾರಾಂಶವು ಪೂರ್ಣವಾಗಿ ಇದೆ. ಇದರಲ್ಲಿ ನ್ಯಾಯಪಂಚಾಯಿತಿಗೆ ನೂರಾರು 40-50 ಪೇಜ್‌ಗಳು ಇವೆ. ನ್ಯಾಯ ಪಂಚಾಯತ್‌ಅನ್ನು ನಾವು ಜಾರಿಗೆ ತರಲಿಲ್ಲ. 5 ವರ್ಷ ಮುಂದಕ್ಕೆ ಹಾಕಿಬಿಟ್ಟರು. ಇದು ಚೆನ್ನಾಗಿಲ್ಲ. ಅದು ಕೋರ್ಟ್ ಆಡಳಿತವಾಗುತ್ತದೆ ಎನ್ನುವ ರೀತಿಯಲ್ಲಿ ಅದನ್ನು ಮುಂದಕ್ಕೆ ಹಾಕಿಬಿಟ್ಟರು. ಇನ್ನು ರಿಸರ್ವೇಷನ್ ವಿಚಾರದಲ್ಲಿ ಹೇಳುವುದಾದರೆ, ಇದ್ದರಲ್ಲಿ ಪರಿಶಿಷ್ಟರಿಗೆ 23 ಪರ್‌ಸೆಂಟ್ ಅಂದರೆ ಸ್ಟೇಟ್ ಅವರೇಜ್ 23 ರಷ್ಟು ಬರುತ್ತದೆ. 4 ಕೋಟಿ 49 ಲಕ್ಷ ಜನಸಂಖ್ಯೆಯಲ್ಲಿ 3 ಕೋಟಿ 11 ಲಕ್ಷ ಜನರು ಪರಿಶಿಷ್ಟ ಜಾತಿಯವರು ಬರುತ್ತಾರೆ. 4 ಕೋಟಿ 49 ಲಕ್ಷ ಜನಸಂಖ್ಯೆ ಇದೆ. ಅದರಲ್ಲಿ 1 ಕೋಟಿ 39 ಲಕ್ಷ ಅರ್ಬನ್ ಪಾಪ್ಯುಲೇಷನ್ ಬರುತ್ತದೆ, ಗ್ರಾಮ ಪಂಚಾಯತ್‌ಗೆ, ಅರ್ಬನ್ ಪಾಪ್ಯುಲೇಷನ್‌ಗೂ ಜೊತೆ ಹಾಕಬಾರದು. 4 ಕೋಟಿ 49 ಲಕ್ಷದಲ್ಲಿ 1 ಕೋಟಿ 39 ಲಕ್ಷ ಅರ್ಬನ್ ಪಾಪ್ಯುಲೇಷನ್ ಕಳೆದರೆ, 3 ಕೋಟಿ 11 ಲಕ್ಷ ರೂರಲ್ ಪಾಪ್ಯುಲೇಷನ್ ಆಗುತ್ತದೆ. ಅದರಲ್ಲಿ 23ರಷ್ಟು ಪರಿಶಿಷ್ಟರು ಬರುತ್ತಾರೆ. ಮೊದಲು 18ರಷ್ಟು ಇದ್ದು, ಅನಂತರ ಅನೇಕ ಜಾತಿಗಳು ಅದರಲ್ಲಿ ಸೇರಿದ್ದರಿಂದ ಅದನ್ನು ಪಾರ್ಲಿಮೆಂಟ್‌ನಲ್ಲಿ ಅಪ್ರೂವ್ ಮಾಡಿದ್ದರಿಂದ ಅದು ಈಗ 23 ಪರ್‌ಸೆಂಟ್‌ನಷ್ಟು ಆಗಿದೆ. ಸಂವಿಧಾನದ ಅಮೆಂಡ್‌ಮೆಂಟ್ ಬಿಲ್‌ನಲ್ಲಿ ಏನಿದೆ? ಪರಿಶಿಷ್ಟರಿಗೆ in proportion to their population in that, particular area ಎಂದು ಇದೆ. ಅಂದರೆ ಮಂಡಲನ್ನು ನಾವು ಯುನಿಟ್ ಆಗಿ ತೆಗೆದುಕೊಂಡರೆ ಪಂಚಾಯತ್ ಲೆವಲ್‌ನಲ್ಲಿ ತೆಗೆದುಕೊಂಡರೆ, ಆ ಪಂಚಾಯಿತಿನಲ್ಲಿ ಎಷ್ಟು ಪರಿಶಿಷ್ಟ ಜಾತಿಯವರು ಒಟ್ಟು ಪಾಪ್ಯುಲೇಷನ್ ಇರುತ್ತಾರೋ, ಅದಕ್ಕೆ ಸರಿಯಾಗಿ ಕೊಡಬೇಕು. ತಾಲ್ಲೂಕು ಸಮಿತಿಯ ಚುನಾವಣೆಗೆ ಹೋದರೆ, ಆ ತಾಲ್ಲೂಕಿನಲ್ಲಿ ಎಷ್ಟು ಸಂಖ್ಯೆಯಲ್ಲಿ ಪರಿಶಿಷ್ಟರು ಇರುತ್ತಾರೋ ಅದಕ್ಕೆ ಸರಿಯಾಗಿ ಕೊಡಬೇಕು. ಆದ್ದರಿಂದ ಓವರ್‌ಆಲ್ ಪಿಕ್ಚರನ್ನು ತೆಗೆದುಕೊಂಡರೆ 23 ಪೂರ್ತಿ ಸ್ಟೇಟ್ ತೆಗೆದುಕೊಂಡರೆ ಪರ್‌ಸೆಂಟ್‌ನಷ್ಟು ಕಂಪಲ್‌ಸರಿಯಾಗಿ ಬರಲೇಬೇಕು. ಉದಾಹರಣೆಗೆ, ನಾನು ಹೇಳುತ್ತೇನೆ. ಜಿಲ್ಲೆಯನ್ನು ತೆಗೆದುಕೊಂಡರೆ ಹೈಯಸ್ಟ್ ಷೆಡ್ಯೂಲ್ಡ್ ಕ್ಯಾಸ್ಟ್ ಪಾಪ್ಯುಲೇಷನ್ ಚಿತ್ರದುರ್ಗ ಜಿಲ್ಲೆ 39.5 ಪರ್ಸೆಂಟ್. 1991ನೇ ಇಸವಿಯ ಸೆನ್‌ಸಸ್ ಪ್ರಕಾರ 40 ಪರ್ಸೆಂಟ್ ಇದೆ ಚಿತ್ರದುರ್ಗ ಜಿಲ್ಲೆಯಲ್ಲಿ. ಎರಡನೆಯದು 33 ಪರ್ಸೆಂಟ್ ಕೋಲಾರ ಜಿಲ್ಲೆಯಲ್ಲಿದೆ. 33% ಮೈಸೂರು ಜಿಲ್ಲೆಯಲ್ಲಿದೆ ; The lowest population of the Scheduled Caste is South Canara I.e., 12%. There is only 12% of Scheduled Caste population in South Canara. ರೂರಲ್ ಪಾಪ್ಯುಲೇಷನ್ ಬರೀ 12.5 ಪರ್ಸೆಂಟ್ ಮಾತ್ರ ಸೌತ್ ಕೆನರಾದಲ್ಲಿದೆ. ಈ ರೀತಿ ಇರುವಾಗ ಅದನ್ನು ನೋಡಿಯೇ ಯೋಚನೆ ಮಾಡಿ ಕಾನ್ಸಿಟ್ಯೂಷನ್ ಅಮೆಂಡ್‌ಮೆಂಟ್ ಮಾಡುವಾಗ in propotion to their population ಎನ್ನುವ ರೀತಿಯಲ್ಲಿ

ಮೆನ್‌ಷನ್ ಮಾಡಿರುವುದು ಬಹಳ ಅನುಕೂಲವಾಗಿದೆ. ಉದಾಹರಣೆಯಾಗಿ, ಪಂಚಾಯತ್‌ಗಳಲ್ಲಿ ಒಟ್ಟು 5000 ಪಂಚಾಯತಿಗಳೆಂದು ಮಾನ್ಯ ಫೋರ್ಪಡೆಯವರು ಹೇಳಿದರು. ಅದರಲ್ಲಿ ಷೆಡ್ಯೂಲ್ ಕ್ಯಾಸ್ಟ್ ಅವರಿಗೆ 23 ಪರ್ಸೆಂಟ್ ಅಂದರೆ, 1150 ಪಂಚಾಯಿತಿಗಳಲ್ಲಿ ಅವರೇ ಅಧ್ಯಕ್ಷರಾಗುತ್ತಾರೆ. ತಾಲ್ಲೂಕು ಮಟ್ಟದಲ್ಲಿ 23 ಪರ್ಸೆಂಟ್ ಅಂದರೆ 175 ತಾಲ್ಲೂಕುಗಳಿವೆ. 175 ರಲ್ಲಿ 23 ಪರ್ಸೆಂಟ್ ಅಂದರೆ 40 ಬರುತ್ತದೆ. 40ರಲ್ಲಿ ಮೂರನ್ನು ಕಳೆಯಬೇಕು, ಏಕೆಂದರೆ ಮೂರು ಗ್ರಾಮ ಪಂಚಾಯತಿಗೆ ಬರುವುದಿಲ್ಲ. ಮೂರು ಯಾವುದು ಅಂದರೆ, ಕೆ.ಜಿ.ಎಫ್., ಶಾಂತಿನಗರ, ಆನೇಕಲ್, ಈ ಮೂರು ಅಂದರೆ 37 ತಾಲ್ಲೂಕುಗಳಲ್ಲಿ ಸಮಿತಿಯ ಛೇರ್ಮನ್‌ಗಳು ಶೆಡ್ಯೂಲ್ಡ್ ಕ್ಯಾಸ್ಟ್, ಅಥವಾ ಶೆಡ್ಯೂಲ್ಡ್ ಟ್ರೈಬ್‌ನವರು ಆಗುತ್ತಾರೆ. ಜಿಲ್ಲಾ ಮಟ್ಟದಲ್ಲಿ ಬಂದರೆ ಹೈಯಸ್ಟ್ ಪಾಪ್ಯುಲೇಷನ್ ಚಿತ್ರದುರ್ಗದಲ್ಲಿದೆ. ಅಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರನ್ನು ಜಿಲ್ಲಾ ಪರಿಷತ್ತಿನ ಛೇರ್ಮನ್‌ನ್ನು ಮಾಡಲೇಬೇಕು. ಅದಾದಮೇಲೆ ಕೋಲಾರ ಬರುತ್ತದೆ. ಅದಾದಮೇಲೆ, ಮೈಸೂರು ಬರುತ್ತದೆ, ನಂತರ ಗುಲ್ಬರ್ಗಾ ಬರುತ್ತದೆ. ಅದನ್ನು ಮಾಡುವಾಗ ಯಾವರೀತಿ ಮಾಡುತ್ತಾರೋ ಗೊತ್ತಿಲ್ಲ; ಲಾಟ್ ಹಾಕುತ್ತಾರೋ, ಅಥವಾ ಹೈಯಸ್ಟ್ ಪಾಪ್ಯುಲೇಷನ್ ತೆಗೆದುಕೊಳ್ಳುತ್ತಾರೋ, that we don't know exactly. It has to be mentioned in the rules perfectly. ಅದು ಒಂದಾಯಿತು. ಆ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಯಾವರೀತಿ ಮಾಡಬೇಕೆಂಬುದರ ಬಗ್ಗೆ ನಾನು ನನ್ನ ಒಂದು ಸಜೆಷನ್ ಅನ್ನು ಹೇಳುತ್ತೇನೆ. ಸುಮಾರು 40 ವರ್ಷಗಳಿಂದ ಕೆಲವು ಅಸೆಂಬ್ಲಿ ಕ್ಷೇತ್ರಗಳಲ್ಲಿ ಏನಾಗಿದೆ ಅಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಎಂ.ಎಲ್.ಎ.ಗಳು ಇದ್ದಾರೆ. 35 ಷೆಡ್ಯೂಲ್ಡ್ ಕ್ಯಾಸ್ಟ್ ಕ್ಷೇತ್ರದಲ್ಲಿ ಎಂ.ಎಲ್.ಎ.ಗಳು ಇದ್ದಾರೆ. ನನ್ನ ಸ್ವಂತ ಅಭಿಪ್ರಾಯ ಏನು ಅಂದರೆ ಬೇರೆ ತಾಲ್ಲೂಕುಗಳಲ್ಲಿಯೂ ಅಷ್ಟೇ ಇದ್ದಾರೆ. ಸ್ವಲ್ಪ ಹೆಚ್ಚುಕಡಿಮೆ ಷೆಡ್ಯೂಲ್ಡ್ ಕ್ಯಾಸ್ಟ್‌ನವರು. ಬೇರೆ ತಾಲ್ಲೂಕಿನಲ್ಲಿಯೂ 2-3 ಸಾವಿರ ಡಿಫರೆನ್ಸ್‌ನಲ್ಲಿದ್ದಾರೆ. ಅಂತಹ ಕಡೆ ಇವರು ರೊಟೇಷನ್ಸ್ ಅನ್ನು ಮಾಡಬೇಕು. ಏಕೆಂದರೆ, ಕಾನ್ಸ್‌ಟಿಟ್ಯೂಷನ್ ಅಮೆಂಡ್‌ಮೆಂಟ್‌ನಲ್ಲಿದೆ. ರೋಟೇಷನ್ ಯಾರ್‍ಯಾರಿಗೆ ಮಾಡಬೇಕು ಅಂದರೆ ಷೆಡ್ಯೂಲ್ಡ್ ಕ್ಯಾಸ್ಟ್ ಅವರಿಗೆ 5 ವರ್ಷ, ಬ್ಯಾಕ್‌ವರ್ಡ್ ಕ್ಯಾಸ್ಟ್ ಅವರಿಗೆ 5 ವರ್ಷ, ಜನರಲ್‌ನವರಿಗೆ 5 ವರ್ಷ, ಲೇಡೀಸ್‌ಗೆ 5 ವರ್ಷ, ಟೋಟಲ್ 20 ವರ್ಷ ಆಗುತ್ತದೆ. ಇನ್ನೊಂದು ಟರ್ನ್ ಬರಬೇಕಾದರೆ 20 ವರ್ಷವಾಗುತ್ತದೆ. ಅದಕ್ಕೋಸ್ಕರ ನನ್ನ ಸಲಹೆ ಏನೆಂದರೆ ಈ 35 ತಾಲ್ಲೂಕುಗಳು ಷೆಡ್ಯೂಲ್ಡ್ ಕ್ಯಾಸ್ಟ್, ಅಂಡ್ ಷೆಡ್ಯೂಲ್ಡ್‌ಟ್ರೈಬ್ಸ್, ಎಂ.ಎಲ್.ಎ.ಗಳು ಎಲ್ಲಿದ್ದಾರೋ ಅದನ್ನು ಬಿಟ್ಟು ಬೇರೆ ತಾಲ್ಲೂಕುಗಳನ್ನು ಮಾಡಿ, ಷೆಡ್ಯೂಲ್ಡ್ ಕ್ಯಾಸ್ಟ್ ಇರುವಂತಹ 35 ತಾಲ್ಲೂಕುಗಳಿಗೆ ಕೊನೆಯಲ್ಲಿ ಕೊಡಿ ರೊಟೇಷನ್. ಎಲ್ಲೆಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ ಎಂ.ಎಲ್.ಎ.ಗಳು ಇದ್ದಾರೋ ಅಲ್ಲಿಯೂ ಕೂಡ ರೋಟೇಷನ್ ಬರಲೇಬೇಕು. ಅದಕ್ಕೋಸ್ಕರ ಈ 35 ತಾಲ್ಲೂಕುಗಳಿಗೆ ಕೊನೆಯಲ್ಲಿ ಕೊಡಿ. ಅಂದರೆ ಸುಮಾರು 10ನೇ ವರ್ಷದಲ್ಲೋ, 15 ವರ್ಷದಲ್ಲೋ ಕೊಡಿ. ಕಾರಣ ಏನು ಅಂದರೆ ಬೇರೆ ತಾಲ್ಲೂಕುಗಳಲ್ಲಿಯೂ ಕೂಡ ಅದೇ ರೀತಿ ಷೆಡ್ಯೂಲ್ಡ್ ಕ್ಯಾಸ್ಟ್ ಪಾಪ್ಯುಲೇಷನ್‌ನವರಿಗೆ ಅನುಕೂಲವಾಗುತ್ತದೆ. ನಮ್ಮ ಕರ್ನಾಟಕದಲ್ಲಿ ಮೂರನೆಯ ಒಂದು ಭಾಗ ಷೆಡ್ಯೂಲ್ಡ್ ಕ್ಯಾಸ್ಟ್ ಇಂಪಾರ್ಟೆಂಟ್ ಪೋಸ್ಟ್‌ಗಳಲ್ಲಿ ಇರುತ್ತಾರೆ. 35 ತಾಲ್ಲೂಕುಗಳಲ್ಲಿ ಎಂ.ಎಲ್.ಎ.ಗಳು ಇರುತ್ತಾರೆ. 40 ತಾಲ್ಲೂಕ್‌ನಲ್ಲಿ ತಾಲ್ಲೂಕು ಸಮಿತಿಯ ಛೇರ್ಮನ್‌ಗಳು ಇರುತ್ತಾರೆ. ಆಗ ನಾವು ಸಾಮಾಜಿಕ ನ್ಯಾಯವನ್ನು ಕೊಡಬಹುದು. ಆಗ ನಾವು ಎಲ್ಲಾ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಅನುಕೂಲವನ್ನು ಮಾಡಿದ ಹಾಗೆ ಆಗುತ್ತದೆ. ಬೇರೆ ತಾಲ್ಲೂಕಿನಲ್ಲಿರುವ ಜನರಲ್‌ನವರಿಗೂ ಅನುಕೂಲವಾಗುತ್ತದೆ. ಜಿಲ್ಲಾ ಪರಿಷತ್ತಿನ ಛೇರ್ಮನ್‌ನವರನ್ನು ಮಾಡುವಾಗಲೂ ಅಷ್ಟೆ. ಕೋಲಾರ ಜಿಲ್ಲೆ 1952ನೇ ಇಸವಿಯಿಂದ ಷೆಡ್ಯೂಲ್ಡ್ ಕ್ಯಾಸ್ಟ್ ಸೀಟು, ಚಾಮರಾಜನಗರ, ಮೈಸೂರು ಜಿಲ್ಲೆ, ಬೀದರ್ ಜಿಲ್ಲೆ, ಚಿಕ್ಕೋಡಿ ಈ ಜಿಲ್ಲೆಗಳಲ್ಲಿ ಇರುವಂತಹವರಿಗೆ ಕೊನೆಯಲ್ಲಿ ಕೊಡಿ, ಏಕೆಂದರೆ ಷೆಡ್ಯೂಲ್ಡ್ ಕ್ಯಾಸ್ಟ್

ಎಂ.ಪಿ.ಗಳು ಇದ್ದೇ ಇದ್ದಾರಲ್ಲಾ, ಅದಕ್ಕೋಸ್ಕರ ಇವರಿಗೆ ಕೊನೆಯಲ್ಲಿ ಕೊಡಿ ಅಂತ that also I am suggesting. ಬೇರೆ ಜಿಲ್ಲೆಗಳಲ್ಲಿ ಇರುವಂತಹ ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೂ ಅನುಕೂಲವಾಗುತ್ತದೆ. ಏನಪ್ಪಾ ಬರೀ ಈ 35 ತಾಲ್ಲೂಕ್‌ನಲ್ಲಿ ಮಾತ್ರವೇ ಷೆಡ್ಯೂಲ್ಡ್ ಕ್ಯಾಸ್ಟ್ ಇರುವುದು ; ನಾವು ಇಲ್ಲವೇ. ನಮಗೆ ರೆಪ್ರಸೆಂಟೇಷನ್ ಇಲ್ಲವೇ ಇಲ್ಲ, ಅನ್ನುವಂತಹ ಪರಿಸ್ಥಿತಿ ಅವರ ಮನಸ್ಸಿಗೆ ಬರಬಾರದು ಎನ್ನುವುದು ನನ್ನ ಅಭಿಪ್ರಾಯವಾಗಿದೆ. ಎರಡನೆಯದಾಗಿ, ಬ್ಯಾಕ್‌ವರ್ಡ್ ಕ್ಲಾಸ್ ; ಬ್ಯಾಕ್‌ವರ್ಡ್ ಕ್ಲಾಸ್ 33 ಪರ್ಸೆಂಟ್ ಎಂದು ತೋರಿಸಿದ್ದಾರೆ. That means blanket reservation. ಷೆಡ್ಯೂಲ್ಡ್ ಕ್ಯಾಸ್ಟ್‌ನವರಿಗೆ ಯಾವರೀತಿ in proportion to their population in that particular area ಹಾಕಿದ್ದಾರೋ ಆ ರೀತಿ ಹಾಕಿದ್ದರೆ ಚೆನ್ನಾಗಿರುತ್ತಿತ್ತು ಎಂದು ನನ್ನ ಅಭಿಪ್ರಾಯವಾಗಿದೆ. That is the castewise percentage of population in Karnataka as per the latest availabe figures taken from Sri. Venkataswamy's report of 1984. ಅದನ್ನು ನಮ್ಮ ಸರ್ಕಾರದವರು ರಿಜೆಕ್ಟ್ ಮಾಡಿದ್ದಾರೆ. ರಿಜೆಕ್ಟ್ ಮಾಡಿದರೂ ಕೂಡ ಅವರ ಫಿಗರ್ಸ್ ಪ್ರಿಂಟ್ ಆಗಿರುವುದು ಇದೆ. ಅಲ್ಲಿ ವೆಂಕಟಸ್ವಾಮಿಯವರು ಏನು ಮಾಡಿದ್ದಾರೆ ಎಂದರೆ 64 ಕ್ಯಾಸ್ಟ್‌ನ್ನು ಬ್ಯಾಕ್‌ವರ್ಡ್ ಕ್ಲಾಸ್ ಎಂದು ತೋರಿಸಿದ್ದಾರೆ. other than Vokkaligas and Lingayats, I am particularly telling other than Vokkaligas and Lingayats, he has mentioned 64 castes, as Backward castes. ಅದರ ಪ್ರಕಾರ ಎಲ್ಲಾ ಡಿಸ್ಟ್ರಿಕ್ಟ್‌ವೈಸ್ ಫಿಗರ್ಸ್ ತೆಗೆದುಕೊಳ್ಳುತ್ತೇವೆ. ಅಂದರೆ, ಉದಾಹರಣೆಗೆ, 10 ಜಿಲ್ಲೆಯಲ್ಲಿ 33 ಪರ್ಸೆಂಟ್ ಏನಿದ್ದಾರೆ, ಕೆಲವು ಕಡೆ 50 ಪರ್ಸೆಂಟ್ ಇದ್ದಾರೆ. ಬ್ಯಾಕ್‌ವರ್ಡ್ ಕ್ಲಾಸ್‌ನವರು ಸೌತ್ ಕೆನರಾದಲ್ಲಿ 50 ಪರ್ಸೆಂಟ್ ಇದ್ದಾರೆ. ಧಾರವಾಡದಲ್ಲಿ 50 ಪರ್ಸೆಂಟ್ ಇದ್ದಾರೆ. ಬೆಂಗಳೂರು ನಗರದಲ್ಲಿ 53 ಪರ್ಸೆಂಟ್ ಇದ್ದಾರೆ. ರಾಯಚೂರಿನಲ್ಲಿ 50 ಪರ್ಸೆಂಟ್ ಇದ್ದಾರೆ. ನಾರ್ತ್ ಕೆನರಾದಲ್ಲಿ 50 ಪರ್ಸೆಂಟ್ ಇದ್ದಾರೆ. ಬೆಳಗಾಂನಲ್ಲಿ 40 ಪರ್ಸೆಂಟ್ ಇದ್ದಾರೆ. ಬೆಂಗಳೂರು ರೂರಲ್‌ನಲ್ಲಿ 40 ಪರ್ಸೆಂಟ್ ಇದ್ದಾರೆ. ಬಿಜಾಪುರದಲ್ಲಿ 38 ಪರ್ಸೆಂಟ್ ಇದ್ದಾರೆ. ಚಿಕ್ಕಮಗಳೂರಿನಲ್ಲಿ 37 ಪರ್ಸೆಂಟ್ ಇದ್ದಾರೆ. ಬಳ್ಳಾರಿಯಲ್ಲಿ 33 ಪರ್ಸೆಂಟ್ ಇದ್ದಾರೆ. ಮೈಸೂರಿನಲ್ಲಿ 32 ಪರ್ಸೆಂಟ್ ಇದ್ದಾರೆ. ಶಿವಮೊಗ್ಗದಲ್ಲಿ 32 ಪರ್ಸೆಂಟ್ ಇದ್ದಾರೆ. ಬೀದರ್‌ನಲ್ಲಿ 32 ಪರ್ಸೆಂಟ್ ಇದ್ದಾರೆ. ಚಿತ್ರದುರ್ಗದಲ್ಲಿ 30 ಪರ್ಸೆಂಟ್ ಇದ್ದಾರೆ. ಗುಲ್ಬರ್ಗದಲ್ಲಿ 29 ಪರ್ಸೆಂಟ್ ಇದ್ದಾರೆ. ಕೋಲಾರದಲ್ಲಿ 29 ಪರ್ಸೆಂಟ್ ಇದ್ದಾರೆ. ತುಮಕೂರಿನಲ್ಲಿ 27 ಪರ್ಸೆಂಟ್ ಇದ್ದಾರೆ. ಮಂಡ್ಯದಲ್ಲಿ 24 ಪರ್ಸೆಂಟ್ ಇದ್ದಾರೆ. ಹಾಸನದಲ್ಲಿ 23 ಪರ್ಸೆಂಟ್ ಇದ್ದಾರೆ. ಕೊಡಗಿನಲ್ಲಿ 35 ಪರ್ಸೆಂಟ್ ಇದ್ದಾರೆ. ಇದನ್ನು ಯಾವರೀತಿ ಲೆಕ್ಕ ಹಾಕಿದ್ದೇವೆ ಅಂದರೆ 64 ಬ್ಯಾಕ್‌ವರ್ಡ್ ಕ್ಲಾಸನ್ನು ಸಪರೇಟ್ ಆಗಿ ಇಟ್ಟುಕೊಂಡಿದ್ದು ಆಯಿತು. ಅವರು 33 ಪರ್ಸೆಂಟ್ ಬಂದೇ ಬರುತ್ತಾರೆ. ಎಂಟೈರ್‌ಸ್ಟೇಟ್‌ನಲ್ಲಿ 33 ಪರ್ಸೆಂಟ್ ಇದ್ದೇ ಇದ್ದಾರೆ. ಬ್ರಾಹ್ಮಣರು, ಒಕ್ಕಲಿಗರು, ಲಿಂಗಾಯಿತರು, ವೈಶ್ಯರು, ಅವರು 33 ಪರ್ಸೆಂಟ್ ಇದ್ದಾರೆ. ಶೆಡ್ಯೂಲ್ಡ್ ಕ್ಯಾಸ್ಟ್, ಶೆಡ್ಯೂಲ್ಡ್ ಟ್ರೈಬ್ಸ್ 1984ರಲ್ಲಿ ಇದ್ದುದು 18.68 ಪರ್ಸೆಂಟ್, ಆಮೇಲೆ ಇವೆಲ್ಲಾ ಸೇರಿದ್ದು ; ಬೇರೆ ಜನಾಂಗದವರು, other religions, Buddhists, Christians, Jains, Muslims,

ಶ್ರೀ ಡಿ. ಕೆ. ಶಿವಕುಮಾರ್ : ವೆಂಕಟಸ್ವಾಮಿ ಆಯೋಗದ ವರದಿಯನ್ನು ಸರ್ಕಾರ ರಿಜಕ್ಟ್ ಮಾಡಿದ ಮೇಲೆ ಅದರ ಬಗ್ಗೆ ಏತಕ್ಕೆ ಚರ್ಚೆ ಮಾಡುವುದು?

ಶ್ರೀ ಎಂ.ವಿ. ವೆಂಕಟಪ್ಪ : ಅಂಕಿಅಂಶಗಳನ್ನು ಹೇಳುತ್ತಿರುವುದು.

ಶ್ರೀ ಡಿ. ಕೆ. ಶಿವಕುಮಾರ್ : ಅದನ್ನು ಒಪ್ಪದೇ ನಂತರ ಚಿನ್ನಪ್ಪರೆಡ್ಡಿ, ಆಯೋಗವನ್ನು ರಚಿಸಲಾಯಿತು. ಒಂದರಲ್ಲಿ ಅವರು ಬ್ಯಾಕ್‌ವರ್ಡ್ ಕ್ಲಾಸ್ ಅನ್ನುತ್ತಾರೆ. ಇನ್ನೊಂದರಲ್ಲಿ ನಾವು ಬ್ಯಾಕ್‌ವರ್ಡ್ ಕ್ಲಾಸ್ ಅಂತ ಹೇಳುತ್ತೇವೆ.

ಶ್ರೀ ಎಂ. ವಿ. ವೆಂಕಟಪ್ಪ : ಅಂಕಿ ಅಂಶಗಳು ಕೆಲವರಿಗೆ ಗೊತ್ತಿರುವುದಿಲ್ಲ. ಇದರಲ್ಲಿ ಇದೆ, This has been taken from Venkataswamy's report....

ಶ್ರೀ ಡಿ. ಕೆ. ಶಿವಕುಮಾರ್ : ಆಡಳಿತ ಪಕ್ಷದ ಸದಸ್ಯರು ಒಬ್ಬರು ಮಾತನಾಡುವಾಗ ನಾವು ಹಾಗೆ ಕಲ್ಪನೆಯನ್ನು ಮಾಡಬೇಕಾಗುತ್ತದೆ. ಇದರ ಮೇಲೆ ಏನಾದರೂ ತೀರ್ಮಾನವಾಗುತ್ತದೆಯೇ , ಎಂದು ಕಲ್ಪನೆ ಮಾಡಬೇಕಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ : ಎಂಟೈರ್ ಸ್ಟೇಟ್ ಅವರೇಜ್ ಪಾಪ್ಯುಲೇಷನ್ ತೆಗೆದುಕೊಂಡರೆ ಬ್ಯಾಕ್‌ವರ್ಡ್ ಕ್ಲಾಸ್‌ನವರು 33 ಪರ್ಸೆಂಟ್ ಇದ್ದಾರೆ. ಅಂದರೆ ಆ 33 ಪರ್ಸೆಂಟ್ 9 ಜಿಲ್ಲೆಯಲ್ಲಿ ಜಾಸ್ತಿ ಇದ್ದಾರೆ, 10 ಜಿಲ್ಲೆಯಲ್ಲಿ ಸ್ವಲ್ಪಸ್ವಲ್ಪ ಕಡಿಮೆ ಇದ್ದಾರೆ. Including the city population. We have to minus the city population ; then we must take up the percentage of the rural population.

ಶ್ರೀ ಎ. ಕೃಷ್ಣಪ್ಪ : ಮೈನಸ್ ಅರ್ಬನ್ ತೆಗೆದುಕೊಂಡರೂ 91 ರದ್ದು ತೆಗೆದುಕೊಳ್ಳ ಬೇಕಾಗುತ್ತದೆ.

ಶ್ರೀ ಎಂ. ವಿ. ವೆಂಕಟಪ್ಪ : ಅಲ್ಲಿಗೇ ನಾನು ಬರುತ್ತೇನೆ. 1984ರ ಪಾಪ್ಯುಲೇಷನ್ಸ್ ಆದಮೇಲೆ ಬ್ಲಾಕ್‌ವರ್ಡ್ ಕ್ಲಾಸಸ್ ಬಗ್ಗೆ ಯಾವ ಸೆನ್‌ಸಸ್ ಇಲ್ಲ, ನಾವು ಇದನ್ನೇ ಲೇಟೆಸ್ಟ್ ಆಗಿ ತೆಗೆದುಕೊಳ್ಳಬೇಕಾಗುತ್ತದೆ. ಆ ಬೇಸಿಸ್ ಮೇಲೆ ಮಾಡಿರಬಹುದು, ಏನು 33 ಪರ್ಸೆಂಟ್ ಅಂತ ನನ್ನ ಅಂದಾಜು ಆಗಿದೆ.

ಶ್ರೀ ಎಂ. ವೈ. ಘೋರ್ಪಡೆ: ಆ ಬೇಸಿಸ್ ಮೇಲೆ ಮಾಡಿಲ್ಲ. ಈಗ ಸೆನ್‌ಸಸ್ ಪ್ರಕಾರ ಬ್ಯಾಕ್‌ವರ್ಡ್ ಕ್ಲಾಸ್ ಡೆಫನಿಷನ್ ಇಲ್ಲ, ಅದರ ಪ್ರಕಾರ ಇಲ್ಲ ಅಂತ ತಾವೇನು ಹೇಳಿದ್ದೀರಿ, 33 ಪರ್ಸೆಂಟ್ ವೆಂಕಟಸ್ವಾಮಿ ರಿಪೋರ್ಟನ್ನು ನಾವು ಒಪ್ಪಿದ್ದಲ್ಲ. ಚಿನ್ನಪ್ಪ ರೆಡ್ಡಿ ವರದಿ ಬಗ್ಗೆ ಏನು ಆಗುತ್ತದೆಂದು ಹೇಳಲಿಕ್ಕೆ ಆಗುವುದಿಲ್ಲ. ಈಗಿರುವುದರ ಪ್ರಕಾರ 92 ಪರ್ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್ ಎಂದು ಡಿಫೈನ್ ಮಾಡಿದ್ದಾರೆ. ಆ ಒಂದೇ ಡೆಫನಿಷನ್ ನಮ್ಮ ಮುಂದೆ ಇರತಕ್ಕದ್ದು. ಆ ಕಾರಣ 33 ಪರ್ಸೆಂಟ್ ಪ್ರಪೋರ್ಷನೇಟ್ ಎಂದು ನೀವು ಏನು ಹೇಳುತ್ತಿದ್ದೀರಿ, ವೆಂಕಟಸ್ವಾಮಿ ರಿಪೋರ್ಟ್ ಏನಾದರೂ ನಾವು ಅಕ್ಸೆಪ್ಟ್ ಮಾಡಿದ್ದರೆ ಬಹುಶಃ ಆಗ ನೀವು ವಾದ ಮಾಡಬಹುದಾಗಿತ್ತು. ಆ ಪ್ರಕಾರ ನಾವು ಮಾಡಲಿಲ್ಲ. we cannot say ಲಿಂಗಾಯಿತರನ್ನು, ಒಕ್ಕಲಿಗರನ್ನು ಬಿಟ್ಟು definition ಮಾಡಿದ್ದೇವೆಂದು ಹೇಳಲಿಕ್ಕೆ ಯಾವ ಆಧಾರವೂ ಇಲ್ಲ. ಈಗ ಸಧ್ಯಕ್ಕೆ ಇರುವಂಥ ಡೆಫನಿಷನ್ ಪ್ರಕಾರ ನಾವು ಹೋಗಬೇಕಾಗುತ್ತದೆ. ನಾಳೆ ಆ ಡೆಫನಿಷನ್ ಬದಲಾಯಿಸಿದರೆ ಅದು ಬೇರೆ ವಿಷಯ. ಅದಕ್ಕೋಸ್ಕರ ಪ್ರಪೋರ್ಷನೇಟ್ ರೆಪ್ರಸೆಂಟೇಷನ್ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಇಡಲಿಕ್ಕೆ ಸಾಧ್ಯ ಆಗಿಲ್ಲ. ಆದರೂ ನೀವೇ ಹೇಳಿದ ಪ್ರಕಾರ ಯಾವ ಡೆಫನೇಷನ್ ಪ್ರಕಾರವಾದರೂ 1/3 ಆದರೂ ಬ್ಯಾಕ್‌ವರ್ಡ್ ಇರುತ್ತಾರೆ. ಈ ವಿಚಾರದ ಆಧಾರದ ಮೇಲೆ ನಾವು 1/3 ಇಟ್ಟಿದ್ದು. ಏಕೆಂದರೆ ಯಾವ ಡಿಫನಿಷನ್ ಬದಲಾಯಿಸಿದರೂ ಕೂಡ 33 ಪರ್ಸೆಂಟ್‌ಗಿಂತ ಓಬಿಸಿ ಕಡಿಮೆ ಆಗುವುದಿಲ್ಲವೆಂದು

ನನ್ನ ಅಸಂಪ್ಷನ್ ಇದು ಎಂದು ಪ್ರಾರಂಭದಲ್ಲಿ ಹೇಳಿದೆ. ಆ ಒಂದು ಆಧಾರದ ಮೇಲೆ 1/3 ಎಂದು ಇಟ್ಟಿದ್ದೇವೆ. ಅದು ಯೂನಿಫಾರಂ ರಿಸರ್ವೇಷನ್ proportionate to the population in respective area ಎಂದು ಮಾಡುವುದಕ್ಕೆ ಸಾಧ್ಯವಾಗಲಿಲ್ಲ.

ಶ್ರೀ ಎಂ. ವಿ. ವೆಂಕಟಪ್ಪ : ಅದಕ್ಕೋಸ್ಕರ ನಾನು ಹೇಳಿದೆ. ಸೌತ್‌ಕೆನರಾ ಮತ್ತು ಧಾರವಾಡ ಮತ್ತು ಬೆಳಗಾಮ್‌ನಲ್ಲಿ ಬ್ಯಾಕ್‌ವರ್ಡ್ ಕ್ಲಾಸ್ ಜಾಸ್ತಿ ಇದ್ದಾರೆ. ಸೌತ್ ಕೆನರಾದಲ್ಲಿ 50 ಪರ್ಸೆಂಟ್ ಇದ್ದಾರೆ. 33 ಪರ್ಸೆಂಟ್ ಬ್ಲಾಂಕೆಟ್ ಇಟ್ಟುಬಿಟ್ಟರೆ 17 ಪರ್‌ಸೆಂಟ್ ಬ್ಯಾಕ್‌ವರ್ಡ್ ಕ್ಲಾಸ್‌ಗೆ ಅಲ್ಲಿ ಅನ್ಯಾಯವಾಗುತ್ತದೆ. ಬೆಳಗಾಂನಲ್ಲಿ ಅನ್ಯಾಯವಾಗುತ್ತದೆ. ಅದಕ್ಕೋಸ್ಕರ in proportion to their population 33 ಪರ್‌ಸೆಂಟ್ ಅಲ್ಲದಿದ್ದರೆ 35-40 ಕೊಡಿ I have no objection ; in proportion to their population in that particular area ಕೊಡಿ. ಮಂಡ್ಯವನ್ನೇ ತೆಗೆದುಕೊಳ್ಳಿ ಅಲ್ಲಿ 16 ಪರ್ಸೆಂಟ್ ಇಲ್ಲ. 33 ಪರ್ಸೆಂಟ್ ಹೇಗೆ ಕೊಡುವುದಕ್ಕೆ ಆಗುತ್ತದೆ ? ವಾದಕ್ಕೆ ನಾನು ಹೇಳಿಧೆ. ಸಾಮಾಜಿಕ ನ್ಯಾಯ, ಸಾಮಾಜಿಕವಾಗಿ ನಾವೆಲ್ಲಾ ಒಪ್ಪಬೇಕು. ಅವರ ಪಾಪ್ಯುಲೇಷನ್ ಎಷ್ಟು ಇದೆ ಅಷ್ಟು ಕೊಡಲೇ ಬೇಕು. ಅದು ನ್ಯಾಯ. ಆಗಲೇ ಧರ್ಮ, ನ್ಯಾಯ ಎನ್ನುವುದು. ಅದರಲ್ಲಿ ತಪ್ಪು ಇಲ್ಲ. ಆದರೆ ಎಲ್ಲೆಲ್ಲಿ ಜಾಸ್ತಿ ಇದೆ. ಈಗ ಸೌತ್ ಕೆನರಾದಲ್ಲಿ 17 ಪರ್‌ಸೆಂಟ್ ಇದರಿಂದ ಅನ್ಯಾಯವಾಗುತ್ತದೆ. ಬ್ಯಾಕ್‌ವರ್ಡ್‌ನವರಿಗೆ ಇನ್ನೊಂದು ಕಡೆ 16 ಪರ್ಸೆಂಟ್ ಇದ್ದರೆ ಅಲ್ಲಿ 33 ಪರ್ಸೆಂಟ್ ಮಾಡುತ್ತೀರಿ ; ಒಂದಕ್ಕೊಂದು ಅನಾಲಜಿ ಹೋಲಿಕೆ ಆಗುವುದಿಲ್ಲವೆಂದು ನಾನು ಹೇಳಿದೆ. I am for 35% for Backward Classes.

ಶ್ರೀ ಜಿ. ಎಸ್. ಶಿವನಂಜಪ್ಪ : 33 ಪರ್ಸೆಂಟ್ ಪ್ಲಸ್ 23 ಪರ್ಸೆಂಟ್ 55 ಪರ್ಸೆಂಟ್ ಆಗುತ್ತದೆ. ಸುಪ್ರೀಂ ಕೋರ್ಟ್ ಜಡ್ಜ್‌ಮೆಂಟ್‌ಗೆ ವಿರುದ್ಧವಾಗುತ್ತದೆ. So far as the reservation in Backward Classes is concerned, ಸ್ವಲ್ಪ ರೀಥಿಂಕಿಂಗ್ ಬೇಕಾಗುತ್ತದೆ.

Sri. M. V. Venkatappa : 33% for the Backward Classes...
(Interruptions)

Sri. M.Y. Ghorpade : We can change the definition of Backward Classes later on. ಯಾವ ಡೆಫನಿಷನ್ ಮಾಡಿದರೂ ಇದನ್ನು ಎಲ್ಲರೂ ಬಹುಶಃ ಅದಕ್ಕಿಂತ ಕಡಿಮೆ ಆಗುವುದಿಲ್ಲ ಎನ್ನತಕ್ಕ ವಿಚಾರ ಇದೆ. ಇದನ್ನು ಎಲ್ಲರೂ ಒಪ್ಪುತ್ತಾರೆಂದು ನನಗನಿಸುತ್ತದೆ. ಆ ಒಂದು ಆಧಾರದ ಮೇಲೆ 33 ಪರ್ಸೆಂಟ್ ...

ಶ್ರೀ ಡಿ. ಕೆ. ಶಿವಕುಮಾರ್ : ಅದು ತೀರ್ಮಾನವಾಗದೆ ನಾವು ಹೇಗೆ ಸೀಟುಗಳ ವಿಚಾರದಲ್ಲಿ ಹಂಚಿಕೆ ಮಾಡಲು ಸಾಧ್ಯವಾಗುತ್ತದೆ? ಬ್ಯಾಕ್‌ವರ್ಡ್ ಕ್ಲಾಸ್, ಯಾವುದು, ಮೇಜರ್ ಯಾವುದು, ಎಂಬುದು ತೀರ್ಮಾನವಾಗಬೇಕು ತಾನೇ?

ಶ್ರೀ ಎಂ. ವೈ. ಘೋರ್ಪಡೆ : ತೀರ್ಮಾನ ಈಗಾಗಲೇ ಮಾಡಿದ್ದೇವೆ. 92 ಪರ್ಸೆಂಟ್ ಬ್ಯಾಕ್‌ವರ್ಡ್ ಎಂದು ಹೇಳಿದ್ದೇವೆ. ಯಾವ ಡೆಫನಿಷನ್ ಮೇಲೆ ನೀವು 16(4), 15(4) ರಿಸರ್ವೇಷನ್ ಕೊಟ್ಟಿದ್ದೇವೆ. 50 ಪರ್ಸೆಂಟ್ ಫಾರ್ ಬ್ಯಾಕ್‌ವರ್ಡ್ ಮತ್ತು 18 ಪರ್ಸೆಂಟ್

ಏನಿದೆ ಅದಕ್ಕೆ ಒಂದು ಡೆಫನಿಷನ್ ಇದೆ. ಸಧ್ಯಕ್ಕೆ ಇರುವುದು ಅಷ್ಟೆ. ಹೊಸ ಡೆಫನಿಷನ್ ಹುಡುಕುವವರೆಗೆ ನಾವು ಅದನ್ನೇ ಅನುಸರಿಸಬೇಕಾಗುತ್ತದೆ. That is all I can say ಈಗ ಒಕ್ಕಲಿಗನ ಬಗ್ಗೆ ಹೇಳಬೇಕಾದರೆ ಅವರು ಈವತ್ತು ಬ್ಯಾಕ್‌ವರ್ಡ್ ಇದ್ದಾರೆ. ಅವರು ಜನರಲ್ ಸೀಟ್‌ನಲ್ಲೂ ಬರಬಹುದು. ಮತ್ತು ಬ್ಯಾಕ್‌ವರ್ಡ್‌ನಲ್ಲೂ ಕೂಡ ಬರಬಹುದು.

ಡಾ॥ ಎಸ್. ಬಿ. ಸಂಜಪ್ಪ : ಅಧ್ಯಕ್ಷರೇ, ಏನು ವೆಂಕಟಪ್ಪನವರು ಹೇಳುತ್ತಿದ್ದಾರೆ ನೀವು ರಿಸರ್ವೇಶನ್ ಯಾವುದನ್ನು ಬ್ಯಾಕ್‌ವರ್ಡ್ ಕ್ಲಾಸ್‌ಗೆ ಇಡಬೇಕು ಅದಕ್ಕೆ ಇಡಿ. In proportion to the population of that particular area, ಅದನ್ನು ಮಾಡದೇ ಹೋದರೆ ಕಷ್ಟವಾಗುತ್ತದೆ. ಈಗಾಗಲೇ ನಾವು ಏನು ಫೇಸ್ ಮಾಡುತ್ತಾ ಇದ್ದೇವೆ ಅಂದರೆ, ಈಗ ಪಿಎಲ್‌ಪಿ ಬ್ಯಾಂಕ್ ಎಲಕ್ಷನ್‌ಗೆ ನಮ್ಮ ನಾಮಿನೇಷನ್ ಮಾಡುವಾಗ ಡಿಫರೆಂಟ್ ಕ್ಲಾಸ್‌ಗೆ ರೆಪ್ರಸೆಂಟೇಷನ್ ಕೊಡುವ ಸಮಯದಲ್ಲಿ We have to import candidates at present. ಅದನ್ನು ಕನ್ಸಿಡರೇಷನ್‌ಗೆ ತೆಗೆದುಕೊಳ್ಳದೇ ಹೋದರೆ ಬಹಳಷ್ಟು ಕಷ್ಟವಾಗುತ್ತದೆ. ಹೊರಗಡೆಯಿಂದ ಕ್ಯಾಂಡಿಡೇಟ್ಸ್‌ಗಳನ್ನು ತೆಗೆದುಕೊಂಡು ಬಂದು ಆ ಜಾಗಕ್ಕೆ ನಿಲ್ಲಿಸಬೇಕಾಗುತ್ತದೆ. You have to re-think over this point. ಇನ್ನುಳಿದ ಪರ್ಸೆಂಟೇಜ್ ಬಗ್ಗೆ ಮಂಡಲ್ ಕಮಿಷನ್ ಇದೆ, ಸುಪ್ರೀಂಕೋರ್ಟ್ ಇದೆ ...

Sri. M.V. Venkatappa : Please re-consider it. ಎಲ್ಲಿ ಜಾಸ್ತಿ ಇದೆ ಅಲ್ಲಿ ಜಾಸ್ತಿ ಕೊಡಿ, ಎಲ್ಲಿ ಕಡಿಮೆ ಇದೆ ಅಲ್ಲಿ ಕಡಿಮೆ ಕೊಡಿ.

ಶ್ರೀ ವೈ. ಘೋರ್ಪಡೆ : 91ರ ಸೆನ್ಸಸ್‌ನಲ್ಲಿ ಅದನ್ನು ಪ್ರಸ್ತಾಪ ಮಾಡಲಿಲ್ಲ. ಆದರ ಪ್ರಕಾರ ಪ್ರಪೋರ್ಷನೇಟ್ ಕೊಡಲಿಕ್ಕೆ ದೊಡ್ಡ ತೊಂದರೆ ಇದೆ. ಪ್ರಪೋರ್ಷನೇಟಾಗಿ ಯಾವ ಬ್ಯಾಕ್‌ವರ್ಡ್ ಕ್ಲಾಸಸ್‌ಗೂ ಕೊಡಬೇಕೆಂದು ಸೆನ್‌ಸಸ್‌ನಲ್ಲಿ ಇಲ್ಲ. ಆದ್ದರಿಂದ, ಆ ರೀತಿ ಕೊಡಲಿಕ್ಕೆ ಸಧ್ಯಕ್ಕಂತೂ ಬರುವುದಿಲ್ಲ. ನೀವು ಬ್ಯಾಕ್‌ವರ್ಡ್ ಕ್ಲಾಸಸ್‌ಗೆ ರಿಸರ್ವೆಷನ್ಸ್ ಮಾಡಬೇಡಿ ಎಂದು ಹೇಳಬಹುದು.

ಶ್ರೀ ಎಂ. ವಿ. ವೆಂಕಟಪ್ಪ : ಇಲ್ಲ ಇಲ್ಲ. ಮಾಡಿದರೆ ಯಾವುದೋ ಒಂದು ಫಿಕ್ಸೆಡ್ ಪ್ರಪೋರ್ಷನ್ ಎಂದು ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ : ಡೆಫನಿಷನ್ ಬಗ್ಗೆ ಸಾಕಷ್ಟು ಚರ್ಚೆ ಮಾಡಲಿಕ್ಕೆ ಅವಕಾಶ ಇದೆ. ಮಾಡಿ. ಆದರೆ ಆ ಗೊಂದಲದಲ್ಲಿ ಈ ಬಿಲ್ಲನ್ನು ಸಿಕ್ಕಿಸಬೇಡಿ. ಈ ಬಿಲ್ಲು ವಿಕೇಂದ್ರಿಕರಣಗೋಸ್ಕರ ಮಾಡಿರತಕ್ಕದ್ದು ; ಬೇರೆ ಒಂದು ವಾದ ಏನು ಇದೆ, ಅದರ ಪ್ರಭಾವ ಅನಾವಶ್ಯಕವಾಗಿ ಇದರ ಮೇಲೆ ಆಗಬಾರದು. ಇದಕ್ಕೆ ಅಷ್ಟಕ್ಕೆ ಆಗಬಾರದು ಹಾಗೂ ತೊಂದರೆ ಆಗಬಾರದು ಎಂಬುದು ನನ್ನ ವಿನಂತಿ.

ಶ್ರೀ ಎಂ. ವಿ. ವೆಂಕಟಪ್ಪ : ಆ ಪಾಯಿಂಟ್ ಅನ್ನು ನಾನು ಅಲ್ಲಿಗೆ ನಿಲ್ಲಿಸುತ್ತೇನೆ. ಒಂದು ತಾಲ್ಲೂಕು ಸಮಿತಿ ಸದಸ್ಯರಿಗೆ ಹತ್ತು ಸಾವಿರ ಪಾಪ್ಯುಲೇಷನ್ ಎಂದು ಇಟ್ಟಿದ್ದೀರಿ. ನನ್ನ ಅಭಿಪ್ರಾಯ ಏನೆಂದರೆ 10 ಸಾವಿರದಿಂದ 12 ಸಾವಿರ ಎಂದು ಮಾಡಬೇಕು. ಕಾರಣ ಇಷ್ಟೆ. ಈಗ ಉದಾಹರಣೆಗೆ ನಮ್ಮ ತಾಲ್ಲೂಕಿನಲ್ಲಿ ಒಂದು ಲಕ್ಷ 68 ಸಾವಿರ ಜನ ಇದ್ದಾರೆ. ಅವರು ಮೆನ್‌ಷನ್ ಮಾಡಿದ ಪ್ರಕಾರ 40 ಸಾವಿರದಿಂದ 50 ಸಾವಿರ ಎಂದು ಇಟ್ಟಿದ್ದಾರೆ. 40ಸಾವಿರ ಇಟ್ಟರೂ ನಾಲ್ಕು ಸೀಟು ಬರುತ್ತದೆ. ಇನ್ನು ಎಂಟು ಸಾವಿರವನ್ನು ಏನು ಮಾಡಬೇಕು?

ಎರಡು ಮಂಡಲ ಸೇರಿ ಒಂದು ತಾಲ್ಲೂಕು ಸಮಿತಿ ಸೀಟು ಇಟ್ಟರೆ ಅನುಕೂಲವಾಗುತ್ತದೆ. 5500ಕ್ಕೆ ಒಂದೊಂದು ಪಂಚಾಯಿತಿ, ಕೆಲವು ಆರು ಸಾವಿರಕ್ಕೆ ಆಗಬಹುದು. ಆದ್ದರಿಂದ ಹತ್ತು ಸಾವಿರದಿಂದ 12 ಸಾವಿರ ಮಾಡಬೇಕು. ಯಾವ ರೀತಿ 5 ಸಾವಿರದಿಂದ ಏಳು ಸಾವಿರಕ್ಕೆ ಒಂದೊಂದು ಪಂಚಾಯಿತಿ ಎಂದು ಇಟ್ಟಿದ್ದೀರಿ ಅದೇ ರೀತಿ ತಾಲ್ಲೂಕು ಸಮಿತಿ ಮೆಂಬರ್‌ಗಳಿಗೆ 10 ರಿಂದ 12ಸಾವಿರಕ್ಕೆ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಆ ಹಳ್ಳಿಯನ್ನು ಈ ಕಡೆಗೆ ತೆಗೆಯುವುದು , ಈ ಹಳ್ಳಿಯನ್ನು ಆ ಕಡೆಗೆ ತೆಗೆಯುವುದು ಇದೆಲ್ಲಾ ಪ್ರಾರಂಭವಾಗುತ್ತವೆ. ಜಿಲ್ಲಾ ಪರಿಷತ್ ಸದಸ್ಯರಿಗೆ 50 ಸಾವಿರ ಎಂದು ಇಟ್ಟಿದ್ದೀರಿ. ಇದು ಜಾಸ್ತಿ ಮಾಡಲು 28 ಸಾವಿರ ಇತ್ತು . ಈಗ 50 ಸಾವಿರ ಇದ್ದರೆ ಬಹಳ ಕಷ್ಟವಾಗುತ್ತದೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಗುಡಿ ಬಂಡೆ ತಾಲ್ಲೂಕು ಇದೆ. The entire taluk population is 45,000; only two mandals but a revenue taluk. That taluk is getting all the facilities. ಅಲ್ಲಿ ಬರೀ ಎರಡು ಮಂಡಲಗಳು ಇದೆ. ಒಂದೊಂದಕ್ಕೂ 25ಲಕ್ಷ ಸಿಗುತ್ತದೆ. ಅಲ್ಲಿಯ ಪಾಪ್ಯುಲೇಷನ್ 45 ಸಾವಿರವೂ ಇಲ್ಲ. ಇದೇ ತರಹ 6-7 ತಾಲ್ಲೂಕುಗಳು ಇವೆ. ಅವುಗಳಿಗಾಗಿ ಸಪರೇಟ್ ಆಗಿ ಮಾಡಬೇಕು.

ಶ್ರೀ ಎಂ ಮಲ್ಲಿಕಾರ್ಜುನ.ಖರ್ಗೆ : ಶೃಂಗೇರಿ, ಕೊಪ್ಪ.

ಶ್ರೀ ಎಂ. ವಿ. ವೆಂಕಟಪ್ಪ : ಅವೆಲ್ಲಾ ರೆವೆನ್ಯೂ ತಾಲ್ಲೂಕುಗಳು. ಅದಕ್ಕೆ ಮಿನಿಮಮ್ ಲೆವಲ್ ಇಟ್ಟಿದ್ದೀರಿ, ಅದು ವೆರಿ ಗುಡ್ ಐಡಿಯಾ, ತಾವು 50 ಸಾವಿರ ಪಾಪ್ಯುಲೇಷನ್‌ನ್ನು 40 ಸಾವಿರಕ್ಕೆ ಇಳಿಸಬೇಕು ಎಂಬುದು ನನ್ನ ಅಭಿಪ್ರಾಯ.

ಶ್ರೀ ಡಿ. ಆರ್ . ಪಾಟೀಲ್ : ಸೆಕ್ಷನ್ 160ರಲ್ಲಿ 40 ಸಾವಿರ ಎಂದು ಇದೆ.

ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ : ಬಿಜಾಪುರ ಜಿಲ್ಲೆ ಎಲ್ಲಕ್ಕಿಂತ ದೊಡ್ಡ ಜಿಲ್ಲೆ. ನಮ್ಮ ಕರ್ನಾಟಕ ರಾಜ್ಯದಲ್ಲಿ, ವಿಸ್ತೀರ್ಣ ಮತ್ತು ಜಿಯಾಗ್ರಫಿಕಲ್ ದೃಷ್ಟಿಯಿಂದ ನಿಮ್ಮ ನಾಲ್ಕು ಕೋಲಾರ ಜಿಲ್ಲೆಗಳು ಅದರಲ್ಲಿ ಆಗುತ್ತವೆ. ಅದಕ್ಕೂ ಏನಾದರೂ ಸ್ಪೆಷಲ್ ಹೇಳಿ.

ಶ್ರೀ ಹೆಚ್. ಏಕಾಂತಯ್ಯ : ಅದನ್ನು ಎರಡು ಜಿಲ್ಲೆಯನ್ನಾಗಿ ಮಾಡಿ.

ಶ್ರೀ ಎಂ. ವಿ. ವೆಂಕಟಪ್ಪ : ಇದರ ಬಗ್ಗೆ ನಿನ್ನೆ ಚಂದ್ರೇಗೌಡರು ಹೇಳಿದರು ನಾವು ನಾಮಕರಣ ಮಾಡಿದ್ದೇವೆ. ನೀವು ಹೊಸದಾಗಿ ಬ್ಯಾಕ್‌ವರ್ಡ್ ಕ್ಲಾಸಸ್, ಶೆಡ್ಯೂಲ್ಡ್ ಕಾಸ್ಟ್, ಲೇಡೀಸ್‌ಗಳಿಗೆ ತಂದಿಲ್ಲ ಮೊದಲೇ ಇತ್ತು ಎಂದು. ತಾಲ್ಲೂಕು ಸಮಿತಿಗಳಿಗೆ ಹಿಂದೆ ನಾಮಕರಣ ಮಾಡಿದ್ದರು. ತಾಲ್ಲೂಕು ಸಮಿತಿಯ ಅಧ್ಯಕ್ಷರಾಗಿ ಲೋಕಲ್ ಲೆಜಿಸ್ಲೇಟರ್ ಇದ್ದರೂ ಸಹ ಆ ಒಂದು ಸಮಿತಿಯಲ್ಲಿ ತಮ್ಮ ಮೆಜಾರಿಟಿಯನ್ನು ಬೆಳೆಸಿಕೊಳ್ಳಬೇಕು ಎಂದು ನಾಮಕರಣ ಉಪಯೋಗ ಮಾಡಿಕೊಂಡು, 5-5 ಜನ ಶೆಡ್ಯೂಲ್ಡ್ ಕಾಸ್ಟ್, ಬ್ಯಾಕ್‌ವರ್ಡ್ ಕ್ಲಾಸಸ್, ಮತ್ತು ಲೇಡಿಸ್‌ಗಳನ್ನು ಮೂರು ಸೇರಿ, ನಾಮಕರಣ 5 ಜನಕ್ಕೆ ಇಟ್ಟಿದ್ದರು. ನಾನು ಪ್ರದೇಶ ಕಾಂಗ್ರೆಸ್ಸಿನ ಜನರಲ್ ಸೆಕ್ರೆಟರಿಯಾಗಿ ಆ ವೇಳೆಗೆ ಈ ಜಿಲ್ಲಾ ಪರಿಷತ್ ಇನ್‌ಚಾರ್ಜ್ ಆಗಿದ್ದೆ. ಸುಮಾರು ಐದು ನೂರು ಮಂಡಲಗಳಲ್ಲಿ ಅವರಿಗೆ ಕಡಿಮೆ ಬಂತು. ಆಗ ಏನು ಮಾಡಿದರು ಎಂದರೆ ತರಾತುರಿಯಲ್ಲಿ ರಾತ್ರಿ, ಹಗಲೂ ಕುಳಿತುಕೊಂಡು ಎರಡೆರಡು ನಾಮಕರಣಗಳನ್ನು ಮಂಡಲಗಳಿಗೆ ಮಾಡಿದರು.

ಶ್ರೀ ಹೆಚ್. ಏಕಾಂತಯ್ಯ: ಇಂಥ ವಿಚಾರಗಳನ್ನು ನೀವು ಪ್ರಸ್ತಾಪ ಮಾಡುವಾಗ ನಾವು ನಿಮ್ಮ ಪಕ್ಷ ಏನು ಮಾಡಿದೆ ಎಂದು ಒಂದು ಸಾವಿರ ಉದಾಹರಣೆಯನ್ನು ಬೇಕಾದರೆ ಕೊಡುತ್ತೇವೆ ; ಅದರಿಂದ ಏನೂ ಉಪಯೋಗ ಆಗುವುದಿಲ್ಲ. ನೀವು ಅಧಿಕಾರದಲ್ಲಿದ್ದಾಗ ಏನು ಮಾಡಿದ್ದೀರಿ ಎಂದರೆ ಚಿತ್ರದುರ್ಗದಲ್ಲಿ ರಾತ್ರೋ ರಾತ್ರಿ ನಿಮಗೆ ಬೇಕಾದವರನ್ನು ತೆಗೆದುಕೊಂಡು ಬಂದು ಸೇರಿಸಿದ್ದೀರಿ. ರಾಜಕಾರಣಕ್ಕೋಸ್ಕರ ಮಾತನಾಡುವುದಾದರೆ ಮಾತನಾಡಿ ನಿಮಗೆ ತೃಪ್ತಿ ಇದ್ದರೆ. ಆದರೆ ವಸ್ತುತಃ ನೀವೇನು ಮಾಡಿದಿರಿ ಈ ದೇಶದಲ್ಲಿ, ನಾವು ಏನು ಮಾಡಿದ್ದೇವೆ ಈ ವ್ಯವಸ್ಥೆಯಲ್ಲಿ, ಎಲ್ಲಾ ಒಂದೇ. ಅದನ್ನು ಸಹ ನೀವು ಹೇಳಿಕೊಳ್ಳಲಿಕ್ಕೆ ಹೋಗಬೇಡಿ. ಯಾವ ವಿಧದಲ್ಲೂ ಸಹ ನೀವೇನು ನಮಗಿಂತ ಕಡಿಮೆ ಇಲ್ಲ ಈ ವಿಚಾರದಲ್ಲಿ..

ಶ್ರೀ ಎಂ. ವಿ. ವೆಂಕಟಪ್ಪ : ಹಾಗೆ ನಾಮಕರಣ ಮಾಡಿ 450ರಿಂದ 500 ಮಂಡಲಗಳು ಅವರ ವಶಕ್ಕೆ ಹೋಯಿತು. ನನಗೆ ಗೊತ್ತಿದೆ, ನಾನು ಇನ್‌ಚಾರ್ಜ್‌ನಲ್ಲಿದ್ದೆ. ಅವರು ನಾಮಿನೇಷನ್ ಮಾಡದೇ ಇದ್ದಿದ್ದರೆ ಎರಡೆರಡರನ್ನು, ಅವರು ಐದು ನೂರು ಜನರಲ್ಲಿ ಬರುತ್ತಿರಲಿಲ್ಲ.

5.20 ಪಿ.ಎಂ.

ಶ್ರೀ ಹೆಚ್. ಏಕಾಂತಯ್ಯ : ಚಿತ್ರದುರ್ಗ ಜಿಲ್ಲೆಯಲ್ಲಿ ನಿಮ್ಮ ಅಧ್ಯಕ್ಷರೇ ಆಗುತ್ತಿರಲಿಲ್ಲ. ಇಷ್ಟಕ್ಕೆ ಉತ್ತರ ಕೊಡಿ. ಆಮೇಲೆ ನಾನು ಹೇಳುತ್ತೇನೆ.

ಶ್ರೀ ಎಂ. ವಿ. ವೆಂಕಟಪ್ಪ : ಈ ರೀತಿ ಇರುವುದರಿಂದ ಬಹುಶಃ ನನಗನ್ನಿಸುತ್ತದೆ, ಘೋರ್ಪಡೆಯವರು ಬಹಳ ಬುದ್ಧಿವಂತನದಿಂದ ಒಳ್ಳೆಯ ಒಂದು ಪಂಚಾಯತಿ ರಾಜ್ ಮಸೂದೆಯನ್ನು ಏನು ತಂದಿದ್ದಾರೆ, ಅದು ಶ್ಲಾಘನೀಯ. ನಾವು ಅವರನ್ನು ಹೊಗಳಬೇಕಾಗಿದೆ ಮತ್ತು ಅದೇ ರೀತಿಯಲ್ಲಿ ಅವರ ಒಂದು ಧುರೀಣತ್ವದಲ್ಲಿ ಈ ಪಂಚಾಯತ್ ರಾಜ್ ವ್ಯವಸ್ಥೆ ಅದೇ ರೀತಿ ಮುಂದೆ ಹೋದರೆ ಬಹುಶಃ ಪಂಚಾಯತ್ ರಾಜ್ ಬಗ್ಗೆ ನಮ್ಮ ಮೈಂಡ್‌ನಲ್ಲಿ ಏನಿದೆ ಅದು ಸಕ್ಸೀಡ್ ಆಗುವುದರಲ್ಲಿ ಯಾವ ಒಂದು ಅನುಮಾನವೂ ಇಲ್ಲ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಾಬಾಗೌಡ ರುದ್ರೇಗೌಡ ಪಾಟೀಲ್ (ಕಿತ್ತೂರು) : ಮಾನ್ಯ ಸಭಾಧ್ಯಕ್ಷರೇ, ಗ್ರಾಮ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾ ಪರಿಷತ್ ಬಿಲ್ಲನ್ನು ಮಂಡಿಸಿದ್ದಾರೆ. ಗ್ರಾಮ ಪಂಚಾಯತಿ ಮಟ್ಟದಲ್ಲಿ ಪಕ್ಷಾತೀತವಾಗಿ ಚುನಾವಣೆ ಮಾಡಬೇಕು ಎನ್ನುವಂಥ ವಿಚಾರವನ್ನು ನಾವು ನಿಜವಾಗಿಯೂ ಹೊಗಳಬೇಕು. ಏಕೆಂದರೆ, ನಾವು ಹಳ್ಳಿಗಾಡಿನಲ್ಲಿ ವಾಸ ಮಾಡಿದಂಥ ಜನರು. ಹಿಂದಿನ ಅನುಭವ ಎಂದರೆ ಎಷ್ಟು ಕಹಿ ಅನುಭವ ಎಂದರೆ ನಮ್ಮ ಹಳ್ಳಿಗಾಡಿನ ಪ್ರದೇಶದಲ್ಲಿ ಕೆಲವರು ಬೀಗುತ್ತಾ ನಡೆದುಕೊಂಡರು ನಿಜವಾಗಿಯೂ. ನಾನು ಅನೇಕ ಉದಾಹರಣೆಗಳನ್ನು ಹೇಳಬಹುದು. ಈ ಸಾರಿ ಮಾತ್ರ ಇಂಥಾದ್ದನ್ನು ಗಣನೆಗೆ ತೆಗೆದುಕೊಂಡು ಹಳ್ಳಿಯ ಜನರು ನೆಮ್ಮದಿಯಿಂದ ಬದುಕಬೇಕು, ಈ ಪಂಚಾಯತಿ ಚುನಾವಣೆ ಆದಕ್ಕೂಡಲೇ ಒಬ್ಬರಿಗೊಬ್ಬರು, ಹಳ್ಳಿಯಲ್ಲಿ ವೈರಿಗಳಾಗಬಾರದು, ಎನ್ನುವಂತ ಒಂದು ದೃಷ್ಟಿಕೋನ ನಮ್ಮ ಪಂಚಾಯತ್ ರಾಜ್ ಮಂತ್ರಿಗಳಿಗೆ ಇದೆ, ಆ ಒಂದು ವಿಚಾರಕ್ಕೆ ನಾವು ಅವರನ್ನು ಶ್ಲಾಘನೆ ಮಾಡಬೇಕು. ಇದರ ಜೊತೆಗೆ ನಾನ್ ಪಾರ್ಟಿ ಎಲೆಕ್ಷನ್ ಮಾಡುವುದರ ಮೂಲಕ ಒಳ್ಳೆಯ ಜನರನ್ನು ಅಂದರೆ ಒಂದು ಪಕ್ಷದ ಒಂದು ಬ್ರಾಂಡ್ ಹಚ್ಚಿಕೊಂಡು ನಾವು ಬದುಕಬೇಕು ಎನ್ನುವಂಥವರು ಹಳ್ಳಿಯಲ್ಲಿ ಕಡಿಮೆ. ಕೆಲವು ಯಜಮಾನರು ಸ್ವಲ್ಪ ಮರ್ಯಾದೆಯಿಂದ ನಮಗೆ ಯಾವ

ಪಾರ್ಟಿಯೂ ಏನೂ ಬೇಕಾಗಿಲ್ಲ, ಎಂದು ಹೇಳಿ ಅನೇಕರು ಬದುಕಿದವರು ಇದ್ದಾರೆ. ಅವರು ತಮ್ಮ ಗ್ರಾಮಗಳ ಬಗ್ಗೆ ಸಾಕಷ್ಟು ಕಾಳಜಿ ಮಾಡುವಂಥ ಜನ. ಈ ಚುನಾವಣೆ ಬಂದಾಗ ಇಡೀ ಗ್ರಾಮದ ಜನ ನೀವೇ ಆಗಿ ಎಂದು ವಿಚಾರ ಇದ್ದರೂ ಸಹಿತ ಪಾರ್ಟಿಗೆ ಅಂಟಿಕೊಂಡು ನೀವು ಚುನಾವಣೆ ಮಾಡಬೇಕು ಎನ್ನತಕ್ಕಂಥ ಸಂದರ್ಭ ನಮಗೆ ಬೇಡಪ್ಪ ಎಂದು ಹೇಳಿ ದೂರ ಸರಿದು ಹೋಗುತ್ತಾರೆ. ಆ ಕಾರಣ ಅಂಥ ಜನರನ್ನು ಅಂದರೆ ನೀತಿವಂತರು, ಧರ್ಮವಂತರು, ಅವರನ್ನು ಈ ಪಂಚಾತ್ ರಾಜ್ ವ್ಯವಸ್ಥೆಯಲ್ಲಿ ತೊಡಗಿಸುವಂಥ ಒಂದು ಸಾಧ್ಯತೆ ಈ ಮೂಲಕ ಆಗುತ್ತಿದೆ ಎನ್ನುವಂಥ ವಿಚಾರ ಇದೆ. ಇನ್ನು ಅಧ್ಯಕ್ಷ ಮೂರನೆಯ ಒಂದು ಭಾಗದಷ್ಟು ಹರಿಜನರು, ಗಿರಿಜನರು, ಬ್ಯಾಕ್‌ವರ್ಡ್ ಕಮ್ಯುನಿಟೀಸ್ ಇರಬೇಕು ಎನ್ನುವಂಥದ್ದು. ಅದು ಪ್ರಾಯೋಗಿಕವಾಗಿ ಹೇಗೆ ಸಾಧ್ಯವೋ ಎನ್ನುವಂಥದ್ದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಏಕೆಂದರೆ ಉದಾಹರಣೆಗೆ 21 ಜನ ಸದಸ್ಯರು ಇರುವಂಥ ಒಂದು ಪಂಚಾಯತಿ ಇದೆ. 11 ಜನ ಇರುವಂಥ ಒಂದು ಗ್ರೂಪ್, ಪಕ್ಷ ಇಲ್ಲ ಎಂದು ತಿಳಿದುಕೊಳ್ಳಿ. ಒಂದು ಗ್ರೂಪ್ ಅವರ ಪೈಕಿ ಯಾರು ಈ ಎಸ್.ಸಿ.ಎಸ್.ಟಿ ಕ್ಯಾಂಡಿಡೇಟ್ ಆರಿಸಿ ಬಂದಿಲ್ಲ. ಬೇರೆ ಎರಡು ಪಕ್ಷದವರು ಅವರು ಎಸ್.ಸಿ.ಎಸ್.ಟಿ. ಕ್ಯಾಂಡಿಡೇಟ್ ಆರಿಸಿ ಬಂದರು. ಮೆಜಾರಿಟಿ ಪಕ್ಷದಲ್ಲಿ ಅಥವಾ ಮೆಜಾರಿಟಿ ಗ್ರೂಪ್‌ನಲ್ಲಿ ಇವರು ಇಲ್ಲ, ಯಾರೂ ಎಸ್.ಸಿ.ಎಸ್.ಟಿ. ಇಲ್ಲ. ಹೇಗೆ ನೀವು ಅಧ್ಯಕ್ಷರನ್ನು ಮಾಡುತ್ತೀರಿ ಅಲ್ಲಿ. ನಮಗೆ ಇದರ ಬಗ್ಗೆ ತಿಳುವಳಿಕೆಯನ್ನು ಮಾಡಿಕೊಡಬೇಕು. ಅವರು ಕೋರ್ಟಿಗೆ ಹೋದರೆ ಬಹುತೇಕ ಈ ಬಿಲ್ ಬಿದ್ದು ಹೋಗಬಹುದು. ಆ ಕಾರಣ ನಾವು ಮಾಡಲೇಬೇಕು ಎನ್ನುವಂಥ ಇಚ್ಛೆ ಸರ್ಕಾರಕ್ಕೆ ಇದ್ದರೆ ನೇರ ಚುನಾವಣೆಯನ್ನು ಏತಕ್ಕೆ ಮಾಡಬಾರದು? ಮೂರನೆಯ ಒಂದು ಭಾಗದಷ್ಟು ಪಂಚಾಯತಿ ಅಧ್ಯಕ್ಷರು ಎಸ್.ಸಿ.ಎಸ್.ಟಿ.ಯವರು ಇರಬೇಕು ಎಂದರೆ ಅದನ್ನು ನಾವು ಮಾಡಲೇಬೇಕು ಎನ್ನುವಂಥ ಆಸೆ ತಮಗೆ ಇದ್ದರೆ ಪಂಚಾಯಿತಿಗೆ ಅಧ್ಯಕ್ಷರ ಚುನಾವಣೆಯನ್ನು ನೇರವಾಗಿ ಏತಕ್ಕೆ ಮಾಡಬಾರದು? ಅದು ಸಾಧ್ಯ ಇದೆ. ಈ 21 ಪಂಚಾಯತಿಗಳ ಪೈಕಿ ಈ ಏಳು ಪಂಚಾಯತಿಗಳಿಗೆ ಎಸ್.ಸಿ.ಎಸ್.ಟಿ. ಅಧ್ಯಕ್ಷರು ಎಂದು ಹೇಳಿ ಅಲ್ಲಿ ರಿಸರ್ವೇಷನ್ ಇದೆ. ಇದು ಸಾಧ್ಯ ಇದೆ. ಆ ಕಾರಣ ಮತ್ತೊಂದು ಕೆಲವು ಹಳ್ಳಿಗಳಲ್ಲಿ 400 ಜನಸಂಖ್ಯೆಗೆ ಒಬ್ಬರು ಸದಸ್ಯರು ಎಂದು ಹೇಳಿದ್ದೀರಿ. ಹತ್ತು ಕುಟುಂಬಗಳಲ್ಲಿ ಒಬ್ಬೊಬ್ಬರು ಪುಂಡರು ಇರುತ್ತಾರೆ. ಒಂದು ಹತ್ತು ಕುಟುಂಬ ಅಂದರೆ ಅಣ್ಣತಮ್ಮಂದಿರು ಹತ್ತು ಕುಟುಂಬದವರು ಇದ್ದರೆ ಒಬ್ಬ ಅವನು ಬರುತ್ತಾನೆ. ಅವನು ಪುಂಡಾಟಿಕೆ ಮಾಡಿ ಬಹುತೇಕ ಆ ಗ್ರಾಮದ ಪಂಚಾಯತಿ ಅಧ್ಯಕ್ಷ ಆಗುವಂಥ ಛಾನ್ಸಸ್ ಇದೆ. ಆ ಕಾರಣ ಈ ನೇರ ಚುನಾವಣೆ ಎಂದರೆ ಬಹುತೇಕ ಒಳ್ಳೆಯ ವ್ಯಕ್ತಿಯನ್ನು ಹುಡುಕುವಂಥ ಸಾಧ್ಯತೆ ಇದೆ. ತಮಗೆ ರಿಸರ್ವೇಷನ್ ಮಾಡಬೇಕು ಎಂದು ಆಸೆ ಏನು ಇದೆ, ಅದು ಫಲ ಕೊಡಬಹುದು. ಆ ಕಾರಣ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಅಧ್ಯಕ್ಷ ಸ್ಥಾನಕ್ಕೆ ನೇರ ಚುನಾವಣೆಯನ್ನು ಮಾಡಿದರೆ ಒಳ್ಳೆಯದು ಎಂಬುದು ನನ್ನ ಭಾವನೆ.

ಇನ್ನು ಮೂರನೆಯದು, ಹಿಂದಿನ ಅನುಭವ ಪಂಚಾಯತಿಯಲ್ಲಿ ಖರ್ಚಾದದ್ದು ವೆಚ್ಚವಾದುದ್ದು ಎನ್ನುವಂಥದ್ದು ಸೆಕ್ರೆಟರಿ ಮತ್ತು ಅಧ್ಯಕ್ಷರಿಗೆ ಮಾತ್ರ ಗೊತ್ತಾಗುತ್ತದೆ. ಮಿಕ್ಕ ಸದಸ್ಯರಿಗೆ ಗೊತ್ತೇ ಆಗುವುದಿಲ್ಲ. ಈಗಲೂ ತಮ್ಮ ಈ ವಿಧೇಯಕದಲ್ಲಿ ಅಧ್ಯಕ್ಷರು ಮಾತ್ರ ಹಣಕಾಸಿನ ವ್ಯವಹಾರವನ್ನು ನೋಡಬೇಕು, ನೋಡುವಂತಹ ಅಧಿಕಾರ ಇದೆ, ಎಂದು ಮಾತ್ರ ತಿಳಿಸಿದ್ದೀರಿ. ಎಲ್ಲಾ ಸದಸ್ಯರಿಗೂ ಗೊತ್ತಾಗುವಂತಹ ರೀತಿಯಲ್ಲಿ ನೋಟೀಸ್ ಬೋರ್ಡಿನ ಮೇಲೆ ಅಂಟಿಸಿದರೆ ಒಳ್ಳೆಯದು.

ಶ್ರೀ ಎಂ. ವೈ. ಘೋರ್ಪಡೆ : ಹಾಗೆಯೇ ಮಾಡಿದ್ದೇವೆ.

ಶ್ರೀ ಬಾಬಾಗೌಡ ರುದ್ರೇಗೌಡ ಪಾಟೀಲ್ : ಹಾಗೆಯೇ ಮಾಡಿದ್ದರೆ ಸಂತೋಷ. ಆ ಗ್ರಾಮದ ಜನರಿಗೆ ಈ ಒಂದು ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಬರುವಂತಹ ಎಲ್ಲಾ ಗ್ರಾಮದ ಜನರಿಗೆ ಈ ವಿಚಾರ ಗೊತ್ತಾಗಬೇಕು. ಏನೇನು ಖರ್ಚು ಮಾಡಿದರು. ಯಾವ್ಯಾವ ಕೆಲಸಕ್ಕೆ ಎಷ್ಟೆಷ್ಟು ಖರ್ಚು ಮಾಡಿದರು, ಆಮೇಲೆ ಕೆಲಸದ ವಿವರ. ಆ ನಂತರ ವಿನಿಯೋಗವಾದಂತಹ ಹಣ. ಈ ಎಲ್ಲಾ ವಿಚಾರಗಳು ಗೊತ್ತಾಗುವಂತಹ ರೀತಿಯಲ್ಲಿ ಆ ನೋಟೀಸ್ ಬೋರ್ಡಿನ ಮೇಲೆ ಈ ವಿವರಗಳನ್ನು ಕೊಟ್ಟರೆ ವಿನಿಯೋಗವಾದಂತಹ ಹಣದ ವ್ಯವಹಾರ ತಿಳಿಸಿಕೊಟ್ಟರೆ ಬಹುತೇಕ ಹೆಚ್ಚು ಚಕಿತ್ಸಕ ಬುದ್ಧಿಯಿಂದ ಗ್ರಾಮ ಮಟ್ಟದಲ್ಲಿ ಹಣ ಏನು ದುರುಪಯೋಗ ಆಗುತ್ತಿದೆ ಅದು ತಪ್ಪಬಹುದು. ಈ ವಿಚಾರದಿಂದ ಪ್ರತಿಯೊಬ್ಬ ಸದಸ್ಯರಿಗೆ ಅಂದರೆ ಗ್ರಾಮದ ಪ್ರತಿಯೊಬ್ಬ ವ್ಯಕ್ತಿಗೆ ಈ ಒಂದು ಅಧಿಕಾರ ಕೊಡುವಂತಹ ಅವಕಾಶ ಒದಗಿಸಿಕೊಟ್ಟರೆ ಬಹಳ ಒಳ್ಳೆಯದು ಎಂದು ನನ್ನ ತಿಳುವಳಿಕೆ. ಆಮೇಲೆ ಅತಿಕ್ರಮಣ ಆದಂಥದ್ದು ನೋಡಿದರೆ ಬಹುತೇಕ ಅನೇಕ ಗ್ರಾಮಗಳಲ್ಲಿ ರಸ್ತೆಗಳ ಕೆಲಸವೇ ಬಂದಾಗಿದೆ ಈಗ. ಚಕ್ಕಡಿನೂ ಅಡ್ಡಾಡುತ್ತಿಲ್ಲ. ಮೋಟಾರ್‌ಗಳಂತೂ ಹೋಗುವುದಕ್ಕೆ ಸಾಧ್ಯವೇ ಇಲ್ಲ. ಯಾರಾದರೂ ಪಂಚಾಯತಿ ಛೇರ್ಮನ್ ಪರ್ಮಿಷನ್ ಕೊಟ್ಟರು. ಬಹುತೇಕ ನಡು ರಸ್ತೆಯಲ್ಲಿ ಮನೆ ಕಟ್ಟಿಕೊಂಡಿದ್ದು ಅನೇಕ ಕಡೆ ನಾವು ನೋಡಬಹುದು. ಆ ಕಾರಣ ಈ ಅತಿಕ್ರಮಣ ತೆಗೆಯಲಿಕ್ಕೆ ಈ ಪಂಚಾಯತಿಗಳಿಂದ ಸಾಧ್ಯ ಆಗುತ್ತಾ ಇಲ್ಲ. ಯಾರೋ ಬೀಗರು ಇರಬಹುದು. ಅಣ್ಣ ತಮ್ಮಂದಿರು ಇರಬಹುದು, ಸಂಬಂಧಿಗಳು ಇರಬಹುದು. ಜಾತಿಯವರು ಇರಬಹುದು. ಹೇಗಪ್ಪಾ ಅವರನ್ನು ತೆಗೆಸಿಬಿಟ್ಟೆವು ಅಂದರೆ ಮುಂದಿನ ಚುನಾವಣೆಯಲ್ಲಿ ನಾವು ಗೆದ್ದು ಬರಲಿಕ್ಕೆ ಇಲ್ಲ. ನನಗೆ ಓಟುಕೊಡಲಿಕ್ಕೆ ಇಲ್ಲ ಎನ್ನುವ ದೃಷ್ಟಿಯಿಂದ ಯಾರ್ಯಾರು ಅತಿಕ್ರಮಣ ಮಾಡಿದರೋ ಅದನ್ನು ಯಾರೂ ತೆಗೆಯಲಿಲ್ಲ. ಈಗ ಹಳ್ಳಿಗಳಲ್ಲಿ ಅಡ್ಡಾಡುವಂತಿಲ್ಲ. ರಸ್ತೆ ಸಂಚಾರಗಳು ಸಂಪೂರ್ಣ ಬಂದ್ ಆಗಿದೆ. ಆ ಕಾರಣ ಪಂಚಾಯತಿಯಿಂದ ಈ ಒಂದು ಅತಿಕ್ರಮಣ ತೆಗೆಯುವಂಥ ಒಂದು ಕೆಲಸ ನಡೆಸುವುದಕ್ಕೆ ಸಾಧ್ಯ ಇಲ್ಲ. ಆ ಕಾರಣ ಮಾನ್ಯ ಮಂತ್ರಿಗಳು ಈ ಅಧಿಕಾರವನ್ನು, ಅತಿಕ್ರಮಣ ಖುಲ್ಲಾ ಮಾಡುವಂತಹ ಅಧಿಕಾರವನ್ನು ತಹಶೀಲ್ದಾರರಿಗೋ ಅಥವಾ ಅಸಿಸ್ಟೆಂಟ್ ಕಮಿಷನರ್ ಅವರಿಗೋ ಕೊಟ್ಟರೆ ಚೆನ್ನಾಗಿರುತ್ತದೆ. ಏಕೆಂದರೆ ಅವರಿಗೆ ಯಾರದ್ದೂ ಮುಲಾಜು ಇಲ್ಲ. ನೇರವಾಗಿ ಪೋಲೀಸರನ್ನು ಕರೆದುಕೊಂಡು ತೆಗೆಯುವಂತಹ ಸಾಧ್ಯತೆ ಇದೆ. ಆದರೆ ಪ್ರತಿ ದಿವಸ ಮುಖಾಮುಖಿ ನೋಡುವಂತಹ ಜನರನ್ನು ನೋಡಿಕೊಂಡು ನನ್ನ ಮನೆಯನ್ನು ಕೆಡವುತ್ತೇನೆ ಎನ್ನುವಂತಹ ಧೈರ್ಯ ಯಾವ ಪಂಚಾಯತಿ ಅಧ್ಯಕ್ಷನಿಂದ ಸಾಧ್ಯ ಇಲ್ಲ. ಆ ಕಾರಣ ಈ ಅತಿಕ್ರಮಣ ತೆಗೆಯುವಂಥದ್ದನ್ನೂ ದಯಮಾಡಿ ಮಾಡಬೇಕು. ಏಕೆಂದರೆ ಹಳ್ಳಿಯಲ್ಲಿ ಚಕ್ಕಡಿ ಗಾಡಿ ಅಡ್ಡಾಡುವಂತಹದು ಸಂಪೂರ್ಣ ಬಂದ್ ಆಗಿ ಹೋಗಿಬಿಟ್ಟಿದೆ. ಇದನ್ನು ಮಾತ್ರ ಪಂಚಾಯತಿ ಅಧ್ಯಕ್ಷನಿಗೆ ಬೇಡ ; ತಾಲ್ಲೂಕು ಪಂಚಾಯತಿ ಜಿಲ್ಲಾ ಪಂಚಾಯತಿ ಅಧ್ಯಕ್ಷನಿಗೂ ಕೊಡಬೇಡಿ. ಏಕೆಂದರೆ, ಬಹುತೇಕ ಅವರು ಈ ಚುನಾವಣೆಯನ್ನು ತಲೆಯಲ್ಲಿ ಇಟ್ಟುಕೊಂಡು ಮತವನ್ನೂ ತಲೆಯಲ್ಲಿಟ್ಟುಕ್ಕೊಂಡು ಇದನ್ನು ಮಾಡಲಿಕ್ಕೆ ಇಲ್ಲ. ಆದರೆ ಮೂಕ ಜನರು, ಯಾರಿಗೆ ಬಾಯಿ ಇಲ್ಲ, ಯಾರಿಗೆ ರಾಜಕೀಯ ಶಕ್ತಿ ಇಲ್ಲ, ಅವರ ವೇದನೆ ಮಾತ್ರ ಹೇಳತೀರದು. ಆ ಕಾರಣ ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಂಡು ಕೆಲಸ ಮಾಡಬೇಕು. ಆಮೇಲೆ ಹೆಚ್ಚಾಗಿ ನಕ್ಷೆ ಇಲ್ಲದ್ದಕ್ಕೆ ಅಂದರೆ ಈ ಜಮೀನು ಯಾವ-ರೀತಿ ಸರ್ವೆ-ನಂಬರ್, ಅದಕ್ಕೆ ಇಷ್ಟು ಕ್ಷೇತ್ರ, ಇಷ್ಟು ಎಕರೆ, ಗುಂಟೆ ಎಂದು ಯಾವುದು ಇದೆ, ಆ ರೀತಿ ನಮ್ಮ ಹಳ್ಳಿಗಳಲ್ಲಿ ಈ ಮನೆಗಳ ಒಂದು ನಕ್ಷೆ ತಯಾರು ಮಾಡಿಲ್ಲ. ಸರ್ವೆ ಮಾಡಿಲ್ಲ. ಆ ಕಾರಣ ಆದಷ್ಟು ಬೇಗ ಈ ನಕ್ಷೆಗಳನ್ನು ತಯಾರು ಮಾಡಿ. ಇಲ್ಲದೇ ಹೋದರೆ ಹಳ್ಳಿಗಳಲ್ಲಿ ಜಗಳ ನಡೆಯುತ್ತದೆ, ಖೂನಿ ಆಗುತ್ತದೆ. ಅದನ್ನು ತಪ್ಪಿಸಬೇಕು. ಅದು ತಮಗೆ ದೊಡ್ಡ ಕೆಲಸ ಆಗಬಾರದು. ಆಸ್ತಿ ನಂಬರ್ ಪ್ರಕಾರ ಈ ಒಂದು ಸರ್ವೆ ಮಾಡಿಸಿ ನಕ್ಷೆ ತಯಾರು ಮಾಡಬೇಕು. ಅಂತಹುದಕ್ಕೆ ಅವಕಾಶ ಈ ಕಾನೂನಿನ ಅಡಿಯಲ್ಲಿ ತಾವು ಕಲ್ಪಿಸಿಕೊಡಬೇಕು. ಇದು ಕಂಪಲ್ಸರಿಯಾಗಬೇಕು ಎನ್ನತಕ್ಕದ್ದು ನನ್ನ ವಿಚಾರ.

ಫಲಾನುಭವಿಗಳ ಆಯ್ಕೆ. ನಿಮ್ಮ ಹಿಂದಿನ ಮಂಡಲ್ ಪಂಚಾಯತಿಯವರು ಗ್ರಾಮ ಸಭೆಗಳನ್ನು ಇನ್ನು ನಡೆಸಲಿಲ್ಲ. ಏಕೆಂದರೆ ಒಂದು ನಾಲ್ಕು ಜನಕ್ಕೆ ಎಮ್ಮೆ ಕೊಡಿಸುತ್ತೇವೆಂದರೆ 18 ಜನ ಬಾಯಿ ಮಾಡುತ್ತಿದ್ದರು. ಸಿಕ್ಕಾಪಟ್ಟೆ ಗಲಾಟೆ ಮಾಡುತ್ತಿದ್ದರು, ಕೂಗುತ್ತಿದ್ದರು. ಸಾಧ್ಯವೇ ಇಲ್ಲ. ಯಾವ ಪಂಚಾಯಿತಿ ಸದಸ್ಯ, ಯಾವ ಪಂಚಾಯತಿ ಅಧ್ಯಕ್ಷನೂ ಇದನ್ನು ಮಾಡುವುದಕ್ಕೆ ಸಾಧ್ಯವೇ ಇಲ್ಲ. ಆ ಕಾರಣ ಇಲ್ಲಿ ಫಲಾನುಭವಿಗಳ ಆಯ್ಕೆ ಮಾಡುವುದನ್ನು ಪಂಚಾಯತಿಯವರು ಪಾಲಿಸಿ ಮಾಡಬೇಕು. ಕಲ್ಲಪ್ಪನಿಗೆ ಕೊಡಿ, ಮಲ್ಲಪ್ಪನಿಗೆ ಎಮ್ಮೆ ಕೊಡಿ, ಅವನಿಗೆ ಮನೆ ಕೊಡಿರಿ ಎಂದರೆ ಸಾಧ್ಯ ಇಲ್ಲ. ಪಂಚಾಯತಿ ಒಂದು ಪಾಲಿಸಿ ಮೇಕಿಂಗ್ ಬಾಡಿ ಆಗಬೇಕು. ಇಷ್ಟು ಎಕರೆಗಿಂತ ಕಡಿಮೆ ಇದ್ದವರಿಗೆ ನಾವು ಎಮ್ಮೆ ಕೊಡುತ್ತೇವೆ, ಸಾಲ ಕೊಡುತ್ತೇವೆ. ಇಷ್ಟು ಇನ್‌ಕಂ-ಗಿಂತ ಕೆಳಗಿನವರಿಗೆ ಕೊಡುತ್ತೇವೆ ಎನ್ನುವಂತಹ ಪಾಲಿಸಿ ಮೇಕಿಂಗ್ ಬಾಡಿ ಆಗಬೇಕೇ ಹೊರತಾಗಿ ನಾವು ಹೆಸರು ಇಟ್ಟು ಇಂಥವರಿಗೆ ಎಮ್ಮೆ ಕೊಡುತ್ತೇವೆ. ಇಂಥವರಿಗೆ ಎತ್ತು ಕೊಡುತ್ತೇವೆ, ಇಂತಹವರಿಗೆ ಚಕ್ಕಡಿ ಕೊಡುತ್ತೇವೆಂದರೆ ಅದು ಸಾಧ್ಯವೇ ಇಲ್ಲ. ಇಂದು ಗ್ರಾಮ ಸಭೆ ಮುಖಾಂತರ ಫಲಾನುಭವಿಗಳನ್ನು ಆಯ್ಕೆ ಮಾಡುತ್ತೇವೆ, ಎಂದರೆ ಇದು ಕಷ್ಟ ಸಾಧ್ಯ. ಬಡತನ ಅಂತೂ ಹಳ್ಳಿಯಲ್ಲಿ ಬೇಕಾದಷ್ಟು ಇವೆ. ಎಲ್ಲರಿಗೂ ಕೊಡುವುದಕ್ಕೆ ಸಾಧ್ಯ ಇಲ್ಲ. ಒಂದು ನೂರು ಜನ ಬಡವರಲ್ಲಿ 10 ಜನರಿಗೆ ಚಕ್ಕಡಿ ಕೊಡುತ್ತೇವೆಂದರೆ, 90 ಜನರು ಗಲಾಟೆ ಮಾಡಿ, ಕೂಗಾಟ ಮಾಡಿ ಗ್ರಾಮ ಸಬೆ ನಡೆಯಲು ಬಿಡುವುದಿಲ್ಲ. ಆ ಕಾರಣ ಒಂದು ಪಾಲಿಸಿ ಮೇಕಿಂಗ್ ಬಾಡಿ ಆಗಿ ಇಂತಿಷ್ಟು ವರಮಾನಕ್ಕಿಂತ ಕಡಿಮೆ ಇದ್ದವರಿಗೆ ಮಾತ್ರ ಕೊಡಬೇಕು ಎನ್ನುವಂತಹ ಪಾಲಿಸಿ ಮಾಡಿ. ಅಧಿಕಾರಿಗಳು ಅದನ್ನು ಆಯ್ಕೆ ಮಾಡಿ ಅದನ್ನು ಸರಿಯಾಗಿ ಅವರಿಗೆ ಕೊಡಬೇಕು. ಅದರ ಉಸ್ತುವಾರಿ ತಾವು ಮಾಡಬೇಕು. ನಾವೇನು ಪಾಲಿಸಿ ಮಾಡಿದ್ದೇವೆ, ಅದರ ಪ್ರಕಾರ ಈ ಅಧಿಕಾರಿಗಳು ಕೆಲಸ ಮಾಡಿದ್ದಾರೋ ಇಲ್ಲವೋ ಎನ್ನುವಂಥಾದ್ದನ್ನು ಕಾಲಕಾಲಕ್ಕೆ ನೋಡುವಂಥದ್ದು ಪಂಚಾಯತಿಯ ಅಧ್ಯಕ್ಷರಿಗೆ ಮತ್ತು ಸದಸ್ಯರಿಗೆ ಇದ್ದೇ ಇದೆ. ಅದನ್ನು ಕಾನೂನುಬದ್ಧವಾಗಿ ಮಾಡಿದರೆ ಬಹಳ ಸೂಕ್ತವೆಂಬುದು ನನ್ನ ತಿಳುವಳಿಕೆ. ಅನಂತರ ತಾಲ್ಲೂಕು ಪಂಚಾಯತಿ ಇನ್ನೂ ಸಶಕ್ತವಾಗಬೇಕು. ಈಗ ನೇರವಾಗಿ ಗ್ರಾಮಾಭ್ಯುದಯ ಆಗಬೇಕು. ಗ್ರಾಮಗಳು ಪ್ರಗತಿಯಾಗಬೇಕೆಂದರೆ ಪಂಚಾಯತಿಯಿಂದ ಸಾಧ್ಯವಿಲ್ಲ. 1000, 1200, 1300 ಹಳ್ಳಿಗಳ ಪ್ರತಿನಿಧಿಗಳು ಅಲ್ಲಿ ಬಂದು ಕುಳಿತುಕೊಳ್ಳುವುದಕ್ಕೆ ಸಾಧ್ಯವಿಲ್ಲ, ಪ್ರತಿ ಗ್ರಾಮದಲ್ಲಿ ಏನೇನು ಕೊರತೆಗಳಿವೆಯೆಂದು ತಿಳಿದುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಆ ಕಾರಣದಿಂದ ಜಿಲ್ಲಾ ಪಂಚಾಯತಿಗಿಂತ ತಾಲ್ಲೂಕು ಪಂಚಾಯತಿ ಹೆಚ್ಚು ಶಕ್ತಿಯುತವಾದ ಒಂದು ಘಟಕವಾಗಿರಬೇಕು. ಸುಮಾರು 100 ಹಳ್ಳಿಗಳ 35-40 ಪಂಚಾಯಿತಿಯ ಪ್ರತಿಯೊಬ್ಬ ಅಧ್ಯಕ್ಷರೂ ಅಲ್ಲಿಗೆ ಬಂದು ಕುಳಿತುಕೊಂಡು ತಮ್ಮ ಪಂಚಾಯಿತಿಯ ವ್ಯಾಪ್ತಿಯಲ್ಲಿ ಬರುವಂಥ ಎಲ್ಲಾ ಹಳ್ಳಿಗಳ ಸಮಸ್ಯೆಗಳ ಬಗ್ಗೆ ವಿವರವಾಗಿ ಚರ್ಚೆ ಮಾಡಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಂಥ ಒಂದು ಅವಕಾಶ ಸಿಗುವಂಥ ದೃಷ್ಟಿಯಿಂದ ಮತ್ತು ಪರಿಹಾರ ಮಾಡುವ ದೃಷ್ಟಿಯಿಂದ ಹಣಕಾಸಿನ ಸೌಲಭ್ಯ ಸಿಗುವಂಥ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿಯನ್ನು ಇನ್ನಷ್ಟು ಸಶಕ್ತರಾಗಿ ಮಾಡಬೇಕು. ಆದರೆ, ಜಿಲ್ಲಾ ಪಂಚಾಯತಿ ಏನಿದೆ, ಇದು ಹಣ ಹಂಚುವಂಥಾದ್ದು. ಅಂದರೆ, ಈಗ ಫಂಡ್ ಏನಿದೆ, ಅದನ್ನು ಸರಿಯಾಗಿ ಹಂಚುವಂಥಾದ್ದು, ಪಾಲಿಸಿ ಮಾಡುವಂಥಾದ್ದು, ಯಾವ್ಯಾವ ಹಳ್ಳಿಗಳಲ್ಲಿ ಬಡತನ ಹೆಚ್ಚಾಗಿ ಇದೆ, ಯಾವ್ಯಾವ ಪ್ರದೇಶಗಳಿಗೆ ಹೆಚ್ಚಿನ ಸೌಲಭ್ಯ ಕೊಡಬೇಕೆಂಬುದರ ಬಗ್ಗೆ ಪಾಲಿಸಿ ಮಾಡಿ, ವಿಶೇಷ ವ್ಯವಸ್ಥೆ ಮಾಡಬೇಕೇ ವಿನಹ, ಜಿಲ್ಲಾಪರಿಷತ್‌ನವರೇ ತಮ್ಮ ಹತ್ತಿರ ಎಲ್ಲಾ ಅಧಿಕಾರವನ್ನಿಟ್ಟುಕೊಂಡು ತಾಲ್ಲೂಕು ಪಂಚಾಯಿತಿಗಳು ಹೆಸರಿಗೆ ಮಾತ್ರ ಇರಬೇಕೆನ್ನುವಂಥಾದ್ದು ಮಾಡಿದರೆ ಪ್ರತಿ ಗ್ರಾಮದಲ್ಲಿ ಏನೇನು ಅನಾನುಕೂಲತೆಗಳಿವೆ, ಕೊರತೆಗಳಿವೆ, ಅದನ್ನು ನಿವಾರಣೆ ಮಾಡುವುದಕ್ಕೆ ಸಾಧ್ಯವಿಲ್ಲ.

ಆದಕಾರಣ, ಈ ಒಂದು ಪಂಚಾಯಿತಿ ವಿಧೇಯಕದಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡಿ ಹಳ್ಳಿಗಾಡಿನ ಪ್ರದೇಶಕ್ಕೆ ತಾವು ಹೆಚ್ಚಿನ ಅಧಿಕಾರ ಕೊಟ್ಟು, ಮತ್ತೊಮ್ಮೆ ತಿದ್ದುಪಡಿ ತಂದು ಸದರಿ ವಿಧೇಯಕವನ್ನು ಫಲಪ್ರದವನ್ನಾಗಿ ಮಾಡಬೇಕೆಂದು ತಮ್ಮಲ್ಲಿ ಕೇಳಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀಮತಿ ಮೋಟಮ್ಮ (ಮೂಡಿಗೆರೆ) : ಸನ್ಮಾನ್ಯ ಉಪಾಧ್ಯಕ್ಷರೇ, ಇವೊತ್ತು ಸದನದ ಮುಂದೆ ಏನು ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಮಂತ್ರಿಗಳು ಜಿಲ್ಲಾ ಪರಿಷತ್ತಿನ ವ್ಯವಸ್ಥೆಗೆ ಒಂದು ತಿದ್ದುಪಡಿ ತಂದಿದ್ದಾರೆ, ಅದನ್ನು ನಾನು ಸಂಪೂರ್ಣವಾಗಿ ಸ್ವಾಗತಿಸುತ್ತೇನೆ. ವಿಧೇಯಕಕ್ಕೆ ಕೆಲವಾರು ತಿದ್ದುಪಡಿ ತಂದಿದ್ದರಲ್ಲಿ ಬಹಳ ಮೆಚ್ಚುವಂಥಾದ್ದೇನೆಂದರೆ ಈ ಒಂದು ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಯಾವುದೇ ಒಂದು ಪಕ್ಷದ ಸಿಂಬಲ್ ಮೇಲೆ ಚುನಾವಣೆ ನಡೆಸದಿರತಕ್ಕಂಥ ವಿಚಾರ ತಂದಿರುವುದು ಎಲ್ಲರೂ ಮೆಚ್ಚುವಂಥ ವಿಷಯವಾಗಿದೆ. ಏಕೆಂದರೆ, ಗ್ರಾಮ ಪಂಚಾಯತಿ, ಮಂಡಲ ಪಂಚಾಯಿತಿ ಮತ್ತು ಜಿಲ್ಲಾ ಪರಿಷತ್‌ನ ಚುನಾವಣೆ ಆದನಂತರ, ಸಾಕಷ್ಟು ಘಟನೆಗಳಾಗಿರುವುದನ್ನು ನಾವು ನೋಡಿದ್ದೇವೆ. ಒಬ್ಬ ಚುನಾವಣೆಗೆ ನಿಂತು ಸೋತರೆ ಹೊಡೆದಾಡಿ ಕೊಲೆ ಮಾಡಿದ್ದನ್ನೂ ಸಹ ನಾವು ಕಂಡಿದ್ದೇವೆ. ಇಂತಹ ಅನಾಹುತಗಳನ್ನು ತಪ್ಪಿಸುವುದರ ಜೊತೆಗೆ ಈ ಚುನಾವಣೆಯಿಂದ ಹಳ್ಳಿಯಲ್ಲಿದ್ದ ಒಂದು ಸುವ್ಯವಸ್ಥೆ ಹಾಳಾಗುವುದನ್ನು ಇದರಿಂದ ತಪ್ಪಿಸುವುದಕ್ಕೆ ಸಾಧ್ಯವಿದೆ. ಎರಡಯದಾಗಿ, ಬಹಳ ಮುಖ್ಯವಾದುದೇನೆಂದರೆ, ಗ್ರಾಮ ಪಂಚಾಯತಿ ಅಧ್ಯಕ್ಷರ ಚುನಾವಣೆ. ಈ ಸಂದರ್ಭದಲ್ಲಿ ನಾನು ಈ ಬಗ್ಗೆ ಸಲಹೆ ಕೊಡುವುದೇನೆಂದರೆ, ನೇರವಾದ ಚುನಾವಣೆಯಾಗುವುದೇ ಬಹಳ ಒಳ್ಳೆಯದೆನ್ನುವ ಮಾತನ್ನು ಹೇಳುತ್ತೇನೆ. ಏಕೆಂದರೆ, ನೇರವಾದ ಚುನಾವಣೆ ಜನರಿಂದ ಆಗದೇ ಇದ್ದರೆ ಚುನಾವಣೆಯಲ್ಲಿ ಗೆದ್ದಂಥ ವ್ಯಕ್ತಿಗಳು ಬಹಳ ಪ್ರಬಲರಾಗಿದ್ದರೆ, ಆಯ್ಕೆಯಾಗಿ ಬಂದಂಥ ಸದಸ್ಯರನ್ನು ಹೊತ್ತುಕೊಂಡು ಹೋಗುವುದು ಮತ್ತು ಹಣದ ಪ್ರಭಾವ ಬೀರಿ ಅವರ ಮನವೊಲಿಸಿಕೊಂಡು ತಾವು ಅಧ್ಯಕ್ಷರಾಗುವುದಕ್ಕೆ ಪ್ರಯತ್ನ ನಡೆಯುತ್ತದೆ. ಇದರಿಂದ ಯಾರಿಗೆ ನಿಜವಾಗಿ ಆ ಒಂದು ಅಧ್ಯಕ್ಷ ಸ್ಥಾನ ಗಳಿಸಿ ಒಳ್ಳೆಯ ಕೆಲಸ ಮಾಡಬೇಕೆನ್ನುವ ಮನಸ್ಸಿದ್ದರೂ ಸಹ ಆತನಿಗೆ ಹಣದ ಮತ್ತು ಬೇರೆ ರೀತಿಯ ಶಕ್ತಿ ಇಲ್ಲದ್ದರಿಂದ, ಈ ಒಂದು ಸ್ಥಾನಕ್ಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ. ನೇರವಾದ ಚುನಾವಣೆಯೆಂದರೆ, ಜನರು ಇವೊತ್ತು ಬಹಳ ಬುದ್ಧಿವಂತರಿದ್ದಾರೆ. ಯಾವುದೇ ವ್ಯಕ್ತಿಯನ್ನು ನಾವು ಅಧ್ಯಕ್ಷ ಗಾದಿಗೆ ಆಯ್ಕೆ ಮಾಡಿದರೆ ಗ್ರಾಮ ಪಂಚಾಯಿತಿಯನ್ನು ಸಮರ್ಥವಾಗಿ ನಿಭಾಯಿಸಿ ನಡೆಸಿಕೊಂಡು ಹೋಗಬಲ್ಲರು ಮತ್ತು ಒಳ್ಳೆಯ ಆಡಳಿತವನ್ನು ಕೊಡಬಲ್ಲರು, ಎನ್ನುವ ಒಂದು ತೀರ್ಮಾನವನ್ನು ಜನರೇ ಮಾಡುವುದಕ್ಕೆ ಒಂದು ಒಳ್ಳೆಯ ಅವಕಾಶವಾಗುತ್ತದೆ. ಇದನ್ನು ಇಲ್ಲಿರುವ ಮಾನ್ಯ ಸದಸ್ಯರುಗಳೆಲ್ಲರೂ ಒಪ್ಪಿಕೊಳ್ಳುತ್ತಾರೆಂದು ನಾನು ತಿಳಿದುಕೊಂಡಿದ್ದೇನೆ. ಗ್ರಾಮ ಪಂಚಾಯಿತಿ ಅಧ್ಯಕ್ಷರನ್ನು ಆಯ್ಕೆ ಮಾಡಲು ನೇರವಾದ ಚುನಾವಣೆಯೇ ಆಗಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಮೂರನೆಯದಾಗಿ ಗ್ರಾಮ ಪಂಚಾಯಿತಿಯ ಆಡಳಿತ ವ್ಯವಸ್ಥೆಯಲ್ಲಿ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು ಇಬ್ಬರೂ ಸೇರಿ ದುರಾಡಳಿತ ನಡೆಸಿದರೆಂದು ಹೇಳಿದಾಗ ಅವರನ್ನು ಹೇಗೆ ಅಧಿಕಾರದಿಂದ ವಜಮಾಡಬೇಕು ಎನ್ನತಕ್ಕದ್ದು ಬಹಳ ಮುಖ್ಯವಾದ ಪ್ರಶ್ನೆ. ನಿನ್ನೆ ಪ್ರೊ. ನಂಜುಂಡಸ್ವಾಮಿಯವರೂ ಸಹ ಮಾತನಾಡುವಾಗ ಇದೇ ಮಾತನ್ನು ಹೇಳುತ್ತಿದ್ದರು. ಇದರ ಬಗ್ಗೆ ವಿಚಾರ ಮಾಡಬೇಕು. ಏಕೆಂದರೆ ಇವತ್ತು ಚೀಫ್ ಸೆಕ್ರೆಟರಿಯವರಿಗೆ ಇವರನ್ನು ವಜಾಮಾಡತಕ್ಕ ಅಧಿಕಾರವನ್ನು ಕೊಡುವುದು ಸರಿಯಲ್ಲವೆಂದು ಅವರು ಹೇಳಿದರು, ನಾನೂ ಕೂಡ ಅದನ್ನು ಒಪ್ಪಿಕೊಳ್ಳುತ್ತೇನೆ. ಏಕೆಂದರೆ ಅಲ್ಲಿ ಚುನಾಯಿತರಾದ ಸದಸ್ಯರುಗಳು ಇರುತ್ತಾರೆ.

ಆದ್ದರಿಂದ ಮೂರನೆಯ ಎರಡರಷ್ಟು ಬಹುಮತವನ್ನು ತಂದು ಅವರನ್ನು ಅಧಿಕಾರದಿಂದ ಇಳಿಸತಕ್ಕ ವ್ಯವಸ್ಥೆ ಆಗಬೇಕು. ಆದರೆ ಇದು ಅಲ್ಲಿನ ಕಾರ್ಯದರ್ಶಿಗಳಿಗೆ ಅನ್ವಯಿಸುತ್ತದೆಯೋ ಅಥವಾ ಇಲ್ಲವೋ ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ ಮುಖ್ಯಕಾರ್ಯದರ್ಶಿಯವರೇ ಕಾರ್ಯದರ್ಶಿಗಳನ್ನು ವಜಾ ಮಾಡಬೇಕಾಗುತ್ತದೆ.

ಪ್ರೊ. ಎಂ. ಡಿ. ನಂಜುಂಡಸ್ವಾಮಿ : ಮುಖ್ಯಕಾರ್ಯದರ್ಶಿಗಳಲ್ಲ ; ಕಮಿಷನ್‌ರವರು.

ಶ್ರೀಮತಿ ಮೋಟಮ್ಮ : ಏಕೆಂದರೆ ಎಷ್ಟೋ ಮಂಡಲ ಪಂಚಾಯಿತಿಗಳಲ್ಲಿ ಲಕ್ಷಾಂತರ ರೂಪಾಯಿಗಳನ್ನು ಕೊಳ್ಳೆ ಹೊಡೆದು ಅಲ್ಲಿನ ಸರಿಯಾದ ಆಡಳಿತ ವ್ಯವಸ್ಥೆಯಲ್ಲಿ ನಡೆಯುತ್ತಿಲ್ಲ. ನಮ್ಮ ಜಿಲ್ಲಾ ಪರಿಷತ್‌ನವರಿಗೆ ಅವರನ್ನು ಅಮಾನತ್ತುಗೊಳಿಸತಕ್ಕ ಅಧಿಕಾರ ಬರಲಿಲ್ಲ. ಬೇರೆ ಬೇರೆ ಜಿಲ್ಲಾಪರಿಷತ್‌ಗಳು ಮತ್ತು ಮಂಡಲ ಪಂಚಾಯಿತಿಗಳಲ್ಲಿ ಅವ್ಯವಹಾರವಾದಾಗ ಆ ಜಿಲ್ಲಾಪರಿಷತ್ ಮತ್ತು ಮಂಡಲ ಪಂಚಾಯಿತಿಯ ಅಧಿಕಾರಿಗಳನ್ನು ಅಮಾನತ್ತುಗೊಳಿಸತಕ್ಕ ಅಧಿಕಾರ ಯಾವಾಗ ನಮಗೆ ಇರಲಿಲ್ಲ, ಆಗ ಬಹಳ ಅನಾಹುತವಾಯಿತು. ಆ ರೀತಿ ಆಗಬಾರದು. ಯಾರೇ ತಪ್ಪು ಮಾಡಿದರೂ ಸಹ ಚುನಾಯಿತ ಸದಸ್ಯರುಗಳ ಸಮಿತಿ ಏನು ಇರುತ್ತದೆಯೋ ಮತ್ತು ಅದರ ಅಧ್ಯಕ್ಷರು ಯಾರು ಇರುತ್ತಾರೋ ಅವರನ್ನು ಅಧಿಕಾರದಿಂದ ಇಳಿಸಲು ಮೂರನೆಯ ಎರಡು ಬಹುಮತದ ವ್ಯವಸ್ಥೆ ಮಾಡಿದರೆ ಬಹಳ ಒಳ್ಳೆಯದು ಎಂದು ನನಗನ್ನಿಸುತ್ತದೆ. ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ ಈಗ ಸಣ್ಣಸಣ್ಣ ಗ್ರಾಮಪಂಚಾಯತಿಗಳನ್ನು ಮಾಡುವುದರಿಂದ ಬಹಳ ಚೆನ್ನಾಗಿ ಗ್ರಾಮಗಳ ಸಮಸ್ಯೆಯನ್ನು ಅರ್ಥಮಾಡಿಕೊಂಡು ಕೆಲಸ ಮಾಡಲು ಅನುಕೂಲವಾಗುತ್ತದೆ, ಜೊತೆಗೆ ಗ್ರಾಮಪಂಚಾಯಿತಿಯ ಸಮಸ್ಯೆಗಳಾದ ಕುಡಿಯುವ ನೀರಿನ ಬಿಲ್ಲನ್ನು ಕಟ್ಟುವುದಾಗಲಿ, ವಿದ್ಯುತ್ ಬಿಲ್ಲನ್ನು ಕಟ್ಟುವುದಾಗಲಿ ಇದು ಬಹಳ ಹೊರೆ ಆಗಿದೆ, ಇದನ್ನು ತಪ್ಪಿಸಲು ಯಾವ ರೀತಿಯಲ್ಲಿ ವ್ಯವಸ್ಥೆ ಮಾಡುತ್ತೀರಿ ಎನ್ನತಕ್ಕದ್ದು ಬಹಳ ಮುಖ್ಯವಾದ ಅಂಶ. ಇವೆರಡು ಬಹಳ ಹೊರೆ ಆಗಿದೆ. ನಾನು ಬಹಳ ಹಿಂದಿನಿಂದಲೂ ಸಹ ಇದನ್ನು ಹೇಳಿಕೊಂಡು ಬಂದಿದ್ದೇನೆ. ಈ ಮಂಡಲ ಪಂಚಾಯಿತಿಯಲ್ಲಿ ಯಾರು ನೌಕರರು ಇರುತ್ತಾರೆ ಅವರಿಗೆ ಸಂಬಳವನ್ನು ಕೊಡುವುದಕ್ಕೇ ಸಾಧ್ಯವಾಗುತ್ತಿಲ್ಲ. ಜವಹರ್‌ರೋಜ್‌ಗಾರ್‌ನಿಂದ ಹಣವನ್ನು ಒದಗಿಸಲಿ ಅಥವಾ ಮಂಡಲ ಪಂಚಾಯಿತಿಯ ಆದಾಯವಿರಲಿ, ಅದಿದ್ದರೂ ಸಹ ನೀರಿನ ಬಿಲ್ಲನ್ನು ಕಟ್ಟುವುದು ಮತ್ತು ವಿದ್ಯುತ್ ಬಿಲ್ಲನ್ನು ಕಟ್ಟುವುದು ಬಹಳ ದೊಡ್ಡ ಹೊರೆಯಾಗುತ್ತದೆ. ಆದ್ದರಿಂದ ಸರ್ಕಾರ ಇದರಲ್ಲಿ ಅರ್ಧ ಭಾಗವನ್ನು ವಹಿಸಿಕೊಂಡು ಉಳಿದ ಅರ್ಧ ಭಾಗವನ್ನು ಮಂಡಲ ಪಂಚಾಯಿತಿ ಭರಿಸುವಂತೆ ಮಾಡಿಕೊಟ್ಟರೆ ಒಳ್ಳೆಯದು ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇದರ ಜೊತೆಗೆ ಇನ್ನೊಂದು ಬಹಳ ಮುಖ್ಯವಾದ ವಿಚಾರವೇನೆಂದರೆ; ಮಂಡಲ ಪಂಚಾಯತಿಯನ್ನು ಮಾಡಿದಾಗ ಇಂಟ್ರೀಮ್ ಮಂಡಲಗಳೆಂದು ಕೆಲವು ಮುನಿಸಿಪಾಲಿಟಿಯನ್ನು ಮಾಡಿದರು, 10 ಸಾವಿರ ಜನಸಂಖ್ಯೆಗೆ ಮಧ್ಯ ಕಾಲಿಕ ಮಂಡಲಗಳೆಂದು ಮಾಡಿದರು, ಇದರಲ್ಲಿ ನೌಕರರ ವರ್ಗ ಜಾಸ್ತಿ ಇದೆ, ಈಗ ಮಧ್ಯಕಾಲಿಕ ಮಂಡಲ ಪಂಚಾಯತಿಗಳ ತೊಂದರೆ ಏನಾಗಿದೆ ಎಂದರೆ, ಇವರಿಗೆ ಬರತಕ್ಕ ಹಣದಲ್ಲಿ ನೌಕರರಿಗೆ ಸಂಬಳವನ್ನು ಕೊಡಲು ಆಗುತ್ತಿರಲಿಲ್ಲ. ಉದಾಹರಣೆಗೆ, ನಮ್ಮ ಮೂಡಿಗೆರೆಯು ಮಧ್ಯ ಕಾಲಿಕ ಮಂಡಲ ಪಂಚಾಯಿತಿ ಆಗಿದೆ, ಅದು ಪುನಃ ಗ್ರಾಮ ಪಂಚಾಯಿತಿ ಆಗಬೇಕಾದರೆ, ಐದು ಸಾವಿರ ಅಂತ ಹೇಳಿದರೆ, ಎರಡು ಗ್ರಾಮ ಪಂಚಾಯಿತಿಯನ್ನು ಮಾಡಬೇಕಾಗುತ್ತದೆ, ಆದರೆ ಇದನ್ನು ಡಿವೈಡ್ ಮಾಡುವುದಕ್ಕೆ ಬರುವುದಿಲ್ಲ ಅಥವಾ ಮುನಿಸಿಪಾಲಿಟಿಯನ್ನಾಗಿ ಮಾಡಲು ಆಗುವುದಿಲ್ಲ. ಏಕೆಂದರೆ ಮುನಿಸಿಪಾಲಿಟಿಯನ್ನಾಗಿ ಮಾಡುವುದಕ್ಕೆ ಜನಸಂಖ್ಯೆ ಕಡಿಮೆ ಇದೆ, ಮಲೆನಾಡಿಗೆ ಮಿನಿಮಮ್ ಜನಸಂಖ್ಯೆಯನ್ನು ನಿಗಧಿ ಮಾಡುತ್ತೇವೆ ಎನ್ನತಕ್ಕ ಮಾತನ್ನು ಗ್ರಾಮಾಭಿವೃದ್ಧಿ ಸಚಿವರು ಹೇಳುತ್ತಿದ್ದರು, ಈ ಮಧ್ಯಕಾಲಿಕ ಮಂಡಲ ಪಂಚಾಯಿತಿಯಲ್ಲಿ

ಕೆಲವಾರು ಪಂಚಾಯಿತಿಗಳನ್ನು 1991ರ ಸೆನ್ಸಸ್ ಪ್ರಕಾರ ಮುನಿಸಿಪಾಲಿಟಿಯನ್ನಾಗಿ ಮಾಡಲು ಶಿಫಾರಸ್ಸು ಆಗಿದೆ. ಅದು ಫೈನಾನ್ಸ್‌ಗೆ ಹೋಗಿದೆ ಎನ್ನತಕ್ಕ ಮಾತನ್ನು ಮಾನ್ಯ ಮಂತ್ರಿಗಳಾದ ಚೌಡರೆಡ್ಡಿಯವರು ಹೇಳುತ್ತಿದ್ದರು. ಇದರಲ್ಲಿ ಕೆಲವು ಮಧ್ಯಕಾಲಿಕ ಮಂಡಲ ಪಂಚಾಯಿತಿಗಳು ಬಿಟ್ಟು ಹೋಗಿವೆ. ಉದಾಹರಣೆಗೆ ಹೇಳುವುದಾದರೆ, ನಮ್ಮ ಮೂಡಿಗೆರೆ ಮಂಡಲ ಪಂಚಾಯಿತಿ ಮತ್ತು ಶ್ರೀಮತಿ ಸುಮಾ ವಸಂತ ಅವರ ಕ್ಷೇತ್ರದಲ್ಲಿ ಬರುವ ಮಧ್ಯಕಾಲಿಕ ಮಂಡಲ ಪಂಚಾಯಿಗಳು. ಇವು ಗ್ರಾಮ ಪಂಚಾಯಿತಿಗಳಾಗಿ ಉಳಿಯುವುದಕ್ಕೆ ಜಾಸ್ತಿ ಜನಸಂಖ್ಯೆಯಾಗುತ್ತದೆ. ಮುನಿಸಿಪಾಲಿಟಿಯಾಗಿ ಆಗುವುದಕ್ಕೆ ಕಡಿಮೆ ಜನಸಂಖ್ಯೆಯಾಗುತ್ತದೆ. ಇಂಥ ಮಧ್ಯ ಕಾಲಿಕ ಮಂಡಲ ಪಂಚಾಯಿತಿಗಳನ್ನು ನೀವು ಏನು ಮಾಡುತ್ತೀರಿ? ಇದರ ಬಗ್ಗೆ ಮಾನ್ಯ ಮಂತ್ರಿಗಳು ಒಂದು ಕ್ಲಾರಿಫಿಕೇಷನ್ ಹೇಳಬೇಕು. ಇನ್ನು ಮಹಿಳೆಯವರಿಗೆ 30 ಪರ್ಸೆಂಟನ್ನು ಅಧ್ಯಕ್ಷಸ್ಥಾನಕ್ಕೆ ಮತ್ತು ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಬೋರ್ಡ್‌ಗೆ, ಮೀನಸಲಾತಿಯನ್ನು ಕೊಡಲಿಕ್ಕೆ ಅವಕಾಶ ಕಲ್ಪಿಸಿಕೊಟ್ಟಿದ್ದೀರಿ . ಮತ್ತು ಹರಿಜನ ಗಿರಿಜನ ಹಾಗೂ ಬ್ಯಾಕ್‌ವರ್ಡ್ ಕಮ್ಯುನಿಟಿಯವರಿಗೆ ಮಾಡಿಕೊಟ್ಟಿರುವ ಮೀಸಲಾತಿ ಬಗ್ಗೆ ಸ್ವಾಗತಿಸಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ. ಬಸವರಾಜ ಪಾಟೀಲ್ ಅಟ್ಟೂರು (ಬಸವಕಲ್ಯಾಣ) : ಮಾನ್ಯ ಉಪಾಧ್ಯಕ್ಷರೇ, 1993ನೇ ಸಾಲಿನ ಕರ್ನಾಟಕ ಮಂಡಲ ಪಂಚಾಯಿತಿ ತಿದ್ದುಪಡಿ ವಿಧೇಯಕವನ್ನು ವಿರೋಧಿಸಿ ಕೆಲವು ವಿಚಾರಗಳನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ ಕಳೆದ 4-5 ವರ್ಷಗಳ ಹಿಂದೆ ನಮ್ಮ ಜನತಾ ಸರ್ಕಾರ ಮಾಡಿದ್ದ ಕೆಲವು ಕಾನೂನುಗಳನ್ನು ತಿದ್ದುಪಡಿ ಮಾಡಿ ಹೊಸ ವಿಧೇಯಕವನ್ನು ತರುವುದಕ್ಕೆ ಇಂದಿನ ಸರ್ಕಾರದವರು ಆಸಕ್ತಿಯನ್ನು ವಹಿಸಿದ್ದಾರೆ. ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಹೇಳಬೇಕಾಗಿದೆ. ಮೂಲಭೂತವಾಗಿ ಒಂದು ದೊಡ್ಡ ಪ್ರಶ್ನೆ ನಮ್ಮ ಮುಂದಿದೆ. ಗ್ರಾಮಾಂತರ ಪ್ರದೇಶ ಅಭಿವೃದ್ಧಿಯಾಗಬೇಕಾದರೆ, ಮಹಾತ್ಮಾ ಗಾಂಧೀಜಿಯವರ ಕನಸು ನನಸಾಗಬೇಕಾದರೆ ಗ್ರಾಮಾಂತರ ಪ್ರದೇಶದ ಅಭಿವೃದ್ಧಿ ಆಗಬೇಕು ಈ ದಿಸೆಯಲ್ಲಿ, ಈ ಕಾನೂನು ಪರಿಣಾಮಕಾರಿಯಾಗಿ ಜಾರಿಗೆ ಬರಬೇಕಾದರೆ ಕೆಲವು ತಿದ್ದುಪಡಿಗಳನ್ನು, ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಹಿಂದೆ ನಾನು ಈ ಶಾಸನಾಸಭಾ ಸದಸ್ಯನಾಗಿ ಹೈದರಾಬಾದ್‌ನಲ್ಲಿ ನಡೆದಂಥ ಪಂಚಾಯಿತ್‌ರಾಜ್ ಮೀಟಿಂಗ್‌ಗೆ ಹೋಗಿದ್ದೆ. ಅಲ್ಲಿಗೆ ಎಲ್ಲಾ ರಾಜ್ಯಗಳಿಂದಲೂ ಶಾಸಕರು ಬಂದಿದ್ದರು. ಆ ಸಭೆಯಲ್ಲಿ ಪ್ರಸ್ತಾಪವಾದ ರೀತಿಯಲ್ಲಿ ಎಲ್ಲಾ ರಾಜ್ಯಗಳಿಗಿಂತಲೂ ಮಾದರಿಯಾದ ಪಂಚಾಯತ್‌ರಾಜ್ ಎಂದರೆ ನಮ್ಮ ಕರ್ನಾಟಕ ರಾಜ್ಯ ಎಂದು. ನಿಮ್ಮ ಕರ್ನಾಟಕ ರಾಜ್ಯದ ಮಂಡಲ ಪಂಚಾಯತಿ ಕಾನೂನು ಏನಿದೆ ಅದು ಬಹಳ ಪರಿಪಕ್ವವಾದ ಕಾನೂನು, ಇದು ಅತ್ಯಂತ ಚೆನ್ನಾಗಿದೆ ಎಂದು ಅಲ್ಲಿನ ಪ್ರಸ್ತಾಪ ಮಾಡಿದರು. ಒಂದು ಮಾತನ್ನು ನಾನು ಮಾನ್ಯ ಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಈ ವಿಧೇಯಕವನ್ನು ಇನ್ನೂ ಸರಿಯಾದ ರೀತಿಯಲ್ಲಿ ವಿಚಾರ ಮಾಡಬೇಕು. ಈ ದಿಸೆಯಲ್ಲಿ ನಾನು ಕೆಲವು ವಿಚಾರಗಳನ್ನು ಹೇಳಬಯಸುತ್ತೇನೆ. ತಾವು ಇವತ್ತು ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾಪಂಚಾಯಿತಿ ಎಂದು ಮೂರು ಹಂತದಲ್ಲಿ ತರುತ್ತಿದ್ದೀರಿ. ನನ್ನ ಅಭಿಪ್ರಾಯದಲ್ಲಿ ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ಇದ್ದರೆ ಒಳ್ಳೆಯದೆಂದು ಹೇಳಬಯಸುತ್ತೇನೆ. ತಾಲ್ಲೂಕು ಪಂಚಾಯತಿ ಎಂದರೆ ಇದು ಅರ್ಥಪೂರ್ಣವಾಗುವುದಿಲ್ಲ. ಇದಕ್ಕೆ ಬದಲು ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ಕರೆದರೆ ಆಗ ಇದು ಅರ್ಥಪೂರ್ಣ ವಾಗುತ್ತದೆಂದು ನಾನು ಹೇಳಬಯಸುತ್ತೇನೆ. ಅದೇ ರೀತಿ ಜಿಲ್ಲಾ ಪಂಚಾಯತ್ ಎಂಬುವುದಕ್ಕೆ ಬದಲು ಜಿಲ್ಲಾ ಪರಿಷತ್ತು ಎಂದು ಹೆಸರಿಟ್ಟರೆ ಸೂಕ್ತವಾಗುತ್ತದೆಂದು ತಿಳಿಸಿ ಮಾನ್ಯ ಮಂತ್ರಿಗಳು ಮುಂದೆ ಈ ಮಸೂದೆಯ ಬಗ್ಗೆ ಪರಿಶೀಲನೆ ಮಾಡುವಾಗ ನನ್ನ ಸಲಹೆಗಳನ್ನು ಗಮನಕ್ಕೆ ತೆಗೆದುಕೊಳ್ಳಬೇಕೆಂದು ಹೇಳಬಯಸುತ್ತೇನೆ. ಮಹಾರಾಷ್ಟ್ರ ಮತ್ತು ಹೈದರಾಬಾದ್‌ಗೆ ನಾವು

ಹೋದಂಥ ಸಂಧರ್ಭದಲ್ಲಿ ನೋಡಿದಾಗ ಎಲ್ಲಾ ಕಡೆಯಲ್ಲೂ ಜಿಲ್ಲಾ ಪರಿಷತ್ತು ಎಂದು ಹೆಸರು ಇವೆ. ಅದೇ ರೀತಿ ನೀವೂ ಕೂಡ ಜಿಲ್ಲಾ ಪರಿಷತ್ತು ಎಂದು ಇಟ್ಟಿದ್ದೀರಿ. ಅದೇ ರೀತಿ ತಾಲ್ಲೂಕು ಪಂಚಾಯಿತಿಗೂ ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ಹೆಸರಿಟ್ಟರೆ ಒಳ್ಳೆಯದು. ವ್ಯಾಕರಣರೀತಿಯಲ್ಲಿ ಒಳ್ಳೆಯ ಶಬ್ದ ಬರುವುದಕ್ಕೆ ಸಾಧ್ಯವಾಗುತ್ತದೆ. ಶಬ್ದದಲ್ಲೂ ಕೂಡ ಒಂದು ಶಕ್ತಿ ಇರುತ್ತದೆ. ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯತಿ, ಗ್ರಾಮ ಪಂಚಾಯತಿ ಎಂದು ಹೆಸರಿಟ್ಟಿದ್ದೀರಿ. ನನ್ನ ಸಲಹೆ ಎಂದರೆ ಗ್ರಾಮಪಂಚಾಯಿತಿ, ತಾಲ್ಲೂಕು ಪಂಚಾಯತಿ ಸಮಿತಿ ಮತ್ತು ಜಿಲ್ಲಾ ಪರಿಷತ್ತು ಎಂದು ಮಾಡಬೇಕೆಂದು ಹೇಳಬಯಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ರಾಜ್ಯಾಂಗ ತಿದ್ದುಪಡಿಯಲ್ಲಿ 3 ಹಂತದಲ್ಲಿ ಪಂಚಾಯತ್ ಎಂಬ ಶಬ್ದವನ್ನು ಉಪಯೋಗಿಸಿದ್ದಾರೆ. ಇಡೀ ದೇಶದಲ್ಲಿ ಒಂದು ಯೂನಿಫಾರ್ಮಿಟಿ ಬರಬೇಕೆಂಬ ವಿಚಾರ ಇದೆ. ಆದುದರಿಂದ ಎಲ್ಲಾ ರಾಜ್ಯಗಳಲ್ಲೂ ಪಂಚಾಯಿತ್ ಎಂಬ ಹೆಸರನ್ನು ಉಳಿಸಿ ಪ್ರಾರಂಭದಲ್ಲಿರತಕ್ಕ ಪದ ಆಯಾಯ ಭಾಷೆಗೆ ಸಂಬಂಧಪಟ್ಟಂತೆ ಇದ್ದರೆ ಒಳ್ಳೆಯದು ಎಂದು ತಿಳಿದಿದ್ದೇವೆ. ಏಕೆಂದರೆ ನಾವು ಗ್ರಾಮ ಎಂದು ಕರೆಯುತ್ತೇವೆ, ಬೇರೆ ರಾಜ್ಯದಲ್ಲಿ ಗ್ರಾಮ ಎಂಬುದನ್ನು ಅವರ ಭಾಷೆಯಲ್ಲಿ ಇಟ್ಟುಕೊಳ್ಳಬಹುದು. ಆದರೆ 2ನೇ ಪದವಾದ ಪಂಚಾಯಿತ್ ಎಂಬುದನ್ನು ಇಡೀ ದೇಶದಲ್ಲಿ ಕಾಮನ್ ಆಗಿಟ್ಟು ಮೊದಲನೆಯ ಪದ ಆಯಾಯಾ ರಾಜ್ಯದ ಭಾಷೆಗೆ ಸಂಬಂಧಪಟ್ಟಂತೆ ಇದ್ದರೆ ಒಳ್ಳೆಯದೆಂಬ ಅಭಿಪ್ರಾಯ ಇದೆ. ಅದರ ಪ್ರಕಾರ ನಾವು ಇಲ್ಲಿ ಮಾಡಿದ್ದೇವೆ. ಆದರೆ ಇದರ ಬಗ್ಗೆ ಹಠ ಮಾಡಿ ಬದಲಾವಣೆ ಮಾಡಬೇಕೆಂಬ ಉದ್ದೇಶ ನಮಗಿಲ್ಲ.

ಶ್ರೀ ಬಸವರಾಜ ಪಾಟೀಲ್ (ಅಟ್ಟೂರ್) : ಮಾನ್ಯ ಅಧ್ಯಕ್ಷರೇ, ಈ ಒಂದು ಸಂದರ್ಭದಲ್ಲಿ ಹೊಸದಾಗಿ ಈ ಒಂದು ಕಾನೂನನ್ನು ತರುತ್ತಾ ಇದ್ದೀರಿ. ಹೊಸದಾಗಿ ಒಂದು ಶಾಸನವನ್ನು ನಮ್ಮ ರಾಜ್ಯದ ಜನತೆಗೆ ಕೊಡತಕ್ಕಂಥ ಸಂದರ್ಭದಲ್ಲಿ ಇದರ ಬಗ್ಗೆ ಸರಿಯಾದಂಥ ರೀತಿಯಲ್ಲಿ ಚರ್ಚೆಯ ರೂಪಕ್ಕೆ ತೆಗೆದುಕೊಂಡು ಉತ್ತಮವಾದ ವಿಚಾರಗಳನ್ನು ಅಳವಡಿಸಿಕೊಂಡು ಮಾಡಿದರೆ ಒಳ್ಳೆಯದಾಗಬಹುದು. ಏತಕ್ಕೆಂದರೆ, ಹಿಂದೆ ನಮ್ಮ ಜನತಾ ಸರ್ಕಾರದಲ್ಲಿ ಜಿಲ್ಲಾಪರಿಷತ್ ಮತ್ತು ಮಂಡಲ್‌ಪಂಚಾಯತ್ ವಿಧೇಯಕವನ್ನು ತಂದರು. ಇದಾದ ಮೇಲೆ ತಮ್ಮ ಸರ್ಕಾರ ಬಂದಮೇಲೆ ಇದನ್ನು ಬದಲಾವಣೆ ಮಾಡುತ್ತಿದ್ದೀರಿ. ಪದೇ ಪದೇ ಬದಲಾವಣೆ ಮಾಡುವುದರಿಂದ ಜನರಿಗೆ ಹೆಚ್ಚಿನ ಸಮಸ್ಯೆ, ತೊಂದರೆಯಾಗಬಹುದು. ಆ ದೃಷ್ಟಿಯಿಂದ ತಾವು ಮಾಡುವಂಥ ವಿಧೇಯಕ ಏನಿದೆ ಅದನ್ನು ಸರಿಯಾದ ರೀತಿಯಲ್ಲಿ ವಿಚಾರವಿನಿಮಯ ಮಾಡಿಕೊಂಡು ತಾವು ಇದಕ್ಕೆ ಮಾಡಿದರೆ ಒಳ್ಳೆಯದಾಗಬಹುದೆಂದು ಹೇಳಬಯಸುತ್ತಿದ್ದೇನೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಇದಕ್ಕೆ ಒಂದು ಕಮಿಟಿಯನ್ನು ಮಾಡಿಕೊಂಡು ಪಶ್ಚಿಮಬಂಗಾಳ, ಗುಜರಾತ್ ಮತ್ತು ಮಹಾರಾಷ್ಟ್ರ ಬೇರೆ ಬೇರೆ ರಾಜ್ಯಗಳಿಗೆಲ್ಲಾ ಪ್ರವಾಸ ಮಾಡಿಕೊಂಡು ಆಯಾ ರಾಜ್ಯದಲ್ಲಿರತಕ್ಕಂಥ ಗ್ರಾಮಪಂಚಾತ್‌ಗಳ ರಚನೆ ಯಾವ ರೀತಿ ಇದೆ, ಜಿಲ್ಲಾ ಪರಿಷತ್ತಿನ ರಚನೆ ಯಾವ ರೀತಿ ಇದೆ, ಗ್ರಾಮ ಪಂಚಾತ್‌ಗಳ ರಚನೆ ಯಾವ ರೀತಿ ಇದೆ ಎನ್ನುಮದರ ಬಗ್ಗೆ ಸಂಪೂರ್ಣವಾದ ಒಂದು ವಿಚಾರ ಮಂಡನೆಯಾದ ಮೇಲೆ ನಾವು ಎಲ್ಲಾ ಪಕ್ಷಗಳ ಸಹಕಾರದೊಂದಿಗೆ ವಿರೋಧ ಪಕ್ಷಗಳು ಮತ್ತು ಅಧಿಕಾರ ವಿರೋಧ ಪಕ್ಷಗಳ ಸಹಕಾರದೊಂದಿಗೆ ಹಿಂದೆ ಇದ್ದಂಥ ಸರ್ಕಾರ ಶ್ರೀವಾನ್ ನಜೀರ್‌ಸಾಹೇಬರು ಒಂದು ವಿಧೇಯಕವನ್ನು ಮಂಡಿಸಿದರು. ಈ ದೃಷ್ಟಿಯಿಂದ ನಾನು ಇಷ್ಟು ಹೇಳಲಿಕ್ಕೆ ಬಯಸುತ್ತಿದ್ದೇನೆ. ಒಟ್ಟಿನಲ್ಲಿ ತಾವು ಏನು ಕಾನೂನನ್ನು ತರುತ್ತಿದ್ದೀರಿ ಅದರಿಂದ ಜನತೆಗೆ ಒಳ್ಳೆಯದಾಗಬೇಕು. ತಾವು ನಮ್ಮ ಭಾಗದವರು. ತಮ್ಮ ಬಗ್ಗೆ ಅತ್ಯಂತ ಅಭಿಮಾನವಿದೆ ಎಂದು ಹೇಳಲಿಕ್ಕೆ ಬಯಸುತ್ತಿದ್ದೇನೆ. ತಾವು ಯಾವಾಗಲೂ ಗ್ರಾಮ ಪಂಚಾಯತ್ ಜಿಲ್ಲಾ ಪರಿಷತ್ ಮತ್ತು ಮಂಡಲ್‌ಪಂಚಾಯತ್‌ಗಳ ಬಗ್ಗೆ ಒಂದು ಕಳಕಳಿ

ಇದ್ದಂಥ ವ್ಯಕ್ತಿಗಳಾಗಿದ್ದಿರಿ. ತಾವು ಯಾವಾಗಲೂ ಹೇಳುತ್ತಿದ್ದಿರಿ, ಗ್ರಾಮಾಂತರ ಪ್ರದೇಶಗಳು ಅಭಿವೃದ್ಧಿಯಾಗಬೇಕು, ಎಂದು. ಇವತ್ತು ಬೆಂಗಳೂರಿನಂಥ ಸಿಟಿ ಸಿಕ್ಕಾಪಟ್ಟೆ ಬೆಳೆಯುತ್ತಿದೆ, ಸಿಕ್ಕಾಪಟ್ಟೆ ತಾವು ಹಣವನ್ನು ಖರ್ಚುಮಾಡುತ್ತಿದ್ದೀರಿ; ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚಿನ ಹಣ ಸಿಕ್ಕುತ್ತಿಲ್ಲ. ಈ ದಿಸೆಯಲ್ಲಿ ಈ ಕಾನೂನಿನಲ್ಲಿ ಏನು ಮಾಡಬೇಕೆಂದರೆ ಗ್ರಾಮ ಪಂಚಾಯತಿಗಳು ಅಬಿವೃದ್ಧಿಯಾಗಬೇಕಾದರೆ ಆ ಭಾಗದಲ್ಲಿರತಕ್ಕಂಥ ಗ್ರಾಮಗಳಿಗೆ ನೀರಿನ ವ್ಯವಸ್ಥೆಯಾಗಬೇಕು, ರಸ್ತೆಗಳ ದುರಸ್ತಿಯಾಗಬೇಕು, ಬಸ್ಸಿನ ವ್ಯವಸ್ಥೆಯಾಗಬೇಕು. ಪ್ರತಿಯೊಂದು ಅನುಕೂಲತೆಗಳು ಸಿಗಬೇಕಾದರೆ ಆ ಅಧ್ಯಕ್ಷರಿಗೆ ಸಂಪೂರ್ಣವಾದ ಅಧಿಕಾರವನ್ನು ತಾವು ನೀಡಬೇಕು. ಹೇಳಬಯಸುತ್ತೇನೆ. ಏಕೆಂದರೆ ಚುನಾಯಿತ ಗ್ರಾಮ ಪಂಚಾಯತಿ ಸಮಿತಿಯು ಅಧ್ಯಕ್ಷರನ್ನು ನೇರವಾಗಿ ನೇಮಕ ಮಾಡಬೇಕೆಂದು ತಾವೇನು ಹೇಳಿದಿರಿ. ಈ ರೀತಿ ನೇರವಾಗಿ ನೇಮಕಾತಿ ಮಾಡುವುದರಿಂದ ಒಳ್ಳೆಯದಾಗುವುದಿಲ್ಲ. ಚುನಾಯಿತ ಸದಸ್ಯರಾದ ಮೇಲೆ ಚುನಾಯಿತ ಸದಸ್ಯರು ಕುಳಿತುಕೊಂಡು ಅಧ್ಯಕ್ಷರು ಹಾಗೂ ಉಪಾಧ್ಯಕ್ಷರನ್ನು ಆಯ್ಕೆ ಮಾಡುವುದು ಒಳ್ಳೆಯದೆಂದು ಹೇಳುವಂಥ ವಿಚಾರವನ್ನು ಕೂಡ ಇಲ್ಲಿ ಹೇಳಬಯಸುತ್ತೇನೆ.

ಇನ್ನು ಎರಡನೆಯದಾಗಿ ಈಗ ತಾವು ಸಬ್‌ಕಮಿಟಿಗಳನ್ನು ಮಾಡುತ್ತಾ ಇದ್ದೀರಿ. ಗ್ರಾಮಪಂಚಾಯತಿಯಲ್ಲಿ ಸಬ್‌ಕಮಿಟಿಯನ್ನು ಮಾಡಿದಿರಿ, ತಾಲ್ಲೂಕು ಮಟ್ಟದಲ್ಲಿ ಸಬ್‌ಕಮಿಟಿ ಮಾಡಿದಿರಿ, ಜಿಲ್ಲಾ ಪಂಚಾಯತ್‌ನಲ್ಲೂ ಕೂಡ ಸಬ್‌ಕಮಿಟಿಯನ್ನು ಮಾಡಿದಿರಿ; ನನಗೆ ತಿಳಿದಮಟ್ಟಿಗೆ ಹೇಳುವುದಾದರೆ ಗ್ರಾಮಪಂಚಾಯತಿ ಮಟ್ಟದಲ್ಲಿ ಸಬ್‌ಕಮಿಟಿಯನ್ನು ಮಾಡಬೇಕಾದ ಅವಶ್ಯಕತೆ ಇಲ್ಲ. ಅದೇ ಗ್ರಾಮಪಂಚಾಯತ್‌ನ ಅಧ್ಯಕ್ಷರಿಗೆ ಒಂದು ಹೆಚ್ಚಿನ ಅಧಿಕಾರವನ್ನು ಕೊಟ್ಟು ಆ ಅಧ್ಯಕ್ಷರನ್ನು ಪವರ್‌ಫುಲ್ ಮಾಡಿದರೆ ಅವರು ಚೆನ್ನಾಗಿ ಕೆಲಸ ಮಾಡಲಿಕ್ಕೆ ಅನುಕೂಲವಾಗುತ್ತದೆ. ಪ್ರತಿತಿಂಗಳೂ ಸಹ ಅವರು ಗ್ರಾಮ-ಸಭಾ ಕರೆಯುತ್ತಾರೆ, ಗ್ರಾಮಸಭಾ ಆದಮೇಲೆ ಯಾವ ಯಾವ ಹಳ್ಳಿಗಳಲ್ಲಿ ಏನೇನು ಕೆಲಸ ಮಾಡಬೇಕೆನ್ನುವುದರ ಬಗ್ಗೆ ಕೂಡ ವಿಚಾರ ವಿನಿಮಯ ಮಾಡುವಂಥ ಹೆಚ್ಚಿನ ಅಧಿಕಾರವನ್ನು ಸಹ ಅಧ್ಯಕ್ಷರಿಗೆ ಕೊಡಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಗ್ರಾಮ ಪಂಚಾಯತ್‌ಗೆ ಹೆಚ್ಚಿನ ಅಧಿಕಾರಗಳು ಮತ್ತು ತಾಲ್ಲೂಕು ಪಂಚಾಯತ್‌ಗಳ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರವನ್ನು ತಾವು ಕೊಡಬೇಕು. ಏತಕ್ಕೆಂದರೆ ನಮ್ಮ ಪಕ್ಕದ ನೆರೆರಾಜ್ಯವಾದ ಮಹಾರಾಷ್ಟ್ರಕ್ಕೆ ಹೋಗಿದ್ದೇನೆ. ನಿನ್ನೆ ಕೂಡ ಲಾತೋರಿಗೆ ಹೋಗಿದ್ದೆ. ಲಾತೋರಿನಲ್ಲಿ ಕೂಡ ಜಿಲ್ಲಾಪರಿಷತ್ತಿನ ಸಮಾರಂಭದಲ್ಲಿ ಭಾಗವಹಿಸಿ ನೋಡಿದ್ದೇನೆ. ಅವರು ಬಹಳ ಒಂದು ಸಿಸ್ಟಮ್ಯಾಟಿಕ್ ಆಗಿ ಮಾಡಿದ್ದಾರೆ. ಪ್ರತಿಯೊಂದು ಜಿಲ್ಲಾಪರಿಷತ್‌ಗಳು, ಗ್ರಾಮಪಂಚಾತಿಗಳು , ತಾಲ್ಲೂಕು ಪಂಚಾಯಿತಿ ಸಮಿತಿಗಳು ಇವುಗಳಿಗೆ ಬಹಳ ಒಂದು ಒಳ್ಳೆಯ ಅಧಿಕಾರವನ್ನು ಕೊಟ್ಟಿದ್ದಾರೆ. ಅದೇ ರೀತಿ ಶಾಸಕರಿಗೂ ಅಧಿಕಾರವನ್ನು ಕೊಟ್ಟಿದ್ದಾರೆ. ಸ್ಪೆಷಲ್ ಆಗಿ 13 ಕೋಟಿ ರೂಪಾಯಿಗಳನ್ನು ಬಜೆಟ್‌ನಲ್ಲಿ, ಜಿಲ್ಲಾಪರಿಷತ್ತಿನಲ್ಲಿ ಪ್ರಾವಿಷನ್ ಮಾಡಿದ್ದಾರೆ. ಶಾಸಕರು ಯಾವುದೇ ಕಾಮಗಾರಿಗಳಿಗೆ ರೆಕಮೆಂಡೇಷನ್ ಮಾಡಿಕೊಟ್ಟಾಗ ತಕ್ಷಣವೇ ಅವುಗಳಿಗೆ ಮಂಜೂರಾತಿಯನ್ನು ಕೊಡುವಂಥ ಕೆಲಸವನ್ನು ಮಹಾರಾಷ್ಟ್ರ ಸರ್ಕಾರದವರು ಮಾಡಿದ್ದಾರೆ. ಈ ಒಂದು ಬಿಲ್ಲಿನಲ್ಲಿ ಗ್ರಾಮಪಂಚಾಯತಿ, ತಾಲ್ಲೂಕು ಪಂಚಾಯಿತಿ ಸಮಿತಿ ಜಿಲ್ಲಾಪಂಚಾಯತ್ ಸಮಿತಿಯಲ್ಲಿ ನಮ್ಮ ಶಾಸಕರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟಿಲ್ಲ. ಅದಕ್ಕೆ ನಾನು ಹೇಳುವುದೇನೆಂದರೆ, ತಾಲ್ಲೂಕಿಗೆ ಪ್ರತಿನಿಧಿಯಾಗಿರತಕ್ಕಂಥ ಶಾಸಕರು ಏನಿರುತ್ತಾರೆ ಅವರಿಗೆ ಅಧಿಕಾರವನ್ನು ಕೊಟ್ಟರೆ ಆ ಅಧಿಕಾರದಮೇಲೆ ನಿಗಾವಹಿಸಲಿಕ್ಕೆ ಸಾಧ್ಯವಾಗುವುದಿಲ್ಲ. ಕಳಕಳಿ ಇರತಕ್ಕಂಥ ಶಾಸಕನಿಗೆ ನಮ್ಮ ತಾಲ್ಲೂಕು ಅಭಿವೃದ್ಧಿಯಾಗಬೇಕು, ಪ್ರಗತಿಯಾಗಬೇಕೆಂಬ ಭಾವನೆ ಇರುತ್ತದೆ, ಆದ್ದರಿಂದ ಅವರಿಗೆ ಎಕ್ಸಿಕ್ಯುಟೀವ್ ಪವರ್ ಕೊಟ್ಟರೆ ಮಾತ್ರ ಹೆಚ್ಚಿನ ಅಧಿಕಾರದಿಂದ ಕೆಲಸ ಮಾಡಲು ಸಾಧ್ಯವಾಗುತ್ತದೆ. ಉದಾಹರಣೆಗೆ ನಮ್ಮ ಸರ್ಕಾರದವರು ತಾಲ್ಲೂಕು ಉಪಸಮಿತಿಯ

ಅಧ್ಯಕ್ಷರನ್ನಾಗಿ ನಮ್ಮ ಶಾಸಕರನ್ನು ಮಾಡಿದರು. ನಮ್ಮ ಶಾಸಕರಿಗೆ ಏನೂ ಅಧಿಕಾರವಿರಲಿಲ್ಲ. ಜಿಲ್ಲಾ ಪರಿಷತ್ತಿಗೆ ಅಧಿಕಾರವನ್ನು ವಹಿಸುತ್ತಿದ್ದರು. ಮಂಡಲ ಪಂಚಾಯತಿಗೆ ಅಧಿಕಾರವನ್ನು ವಹಿಸುತ್ತಿದ್ದರು. ಹೀಗಾಗಿ ಶಾಸಕರಿಗೆ ಕಾರ್ಯನಿರ್ವಹಿಸಲಿಕ್ಕೆ ಹೆಚ್ಚಿನ ಅನಾನುಕೂಲತೆಗಳಾಗಿವೆ. ಆ ದೃಷ್ಟಿಯಿಂದ ತಮಗೆ ವಿನಂತಿ ಮಾಡಿಕೊಳ್ಳುವುದೇನೆಂದರೆ ಮಹಾರಾಷ್ಟ್ರದಲ್ಲಿರತಕ್ಕಂಥ ಸಿಸ್ಟಮ್ ಏನಿದೆ ಅದರಿಂದ ಅವರು ಪ್ರಜಾಪ್ರಭುತ್ವದಲ್ಲಿ ಒಂದು ವಿಶ್ವಾಸ ಇಟ್ಟುಕೊಂಡು ಪ್ರಗತಿ ಕಾಣುತ್ತಿದ್ದಾರೆ. ಅದೇ ಪ್ರಕಾರವಾಗಿ ಇಲ್ಲೂ ಕೂಡ ನೀವು ತರುತ್ತೀರೆಂದು ಭಾವಿಸಿ ಇದರಿಂದ ಶಾಸಕರಿಗೂ ಒಂದು ಸ್ಥಾನಮಾನ ಅಥವಾ ಜಿಲ್ಲಾಮಟ್ಟದಲ್ಲಿ ಕೂಡ ಬಜೆಟ್ ತಯಾರು ಮಾಡುವಂಥ ಒಂದು ಸಂದರ್ಭದಲ್ಲಿ ಅಲ್ಲಿ ಪ್ಲಾನಿಂಗ್ ಸದಸ್ಯರನ್ನಾಗಿ ಎಂಎಲ್ಎಗಳನ್ನು ಮಾಡುವುದರಿಂದ ಬಹಳ ಪ್ರಯೋಜನವಾಗುತ್ತದೆ. ತಾಲ್ಲೂಕು ಪಂಚಾಯತಿ ಸಮಿತಿಗೆ ಅವರಲ್ಲಿ ಅರ್ಹತೆ ಇದ್ದರೆ ಅಧ್ಯಕ್ಷರಾಗಬಹುದು.

5.50 ಪಿ. ಎಂ.

ಅದರಲ್ಲಿ ತಪ್ಪೇನೂ ಇಲ್ಲ. ಚುನಾಯಿತ ಪ್ರತಿನಿಧಿಗಳಾದ ಶಾಸಕರು ರಾಜೀನಾಮೆ ಕೊಟ್ಟು ಅಧ್ಯಕ್ಷರಾಗಬೇಕೆಂದು ತಾವು ಇಲ್ಲಿ ವಿಧೇಯಕದಲ್ಲಿ ಹೇಳಿದ್ದೀರಿ. ಜನರು ಮನಸ್ಸು ಮಾಡಿದರೆ ಎಂ.ಎಲ್.ಎ. ಅಧ್ಯಕ್ಷರು ಇರಬಹುದು, ಅದರಲ್ಲಿ ತಪ್ಪೇನೂ ಇಲ್ಲ. ಇಂಥ ವಿಧೇಯಕವನ್ನು ತರುವುದರಿಂದ ಜನರಿಗೆ ಒಳ್ಳೆಯ ಅಧಿಕಾರ ಕೊಡಬಹುದೆಂಬ ನನ್ನ ಭಾವನೆಯನ್ನು ತಮ್ಮ ಎದುರಿಗೆ ವ್ಯಕ್ತಪಡಿಸುವುದಕ್ಕೆ ಇಷ್ಟಪಡುತ್ತೇನೆ. ಈ ದಿಸೆಯಲ್ಲಿ ನಾನು ಎಲ್ಲದಕ್ಕಿಂತ ಹೆಚ್ಚಾಗಿ ಮೆಚ್ಚಿಗೆ ಪಡುವಂಥದ್ದು ಮಹಾರಾಷ್ಟ್ರ ಸಿಸ್ಟಂ. ಈ ಮಹಾರಾಷ್ಟ್ರ ಸಿಸ್ಟಂ ಅನ್ನು ತಾವು ಹೆಚ್ಚಾಗಿ ಅಳವಡಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಮ್ಮ ದೇಶ, ಕರ್ನಾಟಕ ರಾಜ್ಯ ಮುಂದೆ ಬರಬೇಕು, ಅಭಿವೃದ್ಧಿ ಆಗಬೇಕು, ನಮ್ಮ ಜನರಿಗೆ ಹೆಚ್ಚಿನ ಅನುಕೂಲತೆ ಸಿಗಬೇಕೆಂಬ ದೃಷ್ಟಿಕೋನ ಇಟ್ಟುಕೊಂಡಾಗ ಮಹಾರಾಷ್ಟ್ರ ಪ್ಯಾಟರ್ನ್ ಏನಿದೆ ಆ ಪ್ಯಾಟರ್ನ್ ಅನ್ನು ತಾವು ಅಳವಡಿಸಿಕೊಂಡು ಬಂದರೆ ಶಾಸಕರಿಗೆ ಅಧಿಕಾರ ಸಿಗುತ್ತದೆ ; ಅಧ್ಯಕ್ಷರಿಗೆ ಅಧಿಕಾರ ಸಿಗುತ್ತದೆಂದು ಈ ಸಂದರ್ಭದಲ್ಲಿ ನಾನು ತಮಗೆ ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : (ಗ್ರಾಮೀಣ ಮತ್ತು ಪಂಚಾಯತ್ ರಾಜ್ ಸಚಿವರು) : ಈ ಸಂವಿಧಾನದ ತಿದ್ದುಪಡಿ ಇದೆಯಲ್ಲಾ ಅದರಲ್ಲಿ ಒಂದು ಮಾತು ಬಹಳ ಸ್ಪಷ್ಟವಾಗಿ ಹೇಳಿದ್ದಾರೆ. ಆಯಾಯ ಮಟ್ಟದಲ್ಲಿ ಯಾರು ಆರಿಸಿ ಬಂದಿದ್ದಾರೆ. ಅವರು ಮಾತ್ರ ಛೇರ್ಮನ್ ಆಗೇಬಕು ಎಂದು. ಶಾಸಕರು ತಾಲ್ಲೂಕು ಸಮಿತಿಗಳಿಗೆ ಆರಿಸಿ ಬಂದಿರತಕ್ಕವರಲ್ಲ. ಅಲ್ಲಿ ಅವರಿಗೆ ಅಧಿಕಾರ ಕೊಡುವುದು ಬಹಳ ಕಷ್ಟವಾಗುತ್ತದೆ. ಅವರು ಎಕ್ಸ್ ಅಫಿಷಿಯೋ ಮೆಂಬರ್ ಆಗಿರಬಹುದೆಂದು ಹೇಳಿದ್ದೇವೆ. ಇದ್ದರೂ ಅವರಿಗೆ ಓಟಿಂಗ್ ಪವರ್ಸ್ ಕೊಟ್ಟಿದ್ದೇವೆ ಛೇರ್ಮನ್ ಎಲೆಕ್ಷನ್ ಬಿಟ್ಟರೆ, ಬೇರೆ ಎಲ್ಲಾ ಕೆಲಸಗಳಲ್ಲಿ ಅವರಿಗೆ ಓಟಿಂಗ್ ಪವರ್ ಕೊಟ್ಟಿದ್ದೇವೆ. ಒಂದು ವೇಳೆ ಅವರನ್ನು ಸಬ್ ಕಮಿಟಿ ಛೇರ್ಮನ್ ಆಗಿ ಆರಿಸಿದರೆ ಏನು ಎಂಬ ಪ್ರಶ್ನೆ ಇದೆ. ಅದನ್ನು ಯೋಚನೆ ಮಾಡೋಣ. ಅವರೇ ಸಬ್ ಕಮಿಟಿ ಛೇರ್ಮನ್ ಆಗಿ ಆರಿಸುವುದಾದರೆ, ಅಷ್ಟು ಆಕ್ಷೇಪಣೆ ಬರುವುದಿಲ್ಲ. ಆದರೆ ಅವರನ್ನು ಸಬ್ ಛೇರ್ಮನ್ ಮಾಡುವುದು ಬಹಳ ಕಷ್ಟ. ಮಹಾರಾಷ್ಟ್ರದಲ್ಲಿ ಏನು ನಡೆಯುತ್ತಿದೆ ಅದು ಸರಿ ಎಂದು ನಾನು ಒಪ್ಪುವುದಕ್ಕೆ ಸಾಧ್ಯವಾಗುವುದಿಲ್ಲ. ಏಕೆಂದರೆ ಅಲ್ಲಿ ಖರ್ಚು ಮಾಡುವ ಅಧಿಕಾರ ಅವರಿಗೆ ಕೊಟ್ಟಿದ್ದಾರೆ. ಅವರು ಸಂತೋಷವಾಗಿರಲಿ ಎಂದು ಇಷ್ಟು ಲಕ್ಷ ರೂ. ಗಳನ್ನು ಮಂತ್ರಿಗಳು, ಶಾಸಕರು ಖರ್ಚು ಮಾಡಬಹುದೆಂದು ಮಾಡಿದ್ದಾರೆ. ಅದು ಅಷ್ಟು ಸರಿಯಾದ ಕ್ರಮ ಅಲ್ಲ. ಅದನ್ನು ಆ ಕಾಲಕ್ಕೆ ಮಾಡಿರಬಹುದು. ನಾವೇನು ಇವತ್ತು ಡಿಸ್ಟ್ರಿಕ್ಟ್ ಪ್ಲಾನಿಂಗ್ ಕಮಿಟಿ ಮಾಡುತ್ತಿದ್ದೇವೆ ಅದು ಯಾವ ಒಂದು ವರ್ಕ್ಸ್ ಸ್ಯಾಂಕ್ಷನ್ ಮಾಡತಕ್ಕ ಬಾಡಿ ಅಲ್ಲ.

ಅದಕ್ಕೋಸ್ಕರ ಶಾಸಕರು ಅಲ್ಲಿ ಪರ್ಮನೆಂಟ್ ಇನ್‌ವೈಟ್ ಆಗಿರಬಹುದೆಂದು ನಾವು ಹೇಳುತ್ತಿದ್ದೇವೆ. ಆದುದರಿಂದ ಸ್ಯಾಂಕ್ಷನ್ ಮಾಡಿ ಎಕ್ಸಿಕ್ಯೂಷನ್ ಮಾಡುವ ವಿಚಾರ ಏನಿದೆ ಅದು ಸಂಪೂರ್ಣವಾಗಿ ಆಯಾಯ ಎಲೆಕ್ಟೆಡ್ ಸಂಸ್ಥೆಗಳಿಗೆ ಕೊಟ್ಟಿರತಕ್ಕದ್ದು. ಶಾಸಕರಿಗೆ ಅದರಲ್ಲಿ ಪೈಪೋಟಿ ಇರಕೂಡದು ಎಂಬುದು ಮೂಲಭೂತವಾದ ವಿಚಾರ ಇದೆ. ಆದ ಕಾರಣ ಶಾಸಕರು ಎಕ್ಸ್ ಅಫಿಷಿಯೋ ಮೆಂಬರ್ ಆಗಿ ಸಭೆಗೆ ಸರಿಯಾದ ಮಾರ್ಗದರ್ಶನ ಮಾಡಬೇಕಾದುದು ಅವರ ಕರ್ತವ್ಯ. ನೇರವಾಗಿ ಅವರು ಎಕ್ಸಿಕೂಟೀವ್ ಪವರ್ ಉಪಯೋಗಿಸುವುದು, ಉಪಯೋಗಿಸುವುದಕ್ಕೆ ಬಿಡುವುದು ಹೊಸ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಅದಕ್ಕೆ ಅಷ್ಟೊಂದು ಸ್ಥಾನ ಇಲ್ಲವೆಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಬಸವರಾಜ್ ಪಾಟೀಲ್ (ಅಟ್ಟೂರು) : ನನ್ನ ವಿಚಾರದ ಪ್ರಕಾರವಾಗಿ ಈ ಒಂದು ಶಾಸನವನ್ನು ಹೊಸ ರೀತಿಯಲ್ಲಿ ಇರತಕ್ಕ ಸಂದರ್ಭದಲ್ಲಿ ಎಲ್ಲಾ ಮೂಲೆ ಮೂಲೆಗಳಿಂದ, ಎಲ್ಲಾ ಭಾಗಗಳಿಂದ ವಿಚಾರವಿನಿಮಯ ಮಾಡಿಕೊಂಡು ಒಳ್ಳೆಯ ರೀತಿಯಲ್ಲಿ ಈ ಒಂದು ಶಾಸನ ರಚನೆಯಾಗಬೇಕು, ಜನರಿಗೆ ಇದರಲ್ಲಿ ಅಧಿಕಾರ ವ್ಯಾಪ್ತಿ ಹೆಚ್ಚಿಗೆ ಸಿಗಬೇಕು, ಗ್ರಾಮಾಂತರ ಪ್ರದೇಶಗಳ ಅಭಿವೃದ್ಧಿ ಆಗಬೇಕೆಂಬ ಉದ್ದೇಶದಿಂದ ಹೇಳುತ್ತಿರುವುದು. ಮಂತ್ರಿಗಳು ಹೇಳಿದರು, ಆದರೆ ನನ್ನ ಪ್ರಶ್ನೆ ಇಷ್ಟೇ. ಶಾಸಕರಾಗಿ ಅಧ್ಯಕ್ಷರಾಗಿರುವುದಕ್ಕೆ ಏನು ತೊಂದರೆ ಇದೆ? ಅವರು ಅಧ್ಯಕ್ಷರಾಗಬಹುದೆಂದು ಮಾಡಿದರೆ ತಪ್ಪೇನಿಲ್ಲವೆಂದು ನಾನು ಹೇಳುತ್ತಿದ್ದೇನೆ. ಆ ತಾಲ್ಲೂಕಿನಲ್ಲಿರತಕ್ಕ ಜನರು ಆರಿಸಿದ ಮೇಲೆ ತಾಲ್ಲೂಕು ಪಂಚಾಯಿತಿ ಅಧ್ಯಕ್ಷರಾಗುವುದಕ್ಕೆ, ಚುನಾವಣೆಗೆ ನಿಲ್ಲುವುದಕ್ಕೆ ಅವಕಾಶ ಕೊಟ್ಟರೆ ಒಳ್ಳೆಯದೆಂದು ಹೇಳುತ್ತೇನೆ. ಅದನ್ನು ಮಾಡುವುದರಿಂದ ಹೆಚ್ಚಿನ ಕೆಲಸಗಳು ಕಾರ್ಯರೂಪದಲ್ಲಿ ಬರುವುದಕ್ಕೆ ಸಾಧ್ಯವಾಗಬಹುದು. ನಾವು ನಿಲ್ಲಬಹುದು ಅಥವಾ ಬೇರೆ ಒಳ್ಳೆಯವರನ್ನು ನಿಲ್ಲಿಸಬಹುದು. ತಾವು ಏನು ವಿಧೇಯಕವನ್ನು ತರುತಿದ್ದೀರಿ ಇದರಲ್ಲಿ ಶಾಸಕರಿಗೆ ನಿರ್ಲಕ್ಷ್ಯ ಮಾಡಿದ್ದೀರೆಂದು ಹೇಳುವುದಕ್ಕೆ ಬಯಸುತ್ತಿದ್ದೇನೆ. ಜಿಲ್ಲಾ ಪರಿಷತ್‌ನಲ್ಲಿ ಅವರಿಗೆ ಸ್ಥಾನವಿಲ್ಲ, ಮಂಡಲ ಪಂಚಾಯಿತಿನಲ್ಲಿ ಸ್ಥಾನವಿಲ್ಲ. ತಾಲ್ಲೂಕು ಪಂಚಾಯಿತಿ ಮಟ್ಟದಲ್ಲಿ ಸ್ಥಾನ ಇಲ್ಲವೆಂದರೆ ಅವರು ಇನ್ನೆಲ್ಲಿ ಕೆಲಸ ಮಾಡಬೇಕು? ಗ್ರಾಮೀಣ ಪ್ರದೇಶದ ಜನರು ಎಲ್ಲರೂ ಕೂಡ ಗ್ರಾಮ ಪಂಚಾಯಿತಿ ಕೆಲಸ ಇದ್ದರೆ ಶಾಸಕರಿಗೆ ಹೇಳುತ್ತಾರೆ. ನೀರು ಬಂದಿಲ್ಲ, ಬಸ್ ಬಂದಿಲ್ಲ, ರಸ್ತೆ ಬಂದಿಲ್ಲವೆಂದು ಜನಸಾಮಾನ್ಯರು ತಮ್ಮ ಸಮಸ್ಯೆಗಳನ್ನು ಹೇಳುತ್ತಾರೆ.

ಶ್ರೀ ಎಂ. ವೈ. ಘೋರ್ಪಡೆ : ಎರಡು ಸಂಸ್ಥೆಗಳಿಗೆ ಆರಿಸಿ ಬಂದರೆ ಒಂದು ಬಿಡಬೇಕೆಂದು ಇದೆ. ಎರಡು ಸ್ಥಾನಕ್ಕೆ ಆರಿಸಿ ಬಂದರೆ ಒಂದು ಸ್ಥಾನ ಬಿಟ್ಟುಬಿಡಬೇಕೆಂದು ಕಾನೂನು ಪ್ರಕಾರ ಇದೆ. ರಾಜೀವ್ ಗಾಂಧಿಯವರು ಇದ್ದಾಗ ಒಂದು ಮಾತು ಹೇಳುತ್ತಿದ್ದರು. ನೀವು ಎಂ.ಎಲ್.ಎ. ಆಗಬೇಕೇ, ತಾಲ್ಲೂಕು ಬೋರ್ಡ್, ಗ್ರಾಮ ಪಂಚಾಯತಿ ಛೇರ್ಮನ್ ಆಗಬೇಕೇ ಎಂದು ಇದರ ಬಗ್ಗೆ ಮೊದಲೇ ನಿರ್ಣಯ ಮಾಡಬೇಕೆಂದು ಹೇಳುತ್ತಿದ್ದರು. ಎರಡೂ ಆಗುವುದಕ್ಕೆ ಸಾಧ್ಯವಿಲ್ಲ, ಸಾಧುವಲ್ಲ ಎಂದು ಹೇಳುತ್ತಿದ್ದರು. ಮೊದಲೇ ನೀವು ತೀರ್ಮಾನ ಮಾಡಬೇಕು.

ಶ್ರೀ ಬಿ. ಹೆಚ್. ಬನ್ನಿಕೋಡ್ : 2 ಸ್ಥಾನ ಒಬ್ಬರಿಗೆ ಬೇಡ ಎಂದು ಹೇಳುತ್ತಿದ್ದೀರಿ. ನಿಮ್ಮ ಪಕ್ಷದಲ್ಲೇ ಡೆಲ್ಲಿಯಲ್ಲೇ 2 ಸ್ಥಾನ ಇಟ್ಟುಕೊಂಡವರನ್ನು ಬಿಡಿ ಎಂದ್ರರೂ ಬಿಡುತ್ತಿಲ್ಲ. ಅಲ್ಲೇ ಇದ್ದು ಇಲ್ಲಿ ಹಳ್ಳಿಯಲ್ಲಿ 2 ಸ್ಥಾನ ಒಬ್ಬರಿಗೆ ಬೇಡ ಎಂದು ಹೇಳುತ್ತಿದ್ದೀರಿ. ತಮ್ಮ ಕಾಂಗ್ರೇಸ್ ನೀತಿಯೇ ಹೀಗಿದೆ, ಎಲ್ಲಾ ತಮ್ಮ ಕೈಯಲ್ಲೇ ಇರಬೇಕು ಎಂಬುದು ನಿಮ್ಮ ನೀತಿ.

ಶ್ರೀ ಬಸವರಾಜ ಪಾಟೀಲ್(ಅಟ್ಟೂರ್) : ನನ್ನ ವಾದ ಇಷ್ಟೇ. ಮಸೂದೆಯನ್ನು ಹೊಸದಾಗಿ ತರುತ್ತಿದ್ದೀರಿ. ಶಾಸಕ ಒಂದು ತಾಲ್ಲೂಕನ್ನೂ ಪ್ರತಿನಿಧಿಸುವ ವ್ಯಕ್ತಿ ಆಗಿರುತ್ತಾನೆ. ಅವರಿಗೆ ಹೆಚ್ಚಿನ ಅಧಿಕಾರ ಕೊಡುವುದರಿಂದ ತಾಲ್ಲೂಕು ಅಭಿವೃದ್ಧಿ ಆಗುವುದಕ್ಕೆ ಸಾಧ್ಯವಾಗುತ್ತದೆ. ರಾಜ್ಯ ಮಟ್ಟದಲ್ಲಿ ಶಾಸಕ ಮಂತ್ರಿಗಳ ಜೊತೆ ಚರ್ಚೆ ಮಾಡುತ್ತಾರೆ. ರಾಜ್ಯಮಟ್ಟದಲ್ಲಿ ಚರ್ಚೆ ಮಾಡುವಾಗ ತಾಲ್ಲೂಕಿನ ಸಮಸ್ಯೆಗಳನ್ನು ಸರಿಯಾಗಿ ಹೇಳುವುದಕ್ಕೆ ಸಾಧ್ಯವಾಗುತ್ತದೆಂದು ಹೇಳುತ್ತೇನೆ. ಇವತ್ತು ಅವರನ್ನು ಎಕ್ಸ್‌ಅಫಿಷಿಯೋ ಮಾಡುವುದರಿಂದ ಏನೂ ಅರ್ಥ ಇರುವುದಿಲ್ಲ. ಇದನ್ನು ವಿಚಾರ ಮಾಡಬೇಕು. ಶಾಸನಸಭಾ ಸದಸ್ಯರಿಗೆ ಜಿಲ್ಲಾ ಮತ್ತು ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅಧಿಕಾರ ಕೊಡುವುದರಿಂದ ಈ ಜನರ ಸಮಸ್ಯೆ ಪರಿಹಾರ ಆಗಬೇಕು ಎನ್ನುವ ಉದ್ದೇಶ ತಾವು ಏನು ಇಟ್ಟುಕೊಂಡಿದ್ದೀರಿ ಆ ಉದ್ದೇಶಕ್ಕೆ ಚ್ಯುತಿ ಬರಬಾರದು ಎನ್ನುವ ನನ್ನ ಭಾವನೆ ಇದೆ. ಆದ್ದರಿಂದ ಶಾಸನಸಭಾ ಸದಸ್ಯರಿಗೆ ಅಧಿಕಾರ ವಹಿಸಿದರೆ ಹೆಚ್ಚಿನ ಪಾಲನೆ ಕೊಟ್ಟಂತಾಗುತ್ತದೆಂದು ಹೇಳಿ ಇನ್ನೂ ಹಲವಾರು ವಿಚಾರಗಳನ್ನು...

ಶ್ರೀ ಎಂ. ವೈ. ಘೋರ್ಪಡೆ : ನಾನು ಎಷ್ಟೋ ವರ್ಷ ಎಂಎಲ್ಎ ಆಗಿ ಕೆಲಸ ಮಾಡಿದ್ದೇನೆ. ಆ ಕಾಲದಲ್ಲಿ ಸೊಂಡೂರು ತಾಲ್ಲೂಕಿನಲ್ಲಿ ತಾಲ್ಲೂಕು ಬೋರ್ಡ್‌ಗೆ ಸರಿಯಾದ ಜನರನ್ನು ಆರಸಿ ತಂದು ಅವರ ಮುಖಾಂತರ ಅಭಿವೃದ್ಧಿ ಕೆಲಸ ಮಾಡುವುದರಲ್ಲಿ ನಾನು ಎಂಎಲ್ಎ ಆಗಿ ಯಾವ ತೊಂದರೆಯನ್ನೂ ಅನುಭವಿಸಿಲ್ಲ. ಸರಿಯಾದ ಜನರನ್ನು ಆರಿಸಿ ಅವರ ಕೈಯಲ್ಲಿ ಕೆಲಸ ಮಾಡಿಸುವುದು ಸೂಕ್ತ.

(ಶ್ರೀಮತಿ ಮೋಟಮ್ಮನವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಶ್ರೀ ಬಸವರಾಜ ಪಾಟೀಲ್ (ಅಟ್ಟೂರ್) : ನಾನೂ ತಾಲ್ಲೂಕು ಬೋರ್ಡ್ ಸದಸ್ಯನಾಗಿ 5 ವರ್ಷ ಕೆಲಸ ಮಾಡಿದ್ದೇನೆ. ಅಧ್ಯಕ್ಷರ ಚುನಾವಣೆಗೂ ನಿಂತಿದ್ದ ವ್ಯಕ್ತಿಯಾಗಿದ್ದೇನೆ. ಹೊಸದಾಗಿ ಬಿಲ್ ತರುತ್ತಿರುವ ಈ ಸಮಯದಲ್ಲಿ ಇದರ ಬಗ್ಗೆ ಸಂಪೂರ್ಣ ವಿಚಾರ ವಿನಿಮಯ ಮಾಡಿಕೊಂಡು ಎಲ್ಲಾ ಜನರಿಗೂ ಶಾಶ್ವತ ಪ್ರಗತಿಪರ ಕಾರ್ಯಕ್ರಮ ಕೊಟ್ಟು ಕರ್ನಾಟಕ ರಾಜ್ಯ ಪ್ರಗತಿಪಥದಲ್ಲಿ ಮುಂದೆ ಹೋಗಬೇಕೆಂಬ ಉದ್ದೇಶ ಇದೆ. ನಮ್ಮ ರಾಜ್ಯದ ಶಾಸನ ಬೇರೆ ರಾಜ್ಯಗಳಿಗಿಂತಲೂ ಒಳ್ಳೆಯದು ಆಗಲಿ. ಜಿಲ್ಲಾಪರಿಷತ್‌ನ ಅಧ್ಯಕ್ಷರಿಗೆ, ಶಾಸಕರಿಗೆ, ಅಷ್ಟೇ ಜಮೇದಾರಿ ಅಳವಡಿಸಿಕೊಟ್ಟರೆ, ಶಾಸನಕ್ಕೆ ಒಂದು ಶಕ್ತಿ ಬರುತ್ತದೆ. ಚೈತನ್ಯ ಬರುತ್ತದೆ, ಹೆಮ್ಮೆಯಿಂದ ಕೆಲಸಮಾಡುವುದಕ್ಕೆ ಸಾಧ್ಯವಾಗುತ್ತದೆ. ಉದಾಹರಣೆಗೆ ನಮ್ಮ ಅಧ್ಯಕ್ಷರು ತಪ್ಪು ಮಾಡಿದಾಗ ಅದನ್ನು ನಾವು ಕೇಳುವುದಕ್ಕೆ ಹಕ್ಕು ಇರಬೇಕು. ಆ ವ್ಯವಸ್ಥೆ ಇರಬೇಕೆಂದು ಹೇಳುತ್ತೇನೆ. ಎಂಎಲ್ಎಗೆ ಪ್ರತಿಯೊಂದೂ ಇರಬೇಕೆಂಬುದು ನನ್ನ ಉದ್ದೇಶ ಅಲ್ಲ. ಈ ಶಾಸನಕ್ಕೆ ಒಂದು ಶಕ್ತಿ ಕೊಟ್ಟು ಚಾಲನೆ ಮಾಡುವ ದೃಷ್ಟಿಯಿಂದ , ಜಮೇದಾರಿಕೆಯನ್ನು ಒಬ್ಬ ವ್ಯಕ್ತಿ ಕೈಗೆ ಕೊಟ್ಟು ಸರಿಯಾದ ರೀತಿಯಲ್ಲಿ ಚಾಲನೆ ಮಾಡುವ ದೃಷ್ಟಿಕೋನ ಇಟ್ಟುಕೊಂಡು ಎಂಎಲ್ಎಗೆ ಹೆಚ್ಚಿನ ಅವಕಾಶ ಕೊಡಬೇಕು. ಈ ಬಗ್ಗೆ ವಿಚಾರ ಮಾಡಿದರೆ ಒಳ್ಳೆಯದು ಎನ್ನುವ ಭಾವನೆ ವ್ಯಕ್ತ ಮಾಡುತ್ತೇನೆ. ಈ ವಿಧೇಯಕದ ಬಗ್ಗೆ ಇಷ್ಟೇ ನನ್ನ ವೈಯುಕ್ತಿಕ ಅಭಿಪ್ರಾಯ ಹೇಳುತ್ತಿದ್ದೇನೆ. ಇದರ ಬಗ್ಗೆ ತಾವು ವಿಚಾರ ಮಾಡಬೇಕು. ಗ್ರಾಮ ಪಂಚಾಯಿತಿ ಎಂದು ಹೆಸರು ಇಟ್ಟರೆ ಒಳ್ಳೆಯದು. ತಾಲ್ಲೂಕು ಪಂಚಾಯಿತಿ ಸಮಿತಿ ಎಂದು ಇಡಿ. ಜಿಲ್ಲಾ ಪರಿಷತ್ತು ಎಂದು ಇಟ್ಟರೆ ಒಳ್ಳೆಯ ಭಾವನೆ ಬರುತ್ತದೆ. ಇವತ್ತು ಹೈಬ್ರಿಡ್ ಹುಂಜ ಇದೆ ನೋಡಿ. ಆ ರೀತಿ ಅಟ್ರಾಕ್ಷನ್ ಬರಬೇಕು ಜನರಿಗೆ. ಹಳೆಯ ನಿಜಾಮನ ಕಾಲದ ಹೆಸರು ಇಡುತ್ತಿದ್ದೀರಿ. ಅದು ಅಷ್ಟು ಅಟ್ರಾಕ್ಟೀವ್ ಇಲ್ಲ. ಇದನ್ನು ಪರಿವರ್ತನೆ ಮಾಡಿ ತಾಲ್ಲೂಕು ಪಂಚಾಯಿತಿ ಸಮಿತಿ, ಜಿಲ್ಲಾಪರಿಷತ್ತು, ಗ್ರಾಮ ಪಂಚಾಯಿತಿ ಎಂದು ಇಡಬೇಕೆಂದು ಹೇಳುತ್ತೇನೆ. ಮತ್ತು ಶಾಸನಸಭಾ ಸದಸ್ಯರಿಗೆ ಹೆಚ್ಚಿನ ಅಧಿಕಾರವನ್ನು ಈ

ವಿಧೇಯಕದಲ್ಲಿ ಕೊಡಬೇಕು. ಆ ರೀತಿ ಕೊಡುವುದರಿಂದ ನಾವು ಜನರಿಗೆ ಹೆಚ್ಚು ನೆರವು ಮಾಡುವುದಕ್ಕೆ ಸಹಾಯವಾಗುತ್ತದೆ. ಪ್ರಗತಿಪರ ಕೆಲಸಕ್ಕೆ ಶಾಸಕರಿಗೆ ಅಧಿಕಾರ ಕೊಡಲಿಲ್ಲ ಎಂದರೆ ಶಾಸಕರೂ ಕೂಡ ಏನೂ ಕೆಲಸ ಮಾಡುವುದಕ್ಕಾಗುವುದಿಲ್ಲ. ನಾಳೆ ತಾಲ್ಲೂಕಿನ ಕಾರ್ಯನಿರ್ವಹಣೆಯಲ್ಲಿ ಹೆಚ್ಚಿನ ಅಧಿಕಾರವನ್ನು ಬೇರೆಯವರು ತೆಗೆದುಕೊಂಡು ದುರುಪಯೋಗ ಆಗಬಹುದು. ಆ ದೃಷ್ಟಿಯಿಂದ ಈ ಒಂದು ಶಾಸನದಲ್ಲಿ ತಾವು ಹೆಚ್ಚಿನ ವಿಚಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ಪ್ರದೇಶದ ಬಗ್ಗೆ ಮುಖ್ಯವಾಗಿ ಹೇಳಬೇಕೆಂದರೆ, ತಾವು ಮಂತ್ರಿಗಳು ಹೆಚ್ಚಿನ ಅಧಿಕಾರ ತೆಗೆದುಕೊಳ್ಳುತ್ತೀರೋ ಅದೇ ಪ್ರಕಾರ ಗ್ರಾಮಪಂಚಾಯಿತಿ ಅಧ್ಯಕ್ಷರಿಗೂ ಹೆಚ್ಚಿನ ಅಧಿಕಾರ ಕೊಡಿ. ಹಾಗೆಯೇ ತಾಲ್ಲೂಕು ಮಟ್ಟದ ಅಧ್ಯಕ್ಷರಿಗೂ ಹೆಚ್ಚಿನ ಅಧಿಕಾರ ಕೊಡಿ, ಜಿಲ್ಲಾಪರಿಷತ್ತಿನ ಅಧ್ಯಕ್ಷರಿಗೆ ಹೆಚ್ಚಿನ ಅಧಿಕಾರ ಕೊಡಿ ಎಂದು ಹೇಳುತ್ತಿದ್ದೇನೆ. ಸಬ್‌ಕಮಿಟಿಗಳನ್ನು ಮಾಡುವುದರಿಂದ ಅದಕ್ಕೆ ಒಂದು ಅಟ್ರಾಕ್ಷನ್ ಬರುವ ಹಾಗೆ ಇಲ್ಲ. ಪ್ರತಿಯೊಂದಕ್ಕೂ ಸಬ್ ಕಮಿಟಿಗಳನ್ನು ಮಾಡುವುದರಿಂದ ಅದಕ್ಕೆ ಈಗ ಏನೂ ಅರ್ಥವೇ ಉಳಿದಿಲ್ಲ. ಇವತ್ತು ಶಾಶ್ವತವಾದ ಕ್ರಮವನ್ನು ಈ ಶಾಸನಸಭೆಯೊಳಗೆ ನಾವು ತೆಗೆದುಕೊಳ್ಳಬೇಕಾಗಿದೆ. ತಾವೇನು ಸಭೆ ಕಮಿಟಿಗಳನ್ನು ಇಟ್ಟಿದ್ದೀರಿ. ಅವುಗಳನ್ನು ಸ್ವಲ್ಪ ಕಡಿಮೆ ಮಾಡಿ. ಅಧ್ಯಕ್ಷರಿಗೆ ಮತ್ತು ಉಪಾಧ್ಯಕ್ಷರಿಗೆ ಹೆಚ್ಚಿನ ಪವರ್ ಕೊಡಿ. ಚುನಾವಣೆಗಳನ್ನು ನಡೆಸುವ ಬಗ್ಗೆ ನಮ್ಮ ಬಾಬುಗೌಡ ಪಾಟೀಲರು ಹೇಳಿದರು. ನಮ್ಮ ನಾರಾಯಣರಾವ್ ಮನೋಳ್ಳಿಯವರು ಕೂಡ ಹೇಳಿದರು. ಚುನಾವಣೆಯನ್ನು ಮಾಡುವ ಪದ್ಧತಿಯಲ್ಲಿ ಕೂಡ ಒಂದು ಹೊಸ ಸಿಸ್ಟಂ ತರಬೇಕೆಂದು ನಾನು ಕೇಳಿಕೊಳ್ಳುತ್ತಾ ಇದ್ದೇನೆ. ಏಕೆಂದರೆ ನಾವು ಬೀದರ್‌ನವರು, ನಮ್ಮದು ಆಂಧ್ರ ಮತ್ತು ಮಹಾರಾಷ್ಟ್ರಕ್ಕೆ ಸಮೀಪ ಇದೆ. ಅಲ್ಲಿರತಕ್ಕ ಕಾನೂನುಗಳ ಸಂಪೂರ್ಣವಾದ ಪರಿಚಯವಿದೆ. ನಾವು ಅಲ್ಲಿಗೆ ಹೋಗುತ್ತೇವೆ ಬರುತ್ತೇವೆ. ಗ್ರಾಮಪಂಚಾಯತಿಯ ಅಧ್ಯಕ್ಷರು ಪಕ್ಷಾತೀತವಾಗಿ ಯಾವುದೇ ಪಾರ್ಟಿಯ ಹೆಸರಿನಲ್ಲಿ ಬಂದರೆ ಅದು ಒಳ್ಳೆಯದಲ್ಲ. ಈಗಾಗಲೇ ಊರುಗಳಲ್ಲಿ ಜಗಳ ತಂಟೆಗಳು ಆಗುತ್ತದೆ. ಆ ತರಹ ಆಗುವುದರಿಂದ ಈ ವಿಧೇಯಕಕ್ಕೆ ಕೆಟ್ಟ ಹೆಸರು ಬರುತ್ತದೆ. ದಯಮಾಡಿ ಗ್ರಾಮ ಪಂಚಾಯಿತಿ ಮಟ್ಟದಲ್ಲಾದರೂ ಕೂಡ ನೀವು ಪಕ್ಷಾತೀತವಾಗಿ ಚುನಾವಣೆ ಮಾಡುವ ವ್ಯವಸ್ಥೆಯನ್ನು ತರಬೇಕೆಂದು ಕೇಳಿಕೊಳ್ಳುತ್ತಾ ಇದ್ದೇನೆ. ತಾಲ್ಲೂಕುಮಟ್ಟದಲ್ಲಿ ಕೂಡ ನಮ್ಮದು ಇದೇ ಅಭಿಪ್ರಾಯವಿದೆ. ತಾಲ್ಲೂಕು ಪಂಚಾಯಿತಿಗಳಿಗೆ ತಾವೇನು ಚುನಾವಣೆಯನ್ನು ಮಾಡಬೇಕೆಂದು ಹೇಳುತ್ತೀರಿ ಅದರಲ್ಲಿ ಕೂಡ ತಾವು ಪಕ್ಷಾತೀತವಾಗಿ ಮಾಡಿದರೆ ಒಳ್ಳೆಯದು. ಜಿಲ್ಲಾಪರಿಷತ್‌ಗೆ ನೀವು ಪಾರ್ಟಿ ಬೇಸಿಸ್ ಮೇಲೆ ಮಾಡಿದರೆ ಒಳ್ಳೆಯದು. ಗ್ರಾಮ ಪಂಚಾಯತಿ ಮತ್ತು ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ ಯಾವುದೇ ಪಾರ್ಟಿ ಪಕ್ಷ ಇಲ್ಲದೆ ಪಕ್ಷಾತೀತವಾಗಿ ಚುನಾವಣೆಗಳನ್ನು ಮಾಡಿದರೆ ಒಳ್ಳೆಯದು. ಜಿಲ್ಲಾಪರಿಷತ್‌ಗೆ ಮಾತ್ರ ಒಂದು ಪಕ್ಷದ ಹೆಸರಿನಲ್ಲಿ ಚುನಾವಣೆಯನ್ನು ಮಾಡಿದರೆ ಒಳ್ಳೆಯ ಹೆಸರು ಬರಬಹುದು. ಈ ತರಹ ಮಾಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುವುದಕ್ಕೆ ಬಯಸುತ್ತೇನೆ. ಬಹಳಷ್ಟು ವಿಚಾರಗಳನ್ನು ಬಹಳಷ್ಟು ಜನರು ಹೇಳಿದ್ದಾರೆ. ನಾಮಿನೇಷನ್ ಮಾಡುವ ಸಿಸ್ಟಂ ಏನು ಹೇಳಿದ್ದೀರಿ ಅದನ್ನು ಮಾಡಬಾರದೆಂದು ನಾನು ಹೇಳುತ್ತೇನೆ. ಏಕೆಂದರೆ ತಮ್ಮಂಥವರು ಮುಂದೆ ಮಿನಿಸ್ಟರ್ ಬರಬೇಕಲ್ಲಾ. ಅಧಿಕಾರವನ್ನು ದುರುಪಯೋಗ ಮಾಡುವಂಥ ಪದ್ಧತಿಗಳು ಬಹಳಷ್ಟು ಕಡೆ ಇರುತ್ತವೆ. ನಾಮಿನೇಷನ್ ಮಾಡುವಂಥ ಪದ್ಧತಿ ಗ್ರಾಮಪಂಚಾಯತಿ ತಾಲ್ಲೂಕು ಪಂಚಾಯತಿ ಮತ್ತು ಜಿಲ್ಲಾಪರಿಷತ್‌ಗಳಿಗೆ ಇರಬಾರದೆಂದು ನಾನು ನನ್ನ ಅಭಿಪ್ರಾಯವನ್ನು ವ್ಯಕ್ತ ಪಡಿಸುತ್ತೇನೆ. ಮೀಸಲಾತಿ ಏನಿದೆ ಪರಿಶಿಷ್ಟ ಜಾತಿ ಮತ್ತು ವರ್ಗಗಳು ಅವರಿಗೆ ಯಾರಿಗೂ ಕೂಡ ಅನ್ಯಾಯವಾಗಬಾರದು. ಈಗ ಜನರು ಕೂಡ ಬಹಳ ಜಾಗರೂಕರಾಗಿದ್ದಾರೆ. ಜನ ಬಹಳ ಮುಂದೆ ಬರುತ್ತಿದ್ದಾರೆ. ಅವರಿಗೆ ಎಂತಹ ಕಾನೂನು ಬೇಕು ಎನ್ನುವ ಬಗ್ಗೆ ಕೂಡ ಅವರಿಗೆ ಸಾಕಷ್ಟು ಮಾಹಿತಿಯಿದೆ. ಅವರವರ ಹಕ್ಕುಗಳು ಜನಸಂಖ್ಯೆಯ ಆಧಾರವಾಗಿ ತಾವೇನು ತರುತ್ತಾ ಇದ್ದೀರಿ ಅದು ಬಹಳ ಒಳ್ಳೆಯದು. ಯಾವ

ಜನರಿಗೂ ಯಾವ ಸಮಾಜದವರಿಗೂ, ಯಾವ ಕೋಮಿನವರಿಗೂ ಕೂಡ ಅನ್ಯಾಯವಾಗಬಾರದು. ಎಲ್ಲಾ ಸಮಾಜದವರಿಗೆ ಪರ್ಸೆಂಟೇಜ್ ಪ್ರಕಾರ ಅವರಿಗೆ ಅಧಿಕಾರ ಕೊಟ್ಟರೆ ಬಹಳ ಒಳ್ಳೆಯದು. ಈಗ ತಾವು ಹಿಂದುಳಿದ ವರ್ಗದವರಿಗೆ ರಿಸರ್ವೇಶನ್ ಮಾಡುತ್ತಾ ಇದ್ದೀರಿ. ಹರಿಜನ-ಗಿರಿಜನರಿಗೆ ರಿಸರ್ವೇಷನ್ ಮಾಡುತ್ತಾ ಇದ್ದೀರಿ ಅದನ್ನು ನಾನು ಸ್ವಾಗತ ಮಾಡುತ್ತಿದ್ದೇನೆ. ಮಹಿಳೆಯರಿಗೂ ಕೂಡ ರಿಸರ್ವೇಷನ್ ಇಟ್ಟಿದ್ದೀರಿ. ನಮ್ಮ ರಾಜ್ಯದಲ್ಲಿ ತಮಗೆ ಹೇಳಬೇಕೆಂದರೆ, ಇಡೀ ಕರ್ನಾಟಕದಲ್ಲಿ ಮಹಿಳೆಯರು ಗಂಡಸರಿಗಿಂತ ಹೆಚ್ಚು ಇದ್ದಾರೆ. 2 ಕೋಟಿ ಗಂಡಸರು ಇದ್ದರೆ 2 ಕೋಟಿ ಹೆಂಗಸರು ಇದ್ದಾರೆ. ಅವರಿಗೂ ಕೂಡ ಹೆಚ್ಚಿನ ಅಧಿಕಾರವನ್ನು ಕೊಡಬೇಕೆಂದು ನಾನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತಾ ಇದ್ದೇನೆ. ಹೆಣ್ಣುಮಕ್ಕಳಿಗೆ ಹೆಚ್ಚಿನ ಅಧಿಕಾರವನ್ನು ಕೊಡುವುದರಿಂದ ಈ ನಮ್ಮ ಪ್ರಜಾಪ್ರಭುತ್ವದ ಸಿಸ್ಟಂಗೆ ಒಂದು ದೊಡ್ಡ ಶಕ್ತಿ ಬರುತ್ತದೆ. ಅದಕ್ಕೆ ದಯಮಾಡಿ ತಾವು ಹೆಣ್ಣುಮಕ್ಕಳಿಗೆ ಹೆಚ್ಚಿನ ಪ್ರಾತಿನಿಧ್ಯ ಸಿಗುವಂತೆ ಮಾಡಬೇಕು. ಅದನ್ನು ಕೂಡ ಈ ವಿಧೇಯಕದಲ್ಲಿ ಅಳವಡಿಸಿಕೊಂಡರೆ ಒಳ್ಳೆಯದೆಂದು ಹೇಳುತ್ತೇನೆ. ಈ ವಿಧೇಯಕದ ಬಗ್ಗೆ ತಾವು ಸಂಪೂರ್ಣವಾಗಿ ವಿಚಾರವಿನಿಮಯ ಮಾಡಿಕೊಂಡು ಮಂಡನೆ ಮಾಡಿ, ಮುಂದೆ ಬರುವಂತಹ ವಿಧೇಯಕದಿಂದ ಜನರಿಗೆ ಒಳ್ಳೆಯ ಆಡಳಿತ ಸಿಗುವಂತಹ ದೃಷ್ಟಿಯಿಂದ ತಾವೇನು ಮಾಡಿದ್ದೀರಿ ಅದಕ್ಕೆ ಸಂಪೂರ್ಣವಾದ ನಮ್ಮ ಬೆಂಬಲವನ್ನು ವ್ಯಕ್ತಪಡಿಸಿ ನಮ್ಮ ಎಲ್ಲಾ ಶಾಸಕಮಿತ್ರರು ಇಲ್ಲಿದ್ದಾರೆ ಅವರು ಸಾಕಷ್ಟು ಅನುಭವಿಗಳಾಗಿದ್ದಾರೆ. ಇದರ ಬಗ್ಗೆ ಸಾಕಷ್ಟು ಮಾಹಿತಿ ಇದೆ. ಇದರ ಬಗ್ಗೆ ಚರ್ಚೆಮಾಡಿಕೊಂಡು ಕೊನೆಯ ಹಂತದಲ್ಲಿ ನಿರ್ಣಯ ತೆಗೆದುಕೊಂಡು ತಾವು ಕ್ರಮ ತೆಗೆದುಕೊಳ್ಳಬೇಕೆಂದು ಕೇಳಿಕೊಂಡು ನಾನು ಮಾತನಾಡಲು ಅವಕಾಶ ಮಾಡಿಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ಡಿ.ಆರ್. ಪಾಟೀಲ (ಗದಗ) : ಮಾನ್ಯ ಅಧ್ಯಕ್ಷಿಣಿಯವರೇ, 1993 ನಮ್ಮ ದೇಶದ ಗ್ರಾಮೀಣ ಜನರಿಗೆ ಬಹಳ ಉತ್ತಮವಾದ ಅವಕಾಶವನ್ನು ಕಲ್ಪಿಸುವಂತಹ ಮಸೂದೆಯನ್ನು ತಿದ್ದುಪಡಿ ಮಾಡಿ ಶಾಶ್ವತ ವ್ಯವಸ್ಥೆಯನ್ನು ರೂಪಿಸಿಕೊಟ್ಟಂತಹ ವರ್ಷ. 73ನೆಯ ಘಟನಾ ತಿದ್ದುಪಡಿಯ ಚೌಕಟ್ಟಿನಲ್ಲಿ ಇಡೀ ದೇಶಕ್ಕೆ ಮಾದರಿಯಾಗುವಂತಹ ಒಂದು ಪಂಚಾಯತ್ ರಾಜ್ ಮಸೂದೆಯನ್ನು ಸನ್ಮಾನ್ಯ ಘೋರ್ಪಡೆಯವರು ನಮ್ಮ ಮುಂದೆ ಇಟ್ಟಿದ್ದಾರೆ. ಈ ಮಸೂದೆ ಚಂದ್ರೇಗೌಡರಿಗೆ ವಿಕೃತವಾದ ವಿಕೇಂದ್ರೀಕೃತ ಮಸೂದೆಯಾಗಿ ಕಾಣಿಸಿತು. ಬಹುತೇಕ ಗ್ರಾಮೀಣ ಭಾಗದಲ್ಲಿ ಬದುಕುವ ಎಲ್ಲಾ ವರ್ಗದ ಜನಗಳಿಗೆ ಅಧಿಕಾರ ಹೋಗುತ್ತಿರುವುದರಿಂದ ಇದು ಅವರಿಗೆ ವಿಕೃತವಾದ ವೀಕೇಂದ್ರೀಕರಣ ಮಸೂದೆಯಾಗಿ ಕಂಡಿರುವುದರಲ್ಲಿ ಆಶ್ಚರ್ಯವಿಲ್ಲ. 1983ರಲ್ಲಿ ಅವರು ತಂದಂತಹ ಮಸೂದೆಯೊಳಗೆ ಗ್ರಾಮೀಣ ಭಾಗದಲ್ಲಿ ಇರುವಂತಹ ಬಲಿಷ್ಟರ ಕೈಯಲ್ಲಿ ಅಧಿಕಾರ ಹೋಯಿತು. ಅಲ್ಲಿ ಬದುಕುವಂಥ ಹಿಂದುಳಿದವರ್ಗದವರಿಗಾಗಲೀ, ಹರಿಜನ-ಗಿರಿಜನರಾಗಲೀ ಬಹಳ ಅಸಾಹಾಯಕರಾಗಿ ಈ ವ್ಯವಸ್ಥೆಯನ್ನು ನೋಡುವಂಥ ಪರಿಸ್ಥಿತಿ ನಿರ್ಮಾಣವಾಯಿತು. 1989ರಲ್ಲಿ ನಡೆದ ಚುನಾವಣೆಯಲ್ಲಿ ಅವರು ಸೋಲನ್ನು ಅನುಭವಿಸಿರಬೇಕಾದರೆ ಹೆಗಡೆ-ದೇವೇಗೌಡರ ಜಗಳ ಎಷ್ಟು ಕಾರಣವಾಯಿತೋ ಅಷ್ಟೇ ಕಾರಣ ಈ ಪಂಚಾಯತ್‌ರಾಜ್ ವ್ಯವಸ್ಥೆಯಿಂದ ಸಮಾಜದ ಬಹುತೇಕ ಜನರನ್ನು ದೂರ ಇಟ್ಟಿದ್ದರಿಂದ ಅವರು ಈ ಸೋಲನ್ನು ಅನುಭವಿಸಬೇಕಾಯಿತು.

ಶ್ರೀ ಬಿ. ಎಚ್. ಬನ್ನಿಕೋಡ್ : ತಾವು ಹರಿಜನ-ಗಿರಿಜನರಿಗೆ ಅಥವಾ ಮೈಕ್ರೊಸ್ಕೋಪಿಕ್ ಮೈನಾರಿಟಿ, ಅತಿ ಕಡಿಮೆ ಜನಸಂಖ್ಯೆ ಇರತಕ್ಕಂಥವರಿಗೆ ಅಲ್ಲಿ ಪ್ರಾತಿನಿಧ್ಯ ಇದ್ದಿಲ್ಲ. ಅವೆಲ್ಲಾ ಬಲಾಢ್ಯರ ಕೈಗೆ ಇತ್ತು ಎನ್ನುವ ಬಗ್ಗೆ ಹೇಳಿದಿರಿ. ಬಹುತೇಕ ಈ ವಿಧೇಯಕದಲ್ಲಿದ್ದುದು ಏನೆಂದರೆ ಅಲ್ಲಿ ಸಹಿತ ರಿಸರ್ವೇಷನ್ ಇರಬೇಕು ಎಂದು. ಹರಿಜನ-ಗಿರಿಜನರಿಗೆ, ಪರಿಶಿಷ್ಟ

ಜಾತಿಯವರಿಗೆ, ಹೆಣ್ಣುಮಕ್ಕಳಿಗೆ ರಿಸರ್ವೇಷನ್ ಇತ್ತು. ಯಾರೂ ಚುನಾವಣೆಯಲ್ಲಿ ನಿಂತು ಆಯ್ಕೆಯಾಗಿ ಬರುವುದಕ್ಕೆ ಸಾಧ್ಯ ಇರಲಿಲ್ಲ, ಅಂತಹವರೂ ಸಹಿತ ನಾಮಕರಣವಾಗಿ ಅವರು ಸಹಿತ ಭಾಗವಹಿಸಬೇಕೆಂದು ಕಾನೂನು ಜಾರಿಯಲ್ಲಿತ್ತು. ಅವರ ವಿರುದ್ಧವಾಗಿ ತಾವು ಏನು ಹೇಳುತ್ತಿದ್ದೀರಿ, ಅದು ಸರಿ ಇಲ್ಲ. ಇದರ ವಿರುದ್ಧ ವಿಕೃತವಾಗಿ ನೀವೇ ಮಾತನಾಡುತ್ತಿದ್ದೀರಿ.

ಶ್ರೀ ಡಿ. ಆರ್. ಪಾಟೀಲ್ : ಸನ್ಮಾನ್ಯ ಬನ್ನಿಕೋಡ್ ಅವರು ವಕೀಲರು, ಅವರು ನೋಡಿದ್ದಾರೆ. ಬಹುತೇಕ ನಮ್ಮ ಜಿಲ್ಲೆಯಲ್ಲಿ ಬ್ಯಾಡಗಿ ತಾಲ್ಲೂಕು ಪಂಚಾಯಿತಿ ಬಿಟ್ಟರೆ ಉಳಿದ ಯಾವ ಪಂಚಾಯತಿಯೊಳಗೂ ಯಾವ ಹರಿಜನನೂ ಅಧ್ಯಕ್ಷನಾಗುವುದಕ್ಕೆ ಸಾಧ್ಯ ಇರಲಿಲ್ಲ. ನೀವು ಮಾಡಿದ ರಿಸರ್ವೇಷನ್ ಬರೀ ಕೈ ಎತ್ತುವುದಕ್ಕೆ. ಕುರ್ಚಿಯಲ್ಲಿ ಕುಳಿತು ಅಧಿಕಾರ ಮಾಡುವುದಕ್ಕೆ ತಾವು ರಿಸರ್ವೇಷನ್ ಮಾಡಿದ್ದಿಲ್ಲ. ಆ ವ್ಯವಸ್ಥೆಯನ್ನು ನಾವು ಇವತ್ತು ತರುತ್ತಿದ್ದೇವೆ. ಅದಕ್ಕಾಗಿ ತಮಗೆ ಇದು ವಿಕೃತವಾದ ವಿಕೇಂದ್ರೀಕರಣ ವ್ಯವಸ್ಥೆಯೆಂದು ಅನ್ನಿಸ್ತುತ್ತಿದೆ. ನಮ್ಮ ಕಾಂಗ್ರೆಸ್ ಸರ್ಕಾರ ಯಾವ್ಯಾವಾಗ ಅಧಿಕಾರಕ್ಕೆ ಬರುತ್ತದೆಯೋ ಅದು ರಾಜ್ಯಮಟ್ಟದಲ್ಲಿ ಇರಲಿ, ಅಥವಾ ಕೇಂದ್ರದಲ್ಲಿ ಇರಲಿ, ಸಮಾಜದ ಎಲ್ಲಾ ವರ್ಗದ ಜನರೂ ಅಧಿಕಾರದಲ್ಲಿ ಭಾಗವಹಿಸುವಂಥ ಒಂದು ವ್ಯವಸ್ಥೆಯನ್ನು ತರುವಂಥ ಸಂಸ್ಕೃತಿಯನ್ನು ಅದು ಹೊಂದಿದೆ.

ಶ್ರೀ ಬಿ.ಹೆಚ್. ಬನ್ನಿಕೋಡ್ : ತಾವು ಹೇಳಿರಿ. ಇದ್ದುದನ್ನು ಬಿಟ್ಟು ಹೇಳಿದರೆ ಹೇಳಿದರೆ ಹೇಗೆ? ಹಾಸನ ಜಿಲ್ಲೆಯಲ್ಲಿ ದೇವೇಗೌಡರು ಹರಿಜನನನ್ನು ಜಿಲ್ಲಾಪರಿಷತ್ ಅಧ್ಯಕ್ಷರನ್ನಾಗಿ ಮಾಡಿದರು. ಧಾರವಾಡ ಜಿಲ್ಲೆಯಲ್ಲಿ ಉಪಾಧ್ಯಕ್ಷರು ಪರಿಶಿಷ್ಟ ಜಾತಿಗೆ ಸೇರಿದವರಿದ್ದರು. ಅವರು ವಿರೋಧ ಪಕ್ಷದಲ್ಲಿದ್ದರು ಅಂತ ಹೀಗೆ ಹೇಳುತ್ತೀರಾ?

ಶ್ರೀ ಕೆ. ಶಿವಮೂರ್ತಿ : ಏನೇನು ಮಾಡಿದ್ದೀರಿ ಎಂಬುದನ್ನು ನಾವು ನೋಡಿದ್ದೇವೆ. ತಮ್ಮ ಪಾಂಡಿತ್ಯ ಇಲ್ಲಿ ಬೇಡ. ಸಾಕು.

ಶ್ರೀ ಡಿ. ಆರ್. ಪಾಟೀಲ್ : ಹಾಸನ ಜಿಲ್ಲೆಯಲ್ಲಿ ದೇವೇಗೌಡರು ಮಾಡಿದರು. ಧಾರವಾಡದಲ್ಲಿ ಬೊಮ್ಮಾಯಿಯವರು ಮಾಡಿದರು. ಅವರು ಮಾಡುವುದರಿಂದ ಅಧಿಕಾರ ಸ್ಥಾನ ನಮಗೆ ಬೇಕಾಗಿಲ್ಲ. ಹಕ್ಕಿನಿಂದ ಅಧಿಕಾರ ಸ್ಥಾನ ಈ ವರ್ಗಕ್ಕೆ ಬೇಕು ಎನ್ನುವ ದೃಷ್ಟಿಯಿಂದ ಈ ವ್ಯವಸ್ಥೆಯನ್ನು ನಾವು ಮಾಡಿದ್ದೇವೆ. ಲೋಕಸಭೆಯಲ್ಲಿ ಮಂಡನೆ ಮಾಡಿದ್ದಾಗ ವಿರೋಧ ಮಾಡಿದ್ದನ್ನು ತಾವು ಮರೆತುಬಿಟ್ಟಿದ್ದೀರೆಂದು ಕಾಣುತ್ತದೆ. ನಮ್ಮ ಜಿಲ್ಲೆಯಲ್ಲಿ ಉಪಾಧ್ಯಕ್ಷರು ಒಬ್ಬರನ್ನು ಹರಿಜನರಾದವರನ್ನು ಮಾಡಿದ್ದರು. ಪಾಪ, ಅವರು ಸಭೆಯಲ್ಲೂ ಮಾತನಾಡಲಾಗದಂಥ ವ್ಯವಸ್ಥೆ ಇತ್ತು. ಅವರು ಒಂದೂ ಕೆಲಸ ಮಾಡಲಾಗದ ವ್ಯವಸ್ಥೆ ಇತ್ತು. ಬಹಳ ಮೂಕ ಪ್ರೇಕ್ಷಕರಾಗಿ ಅವರು ಜಿಲ್ಲಾ ಪರಿಷತ್ತಿನ ಎಲ್ಲಾ ನಡವಳಿಕೆಗಳನ್ನು ನೋಡುವಂಥ ವ್ಯವಸ್ಥೆಯನ್ನು ಅಲ್ಲಿ ಇಟ್ಟಿದ್ದರು. ಈಗ ಈ ವ್ಯವಸ್ಥೆಯನ್ನು ಬದಲಾವಣೆ ಮಾಡಿ ಕ್ರಾಂತಿಕಾರಕ ಬದಲಾವಣೆಯನ್ನು ತರುತ್ತಿದ್ದರೆ, ಅದು ಇವರಿಗೆ ವಿಕೃತವಾದ ವಿಕೇಂದ್ರೀಕೃತ ವ್ಯವಸ್ಥೆಯಾಗಿ ಕಾಣುವುದರಲ್ಲಿ ಏನೂ ಆಶ್ಚರ್ಯ ಇಲ್ಲ. ಅದಕ್ಕೇ ಚಂದ್ರೇಗೌಡರಿಗೆ ಈ ಮಸೂದೆ ಆ ರೀತಿಯಾಗಿ ಕಂಡಿದೆ. ಚಂದ್ರೇಗೌಡರಿಗೆ ಭಾಷೆಯ ಮೇಲೆ ಬಹಳ ಪ್ರಭುತ್ವ ಇದೆ. ತಮ್ಮ ಮಾತಿನಿಂದ ಸದನದ ಸದಸ್ಯರನ್ನು ಮರುಳು ಮಾಡಬೇಕೆಂದು ಬಹಳ ವಿಫಲವಾದ ಪ್ರಯತ್ನವನ್ನು ಅವರು ಮಾಡಿದರು. ದುರ್ದೈವಕ್ಕೆ ಅವರು ಈ ಪ್ರಯತ್ನದಲ್ಲಿ ಯಶಸ್ವಿಯಾಗಲಿಲ್ಲ. ನಾವು ತಂದಂಥ ಗ್ರಾಮಸಭೆಯಲ್ಲಿ ಮೂಲ ಸತ್ವ ಇದೆಯೆಂದು ಚಂದ್ರೇಗೌಡರಿಗೂ ಗೊತ್ತಿದೆ. ನಮಗೂ ಗೊತ್ತಿದೆ. ಬಹುತೇಕ ಒಂದು ಗ್ರಾಮಸಭೆ ಬಿಟ್ಟರೆ ಎರಡನೆಯ ಗ್ರಾಮ ಸಭೆ ಯಾವ ಗ್ರಾಮದಲ್ಲೂ ನಡೆಯುವಂಥ ಪರಿಸ್ಥಿತಿ

ಇದ್ದಿರಲಿಲ್ಲ. ಯಾವ ಮಂಡಲ ಪಂಚಾಯತಿಯಲ್ಲೂ ದುಡ್ಡು ಇರಲಿಲ್ಲ. ಗ್ರಾಮೀಣ ಜನ ಏನು ಕೇಳುತ್ತಾರೆ, ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಹಣಕಾಸಿನ ಶಕ್ತಿ ಆಗಿನ ಮಂಡಲ ಪಂಚಾಯಿತಿಗೆ ಇರಲಿಲ್ಲ. ಎಲ್ಲಾ ಮಂಡಲ ಪಂಚಾಯತ್ ಪ್ರಧಾನರು ಏಕೆ ಈ ಕುರ್ಚಿಗೆ ಬಂದೆವೋ ಎಂದು ಚಿಂತೆ ಪಡುತ್ತಿದ್ದರು. 1989ರೊಳಗೆ ಸುದೈವದಿಂದ ರಾಜೀವ್‌ಗಾಂಧಿಯವರು ಜವಾಹರ್ ರೋಜಗಾರ್ ಯೋಜನೆಯ ಮುಖಾಂತರ ನೇರವಾಗಿ ಗ್ರಾಮಗಳಿಗೆ ಹಣ ಕೊಟ್ಟರಲ್ಲಾ, ಆಗ ಅವರಿಗೆ ಗ್ರಾಮಸಭೆಗೆ ಹೋಗಿ ಜನರನ್ನು ಎದುರಿಸುವಂಥ ನೈತಿಕ ಶಕ್ತಿ ಬಂತು. ಇಲ್ಲ ಎಂದರೆ, ಆ ಶಕ್ತಿ ಇದ್ದಿದ್ದಲ್ಲ. ಆದರೆ, ಅಷ್ಟರೊಳಗೆ ಈ ಗ್ರಾಮಸಭೆಯನ್ನು ಯಾವರೀತಿ ಮ್ಯಾನುಪ್ಯುಲೇಷನ್ ಮಾಡಬೇಕೆನ್ನುವ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದರಿಂದ, ಯಾವ ಗ್ರಾಮಸಭೆಯೂ ನಡೆಯಲಿಲ್ಲ. ಮಾನ್ಯ ಘೋರ್ಪಡೆ ಸಾಹೇಬರು, ದಯಮಾಡಿ, ಈ ಕಾನೂನಿನಲ್ಲಿ ಗ್ರಾಮಸಭೆ ನಡೆಯಲೇಬೇಕೆಂದು ಮಾಡಬೇಕು. ಮತ್ತೇ ಈ ಗ್ರಾಮಸಭೆಗೆ ಕೋರಂ ಇರಬೇಕು. ಗ್ರಾಮಸಭೆ ನಡೆದ ಬಗ್ಗೆ ಪ್ರೂಫ್ ಇರಬೇಕು. ತಾವು ಈ ರೀತಿಯ ವ್ಯವಸ್ಥೆ ಮಾಡಬೇಕು. ಈಗಿದ್ದ ವ್ಯವಸ್ಥೆಯಲ್ಲಿ ಏನಾಗುತ್ತಿತ್ತು ಎಂದರೆ, ಒಂದೇ ಕುಟುಂಬದ ಸದಸ್ಯರಷ್ಟೇ ಕುಳಿತುಕೊಂಡು, ಗ್ರಾಮಸಭೆ ಮಾಡಿದರೂ, ಕಾನೂನುಬದ್ದವಾಗಿ ಸರಿಯಾದ ಗ್ರಾಮಸಭೆ ಆಗುತ್ತಿತ್ತು. ಬರೀ 4-5 ಜನ ಕೂಡಿ ಮಾಡಿದರೂ ಅದು ಕಾನೂನುಬದ್ಧವಾದ ಸಭೆಯೇ ಆಗುತ್ತಿತ್ತು. ಅದಕ್ಕೆ ಕೋರಂ ಅವಶ್ಯಕತೆ ಇರಲಿಲ್ಲ. ಅಂತಹ ಅವ್ಯವಸ್ಥೆ ದಯಮಾಡಿ ಬೇಡ.

ಶ್ರೀ ಎಂ. ವೈ. ಘೋರ್ಪಡೆ : ನಮ್ಮ ಕಾನೂನಿನಲ್ಲಿ ಕನಿಷ್ಟ 6 ತಿಂಗಳಿಗೊಂದು ಸಲ ಗ್ರಾಮಸಭೆ ಕರೆಯಲೇಬೇಕೆಂದು ಹೇಳಿದ್ದೇವೆ. ಕರೆಯದಿದ್ದರೆ, ಹೈಯರ್ ಬಾಡಿ ಎಂದರೆ, ಎಕ್ಸಿಕ್ಯುಟೀವ್ ಆಫೀಸರ್ ಕರೆಯಬಹುದು ಎಂದು ಹೇಳಿದ್ದೇವೆ. ಇದಕ್ಕೂ ಮುಂದೆ, ಈ ಬಿಲ್ ಆಕ್ಟ್ ಆಗಿ, ಹೊಸ ಚುನಾವಣೆಗಳು ಆಗುವವರೆಗೂ ನಾವು ಕಾಯಬೇಕಾದ್ದಿಲ್ಲ. ಈಗಾಗಲೇ ನಾವು ಎಲ್ಲಾ ಮುಖ್ಯ ಕಾರ್ಯದರ್ಶಿಯವರಿಗೂ ಆದೇಶ ಕೊಡುತ್ತಿದ್ದೇವೆ. ನೀವು ನಿಯಮಾವಳಿಯಲ್ಲಿ ನಿರ್ದಿಷ್ಟವಾದ ಪ್ರೋಗ್ರಾಂ ಹಾಕಿ, ಯಾವ ದಿನ ಯಾವ ಹಳ್ಳಿಯಲ್ಲಿ ಗ್ರಾಮಸಭೆ ನಡೆಸಬೇಕೆಂಬುದು ತಿಳಿಸಿ, ಅಲ್ಲಿ ಅಧಿಕಾರಸ್ಥರೆಲ್ಲರೂ ಹೋಗಿ, ನಮ್ಮ ಕಾರ್ಯಕ್ರಮಗಳನ್ನು ಹೇಳಬೇಕು. ಇದಕ್ಕೋಸ್ಕರ ಈ ಹೊಸ ಕಾಯಿದೆಯನ್ನು ಕಾಯಬೇಕಾದ್ದಿಲ್ಲ. ನಾವು ಇದನ್ನು ಮಾಡಿದ್ದೇವೆ. ಕಡ್ಡಾಯವಾಗಿ, ಪ್ರತಿ ತಾಲ್ಲೂಕಿನಲ್ಲಿಯೂ, ಯಾವ ದಿನ, ಯಾವ ಹಳ್ಳಿಯಲ್ಲಿ ಜನರನ್ನು ಸೇರಿಸಬೇಕು, ಗ್ರಾಮಸಭೆ ಎಂದರೆ, ಜನರನ್ನು ಸೇರಿಸಬೇಕು. ಮತ್ತೆ ಅವರಿಗೆ, ಗ್ರಾಮಸಭೆ ನಡೆಯುವುದು ಗೊತ್ತಿರಬೇಕು. ಇಂತಹ ದಿನ ಎಲ್ಲರೂ ಬರುತ್ತಾರೆ, ಮತ್ತೆ ಎಲ್ಲಾ ವಿಷಯಗಳೂ ಚರ್ಚೆಯಾಗುತ್ತವೆ ಎಂಬುದು ಅವರಿಗೆ ಗೊತ್ತಾಗಿ, ಆ ಪ್ರೋಗ್ರಾಂ ಪ್ರಕಾರ ಮಾಡಿದರೆ ನನಗನಿಸುತ್ತದೆ, ಈ ಗ್ರಾಮಸಭೆ ಯಶಸ್ವಿಯಾಗಿ ನಡೆಸುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಈ ಆಕ್ಟ್ ಪ್ರಕಾರ, ಹೊಸ ಚುನಾವಣೆಗಳಾಗುವವರೆಗೂ ನಾವು ಕಾಯಬೇಕಾದ್ದಿಲ್ಲ. 6 ತಿಂಗಳಲ್ಲಿ ಈ ಕೆಲಸ ಮಾಡಿದರೆ, ಆಗ ಚುನಾಯಿತ ಪ್ರತಿನಿಧಿಗಳು ಬಂದಾಗ, ಇನ್ನಷ್ಟು ಬಲ, ಪುಷ್ಟಿ ಬರುತ್ತದೆಂದು ಹೇಳಿ, ನಾನು ನಂಬಿದ್ದೇನೆ.

ಶ್ರೀ ಡಿ. ಆರ್. ಪಾಟೀಲ್ : ತಾವು ಈ ರೀತಿಯ ವ್ಯವಸ್ಥೆಯನ್ನು ಮಾಡಿದರೆ, ನನಗೆ ಸಂತೋಷ. ಆದರೆ, ಗ್ರಾಮಪಂಚಾಯಿತಿ ಸಭೆ, ತಾಲ್ಲೂಕು ಪಂಚಾಯಿತಿ ಸಭೆ ಮತ್ತು ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಹೇಗೆ ಪ್ರತಿ ಸಭೆಗೂ ಕೋರಂ ಇರಬೇಕೆಂದು ತಾವು ಹೇಳಿದ್ದೀರೋ ಆ ಕೋರಂ ವ್ಯವಸ್ಥೆ ಈ ಗ್ರಾಮಸಭೆಗಳಲ್ಲೂ ಇರುವಂಥ ವ್ಯವಸ್ಥೆ ಮಾಡಬೇಕೆಂದು ನನಗನಿಸುತ್ತದೆ. ಏಕೆಂದರೆ, ಅರ್ಹ ಫಲಾನುಭವಿಗಳ ಆಯ್ಕೆ ಈ ಗ್ರಾಮಸಭೆ ಮುಖಾಂತರ ಆಗಬೇಕು. ಅಲ್ಲಿಯೇ, ಊರಿನವರು 4-5 ಮಂದಿ ಕೂಡಿ ನಿರ್ಧಾರ ಮಾಡುವಂಥ ಪರಿಸ್ಥಿತಿ

ಇದ್ದಿರಲಿಲ್ಲ. ಯಾವ ಮಂಡಲ ಪಂಚಾಯತಿಯಲ್ಲೂ ದುಡ್ಡು ಇರಲಿಲ್ಲ. ಗ್ರಾಮೀಣ ಜನ ಏನು ಕೇಳುತ್ತಾರೆ, ಅದನ್ನು ಅನುಷ್ಠಾನಕ್ಕೆ ತರುವುದಕ್ಕೆ ಹಣಕಾಸಿನ ಶಕ್ತಿ ಆಗಿನ ಮಂಡಲ ಪಂಚಾಯಿತಿಗೆ ಇರಲಿಲ್ಲ. ಎಲ್ಲಾ ಮಂಡಲ ಪಂಚಾಯತ್ ಪ್ರಧಾನರು ಏಕೆ ಈ ಕುರ್ಚಿಗೆ ಬಂದೆವೋ ಎಂದು ಚಿಂತೆ ಪಡುತ್ತಿದ್ದರು. 1989ರೊಳಗೆ ಸುದೈವದಿಂದ ರಾಜೀವ್‌ಗಾಂಧಿಯವರು ಜವಾಹರ್ ರೋಜಗಾರ್ ಯೋಜನೆಯ ಮುಖಾಂತರ ನೇರವಾಗಿ ಗ್ರಾಮಗಳಿಗೆ ಹಣ ಕೊಟ್ಟರಲ್ಲಾ, ಆಗ ಅವರಿಗೆ ಗ್ರಾಮಸಭೆಗೆ ಹೋಗಿ ಜನರನ್ನು ಎದುರಿಸುವಂಥ ನೈತಿಕ ಶಕ್ತಿ ಬಂತು. ಇಲ್ಲ ಎಂದರೆ, ಆ ಶಕ್ತಿ ಇದ್ದಿದ್ದಲ್ಲ. ಆದರೆ, ಅಷ್ಟರೊಳಗೆ ಈ ಗ್ರಾಮಸಭೆಯನ್ನು ಯಾವರೀತಿ ಮ್ಯಾನುಪ್ಯುಲೇಷನ್ ಮಾಡಬೇಕೆನ್ನುವ ಒಂದು ಸಂಸ್ಕೃತಿಯನ್ನು ಬೆಳೆಸಿಕೊಂಡಿದ್ದರಿಂದ, ಯಾವ ಗ್ರಾಮಸಭೆಯೂ ನಡೆಯಲಿಲ್ಲ. ಮಾನ್ಯ ಘೋರ್ಪಡೆ ಸಾಹೇಬರು, ದಯಮಾಡಿ, ಈ ಕಾನೂನಿನಲ್ಲಿ ಗ್ರಾಮಸಭೆ ನಡೆಯಲೇಬೇಕೆಂದು ಮಾಡಬೇಕು. ಮತ್ತೇ ಈ ಗ್ರಾಮಸಭೆಗೆ ಕೋರಂ ಇರಬೇಕು. ಗ್ರಾಮಸಭೆ ನಡೆದ ಬಗ್ಗೆ ಪ್ರೂಫ್ ಇರಬೇಕು. ತಾವು ಈ ರೀತಿಯ ವ್ಯವಸ್ಥೆ ಮಾಡಬೇಕು. ಈಗಿದ್ದ ವ್ಯವಸ್ಥೆಯಲ್ಲಿ ಏನಾಗುತ್ತಿತ್ತು ಎಂದರೆ, ಒಂದೇ ಕುಟುಂಬದ ಸದಸ್ಯರಷ್ಟೇ ಕುಳಿತುಕೊಂಡು, ಗ್ರಾಮಸಭೆ ಮಾಡಿದರೂ, ಕಾನೂನುಬದ್ದವಾಗಿ ಸರಿಯಾದ ಗ್ರಾಮಸಭೆ ಆಗುತ್ತಿತ್ತು. ಬರೀ 4-5 ಜನ ಕೂಡಿ ಮಾಡಿದರೂ ಅದು ಕಾನೂನುಬದ್ಧವಾದ ಸಭೆಯೇ ಆಗುತ್ತಿತ್ತು. ಅದಕ್ಕೆ ಕೋರಂ ಅವಶ್ಯಕತೆ ಇರಲಿಲ್ಲ. ಅಂತಹ ಅವ್ಯವಸ್ಥೆ ದಯಮಾಡಿ ಬೇಡ.

ಶ್ರೀ ಎಂ. ವೈ. ಘೋರ್ಪಡೆ : ನಮ್ಮ ಕಾನೂನಿನಲ್ಲಿ ಕನಿಷ್ಟ 6 ತಿಂಗಳಿಗೊಂದು ಸಲ ಗ್ರಾಮಸಭೆ ಕರೆಯಲೇಬೇಕೆಂದು ಹೇಳಿದ್ದೇವೆ. ಕರೆಯದಿದ್ದರೆ, ಹೈಯರ್ ಬಾಡಿ ಎಂದರೆ, ಎಕ್ಸಿಕ್ಯುಟೀವ್ ಆಫೀಸರ್ ಕರೆಯಬಹುದು ಎಂದು ಹೇಳಿದ್ದೇವೆ. ಇದಕ್ಕೂ ಮುಂದೆ, ಈ ಬಿಲ್ ಆಕ್ಟ್ ಆಗಿ, ಹೊಸ ಚುನಾವಣೆಗಳು ಆಗುವವರೆಗೂ ನಾವು ಕಾಯಬೇಕಾದ್ದಿಲ್ಲ. ಈಗಾಗಲೇ ನಾವು ಎಲ್ಲಾ ಮುಖ್ಯ ಕಾರ್ಯದರ್ಶಿಯವರಿಗೂ ಆದೇಶ ಕೊಡುತ್ತಿದ್ದೇವೆ. ನೀವು ನಿಯಮಾವಳಿಯಲ್ಲಿ ನಿರ್ದಿಷ್ಟವಾದ ಪ್ರೋಗ್ರಾಂ ಹಾಕಿ, ಯಾವ ದಿನ ಯಾವ ಹಳ್ಳಿಯಲ್ಲಿ ಗ್ರಾಮಸಭೆ ನಡೆಸಬೇಕೆಂಬುದು ತಿಳಿಸಿ, ಅಲ್ಲಿ ಅಧಿಕಾರಸ್ಥರೆಲ್ಲರೂ ಹೋಗಿ, ನಮ್ಮ ಕಾರ್ಯಕ್ರಮಗಳನ್ನು ಹೇಳಬೇಕು. ಇದಕ್ಕೋಸ್ಕರ ಈ ಹೊಸ ಕಾಯಿದೆಯನ್ನು ಕಾಯಬೇಕಾದ್ದಿಲ್ಲ. ನಾವು ಇದನ್ನು ಮಾಡಿದ್ದೇವೆ. ಕಡ್ಡಾಯವಾಗಿ, ಪ್ರತಿ ತಾಲ್ಲೂಕಿನಲ್ಲಿಯೂ, ಯಾವ ದಿನ, ಯಾವ ಹಳ್ಳಿಯಲ್ಲಿ ಜನರನ್ನು ಸೇರಿಸಬೇಕು, ಗ್ರಾಮಸಭೆ ಎಂದರೆ, ಜನರನ್ನು ಸೇರಿಸಬೇಕು. ಮತ್ತೆ ಅವರಿಗೆ, ಗ್ರಾಮಸಭೆ ನಡೆಯುವುದು ಗೊತ್ತಿರಬೇಕು. ಇಂತಹ ದಿನ ಎಲ್ಲರೂ ಬರುತ್ತಾರೆ, ಮತ್ತೆ ಎಲ್ಲಾ ವಿಷಯಗಳೂ ಚರ್ಚೆಯಾಗುತ್ತವೆ ಎಂಬುದು ಅವರಿಗೆ ಗೊತ್ತಾಗಿ, ಆ ಪ್ರೋಗ್ರಾಂ ಪ್ರಕಾರ ಮಾಡಿದರೆ ನನಗನಿಸುತ್ತದೆ, ಈ ಗ್ರಾಮಸಭೆ ಯಶಸ್ವಿಯಾಗಿ ನಡೆಸುವುದರಲ್ಲಿ ಯಾವ ತೊಂದರೆಯೂ ಆಗುವುದಿಲ್ಲ. ಈ ಆಕ್ಟ್ ಪ್ರಕಾರ, ಹೊಸ ಚುನಾವಣೆಗಳಾಗುವವರೆಗೂ ನಾವು ಕಾಯಬೇಕಾದ್ದಿಲ್ಲ. 6 ತಿಂಗಳಲ್ಲಿ ಈ ಕೆಲಸ ಮಾಡಿದರೆ, ಆಗ ಚುನಾಯಿತ ಪ್ರತಿನಿಧಿಗಳು ಬಂದಾಗ, ಇನ್ನಷ್ಟು ಬಲ, ಪುಷ್ಟಿ ಬರುತ್ತದೆಂದು ಹೇಳಿ, ನಾನು ನಂಬಿದ್ದೇನೆ.

ಶ್ರೀ ಡಿ. ಆರ್. ಪಾಟೀಲ್ : ತಾವು ಈ ರೀತಿಯ ವ್ಯವಸ್ಥೆಯನ್ನು ಮಾಡಿದರೆ, ನನಗೆ ಸಂತೋಷ. ಆದರೆ, ಗ್ರಾಮಪಂಚಾಯಿತಿ ಸಭೆ, ತಾಲ್ಲೂಕು ಪಂಚಾಯಿತಿ ಸಭೆ ಮತ್ತು ಜಿಲ್ಲಾ ಪಂಚಾಯಿತಿ ಸಭೆಗಳಲ್ಲಿ ಹೇಗೆ ಪ್ರತಿ ಸಭೆಗೂ ಕೋರಂ ಇರಬೇಕೆಂದು ತಾವು ಹೇಳಿದ್ದೀರೋ ಆ ಕೋರಂ ವ್ಯವಸ್ಥೆ ಈ ಗ್ರಾಮಸಭೆಗಳಲ್ಲೂ ಇರುವಂಥ ವ್ಯವಸ್ಥೆ ಮಾಡಬೇಕೆಂದು ನನಗನಿಸುತ್ತದೆ. ಏಕೆಂದರೆ, ಅರ್ಹ ಫಲಾನುಭವಿಗಳ ಆಯ್ಕೆ ಈ ಗ್ರಾಮಸಭೆ ಮುಖಾಂತರ ಆಗಬೇಕು. ಅಲ್ಲಿಯೇ, ಊರಿನವರು 4-5 ಮಂದಿ ಕೂಡಿ ನಿರ್ಧಾರ ಮಾಡುವಂಥ ಪರಿಸ್ಥಿತಿ

6.20 ಪಿ. ಎಂ.

ಯಾಕೆಂದರೆ, ಜನರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ ಅವರನ್ನು ಮುಂದೆಯೂ ಅಧಿಕಾರಕ್ಕೆ ಬಂದವರು ಮುಂದುವರಿಸುತ್ತಾರೆ, ಇಲ್ಲವಾದರೆ ನೀವು ಮನೆಗೆ ಹೋಗಿ ನಾವು ಬೇರೆಯವರನ್ನು ನೇಮಿಸಿಕೊಳ್ಳುತ್ತೇವೆ ಎಂದು ಬೇರೆಯವರನ್ನು ನೇಮಿಸಿಕೊಳ್ಳುತ್ತಾರೆ. ನಾವು ಸೇವಾಭದ್ರತೆಯನ್ನು ಈ ಅಧಿಕಾರಿಗಳಿಗೆ ಕೊಡುವುದರಿಂದ, ನೌಕರಿಗೆ ಸೇರುವ ಮೊದಲು ಏನೊಂದು ವಿಧೇಯತೆ ಏನು ಅವರ ಹತ್ತಿರ ಇರುತ್ತದೆ, ಅದು ನೌಕರಿಗೆ ಸೇರಿದ ಮೇಲೆ, ಅವರಲ್ಲಿ ಜನಗಳ ಸೇವೆಗೋಸ್ಕರವಾಗಿ ನಾವು ಇಲ್ಲಿಗೆ ಬಂದಿದ್ದೇವೆ, ಈ ನೌಕರಿಯನ್ನು ಪಡೆದುಕೊಂಡಿದ್ದೇವೆ ಎಂಬ ಭಾವನೆಯು ಅವರಿಂದ ಸಂಪೂರ್ಣವಾಗಿ ಹೋಗಿಬಿಡುತ್ತದೆ. ಆದ್ದರಿಂದ ಕಂಟ್ರಾಕ್ಟ್ ಬೇಸಿಸ್ ಮೇಲೆ ನೌಕರರನ್ನು ನೇಮಿಸಿಕೊಳ್ಳುವ ಈ ಒಂದು ಪ್ರಯೋಗ ಮೊದಲು ಗ್ರಾಮಮಟ್ಟದಲ್ಲಿ ನಡೆಯಲಿ. ಅದು ಯಶಸ್ವಿಯಾದರೆ ಅದನ್ನು ಮುಂದೆ ಬೇರೆ ಬೇರೆ ಮಟ್ಟದಲ್ಲಿ ಮತ್ತು ಸರಕಾರದ ಮಟ್ಟದಲ್ಲಿ ಕೂಡ ತರಲು ಸಾಧ್ಯವಾಗುತ್ತದೆ. ಆಗ ಸಿಬ್ಬಂದಿ ಮೇಲೆ ಆಗುವಂಥ ವೆಚ್ಚವು ಬಹಳಷ್ಟು ಕಡಿಮೆಯಾಗುತ್ತದೆ ಎನ್ನುವಂಥ ಭಾವನೆ ನನಗೆ ಇದ್ದು ತಾವುಗಳು ಅದನ್ನು ಮಾಡಲು ಪ್ರಯತ್ನ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ : ಈಗ ಸಧ್ಯಕ್ಕೆ ಸ್ವಲ್ಪಮಟ್ಟಿಗೆ ಅವರಿಗೆ ಅಧಿಕಾರ ಇದೆ. ಆದರೆ ಅವರು ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಲ್ಲ ಅಷ್ಟೆ. ಸಾವಿರಾರು ಜನರಿಗೆ ಕನ್ಸಾಲಿಡೇಟೆಡ್ ಆಧಾರದ ಮೇಲೆ ನೇಮಕ ಮಾಡಿ, ಅಂಥವರು ಈಗ ಸಮಾಧಾನದಲ್ಲಿ ಇಲ್ಲ. ಅವರುಗಳು ಸರಕಾರದ ಮೇಲೆ ಒತ್ತಡವನ್ನು ತರುತ್ತಾ ಇದ್ದಾರೆ. ನಮಗೂ ಸರಕಾರಿ ನೌಕರರ ತರಹ ವ್ಯವಸ್ಥೆ ಮಾಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಗ್ರಾಮಮಟ್ಟದಲ್ಲಿ ಅಲ್ಲಿರತಕ್ಕಂಥ ಸ್ಥಳೀಯ ಜನರಿಗೆ ಒಂದು ಕನ್ಸಾಲಿಡೇಟೆಡ್ ಸ್ಯಾಲರಿಯ ಮೇಲೆ ಕೆಲಸವನ್ನು ಕೊಡುವಂಥಾದ್ದು ಅಷ್ಟು ಯಶಸ್ವಿ ಮತ್ತು ಸಮಾಧಾನಕರವಾಗಿ ಆಗಿಲ್ಲ. ತಾವುಗಳು ಹೇಳುತ್ತಿರುವುದು ಸರಿಯಾಗಿದೆಯಾದರೂ ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ತಾವುಗಳೇ ಹೇಳಬೇಕು. ಅವರು ಸೇರಿದ ಮೇಲೆ ಸರಕಾರಿ ಸ್ಕೇಲ್ ಕೇಳಲು ಪ್ರಾರಂಭ ಮಾಡುತ್ತಾರೆ.

ಶ್ರೀ ಡಿ. ಆರ್. ಪಾಟೀಲ್ : ಅವರು ಖಾಯಂ ಆಗಿ ಪಂಚಾಯತ್ ನೌಕರರು ಆಗಿರುವಂಥ ಒಂದು ಅವಕಾಶ ಇರಲೇಬಾರದು. ಕಾಂಟ್ರಾಕ್ಟ್ ಬೇಸಿಸ್ ಮೇಲೆ, ಐದು ವರ್ಷಗಳು - their services should be co-terminus with the term of the elected panchayat. If they have done good work, they can be reappointed for the next term on contract basis. By this definitely, we can extract work from them. Otherwise, it is very difficult. ಈಗ ತಾವುಗಳು ಗ್ರಾಮಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವಂಥ ಶಾಲಾಮಾಸ್ತರರೇ ಇರಲಿ, ದನದ ದವಾಖಾನೆಯಲ್ಲಿರುವಂಥ ಸಿಬ್ಬಂದಿಯೇ ಇರಲಿ, ಗ್ರಾಮ ಸೇವಕನೇ ಇರಲಿ, ಕೃಷಿಸಹಾಯಕರೇ ಇರಲಿ, ಇವರ ಸಂಬಳವನ್ನಾದರೂ ಗ್ರಾಮಪಂಚಾಯಿತಿಯ ಮೂಲಕ ಬಿಡುಗಡೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಇವರ ಮೇಲೆ ಒಂದು ಹತೋಟಿಯು ಪಂಚಾಯಿತಿಗೆ ಬರುತ್ತದೆ. ಇವೊತ್ತು ಅವರು ಶಾಲೆಗೆ ಸರಿಯಾಗಿ ಬರುವುದಿಲ್ಲ, ಗ್ರಾಮಸೇವಕರು ಹಳ್ಳಿಯಲ್ಲಿ ಇರುವುದಿಲ್ಲ, ಡಾಕ್ಟರ್ಸ್ ತಮ್ಮ ಮನಸ್ಸಿಗೆ ಬಂದ ಹಾಗೆ ದವಾಖಾನೆಗೆ ಬರುತ್ತಾ ಇರುತ್ತಾರೆ. ಆದರೆ, ಸಂಬಳ ಮಾತ್ರ ಅವರಿಗೆ ಸರಕಾರದಿಂದ ನೇರವಾಗಿ ಬಟವಾಡೆ ಆಗುತ್ತದೆ. ಯಾರಿಗೂ ಅವರು ಅಕೌಂಟೆಬಲ್ ಇಲ್ಲ. ಆದ್ದರಿಂದ ಸಂಬಳವನ್ನು ನೇರವಾಗಿ ಅವರಿಗೆ ಕೊಡುವ ಬದಲು ಪಂಚಾಯಿತಿಯ ಮುಖಾಂತರ ಮುಟ್ಟುವ ಹಾಗೆ ಮಾಡಿದರೆ ನೌಕರವರ್ಗದವರನ್ನು ಕೇಳಲು ಪಂಚಾಯತಿಗಳಿಗೆ ಸ್ವಲ್ಪ ಹಕ್ಕು

6.20 ಪಿ. ಎಂ.

ಯಾಕೆಂದರೆ, ಜನರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರೆ ಅವರನ್ನು ಮುಂದೆಯೂ ಅಧಿಕಾರಕ್ಕೆ ಬಂದವರು ಮುಂದುವರಿಸುತ್ತಾರೆ, ಇಲ್ಲವಾದರೆ ನೀವು ಮನೆಗೆ ಹೋಗಿ ನಾವು ಬೇರೆಯವರನ್ನು ನೇಮಿಸಿಕೊಳ್ಳುತ್ತೇವೆ ಎಂದು ಬೇರೆಯವರನ್ನು ನೇಮಿಸಿಕೊಳ್ಳುತ್ತಾರೆ. ನಾವು ಸೇವಾಭದ್ರತೆಯನ್ನು ಈ ಅಧಿಕಾರಿಗಳಿಗೆ ಕೊಡುವುದರಿಂದ, ನೌಕರಿಗೆ ಸೇರುವ ಮೊದಲು ಏನೊಂದು ವಿಧೇಯತೆ ಏನು ಅವರ ಹತ್ತಿರ ಇರುತ್ತದೆ, ಅದು ನೌಕರಿಗೆ ಸೇರಿದ ಮೇಲೆ, ಅವರಲ್ಲಿ ಜನಗಳ ಸೇವೆಗೋಸ್ಕರವಾಗಿ ನಾವು ಇಲ್ಲಿಗೆ ಬಂದಿದ್ದೇವೆ, ಈ ನೌಕರಿಯನ್ನು ಪಡೆದುಕೊಂಡಿದ್ದೇವೆ ಎಂಬ ಭಾವನೆಯು ಅವರಿಂದ ಸಂಪೂರ್ಣವಾಗಿ ಹೋಗಿಬಿಡುತ್ತದೆ. ಆದ್ದರಿಂದ ಕಂಟ್ರಾಕ್ಟ್ ಬೇಸಿಸ್ ಮೇಲೆ ನೌಕರರನ್ನು ನೇಮಿಸಿಕೊಳ್ಳುವ ಈ ಒಂದು ಪ್ರಯೋಗ ಮೊದಲು ಗ್ರಾಮಮಟ್ಟದಲ್ಲಿ ನಡೆಯಲಿ. ಅದು ಯಶಸ್ವಿಯಾದರೆ ಅದನ್ನು ಮುಂದೆ ಬೇರೆ ಬೇರೆ ಮಟ್ಟದಲ್ಲಿ ಮತ್ತು ಸರಕಾರದ ಮಟ್ಟದಲ್ಲಿ ಕೂಡ ತರಲು ಸಾಧ್ಯವಾಗುತ್ತದೆ. ಆಗ ಸಿಬ್ಬಂದಿ ಮೇಲೆ ಆಗುವಂಥ ವೆಚ್ಚವು ಬಹಳಷ್ಟು ಕಡಿಮೆಯಾಗುತ್ತದೆ ಎನ್ನುವಂಥ ಭಾವನೆ ನನಗೆ ಇದ್ದು ತಾವುಗಳು ಅದನ್ನು ಮಾಡಲು ಪ್ರಯತ್ನ ಮಾಡಬೇಕು.

ಶ್ರೀ ಎಂ. ವೈ. ಘೋರ್ಪಡೆ : ಈಗ ಸಧ್ಯಕ್ಕೆ ಸ್ವಲ್ಪಮಟ್ಟಿಗೆ ಅವರಿಗೆ ಅಧಿಕಾರ ಇದೆ. ಆದರೆ ಅವರು ಅಧಿಕಾರವನ್ನು ಸರಿಯಾಗಿ ಉಪಯೋಗ ಮಾಡಿಲ್ಲ ಅಷ್ಟೆ. ಸಾವಿರಾರು ಜನರಿಗೆ ಕನ್ಸಾಲಿಡೇಟೆಡ್ ಆಧಾರದ ಮೇಲೆ ನೇಮಕ ಮಾಡಿ, ಅಂಥವರು ಈಗ ಸಮಾಧಾನದಲ್ಲಿ ಇಲ್ಲ. ಅವರುಗಳು ಸರಕಾರದ ಮೇಲೆ ಒತ್ತಡವನ್ನು ತರುತ್ತಾ ಇದ್ದಾರೆ. ನಮಗೂ ಸರಕಾರಿ ನೌಕರರ ತರಹ ವ್ಯವಸ್ಥೆ ಮಾಡಿ ಎಂದು ಕೇಳಿಕೊಳ್ಳುತ್ತಿದ್ದಾರೆ. ಗ್ರಾಮಮಟ್ಟದಲ್ಲಿ ಅಲ್ಲಿರತಕ್ಕಂಥ ಸ್ಥಳೀಯ ಜನರಿಗೆ ಒಂದು ಕನ್ಸಾಲಿಡೇಟೆಡ್ ಸ್ಯಾಲರಿಯ ಮೇಲೆ ಕೆಲಸವನ್ನು ಕೊಡುವಂಥಾದ್ದು ಅಷ್ಟು ಯಶಸ್ವಿ ಮತ್ತು ಸಮಾಧಾನಕರವಾಗಿ ಆಗಿಲ್ಲ. ತಾವುಗಳು ಹೇಳುತ್ತಿರುವುದು ಸರಿಯಾಗಿದೆಯಾದರೂ ಅದನ್ನು ಯಾವ ರೀತಿಯಲ್ಲಿ ಮಾಡಬೇಕೆಂಬುದನ್ನು ತಾವುಗಳೇ ಹೇಳಬೇಕು. ಅವರು ಸೇರಿದ ಮೇಲೆ ಸರಕಾರಿ ಸ್ಕೇಲ್ ಕೇಳಲು ಪ್ರಾರಂಭ ಮಾಡುತ್ತಾರೆ.

ಶ್ರೀ ಡಿ. ಆರ್. ಪಾಟೀಲ್ : ಅವರು ಖಾಯಂ ಆಗಿ ಪಂಚಾಯತ್ ನೌಕರರು ಆಗಿರುವಂಥ ಒಂದು ಅವಕಾಶ ಇರಲೇಬಾರದು. ಕಾಂಟ್ರಾಕ್ಟ್ ಬೇಸಿಸ್ ಮೇಲೆ, ಐದು ವರ್ಷಗಳು - their services should be co-terminus with the term of the elected panchayat. If they have done good work, they can be reappointed for the next term on contract basis. By this definitely, we can extract work from them. Otherwise, it is very difficult. ಈಗ ತಾವುಗಳು ಗ್ರಾಮಪಂಚಾಯಿತಿ ಮಟ್ಟದಲ್ಲಿ ಕೆಲಸ ಮಾಡುವಂಥ ಶಾಲಾಮಾಸ್ತರರೇ ಇರಲಿ, ದನದ ದವಾಖಾನೆಯಲ್ಲಿರುವಂಥ ಸಿಬ್ಬಂದಿಯೇ ಇರಲಿ, ಗ್ರಾಮ ಸೇವಕನೇ ಇರಲಿ, ಕೃಷಿಸಹಾಯಕರೇ ಇರಲಿ, ಇವರ ಸಂಬಳವನ್ನಾದರೂ ಗ್ರಾಮಪಂಚಾಯಿತಿಯ ಮೂಲಕ ಬಿಡುಗಡೆ ಮಾಡುವಂಥ ಒಂದು ವ್ಯವಸ್ಥೆಯನ್ನು ಮಾಡಿದರೆ ಇವರ ಮೇಲೆ ಒಂದು ಹತೋಟಿಯು ಪಂಚಾಯಿತಿಗೆ ಬರುತ್ತದೆ. ಇವೊತ್ತು ಅವರು ಶಾಲೆಗೆ ಸರಿಯಾಗಿ ಬರುವುದಿಲ್ಲ, ಗ್ರಾಮಸೇವಕರು ಹಳ್ಳಿಯಲ್ಲಿ ಇರುವುದಿಲ್ಲ, ಡಾಕ್ಟರ್ಸ್ ತಮ್ಮ ಮನಸ್ಸಿಗೆ ಬಂದ ಹಾಗೆ ದವಾಖಾನೆಗೆ ಬರುತ್ತಾ ಇರುತ್ತಾರೆ. ಆದರೆ, ಸಂಬಳ ಮಾತ್ರ ಅವರಿಗೆ ಸರಕಾರದಿಂದ ನೇರವಾಗಿ ಬಟವಾಡೆ ಆಗುತ್ತದೆ. ಯಾರಿಗೂ ಅವರು ಅಕೌಂಟೆಬಲ್ ಇಲ್ಲ. ಆದ್ದರಿಂದ ಸಂಬಳವನ್ನು ನೇರವಾಗಿ ಅವರಿಗೆ ಕೊಡುವ ಬದಲು ಪಂಚಾಯಿತಿಯ ಮುಖಾಂತರ ಮುಟ್ಟುವ ಹಾಗೆ ಮಾಡಿದರೆ ನೌಕರವರ್ಗದವರನ್ನು ಕೇಳಲು ಪಂಚಾಯತಿಗಳಿಗೆ ಸ್ವಲ್ಪ ಹಕ್ಕು

ಬಂದ ಹಾಗೆ ಆಗುತ್ತದೆ. ಅದರ ಮೂಲಕ ಜನರ ಸೇವೆಯನ್ನು ಸಂಬಂಧಪಟ್ಟವರು ಮಾಡಲು ಹಚ್ಚಲು ಸಾಧ್ಯವಾಗುತ್ತದೆ ಎನ್ನುವ ಅಭಿಪ್ರಾಯ ನನ್ನದು. ಈ ಗ್ರಾಮ ಪಂಚಾಯತ್ ಚುನಾವಣೆಗಳು ಮುಗಿದ ಕೂಡಲೇ ನೇರವಾಗಿ ಅಧ್ಯಕ್ಷರ ಚುನಾವಣೆಯನ್ನು ತಾವುಗಳು ಒಪ್ಪಿಕೊಂಡರೆ ಇನ್ನೂ ಒಳ್ಳೆಯದೇ; ಒಂದು ವೇಳೆ ಅದನ್ನು ಒಪ್ಪಿಕೊಳ್ಳಲು ತಮಗೆ ಏನಾದರೂ ತೊಂದರೆ ಬಂದರೆ, ಗ್ರಾಮಪಂಚಾಯತಿ ಆಗಲೀ, ತಾಲ್ಲೂಕು ಪಂಚಾಯತಿ ಆಗಲೀ, ಜಿಲ್ಲಾ ಪಂಚಾಯಿತಿ ಆಗಲೀ, ಚುನಾವಣೆ ಮುಗಿದ ಕೂಡಲೇ ಫಲಿತಾಂಶ ಬಂದು ಅತೀ ಕಡಿಮೆ ಕಾಲಾವಧಿಯೊಳಗೆ, ಅವುಗಳು ಗೆಜೆಟ್ ನೋಟಿಫಿಕೇಷನ್ ಆಗುವ ಹಾಗೆ ತಾವು ಮಾಡಬೇಕು. ಅನಂತರ ಒಂದು ತಿಂಗಳೊಳಗಾಗಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆಯಾಗುವ ಹಾಗೆ ತಾವುಗಳು ಮಾಡಬೇಕು. ಏಕೆಂದರೆ, ಆ ಒಂದು ಅವಕಾಶವನ್ನು ಕಾನೂನಿನಲ್ಲಿ ತಾವುಗಳು ಇಟ್ಟಿಲ್ಲ. ಒಮ್ಮೊಮ್ಮೆ ಯಾರಿಗೋ ಬೇಡದವನು ಒಬ್ಬ ತಾಲ್ಲೂಕು ಪಂಚಾಯತ್ ಅಧ್ಯಕ್ಷನಾಗುತ್ತಾನೆ ಅಂದರೆ, ನಾನು ತಮ್ಮ ಹತ್ತಿರವೋ, ಜಿಲ್ಲಾಧಿಕಾರಿಗಳ ಹತ್ತಿರವೋ ಹೇಳಿ, ಅದನ್ನೆಲ್ಲಾ ಮುಂದಕ್ಕೆ ಹಾಕಿಕೊಂಡು ಹೋಗುತ್ತಾ ಇರುತ್ತೇನೆ. ಆದ್ದರಿಂದ ಆ ಅವಕಾಶ ಬಾರದ ಹಾಗೆ ಕಾನೂನಿನಲ್ಲಿಯೇ ಅದಕ್ಕೆ ಅವಕಾಶ ಕಲ್ಪಿಸಿಕೊಡಬೇಕು. ಹೋದ ಮಸೂದೆಯಲ್ಲಿ ಅದು ಇತ್ತು, ನಾಲ್ಕು ವಾರದೊಳಗೆ ಅಂದರೆ ಚುನಾವಣೆಯಾದ ನಾಲ್ಕು ವಾರದೊಳಗೆ ಪ್ರಧಾನರ ಆಯ್ಕೆಯಾಗಬೇಕೆಂದು ಇತ್ತು. ಆದರೆ ಕಾನೂನಿನಲ್ಲಿದ್ದರೂ ಕೂಡ ಅವರು ಮಾಡಿಲ್ಲ. ಏಕೆಂದರೆ ಜಿಲ್ಲಾಪರಿಷತ್ ನಡೆದು, ಅದರಲ್ಲಿ ತಮಗೆ ಬೇಕಾದಂಥ ಸದಸ್ಯರನ್ನು ಮಂಡಳ ಪಂಚಾಯತ್‌ಗೆ ನಾಮಕರಣ ಮಾಡಿಸಿ, ಮಂಡಳ ಪಂಚಾಯತಿಯೊಳಗೆ ಅಧಿಕಾರವನ್ನು ಹಿಡಿಯುವ ಗುರಿ ಅವರಿಗಿತ್ತು. ಹೀಗಾಗಿ ಕಾನೂನಿನಲ್ಲಿದ್ದರೂ ಕೂಡ ಆ ಕೆಲಸವನ್ನು ಅವರು ಮಾಡಲಿಲ್ಲ. ಆದರೆ ನೀವು ಅದನ್ನು ಕಾನೂನಿನಲ್ಲಿ ಕಲ್ಪಿಸಿಕೊಟ್ಟು ಅದರ ಪ್ರಕಾರವೇ ಅಧಿಕಾರಿಗಳು ನಡೆದುಕೊಳ್ಳುವ ಹಾಗೆ ನೋಡಿಕೊಳ್ಳಬೇಕು. ಅದು ನಮ್ಮ ಪಕ್ಷಕ್ಕೆ ಲಾಭವಾಗಲೀ, ಆಗದೇ ಇರಲಿ, ನಾವು ಅವರಷ್ಟು ಸಂಕುಚಿತ ಮನೋಭಾವನೆಯಿಂದ ರಾಜಕೀಯವನ್ನು ಮಾಡುವುದು ಬೇಡ. ರಾಜಕೀಯದಲ್ಲಿ ಮೌಲ್ಯಗಳನ್ನು ಉಳಿಸಿಕೊಂಡು ಹೋಗುವ ದೃಷ್ಟಿಯಲ್ಲಿ ನಾವು ರಾಜಕೀಯ ಮಾಡೋಣ. ಅವರು ಹಿಂದುಳಿದ ವರ್ಗದವರಿಗೆ ನಾಮಕರಣ ಮಾಡಿಕೊಂಡಿದ್ದೇವೆ ಎಂದು ಹೇಳಿದ್ದಾರೆ. ಅವರು ಏಕೆ ನಾಮಕರಣ ಮಾಡಿಕೊಂಡರು ಎಂಬುದು ಅವರಿಗೇ ಗೊತ್ತಿದೆ . ಕೆಲವು ಮಂಡಳಗಳನ್ನು ತಮ್ಮ ಕೈಯಲ್ಲಿ ಇಟ್ಟುಕೊಳ್ಳಬೇಕೆಂದು ಹಿಂದುಳಿದ ವರ್ಗಗಳ ಬಗ್ಗೆ ಡೆಫಿನಿಷನ್ ಅನ್ನು ಎರಡು - ಮೂರು ಭಾರಿ ಬದಲಾವಣೆ ಮಾಡಿದ್ದರು. ಯಾವ ರೀತಿಯಲ್ಲಿ ಮಾಡಿದರೆ ತಮ್ಮ ಕೈಯಲ್ಲಿ ಹೆಚ್ಚು ಮಂಡಳಗಳು ತಮ್ಮ ಕೈಗೆ ಬರುತ್ತವೆ ಎಂಬುದೇ ಅವರ ಉದ್ದೇಶವಾಗಿತ್ತು. ಒಮ್ಮೆ ಹಾವನೂರ್ ಆಯೋಗದ ಪ್ರಕಾರ ಮಾಡುತ್ತೇವೆ ಎಂದು ಹೇಳಿದರು ; ಅದು ಆದರೆ ಇವರ ಕೈಗೆ ಯಾವ ಮಂಡಳ ಬರುವುದಿಲ್ಲವೆಂದು ತಿಳಿದ ಕೂಡಲೇ ಮತ್ತೊಂದು ಬೇರೆಯದನ್ನು ಹೇಳಿದರು, ಅನಂತರ ಜಿಲ್ಲೆಯೊಳಗೆ ಒಂದು ಪರ್‌ಸೆಂಟ್‌ಗಿಂತ ಕಡಿಮೆ ಇರುವವರು, ಇಂಥವರು, ಅಂಥವರು, ಅರ್ಟಿಸಾನ್ಸ್, ಮುಂತಾದವರು ಏನೇನೋ ಡೆಫಿನಿಷನ್ ಕೊಟ್ಟು 500-600 ಮಂಡಳ ಪಂಚಾಯಿತಿಗಳನ್ನು ಹಿಡಿಯುವ ಸಲುವಾಗಿ ಈ ಎಲ್ಲಾ ಒಂದು ತರಹದ ವಿಕೃತ ವ್ಯವಸ್ಥೆಯನ್ನು ಅವರು ಮಾಡಿದ್ದರು. ಅದಕ್ಕಾಗಿ ಮಂಡಳ ಪಂಚಾಯತಿಯ ಚುನಾಯಿತ ಸದಸ್ಯರು ಮೂರು ತಿಂಗಳು ಕೆಲಸ ಇಲ್ಲದೆ ಕುಳಿತುಕೊಳ್ಳುವ ಹಾಗಾಯಿತು. ಅವರ ಅನುಭವದಿಂದ ನಾವು ಪಾಠವನ್ನು ಕಲಿಯಬೇಕಾಗಿದೆ. ಅವರು ಏನೇನು ಮಾಡಿದ್ದರೋ ಅದನ್ನೆಲ್ಲಾ ಸಮಾಜವು ನೋಡಿತು. ಅವಕಾಶ ಸಿಕ್ಕಾಗ ಅವರಿಗೇ ಬುದ್ಧಿ ಕಲಿಸಿತು. ಆ ತಪ್ಪನ್ನು ನಾವು ಮಾಡುವುದು ಬೇಡ, ಅವರಂಥ ಬುದ್ಧಿಯನ್ನು ನಾವು ಕಲಿಯುವುದೂ ಬೇಡ. ಆಮೇಲೆ ತಾಲ್ಲೂಕು ಪಂಚಾಯಿತಿಯೊಳಗೆ ತಾವು ಮೂರು ಸ್ಥಾಯಿ ಸಮಿತಿಗಳನ್ನು ಕೊಟ್ಟಿದ್ದೀರಿ. ಅವುಗಳಲ್ಲಿ ಅದಕ್ಕಿಂತ ಹೆಚ್ಚಿನ ಜನರು ಸದಸ್ಯರಾಗಿರಬಾರದು ಎಂಬುದನ್ನು ಈ ಕಾನೂನಿನಲ್ಲಿ ಕೊಟ್ಟಿದ್ದೀರಿ. ಅಂದರೆ 18 ಜನ ಸದಸ್ಯರನ್ನು ನಾವು ಅಲ್ಲಿ ಅಕಾಮಡೇಟ್ ಮಾಡಲು ಆಗುತ್ತದೆ.

ಆದರೆ, ಬಹಳಷ್ಟು ತಾಲ್ಲೂಕಿನೊಳಗೆ 18 ಜನ ಸದಸ್ಯರು ಇರುವುದೇ ಇಲ್ಲ. ಹಾಗೆಯೇ ಒಬ್ಬರು ಒಂದೇ ಸ್ಥಾಯಿ ಸಮಿತಿಗೆ ಸದಸ್ಯನಾಗಿರಬೇಕೆಂದು ಇವೆ. ಆದರೆ ತಾಲ್ಲೂಕು ಪಂಚಾಯತ್‌ನಲ್ಲಿ ಎರಡು ಸ್ಥಾಯಿ ಸಮಿತಿಗೆ ಸದಸ್ಯರಾಗಿರಬಹುದು ಎಂದು ಇದೆ. ಆದ್ದರಿಂದ ಒಬ್ಬ ಸದಸ್ಯರು ಸಂದರ್ಭಾನುಸಾರವಾಗಿ ಎರಡು ಸ್ಥಾಯಿ ಸಮಿತಿಗಳಲ್ಲಿ ಇರುವ ಹಾಗೆ ಅವಕಾಶವನ್ನು ಕಲ್ಪಿಸಿಕೊಟ್ಟು, ಮಾಡಿದರೆ ಈ ನ್ಯೂನ್ಯತೆಯು ಬಹುತೇಕ ಹೋಗಬಹುದೆಂದು ಕಾಣುತ್ತದೆ. ತಾವುಗಳು ಗ್ರಾಮಪಂಚಾಯತಿ ವ್ಯಾಪ್ತಿಯಲ್ಲಿ ಒಂದು ಪ್ರಾವಿಷನ್ ಇಡಬೇಕಾಗುತ್ತದೆ. ಈಗ ಮನೆ ಕಟ್ಟುವ ಸಲುವಾಗಿಯಾಗಲೀ ಮತ್ಯಾವುದೇ ಆಗಲಿ, ಇವೊತ್ತು ಪಂಚಾಯತ್‌ಗೆ ಅಧಿಕಾರ ಕೊಟ್ಟಿದ್ದೀರಿ. ಆ ಅಧಿಕಾರವನ್ನು ಡೆಲೀಗೇಟ್ ಮಾಡುವ ಅಧಿಕಾರ ಅಧ್ಯಕ್ಷರಿಗೆ ಆಗತಕ್ಕಂಥಾದ್ದು ಅಲ್ಲ ಎಂದು ಮಾಡಿದ್ದೀರಿ. ಏಕೆಂದರೆ, ಅಂಥ ಅವಶ್ಯ ಬಿದ್ದರೆ 24 ಗಂಟೆಯೊಳಗೆ, ಗ್ರಾಮಪಂಚಾಯತ್‌ಗೆ ಕರೆಯುವ ವ್ಯವಸ್ಥೆಯನ್ನು ತಾವು ಇಲ್ಲಿ ಇಟ್ಟಿರುವುದರಿಂದ, ಗ್ರಾಮಪಂಚಾಯತ್ ಮತ್ತು ತಾಲ್ಲೂಕು ಪಂಚಾಯತ್‌ಗೆ ಕೊಟ್ಟಂಥ ಅಧಿಕಾರವೇ ಆಗಲಿ, ಜಿಲ್ಲಾ ಪಂಚಾಯತ್‌ಗೆ ಕೊಟ್ಟಂಥ ಅಧಿಕಾರವೇ ಆಗಲಿ, ಎಲ್ಲಾ ಅಧಿಕಾರವನ್ನು ಅಧ್ಯಕ್ಷರಿಗೆ ಅಥವಾ ಉಪಾಧ್ಯಕ್ಷರಿಗೆ ಡೆಲಿಗೇಟ್ ಮಾಡಿದ ಹಾಗೆ, ಕಾನೂನಿನಲ್ಲಿ ಒಂದು ವಿಧಿಯನ್ನು ತರಬೇಕು. ಇಲ್ಲವಾದರೆ ಎಲ್ಲಾ ಅಧಿಕಾರವನ್ನು ಮೊದಲನೇ ಸಭೆಯಲ್ಲಿ ಇಟ್ಟುಕೊಂಡು ಮುಂದೆ ನಾಮಕಾವಾಸ್ತೆ ಗ್ರಾಮಪಂಚಾಯತಿ ಎಂಬ ಪರಿಸ್ಥಿತಿಯು ನಿರ್ಮಾಣವಾಗುತ್ತದೆ. ಅದು ಆಗದ ಹಾಗೆ ತಾವುಗಳು ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಹಾಗಯೇ, ಬಿಲ್ಡಿಂಗ್ ಪರ್ಮಿಷನ್ ಸಲುವಾಗಿ ತಾವುಗಳು 60 ದಿವಸಗಳು ಎಂದು ಇಟ್ಟಿದ್ದೀರಿ. ನಾವು ಅರ್ಜಿ ಕೊಟ್ಟ 60 ದಿವಸಗಳೊಳಗೆ ಅವರಿಂದ ಯಾವ ರಿಪ್ಲೈ ಬರಲಿಲ್ಲ ಅಂದರೆ, ಅದಕ್ಕೆ ಪರ್ಮಿಷನ್ ಸಿಕ್ಕಿತು ಎಂದು ಆಗುತ್ತದೆ. ಅದನ್ನು 30 ದಿವಸಗಳು ಎಂದು ಮಾಡಿದರೆ ಒಳ್ಳೆಯದಾಗುತ್ತದೆ. ಬಹುತೇಕ ಎರಡು ತಿಂಗಳಿಗೊಮ್ಮೆ ಮೀಟಿಂಗ್ ಆಗುತ್ತದೆಂದು ತಾವುಗಳು ಅದನ್ನು 60 ದಿವಸಗಳು ಎಂದು ಮಾಡಿರಬಹುದೆಂದು ಕಾಣುತ್ತದೆ. ಆದ್ದರಿಂದ ತಿಂಗಳಿಗೊಮ್ಮೆ ಪಂಚಾತ್ ಮೀಟಿಂಗನ್ನು ಮಾಡಿ ಇದನ್ನು 30 ದಿವಸಗಳು ಎಂದು ಇಟ್ಟರೆ ಒಳ್ಳೆಯದು. ಏಕೆಂದರೆ, ನಾವೆಲ್ಲರೂ ಸುಗ್ಗಿಯಾದ ಮೇಲೆ ಮನೆಯನ್ನು ಕಟ್ಟಬೇಕೋ ಬಿಚ್ಚಬೇಕೋ ಎಂದು ಸಂಪನ್ಮೂಲಗಳನ್ನು ನೋಡಿಕೊಂಡು ನಿರ್ಧಾರ ಮಾಡುತ್ತೇವೆ. ಮಳೆಗಾಲ ಧಾಟಿ ಬೇಸಿಗೆ ಮುಗಿಯುವುದರೊಳಗೆ ನಾವು ಮನೆ ಕೆಡವಿ ಹೊಸದನ್ನು ಕಟ್ಟಿಕೊಳ್ಳಬೇಕಾಗುತ್ತದೆ. ಅದಕ್ಕಾಗಿ ಪರ್ಮಿಷನ್‌ಗೆ ಎರಡು ತಿಂಗಳು ಅಂದರೆ ನಮಗೆ ಸಮಯ ಕಡಿಮೆಯಾಗುತ್ತದೆಯಾದ ಕಾರಣ ಇದನ್ನು 30 ದಿವಸಗಳು ಎಂದು ಮಾಡಬೇಕು. ಇವರೂ ಕೂಡ ಗ್ರಾಮದಲ್ಲಿಯೇ ಇರುವುದರಿಂದ ಎಲ್ಲಾ ಮಾಹಿತಿಗಳನ್ನು ಪಡೆದುಕೊಂಡು ಯೋಗ್ಯವಿದ್ದರೆ ಪರ್ಮಿಷನ್ ಕೊಡಬಹುದು, ಆ ಯೋಗ್ಯವಿದ್ದರೆ ಕೊಡುವುದು ಬೇಡ ; ಅವರು ಬೇಕಾದರೆ ಮೇಲೆ ಹೋಗಿ ಅಪೀಲ್ ಮಾಡಿಕೊಂಡು ಬಂದು ಕೆಲಸ ಮಾಡಲು ಅವರಿಗೆ ಆಗುತ್ತದೆ. ಆದ್ದರಿಂದ ದಯವಿಟ್ಟು 30 ದಿವಸಗಳು ಎಂದು ಮಾಡಿದರೆ ಒಳ್ಳೆಯದಾಗುತ್ತದೆ ಎಂದು ಹೇಳಬಯಸುತ್ತೇನೆ. ಹಾಗೆಯೇ, ಜಿಲ್ಲಾಪಂಚಾಯತ್ ಮೀಟಿಂಗ್ ಕೂಡ ತಿಂಗಳಿಗೊಮ್ಮೆಯಾಗಬೇಕು. ಸ್ಥಾಯಿಸಮಿತಿಗಳನ್ನು ತಾವುಗಳು ಕಡಿಮೆ ಮಾಡಿ ಒಳ್ಳೆಯ ಕೆಲಸ ಮಾಡಿದ್ದೀರಿ.

ಮಾನ್ಯ ಅಧ್ಯಕ್ಷರೇ, ನಮ್ಮ ಅನುಭವದೊಳಗೆ ಏನೇನು ತೊಂದರೆಯಾಗಿದೆ ಎನ್ನುವುದನ್ನು ನಾವು ಹೇಳಿದ್ದೇವೆ. ಕರಪ್ಷನ್ ಚಾರ್ಜಸ್ ಎನ್‌ಕ್ವೈರಿ ಮಾಡುವುದಕ್ಕೆ ನಮ್ಮ ಜಿಲ್ಲಾಪರಿಷತ್ತಿನೊಳಗೆ ಸಬ್ ಕಮಿಟಿಯನ್ನು ಮಾಡಿದ್ದೇವೆ. ಆ ಸಬ್ ಕಮಿಟಿ ರಿಪೋರ್ಟ್ ಓಪನ್ ಮಾಡದೆ ಅದನ್ನು ನಾವು ರಿಜಕ್ಟ್ ಮಾಡಿಬಿಟ್ಟಿದ್ದೇವೆ. ಅದನ್ನು ಓಪನ್ ಮಾಡಿ ಓದಲಿಲ್ಲ. ಓಪನ್ ಮಾಡದೇ ಬಹುಮತ ಇದೆ ಎಂದು ಹೇಳಿ ರಿಜಕ್ಟ್ ಮಾಡಿದಂತಹ ಅನೇಕ ಘಟನೆಗಳು ನಮ್ಮ ವಕೀಲರು ಇದ್ದಾಗ ಆದವು.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇವರು ಹೇಳುವಂತಹ ಮಾತು ಸತ್ಯಕ್ಕೆ ದೂರವಾದುದು. ಅಂತಹ ಯಾವುದೇ ಪ್ರಕರಣಗಳು ನಡೆದಿಲ್ಲ. ಏನೇ ನಡೆದರೂ ಜಿಲ್ಲಾಪರಿಷತ್ತಿನ ಸಬ್‌ಕಮಿಟಿಯಲ್ಲಿ ಜಿಲ್ಲಾಪರಿಷತ್ತಿನ ಮೀಟಿಂಗ್‌ನಲ್ಲಿಟ್ಟು ನಿರ್ಣಯ ತೆಗೆದುಕೊಳ್ಳುತ್ತಾರೆ. ಅವರೂ ಅದರಲ್ಲಿ ಭಾಗಿಯಾಗಿರುತ್ತಾರೆ. ಈಗ ಅವರು ಹೊಸದು ಬಹಳ ಸುಂದರವಾಗಿದೆ, ಹಳೆಯದು ಬಹಳ ಕುರೂಪಿ ಎನ್ನುವ ರೀತಿಯಲ್ಲಿ ಮಾತನಾಡುತ್ತಿದ್ದಾರೆ. ಮೊದಲನೆಯ ಕಾನೂನಿನಲ್ಲಿ ಒಳ್ಳೆಯದು ಏನಿತ್ತು ಅದನ್ನು ಅವರು ಹೇಳುತ್ತಿಲ್ಲ. ಅದರಲ್ಲಿಯೂ ಒಳ್ಳೆಯದು ಇತ್ತು. ಕೆಲವು ತಪ್ಪುಗಳು ಇದ್ದವು. ಅದನ್ನು ಸುಧಾರಣೆ ಮಾಡಲಿಕ್ಕೆ ಏನಾದರೂ ತಂದಿದ್ದಾರೆ ಎಂದು ಹೇಳುತ್ತಾರೋ ಏನೋ, ಎಂದು ನಾನು ತಿಳಿದುಕೊಂಡಿದ್ದೆ. ಆದರೆ ಅದರ ಬಗ್ಗೆ ಏನೂ ಹೇಳುತ್ತಿಲ್ಲ.

ಶ್ರೀ ಡಿ. ಆರ್. ಪಾಟೀಲ್ : ನಿಮ್ಮದು ಯಾರಿಗೆ ಒಳ್ಳೆಯದಾಗಬೇಕಾಗಿತ್ತೋ ಅವರಿಗೆ ಒಳ್ಳೆಯದಾಗಿತ್ತು. ಎಲ್ಲರಿಗೂ ಒಳ್ಳೆಯದಾಗಿರಲಿಲ್ಲ. ನಾವು ಎಲ್ಲರಿಗೂ ಒಳ್ಳೆಯದಾಗಬೇಕೆನ್ನುವ ಇಚ್ಛೆ ಇರುವಂತಹ ಜನ. ಅಧಿಕಾರಗಳನ್ನು ಮೀಟಿಂಗ್ ಕರೆಯಲಿಕ್ಕೆ 15 ದಿವಸದ ಮುಂಚೆ ನೋಟೀಸ್ ಕೊಡಬೇಕು, ಸದಸ್ಯರಿಗೆ ಮೀಟಿಂಗ್ ಕರೆಯಲಿಕ್ಕೆ 10 ದಿವಸದ ನೋಟೀಸ್ ಕೊಡಬೇಕು, ಅಧಿಕಾರಿಗಳಿಗೆ ಮಾತ್ರ 15 ದಿವಸಗಳ ನೋಟೀಸ್ ಕೊಡಬೇಕು. ನಾವು ಯಾವಾಗಲೂ ಪ್ರೊಸೀಡಿಂಗ್ಸ್ ಡ್ರಾಫ್ ಮಾಡಿದಾಗ ಈ ಪ್ರೊಸೀಡಿಂಗ್ಸ್ ಸಲುವಾಗಿ ಯಾವ್ಯಾವ ಅಧಿಕಾರಿಗಳನ್ನು ಮೀಟಿಂಗ್‌ಗೆ ಕರೆಯಬೇಕೆಂದು ವಿಚಾರ ಮಾಡುತ್ತೇವೆ. ಆದ್ದರಿಂದ 10 ದಿವಸ ಅಂತ ಮಾಡಿ; ನಾವು ಯಾವಾಗ ಮೆಂಬರ್ಸ್‌ಗೆ ಕರೆಯುತ್ತೇವೋ ಆಗ ಅಧಿಕಾರಿಗಳಿಗೂ ನೋಟೀಸ್ ಕೊಡುವಂತಹ ಅವಕಾಶ ಇರಲಿ; ನೋಟೀಸ್ ಕೊಟ್ಟ ಮೇಲೆ ಅವರು ಬರಲೇಬೇಕು, ಈಗ ಇರುವ ಮಂಡಲ್ ಪಂಚಾಯತಿಯೊಳಗೆ, ತಾಲ್ಲೂಕ್ ಪಂಚಾಯತಿಯೊಳಗೆ, ಬಹಳಷ್ಟು ಆಫೀಸರ್ಸ್ ಮೀಟಿಂಗಿಗೆ ಹಾಜರಾಗುವುದೇ ಇಲ್ಲ. ಯಾವ ಆಫೀಸರ್ ಮೀಟಿಂಗಿಗೆ ಹಾಜರಾಗುವುದಿಲ್ಲವೋ ಅವನ ಮೇಲೆ ಕೂಡಲೇ ಶಿಸ್ತಿನ ಕ್ರಮ ಜರುಗಿಸುವಂತಹ ಒಂದು ವ್ಯವಸ್ಥೆಯನ್ನು ತಾವು ರೂಪಿಸಿದಾಗ ಮಾತ್ರ ಈ ಅಧಿಕಾರಿಗಳು ಗ್ರಾಮಪಂಚಾಯತಿಗೆ ಮತ್ತು ತಾಲ್ಲೂಕು ಪಂಚಾಯತಿಗೆ ಗೌರವವನ್ನು ಕೊಡುತ್ತಾರೆ. ಈಗಂತೂ ಯಾರು ಬರುವುದಿಲ್ಲ ; ಆ ರೀತಿಯ ಪರಿಸ್ಥಿತಿ ಆಗಬಾರದು. ಈಗ ಅದು ಸುದೈವನೋ, ದುರ್ದೈವನೋ, ನಾನಂತೂ ಸುದೈವವೆಂದು ಬಯಸಿದ್ದೇನೆ. ನೀವು ವರ್ಗಾವಣೆಯನ್ನು ಮಾಡುವ ಅಧಿಕಾರವನ್ನು ರಾಜ್ಯಮಟ್ಟದಲ್ಲಿ ಇಟ್ಟುಕೊಂಡಿದ್ದಕ್ಕೆ ನಾನು ಸುದೈವವೆಂದು ತಿಳಿದುಕೊಂಡಿದ್ದೇನೆ. ಏಕೆಂದರೆ ವಕೀಲರಿಗೂ ಗೊತ್ತಿದೆ, ನಮಗೂ ಗೊತ್ತಿದೆ, ಜೂನ್, ಜುಲೈ ಬಂತು ಅಂದರೆ ಮೂರು ಮೀಟಿಂಗ್, ಬರೀ ಮಾಸ್ಟರ್ ಟ್ರಾನ್ಸ್‌ಫರ್ಸ್ ಸಲುವಾಗಿ ಜಿಲ್ಲಾಪರಿಷತ್ತಿನ ಮೀಟಿಂಗ್‌ನೊಳಗೆ ಜಗಳವಾಗುತ್ತದೆ. ಬೇರೆ ಕೆಲಸ ಏನೂ ಆಗುವುದಿಲ್ಲ. ಅಧ್ಯಕ್ಷರು ಸದಸ್ಯರು ಹೇಳಿದ್ದನ್ನು ಮಾಡುತ್ತಿರಲಿಲ್ಲ ; ಅದು ಇವರ ಮನಸ್ಸಿಗೆ ಬರುತ್ತಿರಲಿಲ್ಲ ; ಆ ವರ್ಗಾವಣೆಯ ಆರ್ಡರ್ ರದ್ದಾಗಬೇಕು, ಅದು ಬಂದ್ ಆಗಬೇಕು, ಇದು ಬಂದ್ ಆಗಬೇಕು, ಹೀಗಾಗಿ ಆಗಸ್ಟ್, ಸೆಪ್ಟೆಂಬರ್‌ರವರೆಗೆ ಈ ಮಾಸ್ಟರ್ ಟ್ರಾನ್ಸ್‌ಫರ್ ನಡೆಯಿತು, ಅಲ್ಲಿಯವರೆಗೆ ಶಾಲೆಗೆ ತೊಂದರೆಯಾಗುತ್ತಿತ್ತು. ಅದಕ್ಕಾಗಿ ಒಂದು ದೃಷ್ಟಿಯಿಂದ ಬಹಳ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ ; ರಾಜ್ಯಮಟ್ಟದೊಳಗೆ ಆ ಅಧಿಕಾರವನ್ನು ಇಟ್ಟುಕೊಂಡಿರುವುದರಿಂದ ಒಂದು ಟ್ರಾನ್ಸ್‌ಫರ್ ಪಾಲಿಸಿಯನ್ನು ಮಾಡಿ ; ಅಲ್ಲಿ ಸಹಿತ ಕಂಪ್ಯೂಟರೈಸ್ ಮಾಡಿ ಅಲ್ಲೂ ಸಹಿತ ಮತ್ತೆ ನಾವು ಎಂ.ಎಲ್. ಎ. ಗಳು ನಿಮ್ಮ ಬಳಿ ಬಂದು ಮಿನಿಟ್ಸ್ ಅನ್ನು ಹಾಕಿಸಿಕೊಂಡು, ಅದನ್ನೂ ಅವ್ಯವಸ್ಥೆ ಮಾಡುವಂತಹ ಪರಿಸ್ಥಿತಿ ಇಲ್ಲಿ ಆಗಬಾರದು ; ತಾವು ಇದನ್ನು ಧೈರ್ಯದಿಂದ ಮಾಡಬೇಕು. ನಮ್ಮ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳೆಲ್ಲರನ್ನೂ ಒಂದು ಟ್ರಾನ್ಸ್‌ಫರ್ಮ್ ಪಾಲಿಸಿಯ

ಮೇಲೆ ಕಂಪ್ಯೂಟರೈಸ್ ಮಾಡಿ ಅದನ್ನು ಇಂಪ್ಲಿಮೆಂಟ್ ಮಾಡಿಬಿಡಿ. ಅದು ಉಳಿದೆಲ್ಲಾ ಇಲಾಖೆಯವರಿಗೆ ಒಂದು ಮಾರ್ಗದರ್ಶನವಾಗಿ, ಈ ಟ್ರಾನ್ಸ್‌ಫರ್ಸ್‌ನಲ್ಲಿ ಏನು ಅವ್ಯವಹಾರ ನಡೆಯುತ್ತದೆ ಅದು ಹೋಗಿಬಿಡಲಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇಡೀ ವರ್ಷ 12 ತಿಂಗಳು, ಪ್ರತಿದಿನ 24 ಗಂಟೆಗಳ ಕಾಲ ಕೆಲಸವನ್ನು ಮಾಡಿ ವರ್ಗಾವಣೆ ಯಾವರೀತಿ ನಡೆಯಿತು , ಏನೇನು ಮಾಡಿದರು ಅಂತ ದಿನವಿಡಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಬೇಡ ಅಂದರೆ ಇಲ್ಲಿ ಏನಿದೆ ವ್ಯವಸ್ಥೆ? ಅಲ್ಲಿಗಿಂತಲೂ ಹದಗೆಟ್ಟಂತಹ ವ್ಯವಸ್ಥೆ ರಾಜ್ಯಮಟ್ಟದಲ್ಲಿ ಇಲ್ಲಿದೆ. ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿ.

ಶ್ರೀ ಎಂ. ವೈ. ಘೋರ್ಪಡೆ : ನನ್ನ ಇಲಾಖೆಯಲ್ಲಿಯೆ, ಸ್ವಲ್ಪ ಮಟ್ಟಿಗೆ ಆ ಪ್ರಯತ್ನವನ್ನು ಪ್ರಾರಂಭ ಮಾಡಿದ್ದೇವೆ. ಎಕ್ಸಿಕ್ಯೂಟೀವ್ ಇಂಜಿನಿಯರ್ ಟ್ರಾನ್ಸ್‌ಫರ್ ಇದ್ದರೆ ನನ್ನ ಅಪ್ರೂವಲ್ ಬೇಕು. ಅಸಿಸ್ಟೆಂಟ್ ಇಂಜಿನಿಯರ್ ಇದ್ದರೆ, ಚೀಫ್ ಸೆಕ್ರೆಟರಿ ಮತ್ತು ನಮ್ಮ ಸೆಕ್ರೆಟರಿಯವರು ಅವರು ರೋಟಿನ್ ಆಗಿ ಮಾಡಲಿ ಎಂದು ಹೇಳಿ ಮಾಡುತ್ತಿದ್ದೇವೆ. ನಮ್ಮ ಅಧಿಕಾರಸ್ಥರಿಗೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬಹುದಲ್ಲಾ? ಆ ರೀತಿ ಮಾಡಿ ಅಂತ ಹೇಳುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಹೇಳುವ ಮಾತು ಏನಾಗಿದೆ ಅಂದರೆ ಎಲ್ಲರೂ ನನ್ನಂತೆ ಎಂದು ತಿಳಿದುಕೊಂಡು ನೀವು ಈ ಕಾನೂನನ್ನು ತಂದರೆ ಬಹುತೇಕ ಇದು ಸರಿಯಲ್ಲ. ನಾವು ಸಮಾಜದಲ್ಲಿರತಕ್ಕ ಎಲ್ಲಾ ವಿಚಾರಗಳನ್ನೊಳಗೊಂಡು ಜನಸಾಮಾನ್ಯರಿಗೆ ಯಾವ ದೃಷ್ಟಿಯಿಂದಲಾದರೂ ಉಪಯೋಗವಾಗಬೇಕೆಂದು ತರಬೇಕೇ ಹೊರತು ನಾನು ಹಾಗಿದ್ದೇನೆ ಅನ್ನುವುದನ್ನು ತಿಳಿದುಕೊಂಡು ಮಾಡಬಾರದು. ಎಲ್ಲರೂ ನನ್ನಂತೆ ಇದ್ದಾರೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಡಿ. ಆರ್. ಪಾಟೀಲ್ : ಸೆಕ್ಷನ್ 203ರೊಳಗೆ ಪಂಚಾಯತ್ ಟ್ಯಾಕ್ಸ್ ವಸೂಲಿ ಮಾಡಲಿಕ್ಕೆ ಕೆಲವು ಏಜೆನ್ಸಿಗೆ ಟೆಂಡರ್ ಕೊಡಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದು ನವೀನವಾದಂತಹ ಪ್ರಯೋಗ. ಪಂಚಾಯಿತಿ ಮಟ್ಟದಲ್ಲಿ ಇದು ಅಷ್ಟು ಅನುಕೂಲವಾಗದಿದ್ದರೂ ಸಹಿತ ಇದೇ ವ್ಯವಸ್ಥೆಯನ್ನು ನೀವು ರಾಜ್ಯಮಟ್ಟಕ್ಕೆ ತಂದುಬಿಟ್ಟರೆ ಸೇಲ್ಸ್‌ಟ್ಯಾಕ್ಸ್ ರಾಜ್ಯ ಸರ್ಕಾರಕ್ಕೆ ಬರುವ ಆದಾಯ ಈಗ ಏನು ಸೋರುತ್ತಿದೆ, ಅದು ಬಹಳಷ್ಟು ಉಳಿತಾಯವಾಗುತ್ತದೆ. ಸೆಕ್ಷನ್ 203 ಏನು ಹೇಳುತ್ತದೆಂದರೆ :- ಗ್ರಾಮ ಪಂಚಾಯತಿಗೆ ಸಂದಾಯವಾಗಬೇಕಾದ ತೆರಿಗೆ ದರ ಫೀಸು ಅಥವಾ ಇನ್ನಿತರ ಮೊಬಲಗನ್ನು ಈ ಬಗ್ಗೆ ಗ್ರಾಮ ಪಂಚಾಯತಿಯ ನೇಮಕ ಮಾಡುವಂಥ ಏಜೆನ್ಸಿಯ ಮೂಲಕ ಸಂಗ್ರಹಿಸಬಹುದು. ಪರಂತು, ಗೊತ್ತುಪಡಿಸಿದ ನಿಯಮಗಳಿಗೊಳಪಟ್ಟು ಈ ಅಧಿನಿಯಮದಲ್ಲಿ, ಗ್ರಾಮ ಪಂಚಾಯತಿ ಯಾವುದೇ ತೆರಿಗೆ, ದರ ಫೀಸು ಅಥವಾ ಇತರ ಮೊಬಲಗನ್ನು ವಿಧಿಸುವ ಹಕ್ಕನ್ನು ಸಾರ್ವಜನಿಕ ಹರಾಜಿನ ಮೂಲಕ ಗುತ್ತಿಗೆ ಕೊಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಅಂಥ ಗುತ್ತಿಗೆಯ ಮೇರೆಗೆ ಬಾಕಿಯಿರುವ ಮೊಬಲಗನ್ನು ಈ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು. ಖಾಸಗಿ ಏಜೆನ್ಸಿಗೆ ನಾವು ಕಂಟ್ರಾಕ್ಟ್ ಬೇಸಿಸ್ ಮೇಲೆ ಟೆಂಡರ್ ಕರೆದು ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ, ಇದು ಒಳ್ಳೆಯ ಕೆಲಸ ಆಗಿದೆ. ಆದರೆ ಇದನ್ನು ರಾಜ್ಯಮಟ್ಟದಲ್ಲಿ ತಾವು ತರಲಿಕ್ಕೆ ಮಂತ್ರಿಮಂಡಲದಲ್ಲಿ ಪ್ರಯತ್ನ ಮಾಡಿದರೆ ಸೇಲ್ಸ್ ಟ್ಯಾಕ್ಸ್ ಸೋರಿ ಹೋಗುವುದನ್ನು ನಿಲ್ಲಿಸಬಹುದು. ಇವತ್ತು ಮೂರು ಸಾವಿರ ಕೋಟಿ ಸೇಲ್ಸ್ ಟ್ಯಾಕ್ಸನ್ನು ಕೂಡಿಸಬೇಕೆಂದು ನೀವು ಇಚ್ಛೆಪಟ್ಟಿದ್ದರೆ, ಇದನ್ನು ಟೆಂಡರ್

ಅಂತ ಮಾಡಿ; ನಾವು ಯಾವಾಗ ಮೆಂಬರ್ಸ್‌ಗೆ ಕರೆಯುತ್ತೇವೋ ಆಗ ಅಧಿಕಾರಿಗಳಿಗೂ ನೋಟೀಸ್ ಕೊಡುವಂತಹ ಅವಕಾಶ ಇರಲಿ; ನೋಟೀಸ್ ಕೊಟ್ಟ ಮೇಲೆ ಅವರು ಬರಲೇಬೇಕು, ಈಗ ಇರುವ ಮಂಡಲ್ ಪಂಚಾಯತಿಯೊಳಗೆ ತಾಲ್ಲೂಕ್ ಪಂಚಾಯತಿಯೊಳಗೆ ಬಹಳಷ್ಟು ಆಫೀಸರ್ಸ್ ಮೀಟಿಂಗಿಗೆ ಹಾಜರಾಗುವುದೇ ಇಲ್ಲ. ಯಾವ ಆಫೀಸರ್ ಮೀಟಿಂಗಿಗೆ ಹಾಜರಾಗುವುದಿಲ್ಲವೋ ಅವನ ಮೇಲೆ ಕೂಡಲೇ ಶಿಸ್ತಿನ ಕ್ರಮ ಜರುಗಿಸುವಂತಹ ಒಂದು ವ್ಯವಸ್ಥೆಯನ್ನು ತಾವು ರೂಪಿಸಿದಾಗ ಮಾತ್ರ ಈ ಅಧಿಕಾರಿಗಳು ಗ್ರಾಮಪಂಚಾಯತಿಗೆ ಮತ್ತು ತಾಲ್ಲೂಕು ಪಂಚಾಯತಿಗೆ ಗೌರವವನ್ನು ಕೊಡುತ್ತಾರೆ. ಈಗಂತೂ ಯಾರು ಬರುವುದಿಲ್ಲ ; ಆ ರೀತಿಯ ಪರಿಸ್ಥಿತಿ ಆಗಬಾರದು. ಈಗ ಅದು ಸುದೈವನೋ, ದುರ್ದೈವನೋ, ನಾನಂತೂ ಸುದೈವವೆಂದು ಬಯಸಿದ್ದೇನೆ. ನೀವು ವರ್ಗಾವಣೆಯನ್ನು ಮಾಡುವ ಅಧಿಕಾರವನ್ನು ರಾಜ್ಯಮಟ್ಟದಲ್ಲಿ ಇಟ್ಟಿಕೊಂಡಿದ್ದಕ್ಕೆ ನಾನು ಸುದೈವವೆಂದು ತಿಳಿದುಕೊಂಡಿದ್ದೇನೆ. ಏಕೆಂದರೆ ವಕೀಲರಿಗೂ ಗೊತ್ತಿದೆ, ನಮಗೂ ಗೊತ್ತಿದೆ, ಜೂನ್, ಜುಲೈ ಬಂತು ಅಂದರೆ ಮೂರು ಮೀಟಿಂಗ್ ಬರೀ ಮಾಸ್ಟರ್ ಟ್ರಾನ್ಸ್‌ಫರ್ಸ್ ಸಲುವಾಗಿ ಜಿಲ್ಲಾಪರಿಷತ್ತಿನ ಮೀಟಿಂಗ್‌ನೊಳಗೆ ಜಗಳವಾಗುತ್ತದೆ. ಬೇರೆ ಕೆಲಸ ಏನೂ ಆಗುವುದಿಲ್ಲ. ಅಧ್ಯಕ್ಷರು ಸದಸ್ಯರು ಹೇಳಿದ್ದನ್ನು ಮಾಡುತ್ತಿರಲಿಲ್ಲ ; ಅದು ಇವರ ಮನಸ್ಸಿಗೆ ಬರುತ್ತಿರಲಿಲ್ಲ ಆ ವರ್ಗಾವಣೆಯ ಆರ್ಡರ್ ರದ್ದಾಗಬೇಕು, ಅದು ಬಂದ್ ಆಗಬೇಕು, ಇದು ಬಂದ್ ಆಗಬೇಕು, ಹೀಗಾಗಿ ಆಗಸ್ಟ್, ಸೆಪ್ಟೆಂಬರ್‌ರವರೆಗೆ ಈ ಮಾಸ್ಟರ್ ಟ್ರಾನ್ಸ್‌ಫರ್ ನಡೆಯಿತು, ಅಲ್ಲಿಯವರೆಗೆ ಶಾಲೆಗೆ ತೊಂದರೆಯಾಗುತ್ತಿತ್ತು. ಅದಕ್ಕಾಗಿ ಒಂದು ದೃಷ್ಟಿಯಿಂದ ಬಹಳ ಒಳ್ಳೆಯ ಕೆಲಸವನ್ನು ತಾವು ಮಾಡಿದ್ದೀರಿ ; ರಾಜ್ಯಮಟ್ಟದೊಳಗೆ ಆ ಅಧಿಕಾರವನ್ನು ಇಟ್ಟುಕೊಂಡಿರುವುದರಿಂದ ಒಂದು ಟ್ರಾನ್ಸ್‌ಫರ್ ಪಾಲಿಸಿಯನ್ನು ಮಾಡಿ ; ಅಲ್ಲಿ ಸಹಿತಿ ಕಂಪ್ಯೂಟರೈಸ್ ಮಾಡಿ ಅಲ್ಲೂ ಸಹಿತ ಮತ್ತೆ ನಾವು ಎಂ.ಎಲ್. ಎ. ಗಳು ನಿಮ್ಮ ಬಳಿ ಬಂದು ಮಿನಿಟ್ಸ್ ಅನ್ನು ಹಾಕಿಸಿಕೊಂಡು, ಅದನ್ನೂ ಅವ್ಯವಸ್ಥೆ ಮಾಡುವಂತಹ ಪರಿಸ್ಥಿತಿ ಇಲ್ಲಿ ಆಗಬಾರದು ; ತಾವು ಇದನ್ನು ಧೈರ್ಯದಿಂದ ಮಾಡಬೇಕು. ನಮ್ಮ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿ ಕೆಲಸ ಮಾಡುವಂತಹ ಅಧಿಕಾರಿಗಳೆಲ್ಲರನ್ನೂ ಒಂದು ಟ್ರಾನ್ಸ್‌ಫರ್ಮ ಪಾಲಿಸಿಯ ಮೇಲೆ ಕಂಪ್ಯೂಟರೈಸ್ ಮಾಡಿ ಅದನ್ನು ಇಂಪ್ಲಿಮೆಂಟ್ ಮಾಡಿಬಿಡಿ. ಅದು ಉಳಿದೆಲ್ಲಾ ಇಲಾಖೆಯವರಿಗೆ ಒಂದು ಮಾರ್ಗದರ್ಶನವಾಗಿ, ಈ ಟ್ರಾನ್ಸ್‌ಫರ್ಸ್‌ನಲ್ಲಿ ಏನುಅವ್ಯವಹಾರ ನಡೆಯುತ್ತದೆ ಅದು ಹೋಗಿಬಿಡಲಿ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಇಡೀ ವರ್ಷ 12 ತಿಂಗಳು, ಪ್ರತಿದಿನ 24 ಗಂಟೆಗಳ ಕಾಲ ಕೆಲಸವನ್ನು ಮಾಡಿ ವರ್ಗಾವಣೆ ಯಾವರೀತಿ ನಡೆಯಿತು , ಏನೇನು ಮಾಡಿದರು ಅಂತ ದಿನವಿಡಿ ನೋಡಿದರೆ ಗೊತ್ತಾಗುತ್ತದೆ. ಅಲ್ಲಿ ಬೇಡ ಅಂದರೆ ಇಲ್ಲಿ ಏನಿದೆ ವ್ಯವಸ್ಥೆ? ಅಲ್ಲಿಗಿಂತಲೂ ಹದಗೆಟ್ಟಂತಹ ವ್ಯವಸ್ಥೆ ರಾಜ್ಯಮಟ್ಟದಲ್ಲಿ ಇಲ್ಲಿದೆ. ಅದರ ಪರಿಣಾಮ ಏನಾಗುತ್ತದೆ ಎನ್ನುವುದನ್ನು ತಾವು ಯೋಚನೆ ಮಾಡಿ.

ಶ್ರೀ ಎಂ. ವೈ. ಘೋರ್ಪಡೆ : ನನ್ನ ಇಲಾಖೆಯಲ್ಲಿಯೆ ಸ್ವಲ್ಪ ಮಟ್ಟಿಗೆ ಆ ಪ್ರಯತ್ನವನ್ನು ಪ್ರಾರಂಭ ಮಾಡಿದ್ದೇವೆ. ಎಕ್ಸಿಕ್ಯೂಟೀವ್ ಇಂಜಿನಿಯರ್ ಟ್ರಾನ್ಸ್‌ಫರ್ ಇದ್ದರೆ ನನ್ನ ಅಪ್ರೂವಲ್ ಬೇಕು. ಅಸಿಸ್ಟೆಂಟ್ ಇಂಜಿನಿಯರ್ ಇದ್ದರೆ, ಚೀಫ್ ಸೆಕ್ರೆಟರಿ ಮತ್ತು ನಮ್ಮ ಸೆಕ್ರೆಟರಿಯವರು ಅವರು ರೋಟಿನ್ ಆಗಿ ಮಾಡಲಿ ಎಂದು ಹೇಳಿ ಮಾಡುತ್ತಿದ್ದೇವೆ. ನಮ್ಮ ಅಧಿಕಾರಸ್ಥರಿಗೆ ಅಧಿಕಾರವನ್ನು ವಿಕೇಂದ್ರೀಕರಣ ಮಾಡಬಹುದಲ್ಲಾ? ಆ ರೀತಿ ಮಾಡಿ ಅಂತ ಹೇಳುತ್ತಿದ್ದಾರೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಮಾನ್ಯ ಸಚಿವರು ಹೇಳುವ ಮಾತು ಏನಾಗಿದೆ ಅಂದರೆ

ಎಲ್ಲರೂ ನನ್ನಂತೆ ಎಂದು ತಿಳಿದುಕೊಂಡು ನೀವು ಈ ಕಾನೂನನ್ನು ತಂದರೆ ಬಹುತೇಕ ಇದು ಸರಿಯಲ್ಲ. ನಾವು ಸಮಾಜದಲ್ಲಿರತಕ್ಕ ಎಲ್ಲಾ ವಿಚಾರಗಳನ್ನೊಳಗೊಂಡು ಜನಸಾಮಾನ್ಯರಿಗೆ ಯಾವ ದೃಷ್ಟಿಯಿಂದಲಾದರೂ ಉಪಯೋಗವಾಗಬೇಕೆಂದು ತರಬೇಕೇ ಹೊರತು ನಾನು ಹಾಗಿದ್ದೇನೆ ಅನ್ನುವುದನ್ನು ತಿಳಿದುಕೊಂಡು ಎಲ್ಲರೂ ನನ್ನಂತೆ ಇದ್ದಾರೆಯೇ ಎನ್ನುವುದನ್ನು ತಾವು ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್ : ಸೆಕ್ಷನ್ 203ರೊಳಗೆ ಪಂಚಾಯತ್ ಟ್ಯಾಕ್ಸ್ ವಸೂಲಿ ಮಾಡಲಿಕ್ಕೆ ಕೆಲವು ಏಜೆನ್ಸಿಗೆ ಟೆಂಡರ್ ಕೊಡಲಿಕ್ಕೆ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಇದು ನವೀನವಾದಂತಹ ಪ್ರಯೋಗ. ಪಂಚಾಯಿತಿ ಮಟ್ಟದಲ್ಲಿ ಇದು ಅನುಕೂಲವಾಗದಿದ್ದರೂ ಸಹಿತ ಇದೇ ವ್ಯವಸ್ಥೆಯನ್ನು ನೀವು ರಾಜ್ಯಮಟ್ಟಕ್ಕೆ ತಂದುಬಿಟ್ಟರೆ ಸೇಲ್ಸ್‌ಟ್ಯಾಕ್ಸ್ ರಾಜ್ಯ ಸರ್ಕಾರಕ್ಕೆ ಬರುವ ಆದಾಯ ಈಗ ಏನು ಸೋರುತ್ತಿದೆ ಅದು ಬಹಳಷ್ಟು ಉಳಿತಾಯವಾಗುತ್ತದೆ. ಸೆಕ್ಷನ್ 203 ಏನು ಹೇಳುತ್ತದೆಂದರೆ :- ಗ್ರಾಮ ಪಂಚಾಯತಿಗೆ ಸಂದಾಯವಾಗಬೇಕಾದ ತೆರಿಗೆ ದರ ಫೀಸು ಅಥವಾ ಇನ್ನಿತರ ಮೊಬಲಗನ್ನು ಈ ಬಗ್ಗೆ ಗ್ರಾಮ ಪಂಚಾಯತಿಯ ನೇಮಕ ಮಾಡುವಂಥ ಏಜೆನ್ಸಿಯ ಮೂಲಕ ಸಂಗ್ರಹಿಸಬಹುದು. ಪರಂತು, ಗೊತ್ತು ಪಡಿಸಿದ ನಿಯಮಗಳಿಗೊಳಪಟ್ಟು ಈ ಅಧಿನಿಯಮದಲ್ಲಿ ಗ್ರಾಮ ಪಂಚಾಯತಿ ಯಾವುದೇ ತೆರಿಗೆ, ದರ ಫೀಸು ಅಥವಾ ಇತರ ಮೊಬಲಗನ್ನು ವಿಧಿಸುವ ಹಕ್ಕನ್ನು ಸಾರ್ವಜನಿಕ ಹರಾಜಿನ ಮೂಲಕ ಗುತ್ತಿಗೆ ಕೊಡುವುದು ಕಾನೂನು ಸಮ್ಮತವಾಗಿರತಕ್ಕದ್ದು ಮತ್ತು ಅಂಥ ಗುತ್ತಿಗೆಯ ಮೇರೆಗೆ ಬಾಕಿಯಿರುವ ಮೊಬಲಗನ್ನು ಈ ಅಧ್ಯಾಯದಲ್ಲಿ ಉಪಬಂಧಿಸಿರುವ ರೀತಿಯಲ್ಲಿ ವಸೂಲು ಮಾಡತಕ್ಕದ್ದು. ಖಾಸಗಿ ಏಜೆನ್ಸಿಗೆ ನಾವು ಕಂಟ್ರಾಕ್ಟ್ ಬೇಸಿಸ್ ಮೇಲೆ ಟೆಂಡರ್ ಕರೆದು ಕೊಡುವಂತಹ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ, ಇದು ಒಳ್ಳೆಯ ಕೆಲಸ ಆಗಿದೆ. ಆದರೆ ಇದನ್ನು ರಾಜ್ಯಮಟ್ಟದಲ್ಲಿ ತಾವು ತರಲಿಕ್ಕೆ ಮಂತ್ರಿಮಂಡಲದಲ್ಲಿ ಪ್ರಯತ್ನ ಮಾಡಿದರೆ ಸೇಲ್ಸ್ ಟ್ಯಾಕ್ಸ್ ಸೋರಿ ಹೋಗುವುದನ್ನು ನಿಲ್ಲಿಸಬಹುದು. ಇವತ್ತು ಮೂರು ಸಾವಿರ ಕೋಟಿ ಸೇಲ್ಸ್ ಟ್ಯಾಕ್ಸ್‌ನ್ನು ಕೂಡಿಸಬೇಕೆಂಧು ನೀವು ಇಚ್ಛೆಪಟ್ಟಿದ್ದರೆ, ಇದನ್ನು ಟೆಂಡರ್ ಹರಾಜು ಕಲೆಕ್ಷನ್ ಮಾಡಿದರೆ ಆರು ಸಾವಿರ ಕೋಟಿ ರೂಪಾಯಿ ಒಂದು ವರ್ಷದೊಳಗೆ ಬರುತ್ತದೆ. ಬಹಳಷ್ಟು ಸೋರಿಕೆ ಅಲ್ಲಿ ಇದೆ. ಒಂದು ಬಂದು ಏಜನ್ಸಿಯನ್ನು ಇಡುವುದರಿಂದ ಸೋರುವಿಕೆ ಸಂಪೂರ್ಣವಾಗಿ ನಿಲ್ಲುತ್ತದೆ. ಅದಕ್ಕೆ ದಯವಿಟ್ಟು ತಾವು ಮಂತ್ರಿ ಮಂಡಲದ ಸಭೆಯಲ್ಲಿ ಈ ಸಲಹೆಯನ್ನು ತಂದು, ತಾವು ಪಂಚಾಯಿತಿಗೆ ಏನನ್ನು ತರಬೇಕು ಎಂದು ಅನ್ನುತ್ತೀರಿ ಅದನ್ನು ಸರ್ಕಾರದ ಮಟ್ಟದಲ್ಲಿಯೂ ತಂದರೆ ಬಹಳ ಒಳ್ಳೆಯದಾಗುತ್ತದೆ.

ನಾನು ಟ್ಯಾಕ್ಸ್ ಕಲೆಕ್ಷನ್ ಬೇರೆಯವರಿಗೆ ಕೊಡುವುದಕ್ಕೆ ಬರುತ್ತದೆಯೋ ಇಲ್ಲವೋ ಎಂದು ನಾನು ತಿಳಿದುಕೊಂಡಿದ್ದೆ. ನೀವು ಕೊಡುತ್ತೀರಿ ಅಂತ ಅಂದಾಗ ಬಹುತೇಕ ಕೊಡಲಿಕ್ಕೆ ಬರುತ್ತದೆ. ಸೇಲ್ಸ್‌ಟ್ಯಾಕ್ಸ್‌ನ್ನು ಪ್ರಯೋಗಿಕವಾಗಿಯಾದರೂ ನೀವು ಮಾಡಲಿಕ್ಕೆ ಅವಕಾಶವನ್ನು ಕಲ್ಪಿಸಿ ಕೊಡಬೇಕು. ಈ ಕಾನೂನಿನಲ್ಲಿ ಪ್ರಾಹಿಬಿಷನ್ಸ್‌ನ್ನು ರಾಜ್ಯಮಟ್ಟದಲ್ಲಿ ತೆಗೆದರೆ ಬಹಳ ಒಳ್ಳೆಯದು. ತೆಗೆಯುತ್ತಿರೋ ಇಲ್ಲವೋ ಎನ್ನುವ ಸಂಶಯ ಬರುತ್ತಿದೆ, ಅದಕ್ಕೆ ನಮ್ಮ ಹಳ್ಳಿಮಟ್ಟದಲ್ಲಾದರೂ ನಾವು ಗ್ರಾಮ ಸಭೆಯವರು ನಮ್ಮ ಊರಿನೊಳಗೆ ಸಾರಾಯಿ ಅಂಗಡಿ ಬೇಡ ಅಂತ ಠರಾವು ಮಾಡಿದರೆ ಅಲ್ಲಿ ಎಕ್ಸೈಸ್ ಆಕ್ಷನ್ ಆಗಲಾರದಂತೆ ಈ ಕಾನೂನಿನಲ್ಲಿ ಒಂದು ಅವಕಾಶವನ್ನು ಮಾಡಿಕೊಡಿ. ನಮ್ಮ ಗ್ರಾಮೀಣ ಬದುಕಿಗೆ ಬಹಳ ಅತಿ ಅವಶ್ಯವಾದಂತಹ ಕೆಲಸ ಅದು. ಅದನ್ನು ಮಾಡಿಕೊಟ್ಟರೆ ಒಳ್ಳೆಯದು. ರಾಜ್ಯಮಟ್ಟದಲ್ಲಿ ನಾವು ಯಶಸ್ವಿಯಾಗಲಿಲ್ಲ ಎಂದರೂ ಸಹಿತ ನಮ್ಮನಮ್ಮ ತಾಲ್ಲೂಕಿನೊಳಗೆ ಬಹಳಷ್ಟು ಗ್ರಾಮಗಳಲ್ಲಿ ನಾವು ಇದು ನಿಲ್ಲುವಂತಹ ಕೆಲಸವನ್ನು ಮಾಡುತ್ತೇವೆ. ಅದರಿಂದ ಬಹಳಷ್ಟು ನಮ್ಮ ತಾಯಂದಿರಿಗೆ ಸಹೋದರಿಯರಿಗೆ ಹೆಚ್ಚು ಅನುಕೂಲವಾಗುತ್ತದೆ. ಈ ರೀತಿಯ

ಪಂಚಾಯತ್ ಮಸೂದೆಯ ; ಇದು ಯೋಗ್ಯವಾದಂತಹ ರೀತಿಯಲ್ಲಿ, ಇದು ಜನಹಿತ ಆಗುವ ಅದು ಆಗಲಿಲ್ಲ. ಒಳ್ಳೆಯ ರೀತಿಯಲ್ಲಿ ಎಲ್ಲೂ ಆಗಲಿಲ್ಲ. ಇದು ನಮ್ಮ ಮುಂದುವರೆದಂತಹ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಆಗಲಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಬಹಳ ಮುಂದುವರಿದಂಥದ್ದು ಮತ್ತು ವಿಕೇಂದ್ರಿಕರಣದಲ್ಲಿ ಹೆಚ್ಚು ಕೆಲಸ ಮಾಡಿರುವುದಕ್ಕೆ ಪ್ರಯತ್ನ ಮಾಡಿರತಕ್ಕಂತಹ ಜಿಲ್ಲೆ. ಆದುದರಿಂದ ಈ ಗ್ರಾಮ ಸಭೆ ಸರಿಯಾಗಿ ಆಗುವ ಹಾಗೆ ನೋಡುವಂಥಾದ್ದು ಸೂಕ್ತ ಇದೆ. ಮತ್ತು ಬಹಳ ಕಠಿಣವಾದಂತಹ ಕಾರ್ಯಕ್ರಮದಲ್ಲಿ ಇಟ್ಟರೂ ಚಿಂತೆ ಇಲ್ಲ. ಅದಕ್ಕೆ ಹೇಳಿದ್ದೇವೆ; ಅವರು ಕರೆಯದಿದ್ದರೂ ಸಹ ಅದಕ್ಕಿಂತಲೂ ಮೇಲಿನವರು ಕರೆಯತಕ್ಕಂಥ ವ್ಯವಸ್ಥೆ ಮಾಡಿದ್ದೇವೆ ಎಂದು ತಾವು ಹೇಳಿದ್ದೀರಿ. ಅದು ಕಟ್ಟುನಿಟ್ಟಾಗಿ ಜಾರಿಗೆ ಬರಬೇಕು. ಆ ಗ್ರಾಮಸಭೆ ಆಗುವಂಥಾದ್ದು ಆಗಲೇಬೇಕು. ಅದಕ್ಕೆ ಅಧಿಕಾರಿಗಳು ಬರಲೇಬೇಕು. ಕೆಲವು ಕಡೆ ಅಧಿಕಾರಿಗಳೇ ಬರುವುದಿಲ್ಲ. ನಾನು ಎಷ್ಟೋ ಗ್ರಾಮ-ಸಭೆಗಳಿಗೆ ಹೋಗಿದ್ದೇನೆ. ಈಗ ಇದು ಕಡ್ಡಾಯವಾಗಿ ಆಗಬೇಕು. ಅಧಿಕಾರಿಗಳು ಕೂಡ ಜನರ ಸೇವೆಯನ್ನು, ಗ್ರಾಮದ ಸೇವೆಯನ್ನು ಮಾಡುವಂತಹವರು. ಅವರು ಬೇರೆ ಯಾರನ್ನೋ ಹೊರಗಿನವರ ಸೇವೆ ಮಾಡಲಿಕ್ಕೆ ಇದ್ದಂತಹ ಅಧಿಕಾರಿಗಳು ಅಲ್ಲ. ಆದ್ದರಿಂದ, ಗ್ರಾಮ ಸಭೆಗೆ ಬಂದರೆ 6 ತಿಂಗಳಿಗೆ ಒಮ್ಮೆಯಾದರೂ ಒಳ್ಳೆಯ ರೀತಿಯ ಒಂದು ಕಾರ್ಯಕ್ರಮ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆ ಗ್ರಾಮದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡುವುದಕ್ಕೆ ಸಾಧ್ಯವಾಗುತ್ತದೆ. ಆದುದರಿಂದ, ಈ ಗ್ರಾಮ ಸಭೆಗಳನ್ನು ಕಡ್ಡಾಯವಾಗಿ ಮಾಡತಕ್ಕಂಥಾದ್ದನ್ನು ನೀವು ನಿಶ್ಚಯ ಮಾಡಿದ್ದೀರಿ. ಅದು ಕಡ್ಡಾಯವಾಗಿ ಆಗುವ ಹಾಗೆ ನೀವು ನೋಡಿಕೊಳ್ಳಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆಪಡುತ್ತೇನೆ. ಮತ್ತು ಗ್ರಾಮ ಪಂಚಾಯತಿಗಳಿಗೆ ಒಂದು ಲಕ್ಷ ರೂಪಾಯಿ ಹಣ ಕೊಡುವಂತಹ ಕಾರ್ಯಕ್ರಮವನ್ನು ಇಟ್ಟಿದ್ದೀರಿ. ಅದು ಬಹಳ ಒಳ್ಳೆಯ ಕಾರ್ಯಕ್ರಮ. ಏಕೆಂದರೆ ಕೆಲವು ಗ್ರಾಮ ಪಂಚಾಯಿತಿಯಲ್ಲಿ ಏನೂ ಇರುವುದಿಲ್ಲ. ಅಲ್ಲಿ ಶೌಚಾಲಯ ಇರುವುದಿಲ್ಲ, ನೀರಿನ ವ್ಯವಸ್ಥೆ ಇರುವುದಿಲ್ಲ, ಅಥವಾ ವಿದ್ಯಾಭ್ಯಾಸ ಮಾಡಿಸಲಿಕ್ಕೆ ಸರಿಯಾದಂತಹ ಒಂದು ವ್ಯವಸ್ಥೆ ಇರುವುದಿಲ್ಲ. ಇಂತಹ ಪರಿಸ್ಥಿತಿ ಇರತಕ್ಕಂತಹ ಗ್ರಾಮ ಪಂಚಾಯಿತಿಗಳು ಎಷ್ಟೋ ಇವೆ. ಆದುದರಿಂದ ಒಂದು ಲಕ್ಷ ರೂಪಾಯಿ ಅನುದಾನ ಕೊಡತಕ್ಕಂತಹ ಒಂದು ವ್ಯವಸ್ಥೆಯಿಂದ ಇದು ಯಾವ ರೂಪದಿಂದಲಾದರೂ ಗ್ರಾಮ ಪಂಚಾಯಿತಿ ಮುಂದಡಿ ಇಟ್ಟುಕೊಂಡು ಹೋಗುವುದಕ್ಕೆ ಸಾಧ್ಯವಾಗುತ್ತದೆ. ಅಂತಹ ಒಂದು ಏರ್ಪಾಡು ಮಾಡಿದ್ದು ಬಹಳ ಸಂತೋಷದ ವಿಚಾರ. ಇನ್ನು ಮಂಡಲ ಪಂಚಾಯಿತಿ ಬಗ್ಗೆ ನಾನು ಏನೂ ದೀರ್ಘವಾಗಿ ಮಾತನಾಡುವುದಿಲ್ಲ. ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ಹೇಳುತ್ತೇನೆ. ಏಕೆಂದರೆ ಮಾನ್ಯ ಘೋರ್ಪಡೆಯವರು ತಂದಿರತಕ್ಕಂಥ ಈ ಮಸೂದೆಯಲ್ಲಿ ಹೆಚ್ಚಿನ ಕೆಲಸವನ್ನು ಮಾಡಿ, ಹೆಚ್ಚಿನ ನಾಜೂಕಿನಲ್ಲಿ ಇದನ್ನು ತರುವುದಕ್ಕೆ ಪ್ರಯತ್ನ ಮಾಡಿದ್ದಾರೆ. ಆದ್ದರಿಂದ ಅದರಲ್ಲಿ ವಿಶೇಷವಾಗಿ ಹೇಳಿದ್ದನ್ನೇ ಹೇಳಬೇಕಾದಂಥ ಅವಶ್ಯಕತೆ ಇಲ್ಲ. ಇನ್ನು ಮಂಡಲ ಪಂಚಾಯಿತಿ ಅಧ್ಯಕ್ಷರನ್ನು ನೇರವಾಗಿ ಮಾಡಬೇಕೋ ಅಥವಾ ಪರೋಕ್ಷವಾಗಿ ಮಾಡಬೇಕೋ ಎಂದು ಹೇಳುವಂತಹ ಒಂದು ವಿಚಾರ ಇದೆ. ನಾನು ಇದರ ಬಗ್ಗೆ ಹೇಳುವುದಾದರೆ ಇದನ್ನು ನೇರವಾಗಿ ಮಾಡುವುದೇ ಒಳ್ಳೆಯದು. ಏಕೆಂದರೆ, ನೇರವಾಗಿ ಚುನಾವಣೆ ಮಾಡಿದರೆ ಅದರಲ್ಲಿ ಹೆಚ್ಚಿನ ವೈಷಮ್ಯಕ್ಕೆ ದಾರಿಯಾಗುವುದಿಲ್ಲ. ಅಥವಾ ಒಬ್ಬರನ್ನು ಒಬ್ಬರು ಕಬಳಿಸುವಂಥದ್ದು. ಇನ್ನೊಂದು ರೀತಿಯಲ್ಲಿ ತಪ್ಪಿಸಿಕೊಂಡು ಹೋಗುವಂತಹ ಯಾವ ವ್ಯವಸ್ಥೆಯೂ ಬರುವುದಿಲ್ಲವೆಂದು ನನ್ನ ಭಾವನೆ. ಆದುದರಿಂದ ಮಂಡಲ ಪಂಚಾಯತಿಗಳ ಅಧ್ಯಕ್ಷರೆ ಚುನಾವಣೆ ನೇರವಾಗಿ ಆಗುವಂಥಾದ್ದು ಬಹಳ ಒಳ್ಳೆಯ ದು ಎಂದ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತೇನೆ. ಆಗ ಅಧ್ಯಕ್ಷರನ್ನು ತೆಗೆಯಬೇಕು ಎಂದರೆ ಗ್ರಾಮ ಸಭೆಯಲ್ಲಿ ಎಲ್ಲರೂ ಕೂಡ ನಿಶ್ಚಯ ಮಾಡಿ ಅವರನ್ನು ತೆಗೆಯಬಹುದು. ಮೂರನೇ ಎರಡು ಭಾಗ ಮೆಜಾರಿಟಿಯಲ್ಲಿ ತೆಗೆಯತಕ್ಕಂಥ ವ್ಯವಸ್ಥೆಯನ್ನು ಇಟ್ಟಿರುವಾಗ ಹೆಚ್ಚಿನ ತೊಂದರೆ ಆಗುವುದಿಲ್ಲ ಎಂದು ನನ್ನ ಅನಿಸಿಕೆ. ಇನ್ನು ರಿಸರ್ವೇಷನ್ ಇರುವಂಥಾದ್ದು 18 ಪರ್ಸೆಂಟ್.

ಅದೇ ರೀತಿಯಲ್ಲಿ 23 ಪರ್ಸೆಂಟ್. ಅದೇ ರೀತಿ ಹಿಂದುಳಿದವರಿಗೆ 33 ಪರ್ಸೆಂಟ್ ಮತ್ತು ಮಹಿಳೆಯರಿಗೂ ಕೂಡ ಇಷ್ಟು ಪರ್ಸೆಂಟ್ ಎಂದು ಇಟ್ಟಿರುವಂಥಾದ್ದು ಕೂಡ ಬಹಳ ಯೋಗ್ಯವಾದುದಾಗಿದೆ. ಅದರಲ್ಲಿ ಯಾರಾದರೂ ಬೇರೆ ಬೇರೆ ರೀತಿಯಲ್ಲಿ ತಪ್ಪು ಗ್ರಹಿಸಲಿಕ್ಕೆ ಅಥವಾ ಇನ್ನೊಂದು ಅಭಿಪ್ರಾಯ ಕೊಡುವುದಕ್ಕೆ ಎಲ್ಲಿಯೂ ದಾರಿ ಇಲ್ಲ. ಆದುದರಿಂದ ಅದೂ ಕೂಡ ಚೆನ್ನಾಗಿ ಇದೆ. ಇನ್ನು ನಾಲ್ಕು ನೂರು ಜನರಿಗೆ ಮಂಡಲ ಪಂಚಾಯತಿಯಲ್ಲಿ ಒಬ್ಬ ಸದಸ್ಯನಿರುತ್ತಾನೆ. ಆದುದರಿಂದ ಇದು ಮೊದಲು ಇದ್ದಂತಹ ಮಂಡಲ ಪಂಚಾಯಿತಿಗಿಂತ ಎರಡು ಪಾಲು ಮಂಡಲ್ ಪಂಚಾಯತಿಗಳು ಈಗಿನ ಕ್ರಮದಲ್ಲಿ ಆಗುತ್ತವೆ. 5 ಸಾವಿರದಿಂದ 7 ಸಾವಿರದವರೆಗೆ ಜನಸಂಖ್ಯೆ ಮಿತಿ ಇಟ್ಟಿದ್ದೀರಿ. ಅದೇ ರೀತಿಯಲ್ಲಿ ತಾಲ್ಲೂಕು ಪಂಚಾಯಿತಿಯ10 ಸಾವಿರದ ಮಿತಿ ಇಟ್ಟಿದ್ದೀರಿ. ಮತ್ತು ಜಿಲ್ಲಾಪರಿಷತ್ತಿಗೆ 40 ಸಾವಿರಕ್ಕೆ ಕೊಟ್ಟಿದ್ದು ಬಹಳ ಒಳ್ಳೆಯದು. ಏಕೆಂದರೆ ಅದಕ್ಕಿಂತ ಕಡಿಮೆ ಇಟ್ಟರೆ ಅಷ್ಟು ಚೆನ್ನಾಗಿ ಆಗುವುದಿಲ್ಲ. ಇದನ್ನೂ ಕೂಡ ನಾವು ಸ್ವಾಗತ ಮಾಡಬಹುದು. ಇನ್ನು ಹಿಂದೆ ಆಗಿರತಕ್ಕಂಥ ಮಂಡಲ್ ಪಂಚಾಯಿತಿಯಲ್ಲಿ ಮತ್ತು ಜಿಲ್ಲಾಪರಿಷತ್ತಿನಲ್ಲಿ, ಮಂಡಲ ಪಂಚಾಯಿತಿಯ ಸಭಾಧ್ಯಕ್ಷರನ್ನು, ಉಪಾಧ್ಯಕ್ಷರನ್ನು ಮತ್ತು ಇನ್ನಿತರ ಕಾರ್ಯಕಮಗಳನ್ನು ನೋಡತಕ್ಕಂತಹ ವ್ಯವಸ್ಥೆ ಇರಲಿಲ್ಲ. ಅಲ್ಲಿ ತನಿಖೆಯೇ ಇರಲಿಲ್ಲ. ಆದುದರಿಂದ ಅನೇಕ ರೀತಿಯಲ್ಲಿ ಹೆಚ್ಚು ಕಡಿಮೆಯಾಗಿದೆ, ಅವ್ಯವಹಾರಗಳು ಆಗಿದೆ. ತನಿಖೆ ಸರಿ ಇಲ್ಲದಿದ್ದರೆ, ಅದನ್ನು ನೋಡತಕ್ಕಂಥವರು ಇಲ್ಲದಿದ್ದರೆ ಆಡಿಟ್ ಇಲ್ಲದಿದ್ದರೆ, ತಿಂಗಳಿಗೆ, ಆರು ತಿಂಗಳಿಗೊಮ್ಮೆ ಯಾರೋ ಬರುತ್ತಾರೆ, ನೋಡುತ್ತಾರೋ, ಕೇಳುತ್ತಾರೆ ಎಂಬ ಹೆದರಿಕೆ ಇಲ್ಲದಿದ್ದರೆ ಎಲ್ಲಾ ರೀತಿಯ ಅವ್ಯವಹಾರಗಳೂ ಆಗುತ್ತವೆ. ಯಾವುದಕ್ಕೂ ತನಿಖೆ ಇರಬೇಕು. ಆದುದರಿಂದ ಆ ಅಧಿಕಾರಿಗಳಿಗೆ ನಾವು ಶಕ್ತಿ ಕೊಡುತ್ತೇವೆ ಎಂದು ಅಲ್ಲ. ಎಲ್ಲಿ ನಾವು ತನಿಖೆಯನ್ನು ಸಡಿಲ ಬಿಡುತ್ತೇವೆಯೋ ಅಲ್ಲಿ ನಮಗೆ ಹಾನಿ ಉಂಟಾಗುತ್ತದೆಂದು ನಾನು ಭಾವಿಸಿಕೊಳ್ಳುತ್ತೇನೆ. ಆದುದರಿಂದ ಅವರನ್ನು ಅವರಷ್ಟಕ್ಕೇ ಸ್ವಾವಲಂಬಿಗಳಾಗಿ ಇರುವುದಕ್ಕೆ ಬಿಡಬಾರದು. ಇದರಲ್ಲಿ ಅವ್ಯವಹಾರಗಳು ಆಗುತ್ತದೆ. ಅವ್ಯವಹಾರಗಳು ಆಗುವುದನ್ನು ಆಗಾಗ ತನಿಖೆಯಿಂದ ಕಂಡುಹಿಡಿದು ಅವರನ್ನು ಆಗಲೇ ತಡೆದು ಅಟ್ಟಿಬಿಟ್ಟರೆ ಮುಂದೆ ಅವ್ಯವಹಾರಗಳು ಆಗುವಂತಾದ್ದು ತಪ್ಪಲಿಕ್ಕೆ ಸಾಧ್ಯವಾಗುತ್ತದೆ. ಇದು ಬಹಳ ಪ್ರಾಮುಖ್ಯವಾದ ವಿಚಾರ. ಹಿಂದಿನ ಪಂಚಾಯಿತಿಯಲ್ಲಿ ಅದು ಇಲ್ಲ. ಆದ್ದರಿಂದಲೇ ಹೆಚ್ಚು ಅವ್ಯವಹಾರಗಳಾಗಿದೆ. ಇದು ಅನೇಕ ಕಡೆಗಳಲ್ಲಿ ಆಗಿದೆ, ನಮಗೆ ಗೊತ್ತಿದೆ. ಆದುದರಿಂದ ಮಾನ್ಯ ಮಂತ್ರಿಗಳಲ್ಲಿ ನಾನು ಹೇಳುವುದೇನೆಂದರೆ, ಈ ತನಿಖೆಯ ಕ್ರಮವನ್ನು ತಾವು ಇದರಲ್ಲಿ ಅಳವಡಿಸಲೇ ಬೇಕು. ಈಗ ನೀವು ಅದನ್ನು ಇದರಲ್ಲಿ ಸೇರಿಸಲಿಲ್ಲ. ಈ ಮಂಡಲ್ ಪಂಚಾಯಿತಿಗಳಲ್ಲಿ ಆಗಾಗ ಹೆಚ್ಚು ಕಡಿಮೆಯಾಗಿದೆ ಎಂದು ನೋಡತಕ್ಕಂತಹ ವ್ಯವಸ್ಥೆ, ಸರಿಯಾದಂತಹ ಆಡಿಟ್...

6.50 ಪಿ. ಎಂ.

ಶ್ರೀ ಎಂ. ವೈ. ಘೋರ್ಪಡೆ : ಎರಡು ತರಹದ ಇನ್ಸ್‌ಪೆಕ್ಷನ್ ವ್ಯವಸ್ಥೆಯನ್ನು ಇದರಲ್ಲಿ ಮಾಡಿದ್ದೇನೆ. ಒಂದು ರೊಟಿನ್ ಇನ್ಸ್‌ಪೆಕ್ಷನ್, ಮತ್ತೆ ಕಂಪ್ಲೇಂಟ್ ಬಂದರೆ ಅದು ಒಂದು ಬೇರೆ ತರಹ ಇದೆ. ಎರಡೂ ಇದೆ. ಉದ್ದೇಶ ಇಷ್ಟೆ. ಇನ್ಸ್‌ಪೆಕ್ಷನ್ ಅಡ್ಮಿನಿಸ್ಟ್ರೇಟೀವ್ ರೊಟಿನ್ ಆಗಿ ನಡೆಯಬೇಕು. ಆಮೇಲೆ ಕಂಪ್ಲೇಂಟ್ ಬಂದರೆ, ತಕ್ಷಣ ಅದನ್ನು ಇನ್ಸ್‌ಪೆಕ್ಟ್ ಮಾಡಿ ಕ್ರಮ ತೆಗೆದುಕೊಳ್ಳಬೇಕು. ಉದ್ದೇಶದಿಂದ ಅವರ ಎಲೆಕ್ಟೆಡ್ ಸ್ಟೇಟಸ್ ಏನಿದೆ, ಅದಕ್ಕೆ ಧಕ್ಕೆ ಬರದಂತೆ ಆಡಳಿತಾತ್ಮಕವಾಗಿ ಏನು ಮಾಡುವುದಕ್ಕೆ ಸಾಧ್ಯ, ಅದನ್ನು ಮಾಡಿದ್ದೇವೆ.

ಶ್ರೀ ಬಿ. ಎಂ. ಇದ್ದಿನಬ್ಬ : ಇನ್ನು ಮಂಡಲ ಪಂಚಾಯತಿಗಳಿಗೆ ಈ ಸಂಬಳ ಬಟವಾಡೆ ಮಾಡತಕ್ಕಂಥದ್ದು ನೇರವಾಗಿ ಸರ್ಕಾರವೇ ಮಾಡುವುದಕ್ಕಿಂತ ಮಂಡಲ ಪಂಚಾಯಿತಿ ಮುಖಾಂತರ ಮಾಡುವಂಥಾದ್ದನ್ನು ನಮ್ಮ ಗದಗ್ ಶಾಸಕರಾದಂಥ ಪಾಟೀಲರು ಹೇಳಿದರು.

ನಿಜವಾಗಿಯೂ ಹಾಗೆ ಮಾಡಿದರೆ ಒಳ್ಳೆಯದು. ಏಕೆಂದರೆ ಒಂದು ಗ್ರಾಮದಲ್ಲಿ ಒಂದು ರೀತಿಯ ಹಿಡಿತ ಬರುತ್ತದೆ. ಇಲ್ಲವಾದರೆ ಹೆಚ್ಚಿನ ಇದು ಸರ್ಕಾರವೇ ಮಾಡುತ್ತದೆ ಎಂದು ಹೇಳತಕ್ಕಂಥ ರೀತಿಯಲ್ಲಿ ಹೋಗಿಬಿಡುತ್ತದೆ. ಇನ್ನು ಬರೀ ಮೂರನ್ನು ಸ್ಥಾಯಿ ಸಮಿತಿ ಮಾಡಿದ್ದುದು ಬಹಳ ಒಳ್ಳೆಯದು. ಇಲ್ಲದಿದ್ದರೆ ಅದು ಏಳು, ಎಂಟು ಸ್ಥಾಯಿ ಸಮಿತಿ ಮಾಡಿ ಹಿಂದೆ ಬಹಳ ಅನ್ಯಾಯವಾಗಿದೆ. ಈಗ ಮೂರು ಸ್ಥಾಯಿ ಸಮಿತಿ ಮಾಡಿದ್ದುದು ಬಹಳ ಒಳ್ಳೆಯದು. ಏಕೆಂದರೆ ಒಂದು ಒಳ್ಳೆಯ ರೀತಿಯಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಈಗ ಗ್ರಾಮ ಪಂಚಾಯಿತಿ ಮೀಟಿಂಗ್‌ಗಾಗಲಿ ಅಥವಾ ಇನ್ನಿತರ ತಾಲ್ಲೂಕು ಮೀಟಿಂಗ್‌ಗಳಿಗೆ ಆಗಲಿ, ನಾವು ತಿಳಿದ ಹಾಗೆ ಗ್ರಾಮ ಸಭೆಗಳಿಗೆ ಅಧಿಕಾರಿಗಳು ಬರುವುದಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಬಾರದಿದ್ದರೆ ಯಾವ ಯಾವ ಡಿಪಾರ್ಟ್‌ಮೆಂಟ್‌ನಲ್ಲಿ ಏನೇನು ಕೆಲಸವಾಗಿದೆ ಎನ್ನತಕ್ಕಂಥದ್ದನ್ನು ಅದನ್ನು ಟಿಪ್ಪಣಿ ಮಾಡತಕ್ಕಂಥ ಇನ್ನೊಮ್ಮೆ ಅದನ್ನು ತಿದ್ದಿಕೊಂಡು ಮಾಡತಕ್ಕಂಥ ವ್ಯವಸ್ಥೆ ಮತ್ತೆ ಯಾರು ಮಾಡಬೇಕು? ಅಧಿಕಾರಿಗಳೇ ಬಾರದಿದ್ದರೆ ಸದಸ್ಯರು ಬಂದು ಏನೋ ಮೀಟಿಂಗ್ ಮಾಡಿ ಹೋಗಬಹುದು ; ಅದರಿಂದ ಪ್ರಯೋಜನವಾಗುವುದಿಲ್ಲ. ಇದು ಮಂಡಲ ಪಂಚಾಯಿತಿ ಸಭೆಗಳಲ್ಲಿಯೂ ಇನ್ನು ಮುಂದಿನ ತಾಲ್ಲೂಕು ಮಟ್ಟದ ಸಭೆಗಳಲ್ಲಿಯೂ ಕಡ್ಡಾಯವಾಗಿ ಅಧಿಕಾರಿಗಳು ಬರಲೇಬೇಕು ಎನ್ನತಕ್ಕಂಥ ಒಂದು ನಿಬಂಧನೆಯನ್ನು ಮಾನ್ಯಮಂತ್ರಿಗಳು ಮಾಡಿದರೆ ಮಾತ್ರ ಏನಾದರೂ ಇದರಿಂದ ಹೆಚ್ಚಿನ ಪ್ರಯೋಜನ ಪಡೆಯುವುದಕ್ಕೆ ನಮಗೆ ಸಾಧ್ಯವಾಗುತ್ತದೆ. ಇಲ್ಲವಾದರೆ ಇದು ಹಿಂದಿನ ಹಾಗೆ ಎಂದು ನಾವು ಭಾವಿಸುವುದಕ್ಕೆ ಸಾಧ್ಯವಾಗುತ್ತದೆ. ಈಗ ತಾವೆಲ್ಲಾ ಇಷ್ಟು ಕಷ್ಟಪಟ್ಟು ಇಷ್ಟೆಲ್ಲಾ ನಾಜೂಕಿನಿಂದ ಇಷ್ಟೊಂದು ಒಳ್ಳೆಯ ರೀತಿಯಲ್ಲಿ ತಂದಂಥ ಮಸೂದೆ ಈ ಕೆಲವು ವಿಷಯಗಳ ಕಡೆಗೆ ನಾವು ಗಮನ ಕೊಡದೇ ಹೋದರೆ ಆ ರೀತಿಯಲ್ಲಿ ಅಧಿಕಾರಿಗಳು ಗ್ರಾಮ ಮಟ್ಟದ ಸಭೆಗಳಿಗೂ, ತಾಲ್ಲೂಕು ಮಟ್ಟದ ಸಭೆಗಳಿಗೂ ಸರಿಯಾಗಿ ಬಾರದೆ ಅವರವರ ಕಾರ್ಯಕ್ರಮ ಏನು ಎಂಬುದನ್ನು ಅವರು ಟಿಪ್ಪಣಿ ಮಾಡದೇ ಹೋದರೆ, ಮುಂದೆ ಅದನ್ನು ತಿದ್ದಿಕೊಳ್ಳತಕ್ಕಂಥ ವ್ಯವಸ್ಥೆ ಮಾಡತಕ್ಕಂಥದ್ದು, ಪರಿಶೀಲನೆ ಮಾಡತಕ್ಕಂಥ, ಅಭಿವೃದ್ಧಿ ಮಾಡತಕ್ಕಂಥ ಕಾರ್ಯ ಕ್ರಮವನ್ನು ಮತ್ತೆ ಯಾರು ಮಾಡಬೇಕು? ಅಂಥದ್ದರಿಂದ, ಈ ರೀತಿಯಲ್ಲಿ ಅಧಿಕಾರಿಗಳು ಸರಿಯಾಗಿ ಬರುವ ಹಾಗೆ ನೋಡಿಕೊಳ್ಳಬೇಕು. ಇನ್ನು ಬಿಲ್ಡಿಂಗ್ ಲೈಸೆನ್ಸ್‌ಗೆ 60 ದಿನಗಳು, ಅಧನ್ನು ಮೂವತ್ತು ದಿನಗಳು ಎಂದು ಮಾಡಬೇಕು, ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಬಹಳ ಸುಲಭದಲ್ಲಿ ಕೆಲಸವಾಗುತ್ತದೆ. ಇಲ್ಲದಿದ್ದರೆ ಬಹಳ ಕಾಯಬೇಕಾಗುತ್ತದೆ. ಎಂ.ಎಲ್.ಎ. ಎಂ.ಎಲ್.ಸಿ. ಅವರನ್ನು ಖಾಯಂ ಇನ್‌ವೈಟಿ ಎಂದು ಮಾಡಿ ಪ್ಲಾನಿಂಗ್ ಸಮಿತಿಗೆ ಮಾಡಿದ್ದುದೂ ಒಳ್ಳೆಯದು. ಏಕೆಂದರೆ ಅವರೂ ಕೂಡ ಅನೇಕ ವಿಚಾರಗಳನ್ನೆಲ್ಲಾ ಹೇಳುವಂಥದ್ದು ಇರುತ್ತದೆ. ನಮ್ಮ ಚಂದ್ರೇಗೌಡರು ಮಾತನಾಡುವಾಗ ಹೇಳಿದರು, ನಾವು ಹೆಗಡೆಯವರು ತಂದೆಯಾಗಿ, ನಜೀರ್ ಸಾಹೇಬರು ತಾಯಿಯಾಗಿ, ನಾನು ಸೂಲಗಿತ್ತಿಯಾಗಿ ಈ ಒಂದು ಮಗುವನ್ನು ನಾವು ತಂದಿದ್ದೇವು. ಅದು ಹಾಗೆಯೇ ಇತ್ತು ಎಂದು. ನಿಜ. ಅದು ಮಗುವಾಗಿದ್ದರೂ ಕೂಡ ಅದು ಬಾಲ್ಯಾವಸ್ಥೆಯಲ್ಲೇ ನರಳುತ್ತಿತ್ತು. ಆ ಬಾಲ್ಯಾವಸ್ಥೆಯಲ್ಲಿ ನರಳತಕ್ಕಂಥ ಆ ಮಗುವಿಗೆ ಘೋರ್ಪಡೆಯವರು ಒಳ್ಳೆಯ ಔಷಧಿ ಮಾಡಿ, ಸರ್ಜರಿ ಮಾಡಿ ಒಳ್ಳೆಯ ರೀತಿಯಲ್ಲಿ ತರುವುದಕ್ಕೆ ಪ್ರಯತ್ನವನ್ನು ಮಾಡಿದ್ದಾರೆಂದು ನಾನು ಇಲ್ಲಿ ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ತರುವುದು ದೊಡ್ಡದಲ್ಲ, ಮಗು ಹುಟ್ಟುವುದು ದೊಡ್ಡದಲ್ಲ. ಅದು ಬಾಲಗ್ರಹಗಳಿಂದ ಪೀಡಿತವಾಗಿದ್ದರೆ ಆ ಮಗುವಿನಿಂದ ಏನೂ ಪ್ರಯೋಜನವಿಲ್ಲ. ಆ ಬಾಲಗ್ರಹಕ್ಕೆ ಒಳ್ಳೆಯ ಔಷಧಿಯನ್ನು ಕೊಡುವುದಕ್ಕೆ ತಾವು ಏರ್ಪಾಡುಗಳನ್ನು ಮಾಡಿ ಮುಂದೆ ಬಂದದ್ದು ಒಳ್ಳೆಯದು ಎಂದು ಹೇಳುತ್ತೇವೆ. ಮತ್ತು ಇನ್ನೂ ಅನೇಕ ಮಾತುಗಳನ್ನು ಬಹಳ ದೀರ್ಘವಾಗಿ ಮಾತನಾಡಬಹುದು. ತಾವು ಒಳ್ಳೆಯ ಮನಸಿಟ್ಟು ಈ ಮಸೂದೆಯನ್ನು ತಂದಿದ್ದೀರಿ. ಇದರಿಂದ ನಮ್ಮ ಕರ್ನಾಟಕದಲ್ಲಿ ಒಂದು ಒಳ್ಳೆಯ ಆಶಾಭಾವನೆಯನ್ನು ನಾವು ಕಾಣುವುದಕ್ಕೆ ಸಾಧ್ಯತೆ ಇದೆ. ತಾವು ಬರೀ ಒಂದು ಮಂತ್ರಿಗಳು ಮಾತ್ರ ಅಲ್ಲ, ತಾವು ದೊಡ್ಡ

ಲೇಖಕರು, ತಾವು ಬರೀ ಒಂದು ಲೇಖಕರು ಮಾತ್ರವಲ್ಲ, ಬಹಳ ದೊಡ್ಡ ಛಾಯಾಗ್ರಾಹಕರು, ಬರೀ ಛಾಯಾಗ್ರಾಹಕರು ಮಾತ್ರವಲ್ಲ ಅಂತರ ರಾಷ್ಟ್ರೀಯ ಛಾಯಾಗ್ರಾಹಕರು. ಆದ್ದರಿಂದ ಈ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಮಸೂದೆಗೆ ಒಳ್ಳೆಯ ಫ್ಲ್ಯಾಷ್ ತೆಗೆದಿದ್ದೀರಿ ಮತ್ತು ಒಳ್ಳೆಯ ರೀತಿಯಲ್ಲಿ ತಾವು ಛಾಯಚಿತ್ರ ತೆಗೆದಿದ್ದೀರಿ ಎಂದು ಹೇಳಿ ಇದಕ್ಕೆ ಸ್ವಾಗತವನ್ನು ಬಯಸಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಡಿ. ಕೆ. ಶಿವಕುಮಾರ್ (ಸಾತನೂರು)ಃ ಮಾನ್ಯ ಅಧ್ಯಕ್ಷರೇ, ಗ್ರಾಮೀಣಾಭಿವೃದ್ಧಿ ಸಚಿವರು ಮಸೂದೆಯನ್ನು ಏನು ಮಂಡಿಸಿದ್ದಾರೋ ಅದನ್ನು ಬೆಂಬಲಿಸುತ್ತಾ ಕೆಲವೇ ನಿಮಿಷಗಳಲ್ಲಿ ನನ್ನ ಅಭಿಪ್ರಾಯವನ್ನು ಸೂಚಿಸುವುದಕ್ಕೆ ಇಷ್ಟಪಡುತ್ತೇನೆ. ನಾನು ಈ ಸಭೆಯ ಸದಸ್ಯನಾಗುವ ಮುನ್ನ ಜಿಲ್ಲಾಪರಿಷತ್ತಿನ ಸದಸ್ಯನಾಗಿ ಸುಮಾರು ಮೂರು ವರ್ಷಗಳ ಕೆಲಸ ಮಾಡಿ ಬಂದಿದ್ದೇನೆ. ನನಗೆ ಅನಿಸಿತು- ಈ ಜಿಲ್ಲಾ ಪರಿಷತ್ ಪರಿಸ್ಥಿತಿ ಏನು ಇದೆ, ಅದು ಸರಿಯಾದ ರೀತಿಯಲ್ಲಿ ನಡೆದರೆ, it is a basic institution for young politicians, ಎಂದು. ಕಳೆದ 1983 ರಲ್ಲಿ ಆಕ್ಟ್ ಏನು ಇತ್ತು. ಅದು ಸರಿಯಾದ ರೀತಿಯಲ್ಲಿ ನಡೆಯಲಿಲ್ಲ ಎಂದು ರಾಜ್ಯ ಮಟ್ಟದಲ್ಲಿ ರಾಷ್ಟ್ರ ಮಟ್ಟದಲ್ಲಿ ಚರ್ಚೆ ಆಗಿ ಪರ ವಿರೋಧ ಗೊಂದಲಕ್ಕೆ ಸಿಕ್ಕು, ಇವತ್ತಿನ ದಿನ ರಾಜೀವ್ ಗಾಂಧಿ ಅವರ ಕನಸನ್ನು ನನಸು ಮಾಡಲಿಕ್ಕೆ ನಾವೆಲ್ಲಾ ಹೊರಟಿದ್ದೇವೆ. ಒಂದು 15 ವರ್ಷದ ನೆನಪು ಹಿಂದಕ್ಕೆ ನಾನು ಹೋಗುತ್ತಿದ್ದೇನೆ. ನಮ್ಮ ತಾತ ಶ್ರೀ ಎಸ್. ಕರಿಯಪ್ಪನವರು ಈ ಒಂದು ಮನೆಯ ಸದಸ್ಯರಾಗಿದ್ದರು. ಅವರ ಹತ್ತಿರಕ್ಕೆ ಕರೆದುಕೊಂಡು ಹೋದರು. ನಾನು ಚಿಕ್ಕಹುಡುಗ; ಎಂಟನೇ ಕ್ಲಾಸ್ ಅಥವಾ ಒಂಭತ್ತನೇ ಕ್ಲಾಸಿಗೆ ಬೆಂಗಳೂರಿನಲ್ಲಿ ವ್ಯಾಸಂಗ ಮಾಡಲು ಒಂದು ಸೀಟು ಬೇಕಾಗಿತ್ತು. ಹೋದಂತಹ ಸಂದರ್ಭದಲ್ಲಿ ಕರಿಯಪ್ಪನವರು ತಕ್ಷಣ ನನ್ನನ್ನು ಅವರ ಕಾಲಿಗೆ ಬೀಳಿಸಿದರು. ಬಹಳ ಹಿರಿಯರು, ರಾಜಕಾರಣಿಗಳು ಬಹಳ ಗೌರವಸ್ಥರು, ಈ ದೇಶಕ್ಕೋಸ್ಕರ ಹೋರಾಟ ಮಾಡಿದವರು, ನಮಸ್ಕಾರ ಮಾಡು ಎಂದು ಹೇಳಿದ್ದರು. ಅಷ್ಟೊಂದು ಪೂಜ್ಯ ಭಾವನೆ ಇತ್ತು. ರಾಜಕಾರಣಿಗಳು ಅಂತ ಹೇಳಿದರೆ, ಆದರೆ ಇವತ್ತಿನ ಪರಿಸ್ಥಿತಿ ಹೇಗಿದೆ ಎಂದು ಹೇಳಿದರೆ, ರಸ್ತೆಯಲ್ಲಿ ನಾವ್ಯಾರಾದರೂ ರಾಜಕಾರಣಿಗಳು ಎಂದು ಹೋದರೆ, ನಮ್ಮ ಹಳ್ಳಿಗಳಲ್ಲಿ ಮಂಡಲ್‌ಪಂಚಾಯತಿ ಹಾಗೂ ಜಿಲ್ಲಾ ಪರಿಷತ್ ಚುನಾವಣೆಗಳು ಬಂದ ಮೇಲೆ ನಮ್ಮನ್ನೆಲ್ಲಾ ಕಳ್ಳರು ಎಂದು ಹೇಳಿ. ಹುಡುಗರೆಲ್ಲಾ ಕಲ್ಲು ಹೊಡೆಯುವಂತಹ ಪರಿಸ್ಥಿತಿಗೆ ನಾವು ಸಿಕ್ಕಿಹಾಕಿಕೊಂಡಿದ್ದೇವೆ. ಈ ಒಂದು ಚುನಾವಣೆ ಬಗ್ಗೆ ಮಾನ್ಯ ಬಾಬಾಗೌಡರು ಬಹಳ ಚೆನ್ನಾಗಿ ಪ್ರಸ್ತಾಪ ಮಾಡಿದರು. ನಾನು ಅವರು ಏನು ಡಿಬೇಟ್ ಮಾಡಿದರು. ಅದಕ್ಕೆ ಸಂಪೂರ್ಣವಾದ ಬೆಂಬಲವನ್ನು ಸೂಚನೆ ಮಾಡಿ ಅವರಿಗೆ ಅಭಿನಂದನೆಗಳನ್ನು ಈ ಸಂದರ್ಭದಲ್ಲಿ ಸಲ್ಲಿಸುತ್ತಿದ್ದೇನೆ. ಅನೇಕ ಸದಸ್ಯರುಗಳು ಈ ಒಂದು ಸಭೆಯ ಸದಸ್ಯರು ಜಿಲ್ಲಾ ಪರಿಷತ್ತಿನಲ್ಲಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಬಹಳ ಚೆನ್ನಾಗಿ ಶ್ರೀ ಡಿ. ಆರ್. ಪಾಟೀಲರವರು, ಶಿವಮೂರ್ತಿಯವರು, ಮಾನ್ಯ ರುಕ್ಮಯ್ಯ ಪೂಜಾರ್ ಅವರು ಎಲ್ಲಾ ಜಿಲ್ಲಾ ಪರಿಷತ್ತಿನಲ್ಲಿ ಸದಸ್ಯರಾಗಿ ಕೆಲಸ ಮಾಡಿಕೊಂಡು ಅನೇಕ ರೀತಿಯಲ್ಲಿ ಅವರ ಅನುಭವವನ್ನು ಈಗಾಗಲೇ ವ್ಯಕ್ತಪಡಿಸಿದ್ದಾರೆ. ಮಂಡಲ್ ಪಂಚಾಯತಿ 1983 ರಲ್ಲಿ ಪ್ರಾರಂಭ ಆಯಿತು. ಅದು ಆದ ನಂತರ ಅನೇಕ ಪಂಚಾಯತಿಗಳು ಬಂದವು. ಮರ್ಡರ್ ಪಂಚಾಯತಿ ಎಂದು ಹೇಳಿದರು. ಗ್ರಾಮದಲ್ಲಿ ಅಶಾಂತಿ ಉಂಟಾಯಿತು. ಕಾನೂನು ವ್ಯವಸ್ಥೆಗೆ ಬಹಳ ಅಡಚಣೆ ಉಂಟಾಯಿತು. ಬಹಳ ಗೊಂದಲಕ್ಕೆ ಸಿಕ್ಕಿ ಇವತ್ತು ಏನೋ ನಮ್ಮ ಗ್ರಾಮೀಣಾಭಿವೃದ್ಧಿ ಸಚಿವರು ಹೊಸ ರೂಪವನ್ನು ತರುತ್ತೇವೆಂದು ಹೊರಟಿದ್ದಾರೆ. ಬಹುಶಃ ನನಗೂ ಇದು ಎಷ್ಟರಮಟ್ಟಿಗೆ ಸಕ್ಸಸ್ ಆಗುತ್ತದೆ ಎಂದು ಭಯ ಆಗುತ್ತಿದೆ. ಏಕೆಂದರೆ, ಅನೇಕ ವಿಷಯಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳುವುದಕ್ಕೇ ಕಷ್ಟ ಆಗುತ್ತದೆ. ಬಹಳ ಗೊಂದಲಕ್ಕೆ ಈ ಒಂದು ಬಿಲ್ ಇದೆ ಎಂದು ಹೇಳಿ ನನ್ನ ವೈಯುಕ್ತಿಕ ಭಾವನೆಯೂ ಆಗಿದೆ.

ಆದ್ದರಿಂದ ರೂಲ್ಸ್ ಫ್ರೇಂ ಮಾಡುವಂತಹ ಸಂದರ್ಭದಲ್ಲಿ ಇದನ್ನು ಸರಿಯಾದ ರೀತಿಯಲ್ಲಿ ಎಲ್ಲಾ ತರಹದ ಎಲ್ಲಾ ವರ್ಗದ ಜನರಿಂದ ಅಭಿಪ್ರಾಯವನ್ನು ಪಡೆದು ರೂಲ್ಸನ್ನು ನಾವು ಸರಿಯಾಗಿ ಮಾಡಬೇಕು. ಗ್ರಾಮೀಣ ಜನರಿಗೆ ಅನುಕೂಲವಾಗುವ ರೀತಿಯಲ್ಲಿ ಮಾಡಬೇಕಾಗಿದೆ. ನಾವು ವಿಕೇಂದ್ರಿಕರಣ ಮಾಡಬೇಕು ಎಂದು ಹೊರಟಿದ್ದೇವೆ. ಅದನ್ನು ನಾವು ಗ್ರಾಮ ಮಟ್ಟದಲ್ಲಿ ಪರಿಶೀಲನೆ ಮಾಡಿ ಅದಕ್ಕೆ ರೂಲ್ಸನ್ನು ಫ್ರೇಂ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ. ಹಿಂದೆ 1989ರಲ್ಲಿ ಏನು ಇದನ್ನು ಕೇಂದ್ರದಲ್ಲಿ ತರಬೇಕು ಎಂದು ಹೊರಟಂತಹ ಸಂದರ್ಭದಲ್ಲಿ, ಅದನ್ನು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಜನತಾದಳದ ಸದಸ್ಯರು , ಜನತಾ ಪಕ್ಷದ ಸದಸ್ಯರು ವಿರೋಧ ಮಾಡಿದರು. ಇದನ್ನು ತರಲೇಬಾರದು ಎಂದು ಹೇಳಿದರು. ನನಗೆ 1989ರ ನೆನಪು ಆಯಿತು. ಅವತ್ತೂ ಸಹ 1989ರಲ್ಲಿ ರಾಜೀವ್‌ಗಾಂಧಿಯವರು ಅದನ್ನು ಮಂಡನೆ ಮಾಡಬೇಕೆಂದು ಹೊರಟಂಥ ಸಂದರ್ಭದಲ್ಲಿ ಪ್ರತಿಭಟನೆ ಮಾಡಿ ಅವತ್ತಿನ ದಿನ ಬಿಲ್ ರಿಜೆಕ್ಟ್ ಆಗುವ ಪರಿಸ್ಥಿತಿ ತಂದರು. ಇಲ್ಲಿ ನಮ್ಮ ಕರ್ನಾಟಕ ರಾಜ್ಯಕ್ಕೂ, ಕೂಡ ರಾಜೀವ್ ಗಾಂಧಿಯವರು ಬಂದು ದಕ್ಷಿಣ ಭಾರತದಲ್ಲಿ ಒಂದು ಸಮ್ಮೇಳನವನ್ನು ಮಾಡಿ ಜನರ ಎಲ್ಲರ ಅಭಿಪ್ರಾಯವನ್ನು ಪಡೆದು ಇದಕ್ಕೆ ಒಂದು ರೂಪವನ್ನು ಕೊಡಬೇಕು. ಜನರ ಒಂದು ಕಾರ್ಯಕ್ರಮ ಎಂದು ಮಾಡಬೇಕೆಂದು ಹೊರಟಂಥ ಸಂದರ್ಭದಲ್ಲಿ ಅಲ್ಲಿಯೂ ಕೂಡ ಏನು ಮಂಡಲ್ ಪಂಚಾಯತಿ ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಯಾರು ಕೆಲಸವನ್ನು ಮಾಡುತ್ತಿದ್ದರು, ಅವರುಗಳು ಅದನ್ನೂ ಕೂಡ ಅವತ್ತಿನ ಸಂದರ್ಭದಲ್ಲಿ ಬಹಿಷ್ಕಾರವನ್ನು ಮಾಡಿದರು. ಇಲ್ಲಿ ನಮ್ಮ ದೇವನಹಳ್ಳಿ ಕ್ಷೇತ್ರದಲ್ಲಿ ಜಯಪ್ರಕಾಶ್ ನಾರಾಯಣ ಅವರ ಯುವಕ ಕೇಂದ್ರದಲ್ಲಿ ಅದು ಬಹಳ ಚೆನ್ನಾಗಿ 4 ಕಡೆ ನಮ್ಮ ಭಾರತದಲ್ಲಿ ಬಹಳ ಚೆನ್ನಾಗಿ ಜನರಿಗೆ ಮುಟ್ಟಬೇಕು, ಜನರಿಂದ ಅಭಿಪ್ರಾಯವನ್ನು ಪಡೆದು ಈ ಒಂದು ಕಾರ್ಯಕ್ರಮವನ್ನು ಮಾಡಬೇಕು ಎಂದು ಮಾಡಿದಂತಹ ಸಂದರ್ಭದಲ್ಲಿ ಅವರು ವಿರೋಧವನ್ನು ಮಾಡಿದರು. ಮೊನ್ನೆಯೂ ಕೂಡ ವಿರೋಧ ಮಾಡಿದರು. ಅವರಿಗಂತೂ ಈ ವಿಚಾರದಲ್ಲಿ ನಂಬಿಕೆ ಇಲ್ಲವೆಂದು ಈಗಾಗಲೇ ಅವರು ತೋರಿಸಿಕೊಟ್ಟಿದ್ದಾರೆ ; ಮತ್ತು ಈಗ ಎಲೆಕ್ಷನ್ ಮಾಡಿ, ಎಂದು ಹೇಳುತ್ತಿದ್ದಾರೆ. ಬಹುಶಃ ಅವರಿಗೆ ಈ ವಿಚಾರದಲ್ಲಿ ನಂಬಿಕೆಯಿಲ್ಲವೆಂದು ಕಾಣುತ್ತದೆ, ನಾವಂತೂ ಎಲೆಕ್ಷನ್ ಮಾಡುವುದಕ್ಕೆ ಹೊರಟಿದ್ದೇವೆ. ಎಲೆಕ್ಷನ್ ಮಾಡುವುದಕ್ಕಿಂತ ಮುಂಚಿತವಾಗಿ ಏನು ಒಂದು ರಿಸರ್ವೇಷನ್ ವಿಚಾರವಿದೆ, ಈ ವಿಚಾರದಲ್ಲಿ ನಾವು ಮಂಡಲ್ ಕಮಿಟಿ ರಿಪೋರ್ಟ್ ಒಪ್ಪಿಕೊಳ್ಳುವುದೋ, ವೆಂಕಟಸ್ವಾಮಿ ಆಯೋಗದ ವರದಿ ಒಪ್ಪಿಕೊಳ್ಳುವುದೋ ಅಥವಾ ಚಿನ್ನಪ್ಪರೆಡ್ಡಿ ಆಯೋಗದ ವರದಿ ಒಪ್ಪಿಕೊಳ್ಳಬೇಕೆನ್ನುವುದರ ಬಗ್ಗೆ ಸ್ಪಷ್ಟವಾದ ಅಭಿಪ್ರಾಯಕ್ಕೆ ನಾವು ಬರಬೇಕಾಗುತ್ತದೆ. ಏಕೆಂದರೆ, ಹಳ್ಳಿಗಳಲ್ಲಿ ಯಾವೊಬ್ಬ ಮುಖ್ಯಸ್ಥನಿರುತ್ತಾನೆ, ಅಲ್ಲಿಯ ಅಭಿವೃದ್ಧಿ ಕಾರ್ಯಕ್ರಮವಾಗುವುದರಲ್ಲಿ ಬಹಳ ನೇರವಾದ ಸಂಬಂಧ ಆತನಿಗೂ ಇರುತ್ತದೆ. ಆದುದರಿಂದ, ಅದನ್ನು ಸರಿಯಾಗಿ ನಿಗಧಿಪಡಿಸಿ ರಿಸರ್ವೇಷನ್ ವಿಚಾರ ತರಬೇಕೆಂಬುದು ನನ್ನ ವೈಯಕ್ತಿಕ ಅಭಿಪ್ರಾಯವಾಗಿದೆ. ಪ್ರಾರಂಭದಲ್ಲಿ ನಾವು ಗ್ರಾಮ ಸಭೆ ವಿಚಾರವಾಗಿ ಪ್ರಸ್ತಾಪಿಸಿದ್ದೇವೆ. ಗ್ರಾಮಸಭೆ ಎಲ್ಲಿದೆ? ನನಗೆ ತಿಳಿದಿರುವಂತೆ ಗ್ರಾಮಸಭೆ ಒಂದುಕಡೆಯೂ ನಡೆದಿದ್ದಲ್ಲ. ಗ್ರಾಮಸಭೆ ನಿಜವಾಗಿ ನಡೆಯುವುದಾದರೆ ಹಳ್ಳಿಯಲ್ಲಿ ಯಾವುದೇ ಗಲಾಟೆಯಿರುವುದಿಲ್ಲ, ಯಾವುದೇ ಫಲಾನುಭವಿಯನ್ನು ಗುರ್ತಿಸುವುದರಲ್ಲಿ ಗೊಂದಲವಾಗುವುದಿಲ್ಲ. ಆದುದರಿಂದ, ಕಡ್ಡಾಯವಾಗಿ ಗ್ರಾಮಸಭೆಗಳನ್ನು ನಡೆಸಿದರೆ ಮಂಡಲ ಪಂಚಾಯಿತಿಗಳು, ಜಿಲ್ಲಾ ಪರಿಷತ್ತುಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತವೆ. ಅದು ತಾಲ್ಲೂಕು ಪಂಚಾಯಿತಿಯಾಗಿರಬಹುದು, ತಾಲ್ಲೂಕು ಸಮಿತಿಯಾಗಿರಬಹುದು, ಚೆನ್ನಾಗಿ ಎಲ್ಲಾ ಕೆಲಸಗಳಾಗುತ್ತವೆ. ಗ್ರಾಮಸಭೆ ಪ್ರತಿಯೊಂದು ನಡೆಸುವುದಿಲ್ಲ, ಗೊಂದಲವುಂಟಾಗುತ್ತದೆಂದಾಗ ಗ್ರಾಮ ಪಂಚಾಯಿತಿಗೆ ನಾವು ಫಲಾನುಭವಿಗಳನ್ನು ಆಯ್ಕೆ ಮಾಡುವ ವಿಚಾರವನ್ನು ಅವರಿಗೆ ಒಪ್ಪಿಸುತ್ತೇವೆ. ಆಗ ಗ್ರಾಮ ಪಂಚಾಯಿತಿ ಅಧ್ಯಕ್ಷ ಏನು ಮಾಡುತ್ತಾನೆಂದರೆ, ಆತನಿಗೆ ಬೇಕಾದವರನ್ನು, ಆತನ ಜೊತೆ ತಿರುಗಾಡಿಕೊಂಡಿರುವವರನ್ನು

ಫಲಾನುಭವಿಗಳೆಂದು ಗುರ್ತಿಸಿ, ಅವರ ಹೆಸರುಗಳ ಪಟ್ಟಿಯನ್ನು ಬರೆದುಕೊಡುವುದಕ್ಕೆ ಅವಕಾಶವಾಗುತ್ತದೆಯೇ ಹೊರತು, ಅಲ್ಲಿಯೂ ಕೂಡ ರಾಜಕೀಯ ಉಪಯೋಗವಾಗುತ್ತದೆಯೇ ಹೊರತು ನೇರವಾಗಿ ಬಡವನಿಗೆ ತಲುಪುವಂಥ ಕೆಲಸವಾಗುವುದಿಲ್ಲ. ಆದುದರಿಂದ, ಕಡ್ಡಾಯವಾಗಿ ಗ್ರಾಮಸಭೆ ನಡೆಯಲೇಬೇಕೆಂದು, ತಾವು ಅದಕ್ಕೊಂದು ಕಾನೂನನ್ನು ಸೃಷ್ಟಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಗ್ರಾಮ ಪಂಚಾಯಿತಿ ಹಾಗೂ ಜಿಲ್ಲಾ ಪರಿಷತ್ ಸದಸ್ಯರೇನಿದ್ದಾರೆ, ಇವರುಗಳೇ ಕಂಟ್ರಾಕ್ಟ್ ತೆಗೆದುಕೊಂಡು ಕೆಲಸಗಳನ್ನು ಮಾಡುವುದು, ಇದನ್ನು ತಾವು ನಿಲ್ಲಿಸಬೇಕು. ಎಲ್ಲಾ ಗ್ರಾಮದಲ್ಲೂ ಅವರೇ ಕಂಟ್ರಾಕ್ಟ್ ತೆಗೆದುಕೊಂಡು, ಚರಂಡಿ ಮಾಡುವವರು ಅವರೇ, ರಸ್ತೆ ಮಾಡುವವರು ಅವರೇ, ಸ್ಕೂಲ್ ನಡೆಸುವವರು ಅವರೇ ಆಗಿದ್ದು, ಅವರು ಸೆಕ್ರೆಟರಿಗಳನ್ನು, ಇಂಜಿನಿಯರುಗಳನ್ನು ಹೆದರಿಸಿ, ಬೆದರಿಸಿ ಬೇಕಾದಂತೆ ಕೆಲಸ ಮಾಡುವುದು, ಅದರಲ್ಲೂ ಕಳಪೆ ಮಟ್ಟದ ಕೆಲಸ ಮಾಡುವುದು. ದಯವಿಟ್ಟು ತಾವು ಇದಕ್ಕೆ ಕಾನೂನಿನಲ್ಲಿ ಕಡಿವಾಣ ಹಾಕಿದರೆ ಅವರು ಸ್ವಲ್ಪ ಸರಿಯಾಗಿ ಕೆಲಸ ಮಾಡುವುದಕ್ಕೆ ಅವಕಾಶವಾಗುತ್ತದೆ. ಇಲ್ಲಿ ಬೇಕಾದವರಿಗೆ ಕೊಡಿಸುವುದರಿಂದ ಬಹಳ ಇಂಟರ್‌ಫಿಯರೆನ್ಸ್ ಆಗುತ್ತದೆ. ಆದುದರಿಂದ, ಅಭಿವೃದ್ಧಿ ಮಾಡುವ ಕೆಲಸಕ್ಕೂ, ತೀರ್ಮಾನ ಮಾಡುವಂಥ ಕೆಲಸಕ್ಕೂ ಪ್ರತ್ಯೇಕವಾದ ಒಂದು ರೂಲ್ಸ್ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಇನ್ನು ಗ್ರಾಮ ಪಂಚಾಯಿತಿ ಸದಸ್ಯರ ಕೆಲಸವೇನು? ಅದರ ಅಧ್ಯಕ್ಷರ ಕೆಲಸವೇನು? ತಾಲ್ಲೂಕು ಪಂಚಾಯಿತಿ ಹಾಗೂ ತಾಲ್ಲೂಕು ಸಮಿತಿ ಅಧ್ಯಕ್ಷರು, ಸದಸ್ಯರುಗಳ ಕೆಲಸವೇನು? ಅವರ ವ್ಯಾಪ್ತಿ ಏನು? ಜಿಲ್ಲಾ ಪರಿಷತ್ ಸದಸ್ಯರ ಕೆಲಸವೇನು? ಆತನ ವ್ಯಾಪ್ತಿ ಏನು ಎಂಬುದನ್ನು ಬಹಳ ಸ್ಪಷ್ಟವಾಗಿ ಹೇಳಬೇಕು. ಆತ ಗ್ರಾಮ ಪಂಚಾಯಿತಿಯಲ್ಲಿ ಯಾವ ಫಲಾನುಭವಿಯನ್ನು ಗುರ್ತಿಸುತ್ತಾನೆ? ಐಆರ್‌ಡಿಪಿ ಮಾಡುತ್ತಾನೆಯೇ ಅಥವಾ ಬೇರೆ ಯಾವುದಾದರೂ 'ಭಾಗ್ಯಜ್ಯೋತಿ' ಯೋಜನೆ ಮಾಡುತ್ತಾನೆಯೇ, ತಾಲ್ಲೂಕು ಪಂಚಾಯಿತಿಯಲ್ಲಿ ಆತ ಯಾವುದನ್ನು ಗುರ್ತಿಸುತ್ತಾನೆ ಎನ್ನುವುದನ್ನು ರೂಲ್ಸ್‌ನಲ್ಲಿ ಬಹಳ ಸ್ಪಷ್ಟವಾಗಿ ತಾವು ಹೇಳಬೇಕು. ಏಕೆಂದರೆ, ಗ್ರಾಮದೊಳಗಾದರೆ ಗ್ರಾಮ ಪಂಚಾಯಿತಿ ಎಂದು ಹೇಳುತ್ತೀರಿ. ಆದರೆ, ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಹೋಗಬೇಕಾದರೆ ಆ ಕೆಲಸ ಮಾಡುವವರಾರು ? ರಸ್ತೆ ಅಭಿವೃದ್ಧಿ ಪಡಿಸುವುದು ಯಾರು? ಒಂದು ಗ್ರಾಮ ಪಂಚಾಯಿತಿಯಿಂದ ಮತ್ತೊಂದು ಗ್ರಾಮ ಪಂಚಾಯಿತಿಗೆ ಹೋಗಬೇಕಾದರೆ ಅಭಿವೃದ್ಧಿ ಕೆಲಸಗಳನ್ನು ಮಾಡುವವರಾರು ಎನ್ನುವುದರ ಬಗ್ಗೆ ಸ್ಪಷ್ಟವಾಗಿ ಹೇಳಬೇಕು. ಮತ್ತು ನೀವು ಕಾರ್ಯದರ್ಶಿಗಳನ್ನು ಖಾಯಂ ಆಗಿ ಹಾಕಬೇಕು. ಈಗ ಕೃಷಿ ಇಲಾಖೆಯಿಂದ ತಾತ್ಕಾಲಿಕವಾಗಿ ಒಬ್ಬೊಬ್ಬರನ್ನು ಹಾಕುತ್ತಿದ್ದಾರೆ. ಕೃಷಿ ಇಲಾಖೆ ಕೆಲಸ ಒಬ್ಬರೂ ಮಾಡಲಿಲ್ಲ, ಬರೀ ಮಂಡಲ ಪಂಚಾಯಿತಿ ಕೆಲಸಕ್ಕೆ ನಿಂತುಕೊಂಡಿದ್ದಾರೆ. ಆದುದರಿಂದ, ಖಾಯಂ ಕಾರ್ಯದರ್ಶಿಗಳನ್ನು ನೇಮಿಸಿದರೆ ಸರಿಯಾಗಿ ಪೂರ್ಣವಾಗಿ ಕೆಲಸ ಮಾಡುವುದಕ್ಕಾಗುತ್ತದೆ. ಅವರನ್ನು ಯಾವ ರೀತಿ ಆಯ್ಕೆ ಮಾಡುತ್ತಾರೆಂಬುದು ಸರ್ಕಾರಕ್ಕೆ ಬಿಟ್ಟ ವಿಷಯ. ಅಲ್ಲದೆ, ಹೆಡ್‌ಕ್ವಾರ್ಟರ್‌ನಲ್ಲಿದ್ದು ಕೆಲಸ ಮಾಡಬೇಕೆಂದು ಸ್ಪಷ್ಟವಾಗಿ ಕಾನೂನಿನಲ್ಲಿ ತೋರಿಸಬೇಕು. ಗ್ರಾಮ ಪಂಚಾಯಿತಿ ಸಭೆ ಮೊಬೈಲ್ ಆಗಬಾರದು. ನನ್ನ ಕ್ಷೇತ್ರದಲ್ಲಿ ಈ ಹಿಂದೆ 20 ಜನರು ಸೇರಿ ಒಂದು ಊರಿನಲ್ಲಿ ಮೀಟಿಂಗ್ ಮಾಡುವುದು, ಇನ್ನೊಂದು ಊರಿನಲ್ಲಿ ಮತ್ತೊಂದು ಮೀಟಿಂಗ್ ಮಾಡುವುದು. ಕೊನೆಗೆ, ಇದು ಯಾವ ಮಟ್ಟಕ್ಕೆ ಬಂದು ಮುಟ್ಟಿತೆಂದರೆ ಬೆಂಗಳೂರಿನಲ್ಲಿ ಒಂದು ಹೋಟೇಲ್‌ನಲ್ಲಿ ಬಂದು ಮೀಟಿಂಗ್ ಮಾಡುವ ಪರಿಸ್ಥಿತಿಗೆ ಬಂತು. ಆದುದರಿಂದ, ಕೇಂದ್ರ ಸ್ಥಳದಲ್ಲೇ ಮೀಟಿಂಗ್ ಮಾಡಬೇಕೆಂದು ತಾವು ಕಾನೂನಿನಲ್ಲಿ ಸ್ಪಷ್ಟವಾಗಿ ಹೇಳಬೇಕು. ಜಿಲ್ಲಾಧಿಕಾರಿಯವರು ಇಲ್ಲವೇ ತಹಶೀಲ್ದಾರರು ಸರಿಯಾಗಿ ವೀಕ್ಷಿಸುವಂಥ ಕೆಲಸವಾಗಬೇಕು. ಏಕೆಂದರೆ, ಸದಸ್ಯರುಗಳೆಲ್ಲರೂ ಅಧ್ಯಕ್ಷರ ಮನೆಗೋ, ಕಾರ್ಯದರ್ಶಿಯವರ ಮನೆಗೆ ಹೋಗಿ ಮೀಟಿಂಗ್ ಮಾಡುವುದನ್ನು ನಾವೆಲ್ಲರೂ ಈಗಾಗಲೇ ನೋಡಿದ್ದೇವೆ.

ಅದನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕು ಮತ್ತು ಏನು ಗ್ರಾಮಪಂಚಾಯಿತಿ ವ್ಯಾಪ್ತಿಯಲ್ಲಿ ಸರ್ಕಾರದ ಆಸ್ತಿಗಳು ಇವೆ. ಆ ಆಸ್ತಿಗಳಿಗೆಲ್ಲಾ ಗ್ರಾಮಪಂಚಾಯಿತಿ ಜವಾಬ್ದಾರಿಯಾಗಬೇಕಾಗುತ್ತದೆ. ಈಗ ಏನು ಒತ್ತುವರಿ ಮಾಡಿಕೊಂಡಿದ್ದಾರೆ ಅದನ್ನು ಅಧಿಕಾರಿಗಳ ಮುಖಾಂತರ ಸರಿಯಾಗಿ ವೀಕ್ಷಣೆ ಮಾಡಿ ಒಂದು ಪುಸ್ತಕವನ್ನೇ ಮಾಡಬೇಕು. ಏಕೆಂದರೆ ಹಿಂದೆ ಮಂಡಲ ಪಂಚಾಯಿತಿ ಬಂದಮೇಲೆ ಯಾವ ಜಾಗವನ್ನೂ ಬಿಡಲಿಲ್ಲ. ಯಾವ ಸ್ಮಶಾನವನ್ನು ಬಿಡಲಿಲ್ಲ. ಅವರಿಗೆ ಬೇಕಾದವರು ಅಕ್ಕಪಕ್ಕದವರೆಲ್ಲಾ ಒತ್ತುವರಿ ಮಾಡಿಕೊಂಡು ಈವತ್ತು ಹಣವನ್ನು ಹೂಳಲು ಸಹ ಜಾಗವಿಲ್ಲ. ಆಸ್ಪತ್ರೆ ಕಟ್ಟಲು, ಹಾಸ್ಟಲ್ ಕಟ್ಟಲೂ ಜಾಗವಿಲ್ಲ, ಎಲ್ಲಾ ಬೇಕುಬೇಕಾದವರು ಒತ್ತುವರಿ ಮಾಡಿಕೊಂಡಿರುತ್ತಾರೆ. ಅವರನ್ನು ನಾವು ಬಿಡಿಸಲು ಆಗುವುದಿಲ್ಲ. ಏನೋ ಒಂದು ಸಣ್ಣ ದಾಖಲೆ ಮಾಡಿಕೊಟ್ಟು ಬಿಟ್ಟಿರುತ್ತಾರೆ, ಇಲ್ಲದಿದ್ದರೆ ಬಗರ್ ಹುಕುಂ ಎಂದು ಬರೆದು ಕೊಟ್ಟಿರುತ್ತಾರೆ. ಇಂಥ ಒಂದು ವ್ಯವಸ್ಥೆಯಾಗಿದೆ. ಆದುದರಿಂದ ನೀವು ಕಾರ್ಯದರ್ಶಿಗಳಿಗೆ ಈ ಒಂದು ಆಸ್ತಿಯನ್ನು ಕಾಪಾಡುವುದು ಅವರ ಕರ್ತವ್ಯ ಎಂದು ಹೇಳಬೇಕು. ಆ ಮಂಡಳ ಪಂಚಾಯಿತಿ ಮತ್ತು ಗ್ರಾಮಪಂಚಾಯಿತಿಯವರು ಅದನ್ನು ಕಾಪಾಡಬೇಕಾಗುತ್ತದೆ. ಆ ರೀತಿ ಅವರಿಗೆ ಹೊಣೆಯನ್ನು ನಿಗದಿ ಮಾಡಬೇಕಾಗುತ್ತದೆ. ಅದು ತಾಲ್ಲೂಕು ಬೋರ್ಡ್ ಆಸ್ತಿ ಇರಬಹುದು ಅಥವಾ ಜಿಲ್ಲಾಪರಿಷತ್ ಆಸ್ತಿ ಇರಬಹುದು. ಅವರವರ ವ್ಯಾಪ್ತಿಯಲ್ಲಿ ಏನೇನು ಆಸ್ತಿ ಇರುತ್ತದೆಯೇ ಅದನ್ನು ಅವರು ರಕ್ಷಣೆ ಮಾಡಿಕೊಂಡು ಹೋಗುವ ಹೊಣೆಯನ್ನು ನಿಗದಿಪಡಿಸಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಹಿಂದೆ ಬಹಳ ವರ್ಷಗಳಿಂದ ಎಂ.ಎಲ್.ಸಿ. ಚುನಾವಣೆ ನಿಂತು ಹೋಗಿತ್ತು, ಈಗೇನೋ 5-6 ವರ್ಷದ ಹಿಂದೆ ಆಯಿತು, ಆಗ ಮಂಡಲ ಪಂಚಾಯಿತಿಯ ಸದಸ್ಯರೂ ಕೂಡ ಚುನಾವಣೆಯನ್ನು ಮಾಡಿದರು. ಈಗ ಪಕ್ಷದ ಆಧಾರದ ಮೇಲೆ ಗ್ರಾಮ ಪಂಚಾಯಿತಿ ಚುನಾವಣೆಯನ್ನು ನಡೆಸುತ್ತಿದ್ದೇವೆ. ಆದರೆ ಆ ಸದಸ್ಯರು ಎಂ.ಎಲ್.ಸಿಗೆ ಓಟ್ ಹಾಕಲು ಅರ್ಹತೆ ಇರುತ್ತದೆಯೇ ಎನ್ನುವ ಬಗ್ಗೆ ನಿಖರವಾಗಿ ಹೇಳಬೇಕಾಗುತ್ತದೆ. ಏಕೆಂದರೆ ಇದರ ಆಧಾರದ ಮೇಲೆ ಎಂ.ಎಲ್.ಸಿ. ಗಳನ್ನು ಮುಂದೆ ಆಯ್ಕೆ ಮಾಡಬೇಕಾಗುತ್ತದೆ. ಆದರೆ ನಾವು ಇಲ್ಲಿ ಪಕ್ಷದ ಆಧಾರದ ಮೇಲೆ ಚುನಾವಣೆ ಮಾಡುವುದಿಲ್ಲ. ಆದರೆ ಅಲ್ಲಿ ಬಂದಂಥ ಸಂದರ್ಭದಲ್ಲಿ ಪಕ್ಷದಿಂದ ಚುನಾವಣೆಗೆ ನಿಂತುಕೊಳ್ಳುತ್ತಾನೆ, ಅಲ್ಲಿಯ ಸದಸ್ಯನ ಮತಕ್ಕೆ ಬಹಳ ಬೆಲೆ ಇರುತ್ತದೆ. ಆದ್ದರಿಂದ ಆ ವಿಚಾರದಲ್ಲಿ ತಾವು ಇಲ್ಲಿ ಬರೀ ತಾಲ್ಲೂಕು ಸಮಿತಿಯವರು ಮತವನ್ನು ಹಾಕಬೇಕೋ ಅಥವಾ ಜಿಲ್ಲಾಪರಿಷತ್‌ನವರು ಮತವನ್ನು ಹಾಕಬೇಕೋ ಎಂಬ ಬಗ್ಗೆ ತೀರ್ಮಾನ ಮಾಡಬೇಕಾಗುತ್ತದೆ. ಮುನಿಸಿಪಾಲಿಟಿಯ ಒಂದು ಮತ ಇದ್ದೇ ಇರುತ್ತದೆ. ಆದ್ದರಿಂದ ಗ್ರಾಮ ಪಂಚಾಯಿತಿಯ ಮತ ಇರುತ್ತದೆಯೇ ಎಂಬ ಬಗ್ಗೆ ದಯವಿಟ್ಟು ನಿಖರವಾಗಿ ಹೇಳಬೇಕಾಗುತ್ತದೆ. ಏಕೆಂದರೆ 400 ಜನಸಂಖ್ಯೆಗೆ ಇರಬಹುದು ಆದರೆ ಇಲ್ಲಿ ಪಕ್ಷದ ವಿಚಾರದಲ್ಲಿ ಗೊಂದಲವಿರತಕ್ಕಂಥ ಸಂದರ್ಭದಲ್ಲಿ ಕಾನೂನಿನಲ್ಲಿ ಇದರ ಬಗ್ಗೆ ಒಪ್ಪಿಗೆಯನ್ನು ಪಡೆಯುವುದಕ್ಕೆ ಮೊದಲು ಈ ಸಭೆಗೆ ಅದರ ಬಗ್ಗೆ ತಿಳಿಸಬೇಕೆಂದು ಹೇಳುತ್ತೇನೆ. ಇನ್ನು ಗುತ್ತಿಗೆದಾರರಿಗೆ ಮುಂಗಡವನ್ನು ಕೊಡುವುದನ್ನು ನಿಲ್ಲಿಸಬೇಕಾಗುತ್ತದೆ. ಏನು ಸಂಘಸಂಸ್ಥೆಗಳಾದ ಆಸ್ಪತ್ರೆ, ಶಾಲಾ ಕಟ್ಟಡಗಳನ್ನು ಕಟ್ಟುತ್ತಾರೆ ಅದಕ್ಕೆ ಜಿಲ್ಲಾಪರಿಷತ್‌ನಲ್ಲಿ ಮತ್ತು ಮಂಡಲ ಪಂಚಾಯತಿನಲ್ಲಿ ಮುಂಗಡವನ್ನು ಕೊಡುವುದು ಇದೆ. ನಮ್ಮ ಬೆಂಗಳೂರು ಗ್ರಾಮಾಂತರ ಜಿಲ್ಲಾಪರಿಷತ್‌ನವರು. ಕೋರೆಡ್ ಎನ್ನತಕ್ಕ ಸಂಸ್ಥೆಗೆ ದೇವನಹಳ್ಳಿ ತಾಲ್ಲೂಕಿನಲ್ಲಿ ಬ್ಲಾಕ್‌ಬೋರ್ಡ್ ಸ್ಕೀಮ್‌ನಲ್ಲಿ ಶಾಲಾ ಕಟ್ಟಡವನ್ನು ಕಟ್ಟಲು 9 ಲಕ್ಷ ರೂ.ಗಳನ್ನು ಮುಂಗಡವಾಗಿ ಕೊಟ್ಟು ಬಿಟ್ಟರು. ತೊಂಬತ್ತು ಭಾಗ ಮುಂಗಡವನ್ನು 50 ರೂಮ್‌ಗಳನ್ನು ಕಟ್ಟಲು ಕೊಟ್ಟುಬಿಟ್ಟರು. ಆದರೆ ಅವರು 2-3 ರೂಮುಗಳನ್ನೂ ಸಹ ಕಟ್ಟಲಿಲ್ಲ. ಆ ಸಂಸ್ಥೆ ಎಲ್ಲಿದೆಯೋ? ಆ ಹಣವೇನಾಯಿತೋ? ಗೊತ್ತಿಲ್ಲ. ಕೊನೆಗೆ ಈಗ ಸಿ.ಓ.ಡಿ. ವಿಚಾರಣೆ ನಡೆಯುತ್ತಿದೆ. ಕೊನೆಗೆ ಅದರ ಬಗ್ಗೆ ಏನಾಯಿತೋ ಗೊತ್ತಾಗಲಿಲ್ಲ. ಈ ರೀತಿ ಬಹಳ ದುರುಪಯೋಗವಾಗಿದೆ. ಈ ದುರುಪಯೋಗ ಮಾಡಿಕೊಳ್ಳುತ್ತಿರುವುದಕ್ಕೆ ಕಡಿವಾಣ

ಹಾಕಲಿಕ್ಕೆ ಮತ್ತು ಅದರ ಬಗ್ಗೆ ವೀಕ್ಷಣೆ ಮಾಡುವುದಕ್ಕೆ ನಮ್ಮ ಸದಸ್ಯರುಗಳು ಇಲ್ಲದೇ ಇರತಕ್ಕಂಥ ಸಮಿತಿಯನ್ನು ಇಲ್ಲವೇ ಅಧಿಕಾರಿಗಳು ಇರತಕ್ಕಂಥ ಸಮಿತಿಯನ್ನು ಪ್ರತ್ಯೇಕವಾಗಿ ರಚನೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ಈ ಒಂದು ಮಸೂದೆ ನಮ್ಮ ಗ್ರಾಮೀಣ ಜನರ ಅಭಿವೃದ್ಧಿಗೆ ಹೆಚ್ಚು ಅನುಕೂಲವಾಗಲಿ ಮತ್ತು ಇದು ಸರಿಯಾಗಿ ಕಾರ್ಯರೂಪಕ್ಕೆ ಬರಲಿ ಎಂದು ಹೇಳಿ ಇದರಿಂದ ಎಲ್ಲಾ ರೀತಿಯ ಉಪಯೋಗ ಸಿಗಲಿ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಈ ಏನು ಒಂದು ಬಿಲ್ಲನ್ನು ಅವರು ತಂದಿದ್ದಾರೆ ಇದು ಸರಿಯಾಗಿ ಯಶಸ್ವಿಯಾಗಲು ನಾವು ಮತ್ತು ಗ್ರಾಮಾಂತರ ಜನರು ಸಹಕಾರವನ್ನು ನೀಡಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

* ಶ್ರೀ ಶಿವಾನಂದ ಹೆಚ್ ಕೌಜಲಗಿ (ಬೈಲಹೊಂಗಲ) : ಸನ್ಮಾನ್ಯ ಅಧ್ಯಕ್ಷರೇ, ಇವತ್ತಿನ ದಿವಸ ಗ್ರಾಮೀಣ ಅಭಿವೃದ್ಧಿ ಸಚಿವರು ತಂದಿರತಕ್ಕಂಥ ಬಿಲ್ಲನ್ನು ನಾವು ವಿರೋಧಿಸುತ್ತಾ ಕೆಲವು ಸಲಹೆಗಳನ್ನು ಕೊಡಬಯಸುತ್ತೇನೆ. ನಿಜವಾಗಿಯೂ ನಮ್ಮ ರಾಷ್ಟ್ರದಲ್ಲಿ ಒಳ್ಳೆಯ ಪಂಚಾಯಿತ್ ರಾಜ್ಯ ಮಸೂದೆ ಇದ್ದದ್ದು ಎಂದರೆ ನಮ್ಮ ಕರ್ನಾಟಕ ರಾಜ್ಯದ್ದು. ಇದು ಒಂದು ಮಾದರಿಯ ಮಸೂದೆ, ಇದನ್ನು ಬೇರೆ ಬೇರೆ ರಾಜ್ಯದವರು ಅನುಸರಿಸುತ್ತಿರುವ ಸಂಗತಿ ತಮಗೆಲ್ಲರಿಗೂ ಗೊತ್ತಿದೆ. ಈ ಮಸೂದೆಯನ್ನು ಮಾಡುವ ಮೊದಲು ನಮ್ಮ ಹಿಂದಿನ ಮುಖ್ಯಮಂತ್ರಿಗಳಾದಂಥ ಶ್ರೀಮಾನ್ ರಾಮಕೃಷ್ಣ ಹೆಗಡೆಯವರನ್ನು ಮತ್ತು ನಮ್ಮ ಸರ್ಕಾರದ ಪಂಚಾಯಿತ್ ರಾಜ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ನಜೀರ್‌ಸಾಬ್‌ರವರನ್ನು ಮರೆಯಬಾರದು. ಈ ಬಿಲ್ಲಿಗೆ ರಾಷ್ಟ್ರಪತಿಯವರು ಒಪ್ಪಿಗೆಯನ್ನು ಬೇಗ ಕೊಡದಿದ್ದಾಗ ಅವರ ಮನೆಯ ಮುಂದೆ ಉಪವಾಸ ಮಾಡುತ್ತೇವೆಂದು ಮಾನ್ಯ ನಜೀರ್‌ಸಾಬ್‌ರವರು ಹೇಳಿದ ಸಂಗತಿಯನ್ನು ಇವತ್ತಿನ ದಿವಸ ನಾನು ಈ ಸಭೆಯ ಗಮನಕ್ಕೆ ತರಬಯಸುತ್ತೇನೆ. ಉದ್ದೇಶವೇನೆಂದರೆ, ಈ ಗ್ರಾಮೀಣಾಭಿವೃದ್ಧಿಯ ಬಗ್ಗೆ ಮತ್ತು ಇದರ ಬಗ್ಗೆ ಬಿಲ್ಲನ್ನು ತರಲು ನಮ್ಮ ಸರ್ಕಾರ ಎಷ್ಟು ಉತ್ಸುಕತೆಯಿಂದ ಇತ್ತು ಎಂಬದನ್ನು ಇಲ್ಲಿ ಕಾಣಬಹುದು. ನಿಜವಾಗಿಯೂ ಸಹ ಇವತ್ತಿನ ದಿವಸ ಗ್ರಾಮೀಣಾಭಿವೃದ್ಧಿ ಬಗ್ಗೆ ಸಂಪೂರ್ಣವಾದಂಥ ವಿಕೇಂದ್ರಿಕರಣವಾದ ಬಿಲ್ಲು ಬರಬೇಕಾಗಿತ್ತು ಎಂದು ಗ್ರಾಮೀಣಾಭಿವೃದ್ಧಿ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಆದರೆ ಇವರು ತಂದಿರತಕ್ಕಂಥ ಬಿಲ್ಲು ಸಂಪೂರ್ಣವಾಗಿ ವಿಕೇಂದ್ರಿಕರಣದಿಂದ ಕೂಡಿಲ್ಲವೆಂದು ಹೇಳಬಹುದು. ಏಕೆಂದರೆ ನಾವೆಲ್ಲರೂ ಕೂಡಿ ಸರ್ವಾನುಮತದಿಂದ ಈ ಬಿಲ್ಲನ್ನು ಪಾಸ್ ಮಾಡಬೇಕು, ಸರ್ವಾನುಮತದಿಂದ ಚರ್ಚೆ ಮಾಡಿ ಈ ಮಸೂದೆಯನ್ನು ಒಪ್ಪಿಕೊಳ್ಳಬೇಕು ಎನ್ನುವುದು ನಮ್ಮ ಉದ್ದೇಶವಾಗಿತ್ತು. ಈ ಮಸೂದೆಯನ್ನು, ಈ ಕಾನೂನನ್ನು ಮೊದಲು ಜಾರಿಗೆ ತಂದಿದ್ದವರು ನಮ್ಮ ಪಕ್ಷದ ಸರ್ಕಾರ, ಆ ಕಾರಣ ಇದರಲ್ಲಿ ಏನಾದರೂ ನ್ಯೂನತೆಗಳು ಇದ್ದರೆ ಅದನ್ನು ಸರಿಪಡಿಸಬೇಕೆಂಬ ಉದ್ದೇಶ ನಮ್ಮದಾಗಿತ್ತು. ಆದರೆ ಈ ರೀತಿ ಮಾಡದೇ ನ್ಯೂನತೆಯಾಗಿರುವ ಬಿಲ್ಲನ್ನು ಗ್ರಾಮೀಣಾಭಿವೃದ್ಧಿ ಮಂತ್ರಿಗಳು ನಮ್ಮ ಮುಂದೆ ಹಾಜರು ಪಡಿಸಿದ್ದಾರೆ. ಅವರು ಇದರಲ್ಲಿ ಮೂರು ಪ್ಯಾಟ್ರನ್ ಮಾಡಿದ್ದಾರೆ. ಅವುಗಳೆಂದರೆ ಗ್ರಾಮಸಭೆ, ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ. ಅವರು ಇವತ್ತಿನ ದಿವಸ ಕೇವಲ ಹೆಸರುಗಳನ್ನು ಮಾತ್ರ ಬದಲಾವಣೆ ಮಾಡಿದ್ದಾರೆಯೇ ಹೊರತು ಬೇರೆ ಯಾವುದೇ ರೀತಿಯಾದ ಹೆಚ್ಚಿನ ಬದಲಾವಣೆಯನ್ನು ಮಾಡಿಲ್ಲ. ಆದರೆ ಅವರು ಏನು 5000 ರಿಂದ 7500 ಎಂದು ಜನಸಂಖ್ಯೆಯ ಆಧಾರವನ್ನು ಮಾಡಿದ್ದಾರೆ ಇದು ಸರಿಯಲ್ಲ. ನಾವು ಮೊದಲು ಮಾಡಿದಾಗ 1500 ರವರೆಗೆ ಇತ್ತು, ಅದನ್ನು ತೆಗೆದು ಇವತ್ತು ಚಿಕ್ಕಚಿಕ್ಕವನ್ನಾಗಿ ಮಾಡಿದ್ದಾರೆ, ಇದು ಒಳ್ಳೆಯದಲ್ಲ, ಆದ್ದರಿಂದ ಹಿಂದೆ ಮಂಡಲ ಪಂಚಾಯಿತಿ ಯಾವ ಪ್ರಕಾರದಲ್ಲಿ ಜನಸಂಖ್ಯೆಯ ಆಧಾರವನ್ನು ಹೊಂದಿತ್ತೋ ಅದೇ ಪ್ರಕಾರದಿಂದ ಇರಬೇಕಾಗಿತ್ತು ಎಂಬುದು ನನ್ನ ಅಭಿಪ್ರಾಯ. ಏಕೆಂದರೆ, 4-5 ಊರುಗಳು ಸೇರಿಕೊಂಡು ಮಂಡಳಗಳಾಗಿ ತಮ್ಮ ತಮ್ಮ ತೊಂದರೆಗಳನ್ನು ಯಾವ ಪ್ರಕಾರ ಪರಿಹರಿಸಿಕೊಳ್ಳಬೇಕು ಮತ್ತು ತಮ್ಮ ತಮ್ಮ ಭಾಗದಲ್ಲಿ ಯಾವ ಪ್ರಕಾರವಾಗಿ ಒಳ್ಳೆಯ ಕೆಲಸ ಮಾಡಬೇಕು, ಯಾವ ಪ್ರಕಾರದಲ್ಲಿ ಅಭಿವೃದ್ಧಿ

ಕೆಲಸಗಳನ್ನು ಮಾಡಿಕೊಳ್ಳಬೇಕು ಎಂಬುದು ಇತ್ತೋ ಇಂಥ ಕಾರ್ಯಕ್ರಮವನ್ನು ಬಿಟ್ಟು ಗ್ರಾಮಪಂಚಾಯಿತಿ ಎಂದು ಮಾಡಿದ್ದಾರಲ್ಲ, ಇದು ಸರಿಯಲ್ಲ, ಮೊದಲು ಯಾವ ಪ್ರಕಾರವಾಗಿ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪರಿಷತ್‌ನ ಸಮಿತಿಗಳು ಏನು ಇದ್ದವೋ ಆ ಪ್ರಕಾರವಿದ್ದರೆ ಒಳ್ಳೆಯದಾಗಿತ್ತು ಎಂದು ತಮಗೆ ತಿಳಿಯಬಯಸುತ್ತೇನೆ. ಅಧ್ಯಕ್ಷರೆ, ಪ್ರತಿಯೊಂದು ಗ್ರಾಮ ಪಂಚಾಯಿತಿಯವರಿಗೆ, ಮಂಡಲ ಪಂಚಾಯಿತಿಗೆ ಸರ್ಕಾರದಿಂದ ನೇರವಾಗಿ ಒಂದು ಲಕ್ಷ ರೂಪಾಯಿಯ ಅನುದಾನವನ್ನು ಕೊಡುತ್ತೇವೆಂದು ಹೇಳಿದ್ದಾರೆ. ಆದರೆ ಈ ಒಂದು ಲಕ್ಷ ರೂಪಾಯಿ ಯಾವುದಕ್ಕೂ ಸಾಕಾಗುವುದಿಲ್ಲ. ಏಕೆಂದರೆ, ಅವರುಗಳು ಇವತ್ತಿನ ದಿವಸ ವಿದ್ಯುತ್ ಬಿಲ್ಲನ್ನು ಕಟ್ಟಬೇಕು, ನೈರ್ಮಲ್ಯವನ್ನು ನೋಡಿಕೊಳ್ಳಬೇಕು, ರಸ್ತೆ ರಿಪೇರಿ ಮಾಡಬೇಕು, ಸಣ್ಣ ಸಣ್ಣ ರಸ್ತೆಗಳನ್ನು ಮಾಡಬೇಕು ; ಕುಡಿಯುವ ನೀರಿಗೆ ವ್ಯವಸ್ಥೆ ಮಾಡಬೇಕು ಇದಲ್ಲದೆ ಆ ಸಿಬ್ಬಂದಿಯ ಖರ್ಚನ್ನೂ ಸಹ ನೋಡಿಕೊಳ್ಳಬೇಕಾಗಿದೆ, ಇಂಥ ಪರಿಸ್ಥಿತಿಯಲ್ಲಿ ಈ ಒಂದು ಲಕ್ಷ ರೂಪಾಯಿ ಯಾವುದಕ್ಕೂ ಸಾಕಾಗುವುದಿಲ್ಲ. ಆದ್ದರಿಂದ, ಅವರಿಗೆ ಎರಡು ಲಕ್ಷ ರೂ.ಗಳನ್ನು ಕೊಟ್ಟಿದ್ದರೆ ಅನುಕೂಲವಾಗುತ್ತಿತ್ತು. ಇದರಿಂದ, ಸರ್ಕಾರಕ್ಕೆ ಸುಮಾರು 120 ಕೋಟಿ ರೂ.ಗಳನ್ನು ಬೇಕಾಗಿತ್ತು. ಮತ್ತೆ ಅವರು 5000 ಗ್ರಾಮಪಂಚಾಯಿತಿಗಳು ಹೊಸ ವ್ಯವಸ್ಥೆಯಿಂದ ಆಗುತ್ತದೆಂದು ಹೇಳಿದ್ದಾರೆ, ಆದರೆ ನನ್ನ ದೃಷ್ಟಿಯಲ್ಲಿ 6000 ಗ್ರಾಮಪಂಚಾಯಿತಿಗಳು ಆಗುತ್ತದೆ. ಈ 6000 ಗ್ರಾಮಪಂಚಾಯಿತಿಗಳಿಗೆ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ 120 ಕೋಟಿ ಬೇಕಾಗಿತ್ತು. ಆ ರೀತಿಯಲ್ಲಿ ಎರಡು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದರೆ ಇವರಿಗೆ ನಿಜವಾಗಿಯೂ ಗ್ರಾಮೀಣ ಪ್ರದೇಶದ ಬಗ್ಗೆ ಅನುಕಂಪವಿದೆ ಎಂದು ನಮಗೆ ಕಂಡುಬರುತ್ತಿತ್ತು. ಇದನ್ನು ನೋಡಿದಾಗ ಇವರು ಪುನಃ ಅಧಿಕಾರವನ್ನು ತಮ್ಮ ಕೈಯಲ್ಲಿ ಇಟ್ಟುಕೊಂಡು ತಲಾ ಅನುದಾನವನ್ನು ಕಡಿಮೆ ಪ್ರಮಾಣದಲ್ಲಿ ಕೊಡಬೇಕೆಂಬ ಉದ್ದೇಶವನ್ನು ಇಟ್ಟುಕೊಂಡಿದ್ದಾರೆಂದರೆ ನಿಜವಾಗಿಯೂ ಈ ಮಸೂದೆಯ ಮೇಲೆ ಇವರಿಗೆ ಯಾವುದೇ ರೀತಿಯಾದ ಒಳ್ಳೆಯ ಉದ್ದೇಶವಿಲ್ಲವೆಂದು ಕಂಡು ಬರುತ್ತದೆ. ಗ್ರಾಮಪಂಚಾಯಿತಿ ಮೀಟಿಂಗನ್ನು 2 ತಿಂಗಳಿಗೆ ಒಮ್ಮೆ ಕರೆಯಬೇಕೆಂದು ತಾವು ವಿಚಾರ ಮಾಡಬಹುದು. ಎರಡು ತಿಂಗಳಿಗೆ ಒಮ್ಮೆ ಕರೆದಾಗ ಯಾವ ಪ್ರಕಾರವಾಗಿ ಮೀಟಿಂಗ್ ನಡೆಯಬಹುದೆಂದು ತಾವು ವಿಚಾರ ಮಾಡಬೇಕು. ಪ್ರತಿ ತಿಂಗಳಿಗೆ ಒಮ್ಮೆ ಕಡ್ಡಾಯವಾಗಿ ಮೀಟಿಂಗ್ ಕರೆಯಬೇಕು. ತಾಲ್ಲೂಕು ಪಂಚಾಯಿತಿ ಮೀಟಿಂಗ್ ಆಯಿತು, ಗ್ರಾಮಪಂಚಾಯತಿ ಮೀಟಿಂಗ್ ಆಯಿತು. ಜಿಲ್ಲಾ ಪರಿಷತ್ ಮೀಟಿಂಗ್ ಆಯಿತು, ಇದನ್ನು ತಾವು ಎರಡು ತಿಂಗಳು ಹೆಚ್ಚು ಮಾಡಿದ್ದೀರಲ್ಲಾ ಅದನ್ನು ತಾವು ದಯವಿಟ್ಟು ಒಂದು ತಿಂಗಳೆಂದು ಅದಕ್ಕೆ ತಿದ್ದುಪಡಿ ತರಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದಲ್ಲದೆ ಈಗ ತಾಲ್ಲೂಕು ಮಟ್ಟದಲ್ಲಿ ಎಂ.ಎಲ್.ಎ. ಅವರನ್ನು ಮೊದಲು ಚೇರ್‌ಮನ್ ಮಾಡಬೇಕೆಂದು ಇದ್ದುದು ಅದನ್ನು ತೆಗೆದು ನೇರವಾಗಿ ಎಲೆಕ್ಟ್ ಮಾಡಬೇಕು. ಅನಂತರ, ಎಲೆಕ್ಷನ್ ಆದನಂತರ, ಎಂ.ಎಲ್.ಎ., ಎಂ.ಎಲ್.ಸಿ. ಇದ್ದವರು ಎಕ್ಸ್ ಅಫಿಷಿಯೋ ಮೆಂಬರ್ ಎಂದು ಇರಬೇಕೆಂದು ಒಂದು ತಿದ್ದುಪಡಿ ತಂದಿದ್ದಾರೆ. ಇದು ನಿಜವಾಗಿಯೂ ಸ್ತುತ್ಯವಿಲ್ಲ. ಬೇರೆ ರಾಜ್ಯಗಳಲ್ಲಿ ಎಂ.ಎಲ್.ಎ. ಅಧ್ಯಕ್ಷರಾಗಿ ಇರುವುದಿಲ್ಲ. ಶ್ರೀಮಾನ್ ಎಸ್. ಕೆ. ಡೇಯವರು ಯಾವ ಪ್ರಕಾರವಾಗಿ ನಮ್ಮ ಗ್ರಾಮ ಪಂಚಾಯತಿ ಮಸೂದೆಯನ್ನು ಬರೆದರು ಆ ಕಾಲಕ್ಕೆ ಕರ್ನಾಟಕ ರಾಜ್ಯದಲ್ಲಿ ಒಂದು ಮಾದರಿಯ ಒಂದು ಆಕ್ಟ್ ಆಗಬೇಕೆನ್ನುವ ಉದ್ದೇಶದಿಂದ ಇವತ್ತಿನ ದಿವಸ ಎಂ.ಎಲ್.ಎ.ಗಳು ಚೇರ್‌ಮನ್ ಎಂದು ಮಾಡಿದರು. ಆ ಉದ್ದೇಶವೆಂದರೆ, ಆ ಒಂದು ಜನರಿಗೆ ಸಂಪರ್ಕ ಬರಬೇಕು, ಜನರಿಗೆ ಹಾಗೂ ಸರ್ಕಾರಕ್ಕೆ ಎಂ.ಎಲ್.ಎ.ರವರ ಸಂಪರ್ಕ ಇರುತ್ತದೆ. ಡೆವಲಪ್‌ಮೆಂಟ್ ಆಕ್ಟಿವಿಟೀಸ್ ಮಾಡಲಿಕ್ಕೆ ಹೆಚ್ಚು ಅನುಕೂಲವಾಗುತ್ತದೆ. and he will be the ex-office member of the Zilla Parishad ಈ ಒಂದು ಉದ್ದೇಶದಿಂದ ತಾಲ್ಲೂಕು ಮಟ್ಟದಲ್ಲಿ ಹೆಚ್ಚಿನ ಅಭಿವೃದ್ಧಿಯಾಗಬೇಕೆಂಬ ಉದ್ದೇಶದಿಂದ ಇವತ್ತಿನದಿವಸ ಎಂ.ಎಲ್.ಎ. ರವರನ್ನು ಚೇರ್‌ಮನ್ ಎಂದು ಇಟ್ಟರು.

ನಿಜವಾಗಿ ಇದನ್ನು ಅವರು ಏನು ತೆಗೆದಿದ್ದಾರೆ, ಮೊದಲಿದ್ದಂತೆ ಆ ಭಾಗದ ಯಾರು ಎಂ.ಎಲ್.ಎ ಇದ್ದರು ಅವರನ್ನು ಪಂಚಾಯತಿಯ ತಾಲ್ಲೂಕು ಮಟ್ಟದಲ್ಲಿ ಚೇರ್‌ಮನ್‌ರಾಗಿ ಇಡಬೇಕೆಂದು ನಾನು ಕೇಳಿಕೊಳ್ಳುತ್ತಿದ್ದೇನೆ. ಇದಲ್ಲದೆ ಈ ತಾಲ್ಲೂಕು ಮಟ್ಟದಲ್ಲಿ ಗ್ರಾಮ ಪಂಚಾಯತಿ ಇರುತ್ತದೆ. ತಾವು ಈವತ್ತಿನ ದಿವಸ ತಾಲ್ಲೂಕು ಮಟ್ಟದಲ್ಲಿ ಎಂ.ಎಲ್.ಎ. ರವರು ಕಮಿಟಿಯ ಚೇರ್‌ಮನ್‌ರಿದ್ದರು. ಅದರ ಉದ್ದೇಶವೆಂದರೆ ಶ್ರೀಮಾನ್ ಎಸ್. ಕೆ. ಡೇಯವರು ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾತ್ರ ಎಂ. ಎಲ್. ಎ ಚೇರ್‌ಮನ್ ಎಂದು ಮಾಡಿದರು. ಬೇರೆ ರಾಜ್ಯಗಳಲ್ಲಿ ಇಲ್ಲ. ಇವತ್ತಿನ ದಿವಸ ಪಶ್ಚಿಮ ಬಂಗಾಳ ಅಂತ ಯಾವುದೇ ರಾಜ್ಯದಲ್ಲಿ ಇಲ್ಲ. ಆ ರೀತಿ ಮಾಡಲು ಕಾರಣವೇನೆಂದರೆ, ಶ್ರೀಮಾನ್ ಎಸ್.ಕೆ.ಡೇವರು ಇಲ್ಲಿ ನಮ್ಮ ಶಾಸಕರ ಭವನದಲ್ಲಿ ಅವರು ಇದ್ದಾಗ ಅವರು ಒಂದು ಕಾರಣ ಹೇಳಿದರು, ಶಾಸಕರನ್ನು ಚೇರ್‌ಮನ್ ಮಾಡುವುದರಿಂದ ಸರ್ಕಾರಕ್ಕೆ ಹಾಗೂ ಜನರಿಗೆ ಸಂಪರ್ಕ ಹೆಚ್ಚು ಇರುತ್ತದೆ, ಅಥವಾ ಜಿಲ್ಲಾ ಪರಿಷತ್‌ನಲ್ಲಿ ಏನೇನು ನ್ಯೂನತೆಗಳಿರುತ್ತವೆ ಅವನ್ನು ಸರ್ಕಾರಕ್ಕೆ ಮುಟ್ಟಿಸಲಿಕ್ಕೆ ಅನುಕೂಲವಾಗುತ್ತದೆ. ಈ ಒಂದು ಉದ್ದೇಶದಿಂದ ಚೇರಮನ್ ಮಾಡಿದರು. ಮತ್ತೊಂದು ಬೇರೆ ಉದ್ದೇಶವಿಲ್ಲ. ಆದ ಕಾರಣ ಇವತ್ತಿನದಿವಸ ಚೇರ್‌ಮನ್ ಇರುವುದನ್ನು ತೆಗೆದಿದ್ದೀರಿ. ದಯವಿಟ್ಟು ಮೊದಲಿದ್ದಂತೆ ಎಂ.ಎಲ್.ಎ. ಚೇರ್‌ಮನ್ ಎಂದು ಮಾಡಿದರು. ಇವತ್ತಿನ ದಿವಸ ಯಾವ ಪಕ್ಷವೇ ಇರಬಹುದು ನಾವು ನೀವು ಮತ್ತು ಬೇರೆಯವರು ಇರಬಹುದು, ಆದಕಾರಣ ಮೊದಲಿದ್ದಂತೆ ಮಾಡಿದರೆ ಒಳ್ಳೆಯದು. ದಯವಿಟ್ಟು ಇದನ್ನು ತೆಗೆಯಬಾರದೆಂದು ತಮ್ಮನ್ನು ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಂ. ವೈ. ಘೋರ್ಪಡೆ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಇರತಕ್ಕಂತಹ ತೊಂದರೆ ಏನೆಂದರೆ, ಕಾನೂನು ಪ್ರಕಾರ ಆ ರೀತಿ ಮಾಡಲಿಕ್ಕೆ ಬರುವುದಿಲ್ಲ. ಒಂದು ವೇಳೆ ಹಾಗೆ ಮಾಡಬೇಕೆಂದು ರಾಜಕೀಯವಾಗಿ ನಮ್ಮ ಉದ್ದೇಶ ಇದ್ದರೂ ಕೂಡ ಅದನ್ನು ಮಾಡಲಿಕ್ಕೆ ಬರುವುದಿಲ್ಲ. ಏತಕ್ಕೆಂದರೆ ಅವರು ಅಲ್ಲಿ ಆರಿಸಿಬಂದವರಲ್ಲ. ನೀವು ಏನು ಮಾಡಿದಿರಿ ತಾಲ್ಲೂಕು ಮಟ್ಟದಲ್ಲಿ ಎಲೆಕ್ಷನ್ ಇಡಲಿಲ್ಲ. ಎಲ್ಲರೂ ಎಕ್ಸ್ ಅಫಿಷಿಯೋ ಆಗಿದ್ದರು. ಮಾನ್ಯ ಚಂದ್ರೇಗೌಡರು ಹೇಳಿದರಲ್ಲಾ ಹಲ್ಲಿಲ್ಲಾ ಕಿತ್ತು ಬಿಟ್ಟಿದ್ದೇವೆ ತಾಲ್ಲೂಕು ಮಟ್ಟದಲ್ಲಿ, ಹಲ್ಲಿಲ್ಲದ ಒಂದು ಸಂಸ್ಥೆಯಾಗಿತ್ತು ಅದು. ಅದು ಎಕ್ಸ್ ಅಫಿಷಿಯೋ ಸಂಸ್ಥೆಯಾಗಿತ್ತು. ಆದ್ದರಿಂದ, ಎಂ.ಎಲ್.ಎ.ರವರು ಪ್ರಿಸೈಡ್ ಮಾಡುತ್ತಿದ್ದರು. ನಾನು ಎಂ.ಎಲ್.ಎ. ಆಗಿ ಸೊಂಡೂರಿನಲ್ಲಿ ನಮ್ಮ ಸಮಿತಿಯ ಚೇರ್‌ಮನ್ ಆಗಿದ್ದೆ. ಈಗ ಚುನಾಯಿತ ಬಾಡಿ ನಾವು ಸ್ಥಾಪನೆ ಮಾಡುತ್ತಿರುವಾಗ ಕಾನ್‌ಸ್ಟಿಟ್ಯೂಷನ್‌ನಲ್ಲಿ ಸ್ಪಷ್ಟವಾಗಿ ಅವರು ಬರೆದಿರುವಾಗ ಯಾರು ಅಲ್ಲಿ ಆರಿಸಿಬಂದಿದ್ದಾರೆ ಅವರೇ ಚೇರ್‌ಮನ್ ಆಗಬೇಕೆಂದು ಇದ್ದಾಗ ನಾವು ಇಷ್ಟೊಂದು ವಾದ ಮಾಡಲಿಕ್ಕೆ ಇಲ್ಲಿ ಅವಕಾಶವೇ ಇಲ್ಲ. ಏತಕ್ಕೆಂದರೆ ಮಾಡಲಿಕ್ಕೆ ಬರುವುದಿಲ್ಲ. ಒಂದು ವೇಳೆ ನಿಮ್ಮ ವಾದವನ್ನು ನಾವು ಒಪ್ಪುವುದಾದರೂ ಕೂಡ, ಕಾನೂನು ಪ್ರಕಾರ ಮಾಡಲಿಕ್ಕೆ ಸಾಧ್ಯವಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಮಂತ್ರಿಗಳು ಹೇಳಿದರು, ಏಕೆಂದರೆ ತಾಲ್ಲೂಕು ಮಟ್ಟದಲ್ಲಿ ಈಗ ಹೊಸ ಪದ್ಧತಿಯಂತೆ ಚುನಾಯಿತರಾದಂಥ ಸದಸ್ಯರು ಇರುತ್ತಾರೆ. ಮೊದಲ ಪ್ರಕಾರವಾಗಿ ಬೇರೆ ಬೇರೆ ಕಡೆಯಿಂದ ಪ್ರಧಾನರು ಇರುವುದಿಲ್ಲವೆಂದು ತಾವು ಅನ್ನುತ್ತೀರಿ. ಹಾಗಿದ್ದರೂ ಕೂಡ ಇವತ್ತಿನದಿವಸ ಎಂ.ಎಲ್.ಎ. ಅವರನ್ನು ಚೇರ್‌ಮನ್ ಮಾಡುವುದರಿಂದ ಯಾವುದೇ ತೊಂದರೆ ಬರುವುದಿಲ್ಲ. ತಾವು ಅದರ ಬಗ್ಗೆ ಕೂಲಂಕುಷವಾಗಿ ಲಾ ಡಿಪಾರ್ಟ್‌ಮೆಂಟ್‌ನೊಂದಿಗೆ ಚರ್ಚಿಸಬೇಕೆಂದು ಕೇಳಿಕೊಳ್ಳುತ್ತೇನೆ.

7.20 ಪಿ. ಎಂ

The concerned majority MLA is the Chairman of the Panchayat Committee ಅಂತ ಬರೆದರೆ, absolutely there is no problem.

ಶ್ರೀ ಎಂ. ವೈ. ಘೋರ್ಪಡೆ : ಸಂವಿಧಾನದ 73ನೇ ತಿದ್ದುಪಡಿಯಲ್ಲಿ ಹೇಳಿದ್ದಾರೆ. Only persons elected to that Body can become the Chairman and others can be ex-officio Members without voting rights. ಛೇರ್ಮನ್ ಎಲೆಕ್ಷನ್‌ನಲ್ಲಿ ಓಟಿಂಗ್ ರೈಟ್ ಕೂಡ ಇಲ್ಲ. ಇದು ನಾವು ರಾಜ್ಯ ಮಟ್ಟದಲ್ಲಿ ಮಾಡಿರತಕ್ಕದ್ದು ಅಲ್ಲ. ಸಂವಿಧಾನ ಇದೆ, ಅದಕ್ಕೆ ಅನುಗುಣವಾಗಿ ನಾವು ಕಾನೂನು ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಯಾರಾದರೂ ಕೋರ್ಟಿಗೆ ಹೋಗಿ, ನೀವು ಮಾಡಿರತಕ್ಕ ಕಾನೂನು ಸಂವಿಧಾನಕ್ಕೆ ವಿರುದ್ಧವಾಗಿದೆ ಎಂದು ಹೇಳುತ್ತಾರೆ.

ಶ್ರೀ ಎಸ್. ಹೆಚ್. ಕೌಜಲಗಿ : ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಇದಕ್ಕೆ ಪ್ರೆಸಿಡೆಂಟ್ ಅಸೆಂಟ್ ಕೊಟ್ಟಿಲ್ಲ. ಪ್ರೆಸಿಡಂಟ್ ಅಸೆಂಟ್ ಕೊಡುವುದಕ್ಕೆ ಮೊದಲು ನೀವು ಇವತ್ತಿನ ದಿವಸ ಇದು ಸಂವಿಧಾನಕ್ಕೆ ವಿರುದ್ಧವಾಗುತ್ತದೆಂದು ಹೇಗೆ ಹೇಳುತ್ತೀರಿ? ತಾವು ಹೇಳುವುದು ಯಾವಾಗ? ರಾಷ್ಟ್ರ ಮಟ್ಟದಲ್ಲಿ ಸಂವಿಧಾನದ 73ನೇ ತಿದ್ದುಪಡಿ ಪ್ರಕಾರ ಈ ಬಿಲ್ಲಿಗೆ ಅವರು ಅಸೆಂಟ್ ಕೊಟ್ಟಿದ್ದು ಅದರ ಪ್ರಕಾರ ನಾವು ಫಾಲೋ ಅಪ್ ಮಾಡಬೇಕೆಂದರೆ ನಾನು ಒಪ್ಪುತ್ತಿದ್ದೆ. ಅದಕ್ಕೆ ಇನ್ನೂ ಅಸೆಂಟ್ ಕೊಟ್ಟಿಲ್ಲ. ಅದು ಇನ್ನೂ ಬಿಲ್ ಆಗಿ ರಾಷ್ಟ್ರಪತಿ ಅಸೆಂಟಿಗೆ ಹೋಗಿದೆಯೇ ಹೊರತು ಆ್ಯಕ್ಟ್ ಆಗಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ಅಸೆಂಟಿನ ಪ್ರಶ್ನೆ ಅಲ್ಲ. ಇನ್ನೊಂದು ಮಾತು ಹೇಳಿದ್ದಾರೆ. ನಿಮ್ಮ ಕಾನೂನಿನಲ್ಲಿ ರಾಜ್ಯ ಮಟ್ಟದಲ್ಲಿ ಅದಕ್ಕೆ ವ್ಯತಿರಿಕ್ತವಾಗಿ ಏನಾದರೂ ಇದ್ದರೆ ಒಂದು ವರ್ಷದ ಅವಧಿಯಲ್ಲಿ ಅದನ್ನು ಸರಿಪಡಿಸಬೇಕೆಂದು ಹೇಳಿದ್ದಾರೆ. ಆದ ಕಾರಣ ನಾವು ನಮಗೆ ತಿಳಿದದ್ದೇ ಕಾನೂನು ಮಾಡುವುದಕ್ಕೆ ಅವಕಾಶ ಇಲ್ಲ. ಅದಕ್ಕೆ ಅನುಗುಣವಾಗಿ ಇರಬೇಕಾಗುತ್ತದೆ. ಇಲ್ಲದಿದ್ದರೆ, ಅದು ಇಲ್ಲೀಗಲ್ ಆಗುತ್ತದೆ. ಒಂದು ವರ್ಷದಲ್ಲಿ ಅದನ್ನು ಮತ್ತೆ ಮತ್ತೆ ಸರಿಪಡಿಸಬೇಕಾಗುತ್ತದೆ.

ಶ್ರೀ ಎಸ್. ಹೆಚ್. ಕೌಜಲಗಿ : ಅಸೆಂಟ್ ಕೊಟ್ಟನಂತರ ತಾವು ಯಾವಾಗ ಬೇಕಾದರೂ ಬಿಲ್ ತರಬಹುದಿತ್ತು. ಬಿಲ್ ತಂದನಂತರ ಚರ್ಚೆ ಮಾಡಬಹುದಿತ್ತು. ಅದು ಇರಲಿ. ಇವತ್ತಿನ ದಿವಸ ಗ್ರಾಮಸಭೆಗಳು ಬಹಳ ಮಹತ್ವದ್ದು ಇದೆ. ತಾವು ಗ್ರಾಮ ಸಭೆಗೆ ಏನು ಮಹತ್ವ ಕೊಟ್ಟಿರಿ ಅದು ಸ್ತುತ್ಯ ಎಂದು ಹೇಳಬಹುದು. ಏಕೆಂದರೆ ಪ್ರತಿ 6 ತಿಂಗಳಿಗೊಮ್ಮೆ ಗ್ರಾಮ ಸಭೆ ಕರೆಯಬೇಕು, ಆ ಗ್ರಾಮದ ಬಗ್ಗೆ ಡೆವಲಪ್‌ಮೆಂಟ್ ವರ್ಕ್ಸ್ ಆಗಬೇಕು. ತಾವು ಅದರ ಬಗ್ಗೆ ಏನು ಮಾಡಿದ್ದೀರಿ ಅದು ಸರಿ ಯಾವುದೇ ಒಂದು ಸೆಲಕ್ಷನ್ ಆಗಬೇಕಾದರೆ ಅಥವಾ ಏನಾದರೂ ಆಗಬೇಕಾದರೆ ಅದು ಗ್ರಾಮಸಭೆಯಲ್ಲಿ ಆಗಬೇಕು. ಜನತಾ ಮನೆ ಬಂತು, ಐಆರ್‌ಡಿಸಿ ಬಂತು, ಹೀಗೆ ಪ್ರತಿಯೊಂದು ಅಲ್ಲಿ ಆಯಿತು ಅಂದರೆ ತಪ್ಪಾಗುವುದು ಕಡಿಮೆಯಾಗುತ್ತದೆ ಎಂಬುದನ್ನು ನಾನು ಒಪ್ಪುತ್ತೇನೆ. ಅದಲ್ಲದೆ ಇನ್ನೊಂದು ಏನಾಗುತ್ತದೆಂದರೆ, ಫೈನಾನ್‌ಷಿಯಲ್ ಇಂಪ್ಲಿಕೇಷನ್ಸ್ ಅನ್ನು ಇನ್ನೂ ಹೆಚ್ಚಿಗೆ ಗ್ರಾಮಸಭೆಗೆ ಕೊಟ್ಟಿಲ್ಲ. ಅದನ್ನು ಹೆಚ್ಚಿಗೆ ಕೊಡಬೇಕು. ಒಂದು ಲಕ್ಷ ರೂಪಾಯಿ ಕೊಟ್ಟು ಇಷ್ಟರಲ್ಲಿ ಬಾಳುವೆ ಮಾಡು ಅಂದರೆ ಆಗುವುದಿಲ್ಲ. ಅದರ ಸಲುವಾಗಿ ಇವತ್ತಿನ ದಿವಸ ಹೆಚ್ಚಿಗೆ ಕೊಡಬೇಕಾಗುತ್ತದೆ. ಎಸ್. ಕೆ. ಡೇ ಅವರು ಇದ್ದಾಗ ಅವರನ್ನು ನಾವು ಕೇಳಿದ್ದೆವು. ಸರ್, ತಾವು ಸರ್ಕಾರದ ಎಲ್ಲಾ ಆಡಳಿತವನ್ನು ಅವರ ಕೈಯಲ್ಲಿ

ಕೊಡುವುದಕ್ಕೆ ಹತ್ತಿದ್ದೇವೆ. ಆಡಳಿತ ಕೊಡುವುದರಿಂದ ಅವರಿಗೆ ಹೇಗೆ ಅನುಭವ ಆಗುತ್ತದೆಂದು ಕೇಳಿದ್ದೆವು. ಆಗ ಅವರು ಒಂದು ಮಾತು ಹೇಳಿದ್ದರು. ಒಬ್ಬ ಸಣ್ಣ ಹುಡುಗ ಇರುತ್ತಾನೆ, ಸಣ್ಣ ಹುಡುಗ ಇದ್ದಾಗ ನಾವು ಹೆಗಲ ಮೇಲೆ ಹೊತ್ತುಕೊಂಡು ಓಡಾಡಿಸುತ್ತೇವೆ, ಒಂದೆರಡು ವರ್ಷ ಹೊತ್ತುಕೊಂಡು ಓಡಾಡುತ್ತೇವೆ. ಅನಂತರ ಕೆಳಗೆ ಓಡಾಡುವುದಕ್ಕೆ ಬಿಡುತ್ತೇವೆ. ಆಗ ತನಗೆ ತಾನೇ ಆಡುವುದಕ್ಕೆ ಹತ್ತುತ್ತಾನೆ, ಆಗ ಸರಿಹೋಗುತ್ತದೆಂದು ಹೇಳಿದರು. ಅದರ ಪ್ರಕಾರ ಎಷ್ಟೇ ತೊಂದರೆ ಬಂದರೂ ಸಹ ಹೆಚ್ಚಿನ ಅಧಿಕಾರ ನಾವು ಅವರಿಗೆ ಕೊಟ್ಟರೆ ಯಾವುದೇ ತೊಂದರೆ ಆಗುವುದಿಲ್ಲ. ಒಂದೆರಡು ವರ್ಷದಲ್ಲಿ ಎಲ್ಲಾ ಸರಿಹೋಗುತ್ತದೆ. ಇವತ್ತಿನ ದಿವಸ ಪಶು ಸಂಗೋಪನಾ ಇಲಾಖೆಯನ್ನು ಕಸಿದುಕೊಳ್ಳುವುದಕ್ಕೆ ಹತ್ತಿದ್ದೀರಿ ; ಸಹಕಾರ ಇಲಾಖೆಯನ್ನು ಕಸಿದುಕೊಂಡಿದ್ದೀರಿ, ಮೈನರ್ ಇರಿಗೇಷನ್ ಇಲಾಖೆಯನ್ನು ಕಸಿದುಕೊಂಡಿದ್ದೀರಿ ; ಇತರೆ ಡೆವಲಪ್‌ಮೆಂಟ್ ಆ್ಯಕ್ಟಿವಿಟೀಸ್ ಅನ್ನು ಕಸಿದುಕೊಳ್ಳುವುದಕ್ಕೆ ಹತ್ತಿದ್ದೀರಿ. ಹೀಗೆ ಒಂದೊಂದು ಶುರು ಮಾಡುವುದಕ್ಕೆ ಹತ್ತಿದ್ದೀರಿ. ಹೀಗೆ ಜಿಲ್ಲಾ ಪರಿಷತ್ತು ರಸ್ತೆ ಹೆಚ್ಚಿಗೆ ಇದ್ದುದನ್ನು ತೆಗೆದು ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿದಿರಿ. ಏತಕ್ಕೆ ಲೋಕೋಪಯೋಗಿ ಇಲಾಖೆಗೆ ವರ್ಗಾಯಿಸಿದಿರಿ? ಜಿಲ್ಲಾ ಪರಿಷತ್ತಿನಲ್ಲಿದ್ದಾಗ 15 ಸಾವಿರ ರೂ.ಗಳನ್ನು ಒಂದು ಕಿಲೋಮೀಟರ್‌ಗೆ ಕೊಡುತ್ತಿದ್ದೀರಿ, ಈಗ ಲೋಕೋಪಯೋಗಿ ಇಲಾಖೆಗೆ ಹೋದಮೇಲೆ ಏಳೂವರೆ ಸಾವಿರ ರೂಪಾಯಿ ಕೊಡುವುದಕ್ಕೆ ಹತ್ತಿದ್ದೀರಿ. ಇದಕ್ಕೆ ಹೇಗೆ ಮಾಡುತ್ತೀರಿ? ಇದು ಎಲ್ಲಿ ನಿಮ್ಮ ನ್ಯಾಯ?

ಶ್ರೀ ಎಂ. ವೈ. ಘೋರ್ಪಡೆ : ಹಿಂದೆ ಬೇರೆ ಬೇರೆ ಇಲಾಖೆಯವರು ಎಷ್ಟೋ ಸಾರಿ ಆರ್‌ಡಿಪಿಆರ್ ಮಿನಿಸ್ಟ್ರಿಯನ್ನು ಕೇಳದೆ ಮಾಡಿದ್ದಾರೆ. ಇನ್ನು ಮುಂದೆ ನಮ್ಮ ಕನ್‌ಸಲ್ಟೇಷನ್ ಮಾಡದೇ ಈ ರೀತಿ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಎಸ್. ಹೆಚ್. ಕೌಜಲಗಿ : ಈಗ ಎಲ್ಲವನ್ನೂ ಕಳೆದುಕೊಂಡಿದ್ದೀರಿ. ರಾಜ್ಯವನ್ನು ಕಳೆದುಕೊಂಡ ಮೇಲೆ ನಾನು ಇನ್ನು ಯಾರನ್ನೂ ಕೇಳುವುದಿಲ್ಲ ಅಂದರೆ ಹೇಗೆ? ಈಗಾಗಲೇ ನಿಮಗೆ ಇದ್ದ ರಾಜ್ಯವನ್ನೆಲ್ಲಾ ಕಳೆದುಕೊಂಡು ಕುಳಿತಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಅದೇ ಅಧಿಕಾರ ಸೂಕ್ತವಾಗಿ ಮತ್ತೆ ಪಂಚಾಯತ್ ರಾಜ್ ವ್ಯವಸ್ಥೆಗೆ ಕೊಡಬೇಕೆಂಬ ಅಭಿಪ್ರಾಯ ಇದ್ದರೆ ಆ ರೀತಿ ಮಾಡಬಹುದು. ಹಿಂದೆ ನಡೆದದ್ದು ನಾನು ಹೇಳಿದೆ. ಕೆಲವು ಇಲಾಖೆಗಳಲ್ಲಿ ಅದು ಮಾಡಿದ್ದಾರೆ. ಅದರಿಂದ ನಮಗೆ ಏನೂ ಹಿತ ಆಗಿಲ್ಲ. ರಸ್ತೆಗಳ ಬಗ್ಗೆ ಎಷ್ಟೋ ಸಾರಿ ಹೇಳಿದೆ. ಜಿಲ್ಲಾ ಮಟ್ಟದಲ್ಲಿ ರಸ್ತೆಗಳೇನಿವೆ ಅದಕ್ಕೆ ಸಾಕಷ್ಟು ಹಣ ಕೊಟ್ಟರೆ ಅವರು ಮಾಡುತ್ತಾರೆ. ಹಣ ಕೊಡದೆ ವಾಪಸ್ಸು ತೆಗೆದುಕೊಂಡರೆ ಯಾರಿಗೂ ಸುಖವಾಗುವುದಿಲ್ಲ. ಅದೇ ರೀತಿ ಯಾವ ವಿಷಯವಾದರೂ ಸಾಕಷ್ಟು ಹಣ ಕೊಟ್ಟರೆ ಸಿಬ್ಬಂದಿ ಇರುತ್ತದೆ, ಅವರು ಮಾಡುತ್ತಾರೆ. ವಾಪಸ್ಸು ಪಡೆಯುವುದರಲ್ಲಿ ಏನು ಪುರುಷಾರ್ಥ ಇಲ್ಲವೆಂದು ಹೇಳಿದೆ. ಆದರೂ ಒಂದೆರಡು ಇಂಥವು ನಡೆದಿವೆ. ಅದು ನಮ್ಮನ್ನು ಕೇಳಿ ಮಾಡಿರತಕ್ಕದ್ದು ಅಲ್ಲ. ಇನ್ನು ಮುಂದೆ ಆ ರೀತಿ ಯಾವ ಇಲಾಖೆಯಾಗಲಿ ಆರ್‌ಡಿಪಿಆರ್ ಅನ್ನು ಕನ್‌ಸಲ್ಟ್ ಮಾಡದೆ ಮಾಡುವುದಕ್ಕೆ ನಾವು ಅವಕಾಶ ಕೊಡುವುದಿಲ್ಲ. ಇವತ್ತು ಕಾನೂನಿನಲ್ಲಿ ಅದೇ ರೀತಿ ಇದೆ.

ಆದರೂ ಕೂಡ ಈ ರೀತಿ ಮಾಡಿದ್ದಾರೆ. ಇನ್ನು ಮುಂದೆ ನಾವು ಬಿಡುವುದಿಲ್ಲ. ಮತ್ತೆ ಕೋ-ಆಪರೇಷನ್ ಇವತ್ತು ಇಲ್ಲವೇ ಇಲ್ಲ. ಅದರ ಬಗ್ಗೆ ಚರ್ಚೆ ಮಾಡೋಣ. ಕೋ-ಆಪರೇಷನ್ ಡೀಸೆಂಟ್ರಲೈಸ್ ಮಾಡಬೇಕೇ ಅಥವಾ ಇನ್ನೂ ಯಾವುದೇ ವಿಷಯ ಡೀಸೆಂಟ್ರಲೈಸ್ ಮಾಡುವುದಕ್ಕೆ ಸಾಧ್ಯ ಎನ್ನುವ ಬಗ್ಗೆ ಇದ್ದರೆ ಅದನ್ನು ಮಾಡುವುದರಲ್ಲಿ 6TH

ತೊಂದರೆ ಇಲ್ಲ. ನಮ್ಮ ಅಧಿಕಾರಿಗಳನ್ನು ನಾವು ಕೊಡುತ್ತಿದ್ದೇವೆ ; ಈಗ ವಾಪಸ್ಸು ತೆಗೆದುಕೊಳ್ಳುತ್ತಿದ್ದೇವೆ. ಪುನಃ ಕೊಡಬಹುದು. ಎಲ್ಲಿಯೂ ಓಡಿ ಹೋಗುವುದಿಲ್ಲ. ಅದರ ಬಗ್ಗೆ ಅಷ್ಟೊಂದು ಕಾಳಜಿ ಮಾಡಬೇಕಾದ್ದಿಲ್ಲ.

ಶ್ರೀ ಶಿವಾನಂದ ಹೆಚ್. ಕೌಜಲಗಿ : ಇವತ್ತು ನಮ್ಮ ಪಂಚಾಯಿತಿಗಳಿಗೆ ಇರತಕ್ಕ ಒಂದೇ ಒಂದು ಅಧಿಕಾರ ಎಂದರೆ ವಿದ್ಯುತ್ ಶುಲ್ಕ ತುಂಬುವುದು, ಕಸ ಹೊಡೆಸುವುದು, ಇವತ್ತು ಬೋರ್‌ವೆಲ್ ರಿಪೇರಿ ಮಾಡುವ ಕಾರ್ಯಕ್ರಮ ಕೂಡಾ ಕಸಿದಿದ್ದೀರಿ. ಅವರು ಬೋರ್‌ವೆಲ್ ರಿಪೇರಿ ಮಾಡುವ ಕಾರ್ಯಕ್ರಮ ಇತ್ತು ಮಂಡಳ ಪಂಚಾಯತಿಯವರಿಗೆ, ಆದರೆ ಮಂಡಳ ಪಂಚಾಯಿತಿಗಳಿಗೆ ತಾವು ಕಡೆ ತನಕ ಬೋರ್‌ವೆಲ್ ರಿಪೇರಿಯ 500 ರೂಪಾಯಿ ರಿಲೀಸ್ ಮಾಡಿಲ್ಲ. ಇವತ್ತು ಫ್ಯಾಕ್ಟ್ಸ್ ಮತ್ತು ಫಿಗರ್ಸ್ ತೋರಿಸಿ. ಯಾವುದಾದರೂ ಒಂದು ಮಂಡಲಕ್ಕೆ ಒಮ್ಮೆಯಾದರೂ 500 ರೂಪಾಯಿಗಳನ್ನು ಬೋರ್‌ವೆಲ್ ಸಲುವಾಗಿ ಬಿಡುಗಡೆ ಮಾಡಿದ್ದೀರಾ? ಯಾವ ಪ್ರಕಾರ ಅವರು ರಿಪೇರಿ ಮಾಡಬೇಕು? ಹೀಗೆ ಇರುವಾಗ ಮಂಡಲ ಪಂಚಾಯಿತಿಗಳು ಕೆಲಸ ಮಾಡುತ್ತಿಲ್ಲ, ಬೋರ್‌ವೆಲ್ ಕೆಲಸ ಮಾಡುತ್ತಿಲ್ಲ, ತಾಲ್ಲೂಕು ಮಟ್ಟದಲ್ಲಿ ಗಾಡಿ ಹೋಗಲು ಆಗುವುದಿಲ್ಲ ಎಂದರೆ ಯಾವ ಪ್ರಕಾರ ಆಗುತ್ತದೆ? Is it decentralisation of power or having power in only one hand? ಎಂದು ಕೇಳುತ್ತೇನೆ. ಆದಕಾರಣ ತಮ್ಮ ಉದ್ದೇಶ ಏನಿದೆ ಅದು ಸರಿಯಾಗಿಲ್ಲ; ತಮ್ಮ ಬಗ್ಗೆ ಹೇಳಬೇಕೆಂದರೆ, ತಾವು ಕಳಕಳಿ ಹೊಂದಿದ್ದೀರಿ. ವೈಯುಕ್ತಿಕವಾಗಿ ಒಬ್ಬರಲ್ಲಿ ಇದ್ದರೆ ಏನಾಗುತ್ತದೆ? ತಾವು ಮಂತ್ರಿಗಳು ಛಲೋ ಇದ್ದೀರಿ. ಆದರೆ ನಿಮ್ಮದು ಏನೂ ನಡೆಯದ ಹಾಗೆ ಇದೆ. ನಜೀರ್ ಸಾಹೇಬರೂ ಇದ್ದರು. ತಾವು ದೇವರಂಥ ಮನುಷ್ಯ ಇದ್ದೀರಿ; ನೀವೇ ಹೇಳಿದಿರಿ, ನನ್ನ ಮಾತನ್ನು ಅಧಿಕಾರಿಗಳು ಕೇಳುವುದಿಲ್ಲ ಎಂದು ತಾವೇ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟಿದ್ದೀರಿ. ಇನ್ನೇನು ಹೇಳಬೇಕು? ನಿಮ್ಮ ಉದ್ದೇಶ ಛಲೋ ಇರುತ್ತದೆ. ನನ್ನ ಮಾತು ಅಧಿಕಾರಿಗಳು ಕೇಳುವುದಿಲ್ಲ ಎಂದರೆ ಏನು? ಇವತ್ತು, ಮಂಡಲಪಂಚಾಯತಿ ಅಧ್ಯಕ್ಷರ ಮಾತು ಸೆಕ್ರೆಟರಿ ಕೇಳುವುದಿಲ್ಲ ಎಂದರೆ ಯಾವ ಪ್ರಕಾರ ಆಗುತ್ತದೆ ; ಅದೇ ಪ್ರಕಾರ ಆಗುತ್ತದೆ. ಇವತ್ತಿನ ದಿವಸ ಗ್ರಾಮ ಪಂಚಾಯಿತಿಗಳನ್ನು ಮಾಡಬೇಕೆಂದು ಹೇಳುತ್ತಿದ್ದೀರಿ.

ಶ್ರೀ ಎಂ. ವೈ. ಘೋರ್ಪಡೆ : ಈ ರೀತಿ ಟೀಕೆ ಮಾಡುವುದಕ್ಕೆ ತಮಗೆ ಅಧಿಕಾರ ಇದೆ. ನಾನು ಕೇಳುತ್ತಿದ್ದೇನೆ. ಅದರ ಬಗ್ಗೆ ಏನೂ ಇಲ್ಲ.

Sri. Shivananda H. Koujalagi : I have got the highest respect for you, Sir. ಆದರೆ ತಾವು ಪೇಪರ್ ಸ್ಟೇಟ್‌ಮೆಂಟ್ ಏನು ಕೊಟ್ಟಿದ್ದೀರಿ ಅದನ್ನು ನೆನಪು ಮಾಡಿದ್ದೇನೆ. ಇದೇ ಪ್ರಕಾರ ಮಂಡಲಪಂಚಾಯಿತಿಯಲ್ಲಿ ಆಗುತ್ತದೆ ಎಂದು ಹೇಳಿದೆ. ಇವತ್ತಿನದಿವಸ ತಾವು ಕಡ್ಡಾಯವಾಗಿ ಈ ಗ್ರಾಮಸಭೆಗಳನ್ನು ನಡೆಸಬೇಕು. ಪ್ರತಿಯೊಂದು ಗ್ರಾಮ ಸಭೆಗಳಲ್ಲೂ ಚರ್ಚೆ ಆಗಬೇಕು. ಇವತ್ತು ಉದ್ದೇಶ ಒಳ್ಳೆಯದು ಇದೆ. ಸಂಖ್ಯೆ ಬಹಳ ಕಡಿಮೆ ಇದೆ. ಆದ್ದರಿಂದ ಮೊದಲು ಇದ್ದ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಮತ್ತೆ ಗ್ರಾಮಸಭೆಯಲ್ಲಿ ಒಬ್ಬ ಜೂನಿಯರ್ ಎಂಜಿನಿಯರ್‌ರನ್ನು ಜಾಯಿಂಟ್ ಸೆಕ್ರೆಟರಿ ಎಂದು ಮಾಡಬೇಕು. ಏಕೆಂದರೆ, ಪ್ರತಿಯೊಂದು ಎಸ್ಟಿಮೇಟ್ ಏನು ಮಾಡುತ್ತಾರೋ ಅದರ ಅಪ್ರೂವ್ ಮಾಡಬೇಕು. ಇವತ್ತು ಎಸ್ಟಿಮೇಟ್ ಸರಿ ಇದೆಯೋ ಇಲ್ಲವೋ ಗೊತ್ತಾಗುವುದಿಲ್ಲ. ಮತ್ತೆ ಇದರಿಂದ ಫೈನಾನ್ಸಿಯಲ್ ಇಂಪ್ಲಿಕೇಷನ್ ಆಗುವುದಿಲ್ಲ. ಆಗ ಜೂನಿಯರ್ ಎಂಜಿನಿಯರ್ ಮೇಲೆ ಹೆಚ್ಚು ಜವಾಬ್ದಾರಿ ಇರುತ್ತದೆ. ಅದನ್ನು ಮಾಡಿದರೆ ಹೆಚ್ಚಿನ ಅನುಕೂಲವಾಗುತ್ತದೆ. ಮತ್ತೆ ಜಿಲ್ಲಾಪರಿಷತ್ತಿನಲ್ಲಿ ಒಬ್ಬ ಸೂಪರಿಂಟೆಂಡ್ ಎಂಜಿನಿಯರ್ ಗ್ರೇಡ್‌ನವರನ್ನು ಡೆಪ್ಯುಟಿ ಸೆಕ್ರೆಟರಿಯಾಗಿ ಇಡಬೇಕು. ಇದರ ಬಗ್ಗೆ ಆಕ್ಟ್‌ನಲ್ಲಿ ತಿದ್ದುಪಡಿ ತರಬೇಕು.

ಈ ಬಗ್ಗೆ ನಾನು ಸಜೆಸ್ಟ್ ಮಾಡಿದ್ದೆ. ಇದು ಏಕೆ ಬೇಕು ಎಂದರೆ ಟೆಕ್ನಿಕಲ್ ಸ್ಯಾಂಕ್ಷನ್ ಕೊಡುವಾಗ, ಆಡಳಿತಾತ್ಮಕ ಮಂಜೂರಾತಿ ಕೊಡುವಾಗ ಒಂದು ವರ್ಷ ಎರಡು ವರ್ಷ ತೊಂದರೆ ಆಗುತ್ತದೆ. ಇವತ್ತು ಮೈನರ್ ಇರಿಗೇಷನ್ ವಿಚಾರ ಬಂದಾಗ ಸಿ. ಇ. ಮೈನರ್ ಇರಿಗೇಷನ್ ಹತ್ತಿರ ಹೋಗಬೇಕು. 2 ಲಕ್ಷಕ್ಕಿಂತ ಹೆಚ್ಚು ಇದ್ದರೆ ಅಲ್ಲಿಗೆ ಹೋಗಬೇಕು. ಮತ್ತೆ ರೋಡ್ಸ್ ವಿಚಾರ ಬಂದರೆ ಜಿಲ್ಲಾ ಪರಿಷತ್ತಿಗೆ ಹೋಗಬೇಕು. ವಾಟರ್ ಸಪ್ಲೈ ವಿಚಾರ ಬಂದಾಗ ಪಿಹೆಚ್‌ಸಿ ಎಂಜಿನಿಯರ್ ಹತ್ತಿರ ಹೋಗಬೇಕು. ಹೀಗಾಗಿ ಇವತ್ತಿನ ದಿವಸ ಅಲ್ಲಿ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುವುದಕ್ಕೆ ಬಹಳ ತೊಂದರೆಯಾಗುತ್ತದೆ. ಅಲ್ಲಿಯೇ ಸೂಪರಿಂಟೆಂಡೆಂಟ್ ಎಂಜಿನಿಯರ್ ಗ್ರೇಡ್‌ನವರು ಇದ್ದರೆ ಒಳ್ಳೆಯದು ಆಗುತ್ತದೆ. ಇವತ್ತು ಅಲ್ಲಿ ಡೆಪ್ಯೂಟಿ ಸೆಕ್ರೆಟರಿ ಗ್ರೇಡ್‌ನವರು 3 ಜನ ಇದ್ದಾರೆ. ಅವರಲ್ಲಿ ಒಬ್ಬರನ್ನು ಸೂಪರಿಂಟೆಂಡೆಂಟ್ ಎಂಜಿನಿಯರ್ ಗ್ರೇಡ್‌ನವರನ್ನು ಹಾಕಿ. ಮತ್ತೆ ಚುನಾವಣೆಯಲ್ಲಿ ಎಂ.ಎಲ್.ಎ.ಗಳು ಏಕೆ ನಿಲ್ಲಬಾರದು? ಎಂ.ಎಲ್.ಎ.ಗಳು ಚುನಾಯಿತ ಪ್ರತಿನಿಧಿಗಳಲ್ಲವಾದ್ದರಿಂದ ಛೇರ್ಮನ್ ಮಾಡುವುದಕ್ಕೆ ಬರುವುದಿಲ್ಲ ಎಂದು ಹೇಳಿದರು. ಅದನ್ನು ಒಪ್ಪುತ್ತೇನೆ. ಆದರೆ ಜಿಲ್ಲಾಪರಿಷತ್ ಚುನಾವಣೆಗೆ ಎಂಎಲ್‌ಎ ಏಕೆ ಕಾಂಟೆಸ್ಟ್ ಮಾಡಬಾರದು? ಎಂಎಲ್‌ಎಗಳಿಗೆ ಬಾರ್ ಏಕೆ ಮಾಡುತ್ತೀರಿ? ಇವತ್ತು ನಾಮಿನೇಷನ್ ಬೇಡ. ಎಲೆಕ್ಷನ್‌ನಲ್ಲಿ ನಿಂತು ಆರಿಸಿಬರುತ್ತೇನೆಂದರೆ , ನೀವು ಏಕೆ ಬಾರ್ ಮಾಡುತ್ತೀರಿ? ಆದ ಕಾರಣ, ಎಂಎಲ್‌ಎ, ಎಂಎಲ್‌ಸಿ, ಎಂಪಿ ಯಾರೇ ಇರಬಹುದು ಅವರೂ ಸಹಿತ ಜಿಲ್ಲಾಪರಿಷತ್‌ನೊಳಗೆ ನಿಂತು ಅವರು ಅಧ್ಯಕ್ಷರು ಮತ್ತು ಉಪಾಧ್ಯಕ್ಷರಾಗಿ ಆರಿಸಿ ಬರಲು ಅವರಿಗೆ ಬಾರ್ ಇಡಬಾರದೆಂದು ನಾನು ಸಲಹೆ ಕೊಡುತ್ತಿದ್ದೇನೆ. ಇನ್ನೊಂದು ಏನಾಗಿದೆ ಅಂದರೆ ಇವತ್ತಿನ ದಿವಸ ಪ್ರತಿಯೊಂದು ಅಪಾಯಿಂಟ್‌ಮೆಂಟ್ ಮಾಡುವುದನ್ನು ಸರ್ಕಾರ ತೆಗೆದುಕೊಂಡಿದೆ. ಎಲ್ಲಾ ಅಧಿಕಾರ ಸರ್ಕಾರಕ್ಕೆ ಹೋಗಿದೆ. ಜಿಲ್ಲಾಪರಿಷತ್‌ನವರು ಬಿಡಿ, ಎಲ್ಲಾ ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯಿತಿಗಳಲ್ಲಿನೇರವಾಗಿ ಹಸ್ತ ಕ್ಷೇಪ ಮಾಡಬೇಡಿ. ಇವತ್ತು ಅಡ್ಮಿನಿಸ್ಟ್ರೇಟರ್ ಇಟ್ಟಿದ್ದೀರಿ. ಒಬ್ಬನನ್ನು ತೆಗೆಯಬೇಕಾದರೆ, ಯಾವುದೇ ಮಂಡಲ ಪಂಚಾಯಿತಿಯನ್ನು ಸೂಪರ್‌ಸೀಡ್ ಮಾಡಬೇಕಾದರೆ ಮೊದಲು ಡಿವಿಜನಲ್ ಕಮಿಷನ್‌ರವರಿಗೆ ಅಧಿಕಾರವಿತ್ತು. ಈಗ ಅದನ್ನು ಸರ್ಕಾರಕ್ಕೆ ತಂದಿದ್ದಾರೆ. ಇವೆಲ್ಲ ಏಕೆ ಮಾಡುತ್ತೀರಿ? ಮೊದಲು ಇದ್ದ ಪ್ರಕಾರವೇ ಇಡಿ. ಹಾಗೆ ಇದ್ದರೆ ಏನಾಗುತ್ತದೆಂದರೆ ಯಾವುದೇ ಒಂದು ಪ್ರಾಬ್ಲಮ್ ಬರುವುದಿಲ್ಲ. ಡಿವಿಜನಲ್ ಕಮಿಷನ್‌ರವರಿಗೆ ತಾವು ಪವರ್ಸ್ ಕೊಟ್ಟರೆ ಏನೂ ಆಗುವುದಿಲ್ಲ.

ಶ್ರೀ ಎಂ. ವೈ. ಘೋರ್ಪಡೆ : ನಾವು ಹಾಗೆಯೇ ಮಾಡಿದ್ದೇವೆ. ಮಂಡಲ ಪಂಚಾಯಿತಿಯ ಮಟ್ಟದಲ್ಲಿ ನೋಡಬೇಕಾದರೆ ಯಾರು ನೋಡಬೇಕು? ಎಕ್ಸಿಕ್ಯುಟೀವ್ ಆಫೀಸರ್ ಅಂದರೆ ಅವರು ಯಾರೆಂದು ಹೇಳಿ. ಮಂಡಲ ಮಟ್ಟದಲ್ಲಿ ಇನ್ಸ್‌ಪೆಕ್ಟ್ ಮಾಡಬಹುದೆಂದು ಹೇಳಿದ್ದಾರೆ. ತಾಲ್ಲೂಕು ಮಟ್ಟದಲ್ಲಿ ಇನ್ಸ್‌ಪೆಕ್ಟ್ ಮಾಡಬೇಕಾದರೆ ಯಾರಾದರೂ ಚೀಫ್ ಎಕ್ಸಿಕ್ಯುಟೀವ್ ಆಫೀಸರ್ ಜಿಲ್ಲಾ ಮಟ್ಟದಲ್ಲಿ ಯಾರಿದ್ದಾರೆ ಅವರು ಮಾಡಬೇಕೆಂದು ಇದೆ. ಜಿಲ್ಲಾಮಟ್ಟದಲ್ಲಿ ಇನ್ಸ್‌ಪೆಕ್ಟ್ ಮಾಡಬೇಕಾದರೆ ಯಾರು ಅವರಿಗಿಂತ ಮೇಲ್ಮಟ್ಟದಲ್ಲಿರುತ್ತಾರೆ ಅವರು ಮಾಡಬಹುದು. ಅದಕ್ಕೋಸ್ಕರ ಡಿವಿಜನಲ್ ಕಮಿಷನರ್, ಆರ್‌ಡಿಪಿಆರ್, ಸೆಕ್ರೆಟರಿ ಎಂದು ಹೇಳಿದ್ದೇವೆ. ಅವರು ಆಫೀಸ್ ಇನ್ಸ್‌ಪೆಕ್ಟ್ ಮಾಡಬೇಕು. ಕಂಪ್ಲೈಂಟ್ ಇದ್ದರೆ ಆಗ ಸ್ವಲ್ಪ ವ್ಯತ್ಯಾಸವಿದೆ. ಕಂಪ್ಲೈಂಟ್ ಇದ್ದರೆ ಗ್ರಾಮೀಣ ಮಟ್ಟದಲ್ಲಿ ಚೀಫ್ ಎಕ್ಸಿಕ್ಯುಟೀವ್ ಆಫೀಸರ್, ಜಿಲ್ಲಾ ಪಂಚಾಯಿತಿಯಲ್ಲಿ ಮೇಲ್ಮಟ್ಟದ ಅಧಿಕಾರಿಗಳು ಇನ್ಸ್‌ಪೆಕ್ಟ್ ಮಾಡಬಹುದೆಂದು ಇದೆ. ಏಕೆಂದರೆ ಕಂಪ್ಲೈಂಟ್ ಇರುತ್ತದೆ. ತಾಲ್ಲೂಕು ಪಂಚಾಯಿತಿಯಲ್ಲಿ ಮಾಡಬೇಕೆಂದು ಇಟ್ಟಿಲ್ಲ. The Chief Executive Officer to go and inspect for Grama panchayat level.

ತಾಲ್ಲೂಕು ಪಂಚಾಯಿತಿಯಲ್ಲಿ ಏನಾದರೂ ಕಂಪ್ಲೈಂಟ್ ಇದ್ದರೆ ಡಿವಿಜನಲ್ ಕಮಿಷನರ್ ಎಂದು ಹೇಳಿದ್ದೇವೆ. ಈ ರೀತಿ ರೊಟೀನ್ ಇನ್ಸ್‌ಪೆಕ್ಷನ್ ಹೈಯರ್ ಲೆವೆಲ್‌ನಲ್ಲಿ. ಇದು ಅಫಿಷಿಯಲ್ ಲೆವಲ್ ಇನ್ಸ್‌ಪೆಕ್ಷನ್ ಅಷ್ಟೇ. ಅಫಿಷಿಯಲ್ ಲೆವಲ್ ಇನ್ಸ್‌ಪೆಕ್ಷನ್, ರೋಟಿನ್ ಇನ್ಸ್‌ಪೆಕ್ಷನ್ ಇದೆ ; ಕಂಪ್ಲೇಂಟಿನ ಆಧಾರದ ಮೇಲೆ ಇನ್ಸ್‌ಪೆಕ್ಷನ್ ಮಾಡಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೇವೆ. ಟೆಕ್ನಿಕಲ್ ಇನ್ಸ್‌ಪೆಕ್ಷನ್ ಅಂತ ಬೇರೆ ಇಟ್ಟಿದ್ದೇವೆ. ಇವತ್ತು ಜಿಲ್ಲಾ ಮಟ್ಟದಲ್ಲಿನ ಯಾವ ಕೆಲಸವಾದರೂ ಚೀಫ್ ಇಂಜಿನಿಯರ್ ಸೂಪರ್ ಇಂಟೆಂಡಿಂಗ್ ಇಂಜಿನಿಯರ್‌ಗಳಿಗೆ ಜವಾಬ್ದಾರಿಯನ್ನು ; ವಹಿಸುತ್ತಾ ಇಲ್ಲ. ನಾವು ಕೊಟ್ಟು ಬಿಟ್ಟಿದ್ದೇವೆ. ನಮ್ಮ ಜವಾಬ್ದಾರಿಯಲ್ಲ ಎಂದು ಹೇಳುತ್ತಾರೆ. That is not the correct position. ಟೆಕ್ನಿಕಲ್ ರೆಸ್ಪಾನ್ಸಿಬಲಿಟಿ ಏನಿದೆ ಅದನ್ನು ಆಗಾಗ ಹೋಗಿ ಇನ್ಸ್‌ಸ್ಪೈರ್ ಮಾಡಿ ಟೆಕ್ನಿಕಲ್ ದೃಷ್ಟಿಯಿಂದ, ಇನ್ಸ್‌ಪೆಕ್ಷನ್ ಮಾಡತಕ್ಕದ್ದು ಈವೊತ್ತು ನಡೆಯುತ್ತಿಲ್ಲ. ಅದಕ್ಕೂ ಅವಕಾಶ ಮಾಡಿಕೊಟ್ಟಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ : ಇವತ್ತು ತಾವು ಸಿಂಪಲ್ ಮೆಜಾರಿಟಿಯಿಂದ ತೆಗೆಯಬೇಕೆಂದು ಹೇಳಿದ್ದೀರಿ. ಅದು ಸರಿಯಾಗುವುದಿಲ್ಲ. ತಾವು ಗ್ರಾಮಪಂಚಾಯಿತಿಗೆ ಮೂರನೆಯ ಎರಡು ಭಾಗ ಇಟ್ಟಿದ್ದೀರಿ. ಆದರೆ ಅದನ್ನು ತಾಲ್ಲೂಕು ಪಂಚಾಯಿತಿಯಲ್ಲಿ ಸಿಂಪಲ್ ಮೆಜಾರಿಟಿ ಇಟ್ಟಿದ್ದೀರಿ. ದಯಮಾಡಿ ಸಿಂಪಲ್ ಮೆಜಾರಿಟಿ ಇಡಬೇಡಿ. ದಯಮಾಡಿ ಮೊದಲು ಇದ್ದಹಾಗೆ ಮೂರನೇ ಎರಡರಷ್ಟು ಮೆಜಾರಿಟಿ ಇಡಿ. ಆ ಕಾರಣ ಅದಕ್ಕೆ ತಿದ್ದುಪಡಿ ತರಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೈ. ಘೋರ್ಪಡೆ : ಹಿಂದೆ ನಾನು ವೀರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ನಾನು ಗ್ರಾಮೀಣಾಭಿವೃದ್ಧಿ ಸಚಿವನಾಗಿದ್ದಾಗ ಎಷ್ಟು ಸಲ ಇಲ್ಲಿ ಗಲಾಟೆಯಾಗಲಿಲ್ಲ ಇದೇ ವಿಷಯದ ಮೇಲೆ? ವಾದ ಏನಿತ್ತು ಅಂದರೆ ಜಿಲ್ಲಾಪರಿಷತ್‌ನ ಅಧ್ಯಕ್ಷರು ಮೆಜಾರಿಟಿಯನ್ನು ಕಳೆದುಕೊಂಡರೆ ಆಗ ಜಿಲ್ಲಾ ಪರಿಷತ್‌ನ್ನು ನಡೆಸುವುದೇ ಕಷ್ಟವಾಗಿತ್ತು ಏಕೆಂದರೆ the majority is against him ಅಂತ ಹೇಳಿ. ಈ ವಾದವನ್ನು ಮಂಡಿಸಿ ಮೆಜಾರಿಟಿ ಹೋದರೆ ಮೆಜಾರಿಟಿ ಪ್ರಕಾರ ಅವರನ್ನು ತೆಗೆಯುವುದಕ್ಕೆ ಆಸ್ಪದ ಮಾಡಿಕೊಡಬೇಕು ಅಂತ ಹೇಳಿ ಬಹಳಷ್ಟು ಜನ ಆ ಕಡೆಯವರು, ಈ ಕಡೆಯವರು ಒತ್ತಾಯ ಮಾಡಿದರು. ಅದಕ್ಕೋಸ್ಕರ ನಾವು ಮೆಜಾರಿಟಿಯಿಂದ ಅವರನ್ನು ತೆಗೆಯುವುದಕ್ಕೆ ಈ ಬಿಲ್ಲಿನಲ್ಲಿ ಒಪ್ಪಿದ್ದೇವೆ. ಗ್ರಾಮಮಟ್ಟದಲ್ಲಿ ಒಪ್ಪಿಲ್ಲ. ಅಲ್ಲಿ ಮೂರನೆಯ ಎರಡು ಭಾಗ ಇರಲಿಯೆಂದು ಇಟ್ಟಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ : ಗ್ರಾಮಪಂಚಾಯಿತಿಗೆ ಏಕೆ ಬೇಡ?

ಶ್ರೀ ಎಂ. ವೈ. ಘೋರ್ಪಡೆ : ಪ್ರತಿದಿನ ಚೇಂಜ್ ಮಾಡಬಾರದು ಸ್ಟಬಿಲಿಟಿ ಇರಲಿಯೆಂದು ಹಾಗೆ ಮಾಡಿದ್ದೇವೆ.

ಶ್ರೀ ಎಸ್. ಹೆಚ್. ಕೌಜಲಗಿ : ಜಿಲ್ಲಾ ಮಟ್ಟದಲ್ಲಿ ಇದೇ ಪ್ರಕಾರ ಬರುತ್ತದೆ. ಆದಕಾರಣ ಮೊದಲು ಇದ್ದಂತೆ ತಾವು ಇಡಬೇಕೆಂದು ನನ್ನ ಸಲಹೆ. ನನ್ನ ಇನ್ನೊಂದು ಸಲಹೆ ಎಂದರೆ ಆ ಮೆಂಬರ್‌ಗೆ 20 ರೂಪಾಯಿ ಸಿಟ್ಟಿಂಗ್‌ಫೀ ಎಂದು ಕೊಡುತ್ತೀರಿ. ಈಗಿನ ಕಾಲಕ್ಕೆ ಅದು ಕಡಿಮೆಯಾಗುತ್ತದೆ. ಮಿನಿಮಮ್ 50 ರೂಪಾಯಿ ಇಲ್ಲ ; 100 ರೂಪಾಯಿ ಅಂತ ಇಡಬೇಕು. ಏಕೆಂದರೆ ಇದು ಹಾನರರಿಯಂ ಎಂದು ಕೊಡುವಾಗ ನಾವು ಅದಕ್ಕೆ ಗೌರವ ಕೊಡಬೇಕು. ಆದ್ದರಿಂದ ಈ 20 ರೂಪಾಯಿಯನ್ನು ತೆಗೆದು ಮಿನಿಮಮ್ 50 ರೂಪಾಯಿ ಅಲ್ಲ,

100 ರೂಪಾಯಿಯಾಗಿ ಇಡಬೇಕೆಂದು ನನ್ನ ಸಲಹೆ ಕೊಡುತ್ತೇನೆ. ಆದಕಾರಣ ಯಾವುದನ್ನು ಇಲ್ಲಿ ತಂದಿದ್ದೀರಿ, ಅದನ್ನು ಇನ್ನೂ ಸವಿಸ್ತಾರವಾಗಿ ತರಬೇಕಿತ್ತು. ಏಕೆಂದರೆ, ನೇರ ಚುನಾವಣೆ ಅಂತ ಇಲ್ಲ. ಅದು ನಮಗೇ ಬಿಟ್ಟಿದ್ದು ಎಂದು ಹೇಳುತ್ತೀರಿ. ಆದ ಕಾರಣ ಸರ್ಕಾರದವರು ಇವತ್ತು ನೇರ ಚುನಾವಣೆ ಮಾಡಬೇಕು, ಇವತ್ತು ಗ್ರಾಮಸಭೆ ಅಧ್ಯಕ್ಷರನ್ನು ಮಾಡುತ್ತೀರೋ ಅಥವಾ ಕರ್ನಾಟಕ ರಾಜ್ಯ ಮಟ್ಟದಲ್ಲಿ ಮಾಡುತ್ತೀರೊ ಎಂಬುದನ್ನು ಹೇಳಲಿಲ್ಲ. ಆದಕಾರಣ ಇವತ್ತಿನ ದಿವಸ ಸರ್ಕಾರದವರು ನಿರ್ದಿಷ್ಟವಾದ ಒಂದು ದೃಢ ನಿರ್ಧಾರದಿಂದ ಈ ಬಿಲ್ಲನ್ನು ತಂದಿಲ್ಲ. ಆದ್ದರಿಂದ, ಸಂಪೂರ್ಣವಾಗಿ ಒಂದು ಕ್ರೋಢೀಕೃತವಾದ ಬಿಲ್ಲನ್ನು ತರಬೇಕೆಂದು ಕೇಳಿಕೊಂಡು, ಈ ಬಿಲ್ಲನ್ನು ವಿರೋಧಿಸುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

* ಶ್ರೀ ವಿನಯಕುಮಾರ್ ಸೊರಕೆ (ಪುತ್ತೂರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರು ಇಡೀ ರಾಷ್ಟ್ರಕ್ಕೆ ಐತಿಹಾಸಿಕವಾದಂಥ, ಚಾರಿತ್ರಿಕವಾದಂಥ ವಿಧೇಯಕವನ್ನು ಇಲ್ಲಿ ಮಂಡನೆ ಮಾಡಿದ್ದಾರೆ. ಈ ಹಿಂದೆ ಕೂಡ ಕರ್ನಾಟಕದಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಮಾಡಬೇಕೆಂದು ಕಳೆದ ಅಧಿವೇಶನದಲ್ಲಿ ನಾವು, ಆ ಕಡೆಯಲ್ಲಿ ಇದ್ದಂಥ ಸಂದರ್ಭದಲ್ಲಿ ಕೂಡ ಪಂಚಾಯತ್ ರಾಜ್ ವಿಧೇಯಕ ಮಂಡನೆಯಾಗಿತ್ತು. ನಾವು ಏನೋ ಕರ್ನಾಟಕದಲ್ಲಿ ಹೊಸ ಒಂದು ಕ್ರಾಂತಿಕಾರಕವಾದಂಥ ಪಂಚಾಯತ್‌ರಾಜ್ ವಿಧೇಯಕವನ್ನು ಹಿಂದಿನ ಸರ್ಕಾರದವರು ಮಂಡನೆ ಮಾಡುತ್ತಿದ್ದಾರೆ. ನಾವಾದರೂ ವಿರೋಧ ಪಕ್ಷದಲ್ಲಿ ಕುಳಿತಿದ್ದರೂ ಕೂಡ, ಸಂಪೂರ್ಣವಾಗಿ ಈ ವಿಧೇಯಕಕ್ಕೆ ತೀರ್ಮಾನ ಕೊಟ್ಟಿದ್ದೆವು. ಆವಾಗ ನಾವು ಇಲ್ಲಿ ಪ್ರಸ್ತಾಪಮಾಡಿದ್ದೆವು. ಈ ವಿಧೇಯಕದಲ್ಲಿ ಹಲವಾರು ರೀತಿಯ ತೊಂದರೆಗಳು ಇರಬಹುದು, ಅದನ್ನು ಸರಿಪಡಿಸುವ ರೀತಿಯಲ್ಲಿ ತಿದ್ದುಪಡಿ ತರಬೇಕು ಎನ್ನುವ ರೀತಿಯ ವಿಚಾರದ ಮೇಲೆ ಅದನ್ನು ತೀರ್ಮಾನ ಮಾಡಿಕೊಡುವಂಥ ಅವಕಾಶ ಈವತ್ತು ಯಾವ ರೀತಿಯ ಪರಿಣಾಮ ಆಗಿತ್ತು. ಹಿಂದೆ ಬಂದಂಥ ಪಂಚಾಯತ್ ರಾಜ್ ಬಿಲ್ಲಿನ ಮಟ್ಟಿಗೆ ಆಗಿದೆ ಎಂದು ಹೇಳಿ ನಾವು ವಿಮರ್ಶೆ ಮಾಡಿ ನೋಡಿದರೆ, ಸಾಕಷ್ಟು ಪ್ರಚಾರವನ್ನು ಹಿಂದಿನ ಸರ್ಕಾರ ನಡೆದುಕೊಳ್ಳುವಂಥ ರೀತಿಯಲ್ಲಿ ವ್ಯವಸ್ಥೆ ಆಗಿತ್ತು. ಆದರೆ ಇವತ್ತು ನಮ್ಮ ಆಗಿನ ಸರ್ಕಾರದಲ್ಲಿರದ್ದಂಥ ಮಿತ್ರರು 139 ಜನ ಇದ್ದವರು, ಇವತ್ತು 24 ಮಂದಿಯಾಗಿ ಆ ಕಡೆ ವಿರೋಧ ಪಕ್ಷದಲ್ಲಿ ಕುಳಿತಿದ್ದಾರೆ. ಹಿಂದೆ ತಂದಂಥ ವಿಧೇಯಕದಲ್ಲಿದ್ದಂಥ ಎಡರುತೊಡರುಗಳು ಇದಕ್ಕೆ ಕಾರಣವಾಗಿರಬಹುದು ಎಂದು ಹೇಳಿದರೆ ಏನೂ ತಪ್ಪಿಲ್ಲ. ರಾಜ್ಯದಲ್ಲಿ ಒಬ್ಬರೇ ಇದ್ದ ಮುಖ್ಯಮಂತ್ರಿಗಳನ್ನು, ಜಿಲ್ಲಾ ಮಟ್ಟದಲ್ಲಿ ಪ್ರತಿಯೊಂದು ಕಡೆಗೂ ಮಾಡಿ 22 ಮುಖ್ಯಮಂತ್ರಿಗಳನ್ನು ಮಾಡುವ ಕೆಲಸಕಾರ್ಯ ಹಿಂದಿನ ವಿಧೇಯಕದಲ್ಲಿ ಆಗಿತ್ತು. ರಾಷ್ಟ್ರದಲ್ಲಿ ಒಬ್ಬರೇ ಪ್ರಧಾನಿ ಇದ್ದರೆ ಗ್ರಾಮಗ್ರಾಮಗಳಲ್ಲಿ ಪ್ರಧಾನರನ್ನು ಮಾಡುವ ವ್ಯವಸ್ಥೆ ಹಿಂದಿನ ವಿಧೇಯಕದಲ್ಲಿ ಆಗಿದೆ. ನಮ್ಮ ಪ್ರಧಾನಮಂತ್ರಿಗಳಾಗಿದ್ದಂಥ ದಿವಂಗತ ರಾಜೀವಗಾಂಧಿಯವರು ಈ ರಾಷ್ಟ್ರದಲ್ಲಿ ಒಂದು ಸಮಗ್ರವಾದಂಥ ವಿಧೇಯಕವನ್ನು ತರಬೇಕೆಂದು ಹೇಳಿ, ಇದು ವಿಕೇಂದ್ರೀಕೃತ ಎಂದು ಹೆಸರಿಗಷ್ಟೇ ಇರಕೂಡದು. ಅವರ ಪ್ರತಿಯೊಂದು ಅಧಿಕಾರ ಕೂಡ ಜನಸಾಮಾನ್ಯರಿಗೆ ಮುಟ್ಟುವಂತಹ ವ್ಯವಸ್ಥೆಯಾಗಬೇಕೆಂದು ಹೇಳಿ. ಆ ದೃಷ್ಟಿಯಿಂದ ಕರ್ನಾಟಕದಲ್ಲಾಗಲೀ ಅಥವಾ ಬೇರೆಬೇರೆ ಕಡೆಗಳಲ್ಲಿ ವಿಚಾರ ಸಂಕಿರಣಗಳು ನಡೆದಿದೆ. ಹಲವಾರು ವಿಚಾರಗಳ ಬಗ್ಗೆ ಚರ್ಚೆ ನಡೆಸಿ ತಜ್ಞರ ಮುಖಾಂತರ ಕೂಡ ಪರಿಶೀಲನೆ ಮಾಡಿ ಕೆಳಹಂತದಲ್ಲಿ ಅವರು ಅಧಿಕಾರದಲ್ಲಿರುವಂಥ ಸಂದರ್ಭದಲ್ಲಿ ಆ ಮಸೂದೆಯನ್ನು ತರುವಂಥ ಪ್ರಯತ್ನ ಮಾಡಿದರು.

ಇವತ್ತು ಪಾರ್ಲಿಮೆಂಟ್‌ನಲ್ಲಿ ಆ ಮಸೂದೆ ಪಾಸಾದರೂ ಕೂಡ ರಾಜ್ಯ ಸಭೆಯಲ್ಲಿ ಅದನ್ನು ತಿರಸ್ಕೃತ ಮಾಡುವುದರಲ್ಲಿ ನಮ್ಮ ವಿರೋಧಪಕ್ಷದವರು, ಅವರ ಪಕ್ಷದವರು ಕೂಡ ಅದಕ್ಕೆ ಶಾಮೀಲು ಎಂದು ಹೇಳಿದರೆ ತಪ್ಪಾಗುವುದಿಲ್ಲ. ವಿಕೇಂದ್ರೀಕರಣದ ಬಗ್ಗೆ ತಾವು 6TH

ಮಾತನಾಡುತ್ತೀರಿ. ಆದರೆ ಮಸೂದೆ ತರುವಂತಹ ಸಂದರ್ಭದಲ್ಲಿ ಆವತ್ತು ರಾಜ್ಯ ಸಭೆಯಲ್ಲಿ ಅದನ್ನು ತಿರಸ್ಕಾರ ಮಾಡಿದ್ದೀರಿ. ಇವತ್ತು ಇಲ್ಲಿ ಮಾನ್ಯ ಗ್ರಾಮೀಣಾಭಿವೃದ್ಧಿ , ಸಚಿವರು ಮಂಡನೆ ಮಾಡುವಂತಹ ಸಂದರ್ಭದಲ್ಲಿ ಅದನ್ನು ಕೂಡ ಸರಿ ಇಲ್ಲ ಎನ್ನುವ ರೀತಿಯಲ್ಲಿ ಕೂಡ ತಾವು ಬಾಯ್‌ಕಾಟ್ ಮಾಡುವಂತಹ ವ್ಯವಸ್ಥೆಯನ್ನು ಕೂಡ ಮಾಡಿದ್ದೀರಿ ಅದರ ಮಟ್ಟಿಗೆ ಮಂಡನೆ ಮಾಡಿ ಕೂಡಲೇ ಅಲ್ಲಿಗೆ ಆ ಮಸೂದೆಯ ಮಟ್ಟಿಗೆ ಚರ್ಚೆನಡೆಯಲಿಕ್ಕೆ ಇದೆ. ಅದರ ಬಗ್ಗೆಯಾವ ರೀತಿ ತಿದ್ದುಪಡಿ ತರಬೇಕು ಎನ್ನುವ ಬಗ್ಗೆ ಸೂಚನೆ ಕೊಡಲಿಕ್ಕೆ ಇದೆ; ಅದಕ್ಕೋಸ್ಕರವಾಗಿ ನೇರವಾಗಿ ತಮ್ಮ ಎದುರಿನಲ್ಲಿ ನೇರವಾಗಿ ಮಂಡನೆ ಮಾಡಿದ್ದಾರೆ. ಆದರೆ ಇವತ್ತು ತಂದಂತಹ ಮಸೂದೆಯಲ್ಲಿ ಹೆಚ್ಚಿನಂಶ ರಾಜೀವ್‌ಗಾಂಧಿಯವರ ಇಚ್ಛೆ ಏನು ಇತ್ತು ರಾಜೀವ್‌ಗಾಂಧಿಯವರ ಕನಸ್ಸು ಏನು ಇತ್ತು ರಾಜೀವ್‌ಗಾಂಧಿಯವರು ಕ್ಷಣಿಕ ಕಾಲ ಅವರು ಪ್ರಧಾನ ಮಂತ್ರಿಯಾಗಿದ್ದರೂ ಕೂಡ ಇವತ್ತು ಹಲವಾರು ರೀತಿಯ ಕ್ರಾಂತಿಕಾರಕ ಒಂದು ಹೆಜ್ಜೆಯನ್ನು ಇಡುವಂತಹ ದೃಷ್ಟಿಯಲ್ಲಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಈ ರಾಷ್ಟ್ರ ಮುಂದೆ ಬರಬೇಕು ಪ್ರಗತಿಪರ ರಾಷ್ಟ್ರ ಆಗಬೇಕೆನ್ನುವುದರಲ್ಲಿ ಹಲವಾರು ರೀತಿಯ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಂದರು. ನ್ಯೂ ಎಜುಕೇಷನ್ ಪಾಲಿಸಿ ಮಟ್ಟಿಗೆ ಇರಬಹುದು. ಇವತ್ತು ಟೆಕ್ನಾಲಜಿ ಮಟ್ಟಿಗೆ ನಾವು ತೆಗೆದುಕೊಂಡರೆ ಅಥವಾ ಬರೀ ಟೆಲಿಫೋನ್ ಅನ್ನು ನಾವು ತೆಗೆದುಕೊಂಡರೆ ಸ್ಯಾಮ್‌ಪಿಟ್ರೋಡ್‌ವರನ್ನು ಇಲ್ಲಿ ಬರಮಾಡಿಸಿಕೊಂಡು ಇವತ್ತು ಸಿ ಡಾಟ್ ಎಕ್ಸ್‌ಚೇಂಜ್‌ನ್ನು ಪ್ರತಿಯೊಂದು ಗ್ರಾಮೀಣ ಪ್ರದೇಶದಲ್ಲೂ ಕೂಡ ಸ್ಥಾಪಿಸುವಂಥ ದಿಟ್ಟವಾದ ಒಂದು ಕ್ರಾಂತಿಕಾರಕವಾದ ಕಾರ್ಯಕ್ರಮವನ್ನು ಕೂಡ ತಂದಿದ್ದಾರೆ. ಯುವಕರಿಗೆ ಅಧಿಕಾರ ಕೊಡಬೇಕು ಯುವಕರು ಕೂಡ ಕರ್ತವ್ಯ ಜವಾಬ್ದಾರಿಯಿಂದ ಇರಬೇಕೆಂದು 18 ವರ್ಷದವರಿಗೆ ಮತದಾನ ಕೊಡುವಂತಹ ಹಕ್ಕು ಚಾರಿತ್ರಿಕವಾದ ನಿರ್ಣಯವನ್ನು ರಾಜೀವ್‌ಗಾಂಧಿಯವರು ತೆಗೆದುಕೊಂಡಿದ್ದಾರೆ. ಇವತ್ತು ಈ ರೀತಿಯಲ್ಲಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕೂಡ ಅಧಿಕಾರ ನೇರವಾಗಿ ಇವತ್ತು ಏನಾದರೂ ಜವಹರ್‌ರೋಜ್‌ಗಾರ್ ಯೋಜನೆಯಲ್ಲಿ ನೇರವಾಗಿ ಮಂಡಲ್ ಪಂಚಾಯತಿಗೆ ದುಡ್ಡು ಬರಬೇಕಾಗಿದ್ದರೆ ಚಾರಿತ್ರಿಕವಾದ ತೀರ್ಮಾನ ಒಂದು ಇವತ್ತು ಆಗಿದ್ದರೆ ದಿವಂಗತ ರಾಜೀವ್‌ಗಾಂಧೀಯವರ ಇಚ್ಛೆ ಪ್ರಕಾರ ಆಯಿತು. ಫ್ರತಿಯೊಂದು ಮಂಡಲಪಂಚಾಯತಿಗೂ ನೇರವಾಗಿ ಪತ್ರ ಬರೆಯುವುದರ ಮುಖಾಂತರ ಪ್ರತಿಯೊಂದು ಮಂಡಲ ಪಂಚಾಯತಿಗೆ ಇವತ್ತು ಕೇಂದ್ರ ಸರ್ಕಾರದ ಹಣ ಜವಹರ್‌ರೋಜ್‌ಗಾರ್‌ನ ಹಣ ನೇರವಾಗಿ ಮಂಡಲಕ್ಕೆ ಮುಟ್ಟುವಂತಹ ರೀತಿ ಆಗುವುದಕ್ಕೆ ಹಾಗೂ ಆ ಹಣ ಸೋರಿಕೆ ಆಗಲಿಕ್ಕೆ ಕೂಡದು. ಅದು ಸಂಪೂರ್ಣವಾಗಿ ಕೇಂದ್ರ ಸರ್ಕಾರದಿಂದ ಬಂದಂತಹ ಹಣ ನೇರವಾಗಿ ಅಭಿವೃದ್ಧಿ ಕಾರ್ಯಕ್ಕೆ ಮುಟ್ಟಬೇಕು ಸೋರಿಕೆ ಆಗಿ ಹೋಗಲಿಕ್ಕೆ ಕೂಡದು ಎನ್ನುವ ಉದ್ದೇಶಕ್ಕೋಸ್ಕರ ಆ ರೀತಿಯ ಕಾರ್ಯಕ್ರಮವನ್ನು ಹಾಕಿಕೊಂಡರು. ಇವತ್ತು ತ್ರೀ ಟೈರ್‌ಸಿಸ್ಟಂ ಇರಬೇಕು ಎನ್ನುವ ಉದ್ದೇಶಕ್ಕೋಸ್ಕರ ಮಂಡಲ್ ಪಂಚಾಯತ್ ಅದೇ ರೀತಿಯಾಗಿ ತಾಲ್ಲೂಕು ಪಂಚಾಯತ್ ಅದೇ ರೀತಿಯಾಗಿ ಜಿಲ್ಲಾ ಮಟ್ಟದಲ್ಲಿ ಈ ರೀತಿಯ ಒಂದು ಮಸೂದೆಯನ್ನು ತರುವಂತಹ ಪ್ರಯತ್ನವನ್ನು ಮಾಡಿದರು. ಅದನ್ನು ತಿರಸ್ಕೃತ ಮಾಡುವಂತಹ ಕಾರ್ಯಕ್ರಮ ಆಯಿತು. ಆದರೆ, ಪುನಃ ನಮ್ಮ ಸರ್ಕಾರ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಂತಹ ಸಂದರ್ಭದಲ್ಲಿ ಎಲ್ಲಾ ಪಕ್ಷಗಳ ಒಂದು ಜಾಯಿಂಟ್ ಸೆಲೆಕ್ಟ್ ಕಮಿಟಿ ಮಾಡಿಕೊಂಡು ಅವರ ಒಂದು ಮಾರ್ಗದರ್ಶನದ ಮೇರೆಗೆ ಹೊಸ ಮಸೂದೆಯನ್ನು ತರುವಂತಹ ಒಂದು ಪ್ರಯತ್ನ ನಡೆದಿದೆ. ಸಂವಿಧಾನದ 73ನೇ ವಿಧಿಗೆ ತಿದ್ದುಪಡಿ ತರುವಂತಹ ಒಂದು ಕಾರ್ಯಕ್ರಮ ನಡೆದಿದೆ. ಆ ಪ್ರಕಾರ ಇಡೀ ರಾಷ್ಟ್ರದಲ್ಲಿ ಇವತ್ತು ಹೊಸ ಒಂದು ವಿದೇಯಕವನ್ನು ತರುವಂತಹ ಕಾರ್ಯಕ್ರಮ ಆಗಿದೆ. ಗ್ರಾಮೀಣ ಅಭಿವೃದ್ಧಿ ಸಚಿವರಾದ ಶ್ರೀಮಾನ್ ಘೋರ್ಪಡೆಯವರು ನಮ್ಮ ರಾಷ್ಟ್ರ ಮಟ್ಟದಲ್ಲೇ ಇವತ್ತು ಒಂದು ಚರಿತ್ರೆಯನ್ನು ನಿರ್ಮಾಣ ಮಾಡಿದ್ದಾರೆಂದು ಹೇಳಿದರೆ ಅದು ನಮಗೆಲ್ಲರಿಗೂ ಗೌರವದ ವಿಚಾರ. ವಿಕೇಂದ್ರಿಕರಣದ ಮೂಲ ಉದ್ದೇಶ ಜನತೆಗೆ ಸೂಕ್ತ ಪ್ರತಿಫಲ ಮುಟ್ಟಬೇಕು ಎನ್ನುವ ಉದ್ದೇಶಕ್ಕೋಸ್ಕರ ಇವತ್ತು

15 ಸಾವಿರಕ್ಕೆ ಒಂದು ಮಂಡಲ ಮಾಡಿದ್ದೇವೆ. ಅದು ಪ್ರಾಕ್ಟಿಕಲ್ ಆಗಿ ಯಾವ ರೀತಿ ನಡೆಯುತ್ತದೆ ಎಂದು ಹೇಳಿ ನಮಗೆಲ್ಲರಿಗೂ ತಿಳಿದ ವಿಚಾರ. ಇವತ್ತು ಅಲ್ಲಿ ಯಾವ ರೀತಿ ಕೆಲಸಕಾರ್ಯ ನಡೆಯುತ್ತಿದೆ. ಮಂಡಲ ಪಂಚಾಯಿತಿ ಪ್ರಧಾನರಚುನಾವಣೆಯಲ್ಲಿ ಯಾವ ರೀತಿ ಮಾಲ್ ಪ್ರಾಕ್ಟೀಸ್ ಆಯಿತು ಎಷ್ಟು ಕುರಿಗಳು ಸತ್ತವು, ಎಷ್ಟು ಶರಾಬು ಹಂಚುವಂತಹ ವ್ಯವಸ್ಥೆ ಆಯಿತು, ತಮ್ಮ ಸರ್ಕಾರ ಇರುವಂತಹ ಕಾಲದಲ್ಲಿ ಯಾವ ರೀತಿಯ ಆಮಿಷ ಎಲ್ಲಾ ಮಾಡಿಕೊಂಡು ಪ್ರಧಾನದ ಚುನಾವಣೆ ಯಾವ ರೀತಿ ನಡೆಯಿತು ಅದೂ ಸಾಕಾಗದೆ ಪುನಃ ನಾಮಕರಣ ಮಾಡುವಂತಹ ಕಾರ್ಯಕ್ರಮವನ್ನು ಕೂಡ ತಾವು ಹಮ್ಮಿಕೊಂಡಿರಿ. ಅದನ್ನು ನಾವು ಇಲ್ಲಿ ಪ್ರಸ್ತಾಪ ಮಾಡಬೇಕಾಗಿಲ್ಲ. ಅದು ತಮಗೆಲ್ಲಾ ತಿಳಿದಂತಹ ವಿಚಾರ. ಇವತ್ತಿನ ಮಂಡಲ ಪಂಚಾಯಿತಿ ಮಟ್ಟಿಗೆ 5 ಸಾವಿರದಿಂದ 7 ಸಾವಿರ ಜನಸಂಖ್ಯೆ ಆಧಾರದ ಮೇಲೆ ಇವತ್ತು ಮಂಡಲ ಪಂಚಾಯಿತಿಯ ಎಷ್ಟು ಅಧಿಕಾರ ಚಲಾವಣೆ ಮಾಡಲಿಕ್ಕೆ ಕೆಳಹಂತದಲ್ಲಿ ಎಷ್ಟು ಜನಸಂಖ್ಯೆಗೆ ಆಧಾರ ಬೇಕು ಅದಕ್ಕೆ ಅನುಗುಣವಾಗಿ ಮಾಡುವಂತಹ ಮಸೂದೆಯನ್ನು ಮಾನ್ಯ ಸಚಿವರು ತಂದಿದ್ದಾರೆ. ಮಲೆನಾಡು ಪ್ರದೇಶದಲ್ಲಿ ಎರಡೂವರೆ ಸಾವಿರದಿಂದ ಐದು ಸಾವಿರದವರೆಗೂ ಇವತ್ತು ಜನಸಂಖ್ಯೆ ಮೇಲೆ ಮಾಡುವಂತಹ ವ್ಯವಸ್ಥೆ, ಇದರಲ್ಲಿ ಒಂದು ಚರ್ಚಾಸ್ಪದವಾದ ಪ್ರಶ್ನೆ ಏನೆಂದರೆ, ಡೈರೆಕ್ಟ್ ಚುನಾವಣೆ ಬೇಕೇ ಅಥವಾ ಇನ್ ಡೈರೆಕ್ಟ್ ಚುನಾವಣೆ ಬೇಕೇ ಎನ್ನುವುದು. ಇವತ್ತು ಒಂದು ಒಳ್ಳೆಯ ವಿಚಾರ ಏನು ಎಂದು ಹೇಳಿದರೆ ಕಳೆದ ತಮ್ಮ ಸರ್ಕಾರ ಇರುವಂತಹ ಸಂದರ್ಭದಲ್ಲಿ ಮನೆ ಮನೆಗೆ ಎಂದು ಪಕ್ಷ ಮಾಡಿ ಇವತ್ತು ಪ್ರತಿದಿವಸ ಕೂಡ ಗಲಾಟೆ ಮಾಡುವಂತಹ ಕಾರ್ಯಕ್ರಮವನ್ನು ಮಂಡಲ ಪಂಚಾಯಿತಿ ಮಟ್ಟದಲ್ಲಿ ತಂದಿದ್ದೀರಿ. ಮಾನ್ಯ ಸಚಿವರು ಮಂಡನೆ ಮಾಡಿದಂತಹ ಬಿಲ್‌ನಲ್ಲಿ ಪಕ್ಷರಹಿತವಾಗಿ ಕೆಳಹಂತದ ಚುನಾವಣೆ ನಡೆಯುವಂತಹ ಸಂದರ್ಭದಲ್ಲಿ ಒಳ್ಳೆಯ ರೀತಿಯಲ್ಲಿ ಒಂದು ಆರೋಗ್ಯಕರವಾದಂತಹ ರೀತಿಯಲ್ಲಿ, ಚುನಾವಣೆ ನಡೆಯಬೇಕು ಎನ್ನುವ ಉದ್ದೇಶಕ್ಕೋಸ್ಕರ ಇಂಥ ತೀರ್ಮಾನವನ್ನು ತೆಗೆದುಹಾಕಿಕೊಂಡಿದ್ದಾರೆ ; ಇದು ನಾವೆಲ್ಲರೂ ಅಬಿನಂಧಿಸಬೇಕಾದಂತಹ ವಿಚಾರ. ಕೆಳಹಂತದಲ್ಲಿ ಪಕ್ಷ ಬೇಕಾಗಿಲ್ಲ ; ಅದೇ ದಿಸೆಯಲ್ಲಿ ಇವತ್ತು ಪ್ರಧಾನರ ಚುನಾವಣೆ ಡೈರೆಕ್ಟ್ ಆಗಿ ನಡೆಯಬೇಕೇ ಅಥವಾ ಇನ್‌ಡೈರೆಕ್ಟ್ ಆಗಿ ನಡೆಯಬೇಕೇ ಎನ್ನುವ ಪ್ರಶ್ನೆ. ತಮಗೆ ಗೊತ್ತಿದೆ ತಮಗೆ ಅನುಭವ ಇದೆ. ಮಂಡಲ ಪಂಚಾಯತಿ ಪ್ರಧಾನರ ಚುನಾವಣೆ ಆಗಬೇಕಾದರೆ ಇವತ್ತು ಯಾವ ರೀತಿ ನಡೆದಿದೆ ಅಂತ ಹೇಳಿ ತಮಗೆ ಗೊತ್ತಿದೆ. ಇದರಲ್ಲಿ ಏನು ಮಾಲ್‌ಪ್ರಾಕ್ಟೀಸ್ ನಡೆಯಿತು ಎಂಬುದು ನಮಗೆಲ್ಲಾ ಗೊತ್ತಿದೆ. ನಮ್ಮ ಹತ್ತಿರ ಆಂಟಿಡಿಫೆಕ್ಷನ್ ಬಿಲ್ ಕೂಡ ಇತ್ತು. ಆದರೂ ಕೂಡ ಹತೋಟಿಗೆ ಬರಲಿಲ್ಲ. ಮಂಡಲ ಪ್ರಧಾನ ಆಗಲಿಕ್ಕೆ ಯಾವ ರೀತಿ ಪ್ರಭಾವ ಬೀರಿದೆ ಎನ್ನುವುದನ್ನು ನಾನು ಇಲ್ಲಿ ಪ್ರಸ್ತಾಪ ಮಾಡಬೇಕಾಗಿಲ್ಲ. ಇವತ್ತು ರಾಜೀವ್‌ಗಾಂಧಿಯವರ ಇಚ್ಛೆ ಡೈರೆಕ್ಟ್ ಚುನಾವಣೆ ಮಂಡಲ ಪ್ರಧಾನರಿಗೆ ಆಗಬೇಕು ಎಂದು ಇತ್ತು. ನಾನೂ ಕೂಡ ಹೇಳುತ್ತಿರುವುದು ಮಾನ್ಯ ಸಚಿವರ, ಹತ್ತಿರ ರಾಜೀವ್ ಗಾಂಧಿಯವರ ಇಚ್ಛೆ ಏನು ಇತ್ತು, ನಮ್ಮ ನಾಯಕರ ಇಚ್ಛೆ ಏನು ಇತ್ತು, ಅದೇ ರೀತಿಯಾಗಿ ಮಂಡಲ ಪಂಚಾಯತ್‌ಗೆ ಡೈರೆಕ್ಟ್ ಮಾಡುವಂತಹ ಚುನಾವಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕು. ಇವತ್ತು ಮೆಂಬರ್ಸ್ ಮುಖಾಂತರ ಆಯ್ಕೆಯಾಗುತ್ತಿದ್ದರೆ ಬರೀ ಅವರ ಕ್ಷೇತ್ರಕ್ಕೆ ಸೀಮಿತವಾಗಿ ಅಭಿವೃದ್ಧಿ ಕಾರ್ಯಕ್ರಮ ಆಗುತ್ತದೆಯೇ ವಿನಹ ಎಲ್ಲಾ ಕಡೆಯ ಅಭಿವೃದ್ಧಿ ಕಾರ್ಯಕ್ರಮಗಳು ಸ್ವಲ್ಪಮಟ್ಟಿಗೆ ಕುಂಠಿತವಾಗುತ್ತವೆ.

ಇವತ್ತು ತಾವು ಗ್ರಾಮಸಭೆ ಮಟ್ಟಿಗೆ ಹೆಚ್ಚು ಒತ್ತು ಕೊಡುತ್ತಿದ್ದೀರಿ. ಗ್ರಾಮಸಭೆಯ ಮಟ್ಟಿಗೆ ಹೆಚ್ಚು ಒತ್ತು ಕೊಡಬೇಕಾಗಿದ್ದರೆ ಆ ಜನರಿಗೂ ಕೂಡ ಅವರದ್ದೇ ಆದ ಪ್ರಿವಿಲೇಜ್ ಬೇಕು. ಇವತ್ತು ನಮ್ಮ ಮುಖಾಂತರ ಪ್ರಧಾನ ಆಗಿದ್ದರೆ, ಅವರು ಒಂದು ಕ್ಷೇತ್ರಕ್ಕೆ ಮಾತ್ರ ಪ್ರಧಾನ ಅಲ್ಲ. ಇಡೀ ಮಂಡಲಕ್ಕೆ ನಾವು ಕೂಡ ಮತ ಕೊಟ್ಟು ಪ್ರಧಾನನನ್ನು ಆಯ್ಕೆ ಮಾಡಿದ್ದೇವೆ.

ಒಂದು ವೇಳೆ ಆ ಪ್ರಧಾನ ಸರಿಯಾಗಿ ನಡೆದುಕೊಳ್ಳದಿದ್ದರೆ ಅವನನ್ನು ವಾಪಸ್ಸ್ ತೆಗೆದುಕೊಳ್ಳುವಂತಹ ಒಂದು ಅಧಿಕಾರ ಕೂಡ ನಮ್ಮ ಹತ್ತಿರ ಇದೆ ಎನ್ನುವ ಪ್ರಿವಿಲೇಜ್ ಅವರ ಹತ್ತಿರ ಇದ್ದರೆ ಗ್ರಾಮಸಭೆಗೆ ಹೆಚ್ಚಿಗೆ ಒತ್ತು ಬರುತ್ತದೆ. ಗ್ರಾಮಸಭೆ ಯಾವ ರೀತಿ ನಡೆದಿದೆ ಎಂದು ನಾನು ಹೇಳಬೇಕಾಗಿಲ್ಲ. ದಸ್ಕತ್ತು ಬೇರೆ ; ಎರಡೂ ಕೈ ಹೆಬ್ಬೆಟ್ಟು ಬೇರೆ ; ಎರಡೂ ಕಾಲಿನ ಹೆಬ್ಬೆಟ್ಟು ಸೇರಿಸಿ ಗ್ರಾಮಸಭೆ ಆಗಿದೆ. ಕೆಲವು ಕಡೆಗಳಲ್ಲಿ ಬಂದಂತಹ ವ್ಯಕ್ತಿಗಳ ಸಂಪೂರ್ಣ ಕೈ ಕಾಲಿನ ದಸ್ಕತ್ತು ತೆಗೆದುಕೆಂಡು ಕೆಲವು ಕಡೆಗಳಲ್ಲಿ ಗ್ರಾಮಸಭೆ ಆಗಿದೆ. ನಮ್ಮ ಉದ್ದೇಶ ಏನು ಇದೆ ಗ್ರಾಮಸಭೆಯ ಉದ್ದೇಶ ಏನು ಇದೆ. ಸಾಮಾನ್ಯ ಜನರು ಕೂಡ ಆ ಗ್ರಾಮಸಭೆಯಲ್ಲಿ ಭಾಗವಹಿಸಿ ಆ ಕ್ಷೇತ್ರದ ಮತದಾರರು ಎಲ್ಲರೂ ಆ ಗ್ರಾಮಸಭೆಯಲ್ಲಿ ಭಾಗವಹಿಸಿ ಅಭಿವೃದ್ಧಿ ಕೆಲಸಕಾರ್ಯ ಏನಾಗಬೇಕಾಗಿದೆ ಎಂಬುದನ್ನು ನಿರ್ಧರಿಸಬೇಕು. ಗ್ರಾಮಸಭೆಯ ನಿರ್ಣಯ ಇವತ್ತು ಅತಿ ಪ್ರಾಮುಖ್ಯದ ನಿರ್ಣಯ; ಅದನ್ನು ಅನುಷ್ಠಾನ ಮಾಡುವಂತಹ ಕೆಲಸಕಾರ್ಯ ಇವತ್ತು ಮಂಡಲ ಪಂಚಾಯತಿಯಲ್ಲಿ ಆಗಬೇಕಾಗಿದೆ. ಆದರೆ ನಾವು ಪ್ರಶ್ನೆ ಮಾಡಬೇಕಾಗಿದೆ ; ಯಾವ ಗ್ರಾಮಸಭೆಯ ನಿರ್ಣಯ ಇದೆ ,ಪ್ರಥಮ ನಿರ್ಣಯ ಇದೆ ಅದನ್ನು ಅನುಷ್ಠಾನ ಮಾಡುವಂತಹ ಕೆಲವು ಮಂಡಲಗಳನ್ನೂ ಕೂಡ ನಾವು ಈವತ್ತು ಕಾಣುತ್ತಿದ್ದೇವೆ. ಗ್ರಾಮಸಭೆಗೆ ಯಾವ ರೀತಿಯ ಒತ್ತು ಕೊಟ್ಟಿದ್ದೇವೆ ಎನ್ನುವುದನ್ನು ನಾವು ಪ್ರಶ್ನೆ ಮಾಡಬೇಕಾಗಿದೆ. ಇವತ್ತು ಅದೇ ದಿಸೆಯಲ್ಲಿ ಇವತ್ತು ಇನ್ನೊಂದು ಒಳ್ಳೆಯ ಕಾರ್ಯಕ್ರಮವನ್ನು ತಂದಿದ್ದಾರೆ. ಮಾನ್ಯ ಸಚಿವರು ಅಧ್ಯಕ್ಷರಿಗೆ ಪ್ರಧಾನರಿಗೆ ಅಲ್ಲ ಇಡೀ ಕಮಿಟಿಗೆ ಅಧಿಕಾರ ಕೊಡುವಂತಹ ರೀತಿಯಲ್ಲಿ ತೀರ್ಮಾನವನ್ನು ತಂದಿದ್ದಾರೆ. ಹೆಚ್ಚಿನಂಶ ಇವತ್ತು ಮಂಡಲ ಪ್ರಧಾನರಿಗೆ ಅಧಿಕಾರ ಕೊಟ್ಟರೆ ಯಾವ ರೀತಿ ನಡೆಯುತ್ತದೆ ; ತನ್ನದೇ ಸ್ವಂತ ಆಸ್ತಿಯ ರೀತಿಯಲ್ಲಿ ಇವತ್ತು ಏನೇನು ದುರುಪಯೋಗ ನಡೆದಿದೆ ಎಂದು ನಾನು ವಿಮರ್ಷೆ ಮಾಡಬೇಕಾಗಿಲ್ಲ; ಕಮಿಟಿಗೆ ಅಧಿಕಾರ ಕೊಡುವುದರ ಮುಖಾಂತರ ಇವತ್ತು ಮಂಡಲ ಪಂಚಾಯತಿಯ ಪ್ರಧಾನರ ಚಟುವಟಿಕೆಯನ್ನು ಕೂಡ ಹತೋಟಿಯಲ್ಲಿ ನಡೆಸುವಂತಹ ಕಾರ್ಯಕ್ರಮ ಆಗುತ್ತದೆ. ಒಳ್ಳೆಯ ರೀತಿಯ ಆರೋಗ್ಯಕರವಾದಂತಹ ಒಂದು ವಿಧೇಯಕವನ್ನು ಇಲ್ಲಿ ತಂದಿದ್ದಾರೆ.

ಇವತ್ತು ನಮಗೆ ಶಾಸಕರಿಗೆ ಸ್ವಲ್ಪ ಮಟ್ಟಿಗೆ ತೊಂದರೆ ಆಗಬಹುದು. ತ್ರೀ ಟೈರ್‌ಸಿಸ್ಟಂನಲ್ಲಿ; ತಾಲ್ಲೂಕು ಪಂಚಾಯತಿ ಮಟ್ಟದಲ್ಲಿ; ನಾವು ವಿಕೇಂದ್ರಿಕರಣದ ಬಗ್ಗೆ ಭಾರಿ ಭಾಷಣ ಮಾಡುತ್ತೇವೆ. ಇವತ್ತು ಎಲೆಕ್ಟೆಡ್ ಮೆಂಬರ್ಸ್ ಬೇಡ ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಇವತ್ತು ತಮ್ಮ ಹಿಂದಿನ ಮಸೂದೆಯ ಅಧಿಕಾರ ಏನಾದರೂ ಇವತ್ತು. ಮುಟ್ಟಿದ್ದರೆ ಜಿಲ್ಲಾ ಅಧ್ಯಕ್ಷರುಗಳಿಗೆ ಮಾತ್ರ ಮುಟ್ಟಿತು; ಅನುಷ್ಠಾನ ಮಾಡುವಂತಹ ವ್ಯವಸ್ಥೆ ತಾಲ್ಲೂಕು ಪಂಚಾಯತಿಯಲ್ಲಿ ಸರಿಯಾಗಿಲ್ಲದಿದ್ದರೆ ಯಾವ ರೀತಿ ಕುಂದುಕೊರತೆ ಬರುತ್ತದೆಂದು ತಮಗೆ ಅನುಭವ ಇದೆ. ತಾವು ತಾಲ್ಲೂಕು ಪಂಚಾಯತಿ ಸಮಿತಿಯಲ್ಲಿ ಪ್ರತಿತಿಂಗಳು ಕೂಡ ಮೀಟಿಂಗ್ ನಡೆಸುತ್ತಿದ್ದೀರಿ. ಇವತ್ತು ಈ ದಿಸೆಯಲ್ಲಿ ತಾಲ್ಲೂಕಿನ ಹಂತದಲ್ಲಿ ಕೂಡ ಅತಿ ಪ್ರಾಮುಖ್ಯವಾದ ಒಂದು ಅಂಗವನ್ನು ತಾಲ್ಲೂಕು ಪಂಚಾಯತಿ ಸಮಿತಿಯ ಒಂದು ಅಂಗವನ್ನು ಕೂಡ ತೀರ್ಮಾನ ಮಾಡಿಕೊಂಡು ಎಲೆಕ್ಟಡ್ ಮೆಂಬರ್ಸ್ ಅಧ್ಯಕ್ಷ ಇರಬೇಕು ಎನ್ನುವ ರೀತಿಯಲ್ಲಿ ಕಾರ್ಯಕ್ರಮ ಹಾಕಿಕೊಂಡಿದ್ದೇವೆ. ನಾವು ಕೂಡ ಶಾಸಕರು ಏಕೆ ಒಟ್ಟಿಗೆ ಸೇರಿ ನಡೆಸಬಾರದು? ಆ ದಿಸೆಯಲ್ಲಿ ಆ ತೀರ್ಮಾನ ಕೂಡ ಇವತ್ತು ಆಗಿದೆ ; ಜಿಲ್ಲಾ ಪರಿಷತ್ತಿನ ಹಂತದಲ್ಲಿ ಕೂಡ ಮಾಡುವಂತಹ ವ್ಯವಸ್ಥೆ ಆಗಿದೆ. ಇದಕ್ಕಿಂತ ಹೆಚ್ಚಿನ ವಿಕೇಂದ್ರಿಕರಣ ಮಾಡಲು ಸಾಧ್ಯವಿಲ್ಲ. ತಮ್ಮ ವಿಕೇಂದ್ರಿಕರಣ ಏನಾದರೂ ಮುಟ್ಟಿದ್ದರೆ ಇವತ್ತು ಜಿಲ್ಲೆಯ ಮಟ್ಟಿಗೆ ಮಾತ್ರ ಮುಟ್ಟಿದೆ ಅಷ್ಟೇ. ಆ ಉದ್ದೇಶ ಅಲ್ಲ ; ಕೆಳ ಹಂತದವರೆಗೂ ಸಾಮಾನ್ಯ ಒಬ್ಬ ಮತದಾರನಿಗೂ ಕೂಡ ಇವತ್ತು ಆ ವಿಕೇಂದ್ರಿಕರಣ ಮುಟ್ಟಬೇಕು ಎನ್ನುವ ರೀತಿಯ ವಿಧೇಯಕವನ್ನು ಮಾನ್ಯ ಸಚಿವರು ಮಂಡನೆ ಮಾಡಿದ್ದಾರೆ. ಹಿಂದಿನ ತಮ್ಮ

ವಿಧೇಯಕದ ಮಟ್ಟಿಗೆ ನನಗೊಂದು ಸನ್ನಿವೇಶ ನೆನಪು ಬರುತ್ತದೆ. ನಮ್ಮಲ್ಲಿ ಒಂದು ಪ್ರಾಥಮಿಕ ಶಾಲೆ ಇತ್ತು. ಆ ಶಾಲೆಗೆ ಹೊಸ ಇನ್ಸ್‌ಪೆಕ್ಟರ್ ವಿಸಿಟ್‌ಗೆ ಹೋದರು.

7.50 ಪಿ. ಎಂ.

ಅಲ್ಲಿ ಒಬ್ಬ ಅಧ್ಯಾಪಕರ ಕ್ಲಾಸಿಗೆ ಹೋದಾಗ, ಒಬ್ಬ ವಿಧ್ಯಾರ್ಥಿಯನ್ನು ಕೇಳಿದರು, 9 ಗುಣಿಸಿ 9 ಎಷ್ಟು ಎಂದು ಕೇಳಿದರು ; ಆ ವಿದ್ಯಾರ್ಥಿ ಅದಕ್ಕೆ ಉತ್ತರವಾಗಿ 9 ಗುಣಿಸು 9 ಅಂದರೆ 109 ಎಂದು ಹೇಳಿದ. ಆಗ ಇನ್ಸ್‌ಪೆಕ್ಟರ್‌ರವರು ಮಾಸ್ಟರ್‌ರ ಮುಖ ನೋಡಿದರು. ನಿಮ್ಮ ವಿದ್ಯಾರ್ಥಿ 9 ಗುಣಿಸು 9 ಅಂದರೆ 109 ಎಂದು ಹೇಳುತ್ತಾನಲ್ಲಾ ಎಂದಾಗ, ಮಾಸ್ಟರ್‌ರವರು ನಾನು ಇಲ್ಲಿಗೆ ಬಂದು ಆರು ತಿಂಗಳು ಆಯಿತು, ಅದಕ್ಕಿಂತ ಮೊದಲು ಆತನು 139 ಎಂದು ಹೇಳುತ್ತಿದ್ದ. ಈಗ 109 ಹೇಳುತ್ತಾನೆ ಎಂದು ಹೇಳಿದರು. ಅದೇ ರೀತಿಯಲ್ಲಿ ಕಳೆದ ಸಾರಿ ಜಿಲ್ಲಾಪರಿಷತ್‌ನ ಏನು ವಿಧೇಯಕವಿದೆ ಆ ರೀತಿಯ ಸಮಾಧಾನವನ್ನು ತಾವುಗಳು ಪಟ್ಟುಕೊಂಡಿದ್ದೀರಿ. ಯಾವ ರೀತಿಯ ಪರಿಣಾಮ ಕೂಡ ಅದರಿಂದ ಆಗಲಿಲ್ಲ, ಅದಕ್ಕೆ ಉತ್ತರವಾಗಿ ಜನಗಳು ತಮಗೆ ಯಾವ ಸ್ಥಾನವನ್ನು ಇಂದು ಕೊಟ್ಟಿದ್ದಾರೆ ಅದನ್ನು ಅನುಭವ ಎಂದು ನಾವುಗಳು ತಿಳಿದುಕೊಳ್ಳಬೇಕಾಗಿದೆ. ನಾವು ಕೂಡ ಆ ಉದ್ದೇಶವನ್ನು ಸರಿಯಾಗಿ ಪರಿಪಾಲನೆ ಮಾಡದಿದ್ದರೆ ತಮ್ಮದೇ ಪರಿಸ್ಥಿತಿಯು ನಮಗೂ ಕೂಡ ಬರುವ ಸಂದರ್ಭ ಇರುತ್ತದೆ. ಲೋಪದೋಷಗಳು ಏನಾದರೂ ಇದ್ದಲ್ಲಿ ಅದನ್ನು ತಿದ್ದುಪಡಿ ಮಾಡಿ ಸರಿಪಡಿಸಿಕೊಳ್ಳೋಣ ; ವಿಕೇಂದ್ರಿಕರಣವಾಗಬೇಕೆನ್ನುವ ನೀತಿ ನಮ್ಮಲ್ಲಿದ್ದರೆ, ಆ ಅಧಿಕಾರ ಜನಸಾಮಾನ್ಯರಿಗೆ ಮುಟ್ಟಬೇಕೆನ್ನುವ ವಿಚಾರವನ್ನು ನಾವು ಇಟ್ಟುಕೊಳ್ಳೋಣ. ಅದರಲ್ಲಿ ಯಾವುದೇ ರೀತಿಯ ದುರುಪಯೋಗ ಬೇಡ, ಯಾವುದೇ ರೀತಿಯ ಕಂಟ್ರಾಕ್ಟ್ ವ್ಯವಸ್ಥೆಯೂ ಬೇಡ, ಒಳ್ಳೆಯ ಎಲ್ಲಾ ಸಲಹೆ ಸೂಚನೆಗಳಿಗೂ ಮಾನ್ಯ ಸಚಿವರು ಮಂಡನೆ ಮಾಡಿದ ವಿಧೇಯಕದಲ್ಲಿ ಅವಕಾಶವಿದೆ. ಇಷ್ಟನ್ನು ಹೇಳಿ ಮಾನ್ಯ ಸಚಿವರು ಮಂಡಿಸಿದ ಮಸೂದೆಗೆ ನನ್ನ ಸಂಪೂರ್ಣವಾದ ಬೆಂಬಲವನ್ನು ಹೇಳುತ್ತಾ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ. ಹೆಚ್. ಬನ್ನಿಕೋಡ್ : ಅಧ್ಯಕ್ಷರೇ, ಸಭೆಯಲ್ಲಿ ಕೋರಂ ಇಲ್ಲ ; ಇಂಥ ಮಹತ್ವದ ಮಸೂದೆಯನ್ನು ನಾವು ಈ ರೀತಿಯಲ್ಲಿ ಚರ್ಚೆ ಮಾಡಿದರೆ ಹೇಗೆ? ಇದನ್ನು ನೋಡಿದರೆ ರಾಜ್ಯದ ಬಗ್ಗೆ ಎಷ್ಟು ಕಳಕಳಿ ಇದೆ ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

ಅಧ್ಯಕ್ಷರು : ತಮಗೆಲ್ಲರಿಗೂ ಒಪ್ಪಿಗೆ ಇದ್ದರೆ, ಸಭೆಯನ್ನು ಮುಂದೂಡೋಣ. ನನ್ನ ಅಭ್ಯಂತರವಿಲ್ಲ. ಈ ದಿನದ ಕಲಾಪಗಳನ್ನು ಇಲ್ಲಿಗೆ ಮುಗಿಸಿ ಮತ್ತೆ ನಾಳೆ ಬೆಳಿಗ್ಗೆ 9.30 ಗಂಟೆಗೆ ಸಭೆ ಸೇರುತ್ತದೆ.

(ಸದನವು 7-54 ಗಂಟೆಗೆ ಮುಕ್ತಾಯಗೊಂಡು ಮರುದಿನ ತಾ : 7-4-93ರಂದು ಬೆಳಿಗ್ಗೆ 9-30ಕ್ಕೆ ಸೇರಲು ನಿರ್ಧರಿಸಿತು.)

(* ಈ ಚಿಹ್ನೆಯನ್ನು ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.)

ಕರ್ನಾಟಕ ವಿಧಾನಸಭೆ

KARNATAKA LEGISLATIVE ASSEMBLY

ಬುಧವಾರ 7 ನೇ ಏಪ್ರಿಲ್ ೧೯೯೩ ಸಾಯನ ಸೌರ ಚೈತ್ರ (ಶಕ)

Wednesday, 7th April 1993 Sayana Sowra Chaithra (S.E.)

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ ಬೆಳಗ್ಗೆ ೯ : ೩೦ ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು : (ಶ್ರೀ ಆಂಜನ ಮೂರ್ತಿ) ಅವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

1. ರೈತರ ಸಾಲ ಮನ್ನಾ ಮಾಡುವ ಬಗ್ಗೆ

* ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) : ಸನ್ಮಾನ್ಯ ಉಪಾಧ್ಯಕ್ಷರೇ, ನಾನು ತಮ್ಮ ಕೊಠಡಿಗೆ ಬಂದು ಹೇಳಿರುವಂತೆ ಯಾವ ಸರ್ಕಾರ ಈ ಸದನದಲ್ಲಿ ಭರವಸೆಯನ್ನು ಕೊಟ್ಟಿದೆ ಅದರಂತೆ ಈ ರಾಜ್ಯದಲ್ಲಿರುವಂತಹ ರೈತ ಸಹಕಾರಿ ಸಂಘಗಳಿಂದ ಸಾಲವನ್ನು ಏನು ಪಡೆದಿದ್ದಾನೆ, ಅವನ ಬಡ್ಡಿ ಮತ್ತು ಸುಸ್ತಿ ಬಡ್ಡಿ ಮನ್ನಾಮಾಡುವ ಬಗ್ಗೆ ದೀರ್ಘವಾದ ಚರ್ಚೆಯ ಅಗತ್ಯ ಇಲ್ಲ. ವಿರೋಧಿ ಪಕ್ಷದ ಮತ್ತು ಆಡಳಿತ ಪಕ್ಷದ ನಾಯಕರುಗಳ ಒಂದು ಸಭೆ ಕರೆದು ತೀರ್ಮಾನ ಕೈಗೊಳ್ಳುತ್ತೇವೆಂದುಮಾನ್ಯಮುಖ್ಯಮಂತ್ರಿಗಳು ಹೇಳಿದ್ದರು. ಅದರಂತೆ ಅವರು ಕರೆದ ಸಭೆಯಲ್ಲಿ ಎಲ್ಲಪಕ್ಷದ ಮುಖಂಡರು ಇದ್ದರು, ಅಧಿಕಾರಿಗಳನ್ನು ಕರೆಸಿದರು. ಪರಸ್ಪರ ಚರ್ಚೆ ಆಯಿತು. ಒಂದು ರೀತಿಯ ಒಮ್ಮತದ ತೀರ್ಮಾನಕ್ಕೆ ನಾವು ಬಂದೆವು. ಅದಾದ ಮೇಲೆ ಅವರ ಸಿಎಲ್‌ಪಿ, ಮೀಟಿಂಗ್‌ನಲ್ಲಿ ಅವರ ಶಾಸಕಾಂಗ ಪಕ್ಷದ ಸಬೆಯಲ್ಲಿ ನಡೆದಂತಹ ಚರ್ಚೆ ಬಗ್ಗೆ ಪತ್ರಿಕೆಗಳಲ್ಲಿ ಬಂತು. ಈ ರೈತರಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಸಂಪೂರ್ಣವಾಗಿ ಮನ್ನಾ ಮಾಡುತ್ತೇವೆಂದು ಹೇಳಿ ಬಂತು. ಇದರಿಂದಾಗಿ ಇವತ್ತು ಸಹಕಾರಿ ಸಂಘಗಳ ಬಾಗಿಲು ಮುಚ್ಚಿವೆ. ರೈತರು ಜಾತಕ ಪಕ್ಷಿಗಳಂತೆ ಈ ಸರ್ಕಾರ ಏನಾದರೂ ತೀರ್ಮಾನ ತೆಗೆದುಕೊಳ್ಳಬಹುದು ಎಂದು ಇವರ ಕಡೆ ನೋಡುತ್ತಿದ್ದಾರೆ. ಆದರೆ ಇನ್ನೊಂದು ಕಡೆ ಸೊಸೈಟಿಗಳಲ್ಲಿ ಸಾಲ ಕಟ್ಟಲಿಲ್ಲ ಎಂದು ಹೇಳಿ ಜಮೀನುಗಳನ್ನು ಹರಾಜು ಮಾಡುವಂತಹ ಕೆಲಸ ಮುಂದುವರಿದಿದೆ. ಅಸಿಸ್ಟೆಂಟ್‌ರಿಜಿಸ್ಟ್ರಾರ್‌ರವರು ಕೋರ್ಟ್‌ಗಳಲ್ಲಿ ಕೇಸ್